ಸ್ಮರಣಿಕೆ : ೧೯೮೦

ಜೀವನ ಶಿಕ್ಷಣ ಪತ್ರಿಕೆಯು

ಶತಮಾನೋತ್ಸವ ಸಂಭ್ರಮ

ಪುಸ್ತಕ ಸಮರ್ಪಣೆ ೧೯೮೦

ಶತಮಾನೋತ್ಸವ ಸಂಭ್ರಮ

(ಅಖಿಲ ಭಾರತ ಮಟ್ಟದ)

ಬಾಷ್ಪ ೧೯೮೦

ಶ್ರೀ ಜನ್ನ ಮಹಬ್ಬಿನವರು

(ಅಧ್ಯಕ್ಷರು)

ಸೇವಾ ಸಮಿತಿ

ಹಬ್ಬದ ಶಾಲಾ ಪತ್ರಿಕೆ



ಶಿಕ್ಷಣ ಸಂತಸ

ಸರಕಾರಿ ಉಪಾಧ್ಯಾಯರ ತರಬೇತಿ ವಿದ್ಯಾಲಯ

ಪೆಬ್ಬಿಟಿ ಜನ್ಮಬಸಪ್ಪ ವೃತ್ತ, ದೊಡ್ಡಪೇಟೆ, ನಾರಮಾಡ

379

ಕನ್ನಡ ಪಂಚಾಂಗ

326

1916

ಸಿದ್ಧಾಂತ ಮುದ್ರಣ ಮಂದಿರ.
ಮೂರಬ, ಜಿ ಧಾರವಾಡ.

ಸಿದ್ಧನಾಥ ವಾಚನ ಮಂದಿರ.
ಮೊರಬ. ಜಿ ಧಾರವಾಡ.

ಸಿದ್ಧನಾಥ ವಾಚನಾಲಯ ಧಾರವಾಡ

ಶಾಲಾಪತ್ರಿಕೆ.

ಪುಸ್ತಕ ೫೨. | ಜನವರಿ ೧೯೧೬. | ಸಂಚಿಕೆ ೧

ಸ್ಫುಟವಿಷಯಗಳು.

ಈ ತಿಂಗಳಲ್ಲಿ ನಡೆದ ವಿದ್ಯಾಸಂಬಂಧದ ಸಂಗತಿಗಳಲ್ಲಿ ಈ ಜಿಲ್ಹೆಯಲ್ಲಿ ಎರಡು ಮೂರು ಕಡೆಯಲ್ಲಿ ನಡೆದ ಶಿಕ್ಷಕಸಮ್ಮೇಲನಗಳು ಮಹತ್ವದ ಸಂಗತಿಗಳಾಗಿರುವವು. ಶಾಲಾಖಾತೆಯ ಮುಖ್ಯಾಧಿಕಾರಿಗಳ ಅಪ್ಪಣೆಯ ಮೇರೆಗೆ ಈ ವರ್ಷದಿಂದ ಇಂಥ ಸಮ್ಮೇಲನಗಳು ಪ್ರಾರಂಭವಾಗಿರುತ್ತವೆ. ಈ ಸಮ್ಮೇಲನಗಳಲ್ಲಿ ಅನುಭವಿಕರಾದ ಶಿಕ್ಷಕರು ಹಲವು ವಿಷಯಗಳನ್ನು ಪ್ರತ್ಯಕ್ಷ ಕಲಿಸಿ ತೋರಿಸುವರು; ಶಿಕ್ಷಣವಿಷಯಕವಾದ ಹಲವು ವಿಷಯಗಳನ್ನು ಕುರಿತು ಬಲ್ಲಂಥ ಶಿಕ್ಷಕರು ನಿಬಂಧಗಳನ್ನು ಓದುವರು; ವಿಚಕ್ಷಣರಾದ ಶಿಕ್ಷಕರು ತಾವು ಕಂಡುಕೊಂಡ ಶಿಕ್ಷಣಸಂಬಂಧವಾದ ಹೊಸ ವಿಚಾರಗಳನ್ನು ಒಬ್ಬರೊಬ್ಬರಿಗೆ ಅರಹುವರು; ಕುಶಲರಾದ ಹಲವು ಶಿಕ್ಷಕರು ತಾವು ಸಿದ್ಧಪಡಿಸಿದ ಶಿಕ ಣದ ಸಾಹಿತ್ಯಗಳನ್ನು ತೋರ್ಪಡಿಸುವರು; ಶಿಕ್ಷಣದ ಕೆಲಸದಲ್ಲಿ ತಟ್ಟುವ ತೊಂದರೆಗಳನ್ನು ಹಲಕೆಲವು ಶಿಕ್ಷಕರು ತಮ್ಮ ವರಿಷ್ಠಾಧಿಕಾರಿಗಳಿಗೆ ಅರಿಕೆಮಾಡಿಕೊಳ್ಳುವರು. ಆದಕಾರಣ, ಇಂಥ ಸಮ್ಮೇಲನಗಳು ಪ್ರತಿವರ್ಷ ಜಿಲ್ಹೆಯ ಬೇರೆ ಬೇರೆ ಸ್ಥಳಗಳಲ್ಲಿ ಕೂಡುವದರಿಂದ ಶಿಕ್ಷಣದ ಹೊಸ ಪದ್ಧತಿಗಳ ಅನುಭವ, ಶಿಕ್ಷಣವಿಷಯಕವಾದ ಜ್ಞಾನ, ಶಿಕ್ಷಣದಲ್ಲಿ ಪರಸ್ಪರ ಸಹಕಾರಿತ್ವ, ಶಿಕ್ಷಣಸೌಲಭ್ಯ, ಪರಸ್ಪರ ಸಹಾನುಭೂತಿ ಇವೇ ಮುಂತಾದ ಫಲಗಳು ಶಿಕ್ಷಕ ವರ್ಗಕ್ಕೆ ಲಭಿಸಿ, ಪ್ರಾಥಮಿಕ ಶಿಕ್ಷಣದ ಪ್ರಗತಿಗೆ ಒಳ್ಳೇ ಸಹಾಯವಾಗುವದೆಂಬದಕ್ಕೆ ಸಂದೇಹವಿಲ್ಲ. ಈ ತಿಂಗಳಲ್ಲಿ ಆದ ಶಿಕ್ಷಕ ಸಮ್ಮೇಲನಗಳಲ್ಲಿ ಮೊದಲನೆಯದು ಧಾರವಾಡದಲ್ಲಿ ೩ನೇ, ೪ನೇ ತಾರೀಖುಗಳಲ್ಲಿಯೂ, ೬ನೆಯದು ಕೋಣದಲ್ಲಿ ೭ನೆಯ ತಾರೀಖಿನಲ್ಲಿಯೂ, ಮೂರನೆಯದು ಗದ

ಗಿನಲ್ಲಿ ೧೩ ನೆಯ ತಾರೀಖಿನಲ್ಲಿಯೂ ನಡೆದವು. ಅವುಗಳಲ್ಲಿ ಧಾರವಾಡ-ಕೋಣಗಳಲ್ಲಿ ನಡೆದ ಸಮ್ಮೇಲನಗಳ ಕಾರ್ಯಕ್ರಮವನ್ನು ಇದರಡಿಯಲ್ಲಿ ಸಂಕ್ಷಿಪ್ತವಾಗಿ ಕೊಡುತ್ತೇವೆ. ಗದಗಿನಲ್ಲಿ ನಡೆದ ಶಿಕ್ಷಣ ಸಮ್ಮೇಲನದಲ್ಲಿ ರೆವ್ಹೆರೆಂಡ ರಿಷ್ಟಿಂಗಟನ ಸಾಹೇಬರವರು ಮಾಡಿದ ಮಾರ್ಮಿಕ ಭಾಷಣವನ್ನು ಇದೇ ಸಂಚಿಕೆಯ ೧೭ ನೆಯ ಪುಟದಲ್ಲಿ ಕೊಟ್ಟಿದ್ದೇವೆ:—

ಧಾರವಾಡದಲ್ಲಿ ಆದ ಶಿಕ್ಷಕಸಮ್ಮೇಲನವು.

ಧಾರವಾಡ ಮತ್ತು ನವಲಗುಂದ ತಾಲೂಕುಗಳ ಶಾಲಾ ಮಾಸ್ತರರ ಈ ಸಮ್ಮೇಲನವು ಎರಡು ದಿವಸ ಧಾರವಾಡ ಮುನಸಿಪಲ್ ಇನ ಘಂಟಿ ಮಾಡೆಲ್ ಸ್ಕೂಲಿನಲ್ಲಿ ನಡೆಯಿತು. ಆ ಕಾಲಕ್ಕೆ ಮುನಸಿಪಾಲಿಟಿಯ ಶಾಲೆಗಳ ಮಾಸ್ತರರು ೪೬ ಜನರು, ಮತ್ತು ಲೋಕಲ್ ಬೋರ್ಡಿನ ಶಾಲೆಗಳ ಮಾಸ್ತರರು ೧೦೦ ಜನರು ನೆರೆದಿದ್ದರು. ಈ ಸಮ್ಮೇಲನಕ್ಕೆ ಮಿ. ರಾಮರಾವ ಕುಲಕರ್ಣಿ ಡಿಪುಟಿ ಎಜ್ಯುಕೇಶನಲ್ ಇನಸ್ಪೆಕ್ಟರ, ಮೆಸರ್ಸ ಕೊಪ್ಪೀಕರ, ಜಮಖಿಂಡಿ ಮತ್ತು ಉದಗಟ್ಟಿ ಅಸಿಸ್ಟಂಟ ಡಿಪುಟಿ, ಮಿ. ಜಾಂಭೇಕರ ಸ್ಕೂಲಬೋರ್ಡ ಚೇರಮನ್ನ ಮತ್ತು ಒಬ್ಬಿಬ್ಬ ಮುನಸಿಪಲ್ ಮೆಂಬರರು ಬಂದಿದ್ದರು. ಈ ಸಮ್ಮೇಲನದ ಅಧ್ಯಕ್ಷಸ್ಥಾನವನ್ನು ಇಲ್ಲಿಯ ಟ್ರೇನಿಂಗ ಕಾಲೇಜದ ಪ್ರಿನ್ಸಿಪಾಲರಾದ ಮಿ. ವಿನಾಯಕರಾವ ಜೋಸಿಯವರು ಸ್ವೀಕರಿಸಿದ್ದರು. ಆದರೆ ಅವರು ತಮ್ಮ ಕಾರ್ಯಬಾಹುಲ್ಯದ ಮೂಲಕ ಸೋಮವಾರ ಮತ್ತು ಮಂಗಳವಾರ ಮಧ್ಯಾಹ್ನಕ್ಕೆ ಮಾತ್ರ ಬಂದಿದ್ದರು. ಉಳಿದ ಹೊತ್ತಿನಲ್ಲಿ ಅವರು ಇಲ್ಲದಾಗ್ಗೆ ಮಿ. ರಾಮರಾವ ಕುಲಕರ್ಣಿ ಡಿಪುಟಿ ಎಜ್ಯು. ಇನ. ಇವರು ಅಧ್ಯಕ್ಷಸ್ಥಾನವನ್ನು ಸ್ವೀಕರಿಸಿದ್ದರು. ಈ ಸಮ್ಮೇಲನದಲ್ಲಿ ಕೆಳಗೆ ಬರೆದ ನಿಬಂಧಗಳು ಓದಲ್ಪಟ್ಟವು:—

ನಿಬಂಧ ಓದಿದವರು.	ವಿಷಯ.
೧. ಮಿ. ಶಾಮಾಚಾರ್ಯ ತಡಕೋಡ.	ದೇಶೀಯ ಆಟಗಳೂ, ಅವುಗಳಿಂದಾಗುವ ಲಾಭಗಳೂ.
೨. ಮಿ. ಆರ್. ಆರ್. ಕಟ್ಟಿ.	ವ್ಯಾಯಾಮ ಪದ್ಧತಿ.
೩. ಮಿ. ಸಿ. ಎಸ್. ಪಶುಪತಿ.	ಬಾಲಕರ ವರ್ಗದ ಶಿಕ್ಷಣ.

ಧಾರವಾಡದಲ್ಲಿ ಆದ ಶಿಕ್ಷಕ ಸಮ್ಮೇಳನವು.

೪. ಮಿಸೆಸ ಗಂಗವ್ವಾ ಹಳ್ಳಿ. ಬಾಲಕರ ವರ್ಗದ ತಕ್ಷಣ.
೫. ಮಿ. ಎಸ್. ಆರ್. ಸಬರದ. ಪಾಲಕರ ಸಹಾನುಭೂತಿ
೬. ಮಿ. ಜಿ. ಎಮ್. ದಿಕ್ಷಿತ. ಹಳ್ಳಿಯ ಹಾಗೂ ಸಾಲೆಯ ಆರೋಗ್ಯತೆ.

ನಿಬಂಧಗಳೆಲ್ಲ ಬಹುತರ ಚನ್ನಾಗಿ ಬರೆಯಲ್ಪಟ್ಟಿದ್ದವು. ಅವುಗಳಲ್ಲಿ ಕೆಲವು ಸ್ಥಳಾನುಕೂಲತೆಯ ಪ್ರಕಾರ ಶಾಲಾಪತ್ರದಲ್ಲಿ ಮುದ್ರಿಸಲ್ಪಡುವವು.

ಮೊದಲನೆಯ ದಿವಸ ಮಧ್ಯಾಹ್ನಕ್ಕೆ ಮಿ. ಪಶುಪತಿಯವರು ಬಾಲಕರ ವರ್ಗಕ್ಕೆ ಒಂದು ನೀತಿಯ ಪಾಠವನ್ನು ಕಲಿಸಿದರು. ಹಾಗೂ ನವಲಗುಂದ ಶಾಲೆಯ ಹೆಡ್ಡಮಾಸ್ತರ ಮಿ. ಘಳಗಿ ಇವರು ೬ನೇ ಇಯತ್ತೆಯ ಹುಡುಗರಿಗೆ ೧೭೬೧ನೇ ಇಸ್ವಿಯ ಪಾಣಿಪತದ ಕಾಳಗವನ್ನು ಕಲಿಸಿದರು. ಆ ಮೇಲೆ ಮಿ. ಪಶುಪತಿ ಇವರು ಅಕ್ಷರಗಳು ಏನೂ ಬಾರದೆ ಇರುವಂಥ ಹುಡುಗರಿಗೆ ಹೊಸ ಪದ್ಧತಿಯಿಂದ ಅಕ್ಷರಗಳನ್ನು ಕಲಿಸಿದರು. ಹಾಗೂ ತಿರ್ಲಾಪುರದ ಹೆಡ್‌ಮಾಸ್ತರ ಮಿ. ಹಣಮಂತರಡ್ಡಿ ಭೀಮರಡ್ಡಿ ಕಾಲವಾಡ ಇವರು ೨ನೇ ಇಯತ್ತೆಯ ವಿದ್ಯಾರ್ಥಿಗಳಿಗೆ ಒಂದು ಪಾಠವನ್ನು ಓದಲಿಕ್ಕೆ ಕಲಿಸಿದರು. ಆ ಮೇಲೆ ಮಿ. ಪಶುಪತಿ ಇವರು ಬಾಲಕರ ವರ್ಗಕ್ಕೆ ಅಂಕೆಗಳನ್ನೂ, ಗತಗ ಸಾಲಿಯ ಹೆಡ್‌ಮಾಸ್ತರ ಮಿ. ಚಿದಂಬರ ನಾರಾಯಣ ಪಾಟೀಲ ಇವರು ೬ನೇ ಇಯತ್ತೆಯ ವಿದ್ಯಾರ್ಥಿಗಳಿಗೆ ಗುರುತ್ವಮಧ್ಯದ ಶಾಸೀಯ ಪಾಠವನ್ನೂ ಇಲ್ಲಿಯ ೬ನೇ ನಂಬರ ಮುನಸಿಪಲ್ ಸಾಲೆಯ ಹೆಡ್‌ಮಾಸ್ತರ ಮಿ. ವೈದ್ಯ ಇವರು ೪ನೇ ಇಯತ್ತೆಯ ಹುಡುಗರಿಗೆ ಅಪೂರ್ಣಾಂಕವನ್ನೂ ಕಲಿಸಿದರು.

ಎರಡನೆಯ ದಿವಸ ಮುಂಜಾನೆ ಮಿ. ಪಶುಪತಿ ಇವರು ಬಾಲಕರ ವರ್ಗಕ್ಕೆ ಶಬ್ದರಚನೆಯನ್ನೂ ಇಲ್ಲಿಯ ೩ನೇ ನಂಬರ ಮುನಸಿಪಲ್ ಸಾಲೆಯ ಹೆಡ್ಡಮಾಸ್ತರ ಮಿ. ಐರಣಿ ಇವರು ವಿದ್ಯಾರ್ಥಿಗಳಿಗೆ ಪುಸ್ತೀ ಬರಹವನ್ನೂ ಕಲಿಸಿದ್ದಲ್ಲದೆ, ಭೂಗೋಲದ ಆರಂಭದ ಪಾಠವನ್ನು ಕಲಿಸಿ ತೋರಿಸಿದರು. ಮಿ. ಪಶುಪತಿ ಇವರು ಬಾಲಕರ ವರ್ಗಕ್ಕೆ ಮಗ್ಗಿಯ ಪಾಠವನ್ನೂ ಮಿ. ಸಬರದ ಇವರು ರೂರಲ್‌ಸ್ಕೂಲಿನ ಮಾದರಿಯ ಪಾಠವನ್ನೂ ಕಲಿಸಿ ತೋರಿಸಿದರು. ಕಡೆಗೆ ಗರಗದ ಶಾಲೆಯ ಹೆಡ್ಡಮಾಸ್ತರ ಮಿ. ಪಾಟೀಲ ಇವರು ತಾವು ಸ್ವತಃ ಮಾಡಿದ ಕೆಲವು ಶಾಸೀಯ

ಪ್ರಯೋಗದ ಉಪಕರಣಗಳನ್ನು ತೋರಿಸಿದರು. ಅದೇ ದಿವಸ ಮಧ್ಯಾಹ್ನಕ್ಕೆ ಟ್ರೇನಿಂಗ ಕಾಲೇಜದ ಗಣಿತಶಿಕ್ಷಕರಾದ ಮಿ. ನಾಡಕರ್ಣಿ ಇವರು ಪ್ರಾಥಮಿಕ ಶಾಲೆಗಳಲ್ಲಿ ಗಣಿತವನ್ನು ಕಲಿಸುವ ಪದ್ಧತಿಯೊಳಗೆ ಕಂಡು ಬರುವ ದೋಷಗಳನ್ನು ಕುರಿತು ಭಾಷಣ ಮಾಡಿದರು. ತರುವಾಯ ಕೆಲವು ಹೊತ್ತು ಉಪಹಾರಾದಿ ವಿಶ್ರಾಂತಿಯ ಕಾರ್ಯವು ನಡೆದ ಬಳಿಕ, ಈ ಸಮ್ಮೇಲನದ ಕಾರ್ಯದರ್ಶಿಗಳಾದ ಮಿ. ಕೊಪ್ಪೀಕರ ಇವರು ಸರಕಾರದವರು ಪ್ರಾಥಮಿಕ ಶಾಲೆಗಳಿಗಾಗಿ ಕೊಟ್ಟ ಗ್ರ್ಯಾಂಟಿನ ಬಗೆ ಅವರ ಉಪಕಾರವನ್ನು ಸ್ಮರಿಸಿ, ಸಮ್ಮೇಲನಕ್ಕೆ ಬಂದಂಥ ಅಧ್ಯಕ್ಷ ಮೊದಲಾದ ಯಾವತ್ತು ಸದ್ಗೃಹಸ್ಥರ ಉಪಕಾರವನ್ನು ಸ್ಮರಿಸಿದರು. ಕಡೆಗೆ ಅಧ್ಯಕ್ಷರಾದ ಮಿ. ವಿನಾಯಕರಾವ ಜೋಸಿ ಇವರು ಸಮ್ಮೇಲನದ ಸಮಾರೋಪಣದ ಭಾಷಣವನ್ನು ಮಾಡಿದರು. ಇವರ ಭಾಷಣದೊಳಗಿನ ಮುಖ್ಯ ಸಂಗತಿಗಳನ್ನು ಮತ್ತೊಂದು ಸಂಚಿಕೆಯಲ್ಲಿ ಕೊಡುವೆವು.

ಅಧ್ಯಕ್ಷರ ಭಾಷಣವಾದ ಬಳಿಕ ಮಿ. ರಾಮರಾವ ಕುಲಕರ್ಣಿ ಇವರು ಅಧ್ಯಕ್ಷರ ಆಭಾರವನ್ನು ನೆನಿಸಿದರು. ಆ ಮೇಲೆ ಯಾವತ್ತು ಸಭಿಕರು ಪುಷ್ಪತಾಂಬೂಲಾದಿಗಳಿಂದ ಸತ್ಕರಿಸಲ್ಪಟ್ಟ ನಂತರ ಸಮ್ಮೇಲನದ ವಿಸರ್ಜನೆಯಾಯಿತು. ಈ ಸಮ್ಮೇಲನದಲ್ಲಿ ಪಾಠಗಳನ್ನು ಕಲಿಸಿದ ಯಾವತ್ತು ಮಾಸ್ತರರು, ಮುಖ್ಯವಾಗಿ ಮೆಸರ್ಸ ಪಶುಪತಿ, ಸಬರದ, ಪಾಟೀಲ, ಐರಣಿ, ಕಾಲವಾಡ ಇವರು ತಮ್ಮ ತಮ್ಮ ಪಾಠಗಳನ್ನು ಬಹಳ ಮನೋವೇಧಕವಾಗಿ ಕಲಿಸಿದರೆಂದು ತಿಳಿಯುತ್ತದೆ. ಮಿ. ಫಾಟೆ: ಪರ್ಸನಲ್ ಅಸಿ. ಎಜ್ಯು. ಇನ. ಇವರು ಎರಡೂ ದಿವಸ ರಾತ್ರಿ ಮ್ಯಾಜಿಕ್‌ಲ್ಯಾಂಟರ್ನದ ಸಹಾಯದಿಂದ ಸಿಲೋನ ದ್ವೀಪದ ಚಿತ್ರಗಳನ್ನೂ ಈಗ ನಡೆದಿರುವ ಮಹಾ ಯುದ್ಧದ ಚಿತ್ರಗಳನ್ನು ಮನೋಹರವಾಗಿ ತೋರಿಸಿದರು.

ರೋಣದಲ್ಲಿ ಕೂಡಿದ ಸಮ್ಮೇಲನ.

ಈ ಭಾಗದ ಅ. ಡಿಪುಟಿ ಇನ್ಸಪೆಕ್ಟರರಾದ ಮಿ. ಜಿ. ಪ್ಪಿ. ದೇಶಪಾಂಡೆಯವರು ಈ ಸಮ್ಮೇಲದ ವ್ಯವಸ್ಥೆಯನ್ನು ಮೊದಲೇ ಬಂದು ಮಾಡಿದ್ದರು.

೭ನೇ ತಾರೀಖಿನ ದಿವಸ ಮುಂಜಾನೆ ೭½ ಘಂಟಿಗೆ ಸಮ್ಮೇಲನದ ಕಾರ್ಯವು ಪ್ರಾರಂಭವಾಯಿತು. ಮಿ. ಆರ್. ಜಿ. ಕೇಳಕರ ಎಲ್. ಸಿ. ಇ. ಸೆಬ್ ಡಿವ್ಹಿಜನಲ್ ಆಫೀಸರ ರೋಣ ಇವರು ಅಧ್ಯಕ್ಷಸ್ಥಾನವನ್ನು ಸ್ವೀಕರಿಸಿದರು. ತಾಲೂಕಿನ ಮೇಲಧಿಕಾರಿಗಳಾದ ರಾ. ಸಾ. ಮಾಮಲೇದಾರರೂ ಶಿರಸ್ತೇದಾರರೂ ಡಾಕ್ಟರರೂ ಊರೊಳಗಿನ ಶೆಟ ಸಾವುಕಾರರೂ ಸಭ್ಯಗೃಹಸ್ಥರೂ ಕೂಡಿ ಸುಮಾರು ಐವತ್ತು ಜನರು ಸಭೆಯನ್ನು ಅಲಂಕರಿಸಿದ್ದರು. ಇದಲ್ಲದೆ ಸೂಡಿ, ಸವಡಿ, ನರೇಗಲ್ಲ, ಹಾಳಕೇರಿ ಮುಂತಾದ ದೊಡ್ಡ ಊರುಗಳಿಂದ ಪ್ರಮುಖ ಜನರು ಬಂದಿದ್ದರು.

ವಾಡಿಕೆಯಂತೆ ಪ್ರಾರಂಭದಲ್ಲಿ ಶಿಕ್ಷಕರು ವಿದ್ಯಾರ್ಥಿಗಳೂ ದೇವತಾಸ್ತೋತ್ರವನ್ನು ಮಾಡಿದರು. ಸಮ್ಮೇಲನದ ಕಾರ್ಯದರ್ಶಿಗಳಾದ ಮು. ರಾ. ರಾ. ಮುದಿಯಪ್ಪಾ ಮಣ್ಣೂರ ಹೆ. ಮಾ. ರೋಣ ಇವರು ಸಭೆಗೆ ಬಂದ ಶಿಕ್ಷಕರ ಹಾಗು ಸಭ್ಯಗೃಹಸ್ಥರ ಸ್ವಾಗತವನ್ನು ಮಾಡಿ, ಸಮ್ಮೇಲನದ ಉದ್ದೇಶವನ್ನು ಸ್ವಲ್ಪದರಲ್ಲಿ ಹೇಳಿದರು.

ತರುವಾಯ ರಾ. ಸಾ. ಆರ್. ಎನ್. ಕುಲಕರ್ಣಿ ಡೆ. ಎ. ಇನಸ್ಪೆಕ್ಟರರು ಸಮ್ಮೇಲನದ ಉದ್ದೇಶವನ್ನೂ ಅದರ ಮಹತ್ವವನ್ನೂ ವಿವರಿಸಿದರು. ಅವರು ಅಂದದ್ದೇನಂದರೆ:—

"ನೀವೆಲ್ಲರೂ ಅನನುಕೂಲವಾದಂಥ ಒಮ್ಮೊಮ್ಮೆ ಪ್ರತಿಕೂಲವಾದಂಥ ಪರಿಸ್ಥಿತಿಯಲ್ಲಿ ಕೆಲಸ ಮಾಡಬೇಕಾಗುವದು; ಕಾಲಕಾಲಕ್ಕೆ ನಿಮಗೆ ಹಲವು ತರದ ವಿಘ್ನಗಳು ಒದಗುವವೆಂಬದು ನನಗೆ ಗೊತ್ತುಂಟು. ಈ ತೊಂದರೆಗಳನ್ನು ನೀಗಲಾಡಿಸುವದಕ್ಕಾಗಿ ನಾನು ಶಕ್ಯವಿದ್ದಷ್ಟು ಮಟ್ಟಿಗೆ ಪ್ರಯತ್ನ ಮಾಡುತ್ತೇನೆ.

"ಇಲ್ಲಿ ನೆರೆದ ಶಿಕ್ಷಕರಲ್ಲಿ ಕೆಲವರು ಅಂಟ್ರೇಂಡರಿರುವರು, ಕೆಲವರು ಅನನುಭವಿಕರಿರುವರು; ಇವರಿಗೆ ಅನುಭವಿಕರಾದ ಟ್ರೇಂಡ ಶಿಕ್ಷಕರ ಅನುಭವವು ದೊರೆಯಬೇಕೆಂತಲೂ, ಟ್ರೇನಿಂಗ ಕಾಲೇಜದಲ್ಲಿ ಕಲಿತ ಶಿಕ್ಷಣದ ಮೂಲತತ್ವಗಳನ್ನು ಯಾವ ಯಾವ ಶಿಕ್ಷಕರು ಎಷ್ಟರ ಮಟ್ಟಿಗೆ ರೂಢಿಯಲ್ಲಿ ತರಲು ಯತ್ನಿಸಿರುವರೆಂಬದನ್ನೂ, ಶಿಕ್ಷಣದ ಕಲೆಯಲ್ಲಿ ಯಾರು ಎಷ್ಟು ಪ್ರಗತಿಯನ್ನು ಹೊಂದಿರುವರೆಂಬದನ್ನೂ, ಯಾವ ಯಾವ ಶಿಕ್ಷಕರು ಬೇರೆ ಬೇರೆ ವಿಷಯಗಳನ್ನು ಸುಲಭವಾಗಿ ಕಲಿಸುವ

ದಕ್ಕಾಗಿ ಯಾವ ತರದ ಉಪಕರಣಗಳನ್ನು ಮಾಡಿಕೊಂಡು ಬಂದಿರುವರೆಂಬದನ್ನೂ, ಇಡೀ ವರ್ಷ ವಿದ್ಯಾರ್ಥಿಗಳಿಂದ ಯಾವ ಯಾವ ಕೆಲಸಗಳನ್ನು ಮಾಡಿಸಿರುವರೆಂಬದನ್ನೂ, ತೋರಿಸಿ ಪರಸ್ಪರ ಲಾಭ ಮಾಡಿಕೊಡಬೇಕೆಂಬದು ಸಮ್ಮೇಲನದ ಉದ್ದೇಶವಾಗಿರುವದು. ಇಲ್ಲಿ ಕಲಿಸಿ ತೋರಿಸುವ ಮಾದರಿಯ ಪಾಠಗಳು ಸಂಪೂರ್ಣವಾಗಿ ನಿರ್ದೋಷವಾದವುಗಳೆಂದು ನೀವು ತಿಳಿಯದೆ, ಅವು ಕೇವಲ ಮಾರ್ಗದರ್ಶಕವಾಗಿರುವವೆಂದು ಭಾವಿಸಿ, ಶಿಕ್ಷಣಕಾರ್ಯದಲ್ಲಿ ಪ್ರಗತಿಯನ್ನು ಹೊಂದಿರಿ."

ಇದೇ ಕಾಲಕ್ಕೆ ಇಲ್ಲಿಯ ಲೋಕಪ್ರಿಯ ಡಾಕ್ಟರರಾದ ಮ. ರಾ. ರಾ. ಕಬ್ಬಿನ ಇವರು ಶಿಕ್ಷಕರಿಗೆ ಉತ್ತೇಜನ ಕೊಡುವದಕ್ಕಾಗಿ ೧೦ ರೂಪಾಯಿಗಳನ್ನೂ ಬಡ ವಿದ್ಯಾರ್ಥಿಗಳಿಗೆ ಐದೈದು ಅಂಗಿ ಟೊಪ್ಪಿಗೆಗಳನ್ನೂ ಇನಾಮಾಗಿ ಕೊಟ್ಟರು. ತರುವಾಯ ಕಾರ್ಯಕ್ರಮಪತ್ರಿಕೆಯ ಪ್ರಕಾರ ಬೇರೆ ಬೇರೆ ವಿಷಯಗಳ ಮೇಲೆ ಬರೆದು ತಂದ ನಿಬಂಧಗಳನ್ನು ಶಿಕ್ಷಕರು ಓದಿದರು.

ಮಧ್ಯಾಹ್ನದಲ್ಲಿ ಎರಡೂವರೆ ಗಂಟೆಗೆ ಸಮ್ಮೇಲನದ ಕಾರ್ಯವು ಪುನಃ ಆರಂಭವಾಯಿತು. ಕಾರ್ಯಕ್ರಮ ಪತ್ರಿಕೆಯ ಪ್ರಕಾರ ಆರು ಮಂದಿ ಶಿಕ್ಷಕರು ತಮ್ಮ ತಮ್ಮ ಪಾಠಗಳನ್ನು ಕಲಿಸಿ ತೋರಿಸಿದರು. ಸಾಯಂಕಾಲಕ್ಕೆ ಸೂಡಿಯ ಅ.ಿ ರಾದ ಭೀ. ಶ. ಪೂಜಾರ ಇವರು ತಾವು ಓದಿದ ಆಟಗಳ ಸಂಬಂಧವಾದ ನಿಬಂಧದಂತೆ ತಮ್ಮ ಸಾಲೆಯ ಹುಡುಗರಿಂದ ತಿಳ್ಳೀ ಆಟವನ್ನು ಆಡಿಸಿ ತೋರಿಸಿದರು. ಹುಡುಗರು ಸದ್ದು ಮಾಡದೆ ಪ್ರೇಕ್ಷಕರ ಮನಸ್ಸಿಗೆ ಅತ್ಯಾನಂದವಾಗುವಂತೆ, ಒಳ್ಳೇ ವ್ಯವಸ್ಥೆಯಿಂದ ನಿಯಮಗಳಿಗನುಸರಿಸಿ ಆಟವನ್ನಾಡಿದರು.

ಮರುದಿವಸ, ಅಂದರೆ ತಾರೀಖು ೮ನೇ ದಿವಸ ಬೆಳಿಗ್ಗೆ ರೋಣ ಹಾಗು ಹಾಳಕೇರಿ ಶಾಲೆಗಳ ವಿದ್ಯಾರ್ಥಿಗಳ ನಡುವೆ ಫುಟ್‌ಬಾಲ್ ಆಟವಾಯಿತು. ಇವರಾದರೂ ಆಟವನ್ನು ಬಹಳ ವ್ಯವಸ್ಥೆಯಿಂದ ಆಡಿದರು. ಇವರಿಗೂ ಮೇಲೆ ಹೇಳಿದ ತಿಳ್ಳೀ ಆಟವನ್ನು ಆಡಿದ ಹುಡುಗರಿಗೂ ಉತ್ತೇಜನಾರ್ಥವಾಗಿ ಸೂಡಿಯ ಪ್ರಸಿದ್ಧ ಸಾವುಕಾರರಾದ ರಾ. ಸಾ. ಅಡಿವೆಪ್ಪಾ ಅಣ್ಣಾ ರೋಣ ಇವರು ಹತ್ತು ಹುಡುಗರಿಗೆ ಶಲ್ಲಿಗಳನ್ನು ಇನಾಮಾಗಿ ಕೊಟ್ಟರು. ಈ ತಾಲೂಕಿನಲ್ಲಿ ಶಾರೀರಿಕ ಶಿಕ್ಷ

ಣದ ವಿಷಯವಾಗಿ ಅನೇಕ ಶಾಲೆಗಳಲ್ಲಿ ಪ್ರಯತ್ನಗಳು ಮಾಡಲ್ಪಟ್ಟಿದ್ದು ಕಂಡುಬಂತು.

ಆಟದ ಬೈಲಿನಿಂದ ಬಂದ ಬಳಿಕ ಶಿಕ್ಷಕರು ಮಾಡಿದ ಶಿಕ್ಷಣೋಪಕರಣಗಳ ಪ್ರದರ್ಶನ ಸಮಾರಂಭವು ಜರಗಿತು. ಸಮ್ಮೇಲನದ ಅಧ್ಯಕ್ಷರಾದ ಮೇ. ಕೇಳಕರ ಸಾಹೇಬರವರು ಪ್ರದರ್ಶನದ ವಸ್ತುಗಳನ್ನು ನೋಡಲು ಪ್ರಾರಂಭಿಸಿದರು. ರೋಣ, ಗಜೇಂದ್ರಗಡ, ಹಾಳಕೇರಿ, ಜಕ್ಕಲಿ, ಸವಡಿ, ನರೇಗಲ್ಲ, ನಿಡಗುಂದಿ ಈ ಸಾಲೆಗಳ ಶಿಕ್ಷಕರು ಬೇರೆ ಬೇರೆ ಕೋಣೆಗಳಲ್ಲಿ ಇತಿಹಾಸ, ಭೂಗೋಲ, ಅಂಕಗಣಿತ, ಶಾಸ್ತ್ರೀಯ ವಿಷಯ ಇವೇ ಮೊದಲಾದ ವಿಷಯಗಳನ್ನು ಕಲಿಸುವದಕ್ಕೆ ಅವಶ್ಯವಾದ ಉಪಕರಣಗಳನ್ನೂ ಬಾಲಕರು ಮಾಡಿದ ಕಿಂಡರಗಾರ್ಟನ್ ವ್ಯವಸಾಯದ ಒಡವೆಗಳನ್ನೂ ವ್ಯವಸ್ಥಿತವಾಗಿ ಮಂಡಿಸಿ ಇಟ್ಟು,ಪ್ರೇಕ್ಷಕರಿಗೆ ಅವುಗಳನ್ನು ವಿವರಿಸಿ ಹೇಳುತ್ತಿದ್ದರು. ಇವುಗಳನ್ನು ನೋಡಿದ ಪ್ರೇಕ್ಷಕರಿಗೂ ಶಿಕ್ಷಕರಿಗೂ ಬಹಳ ಆನಂದವಾಯಿತು.

ಸಂಜೆಯ ೬½ ಗಂಟೆಗೆ ರಾ. ಸಾ. ಡೆಪೂಟಿಯವರೂ ಅ.| ಡೆಪೂಟಿಯವರೂ ಒತ್ತಟ್ಟಿಗೆ ಕುಳಿತು, ಪ್ರತಿಯೊಂದು ಶಾಲೆಯ ಶಿಕ್ಷಕರನ್ನು ಬೇರೆ ಬೇರೆಯಾಗಿ ಕರೆಯಿಸಿ ಅವರ ಕೊರತೆಗಳನ್ನೂ ಅಡಚಣಿಗಳನ್ನೂ ಕೇಳಿಕೊಂಡರು. ೫ ಗಂಟೆಗೆ ಸಭೆಯ ಕಾರ್ಯಕ್ಕೆ ಆರಂಭವಾಯಿತು. ಮೊದಲು ಮಿಸ್ತರ ಜಿ. ವ್ಹಿ. ಹೇಶಪಾಂಡೆ ಇವರು ಕಳೆದ ನಾಲ್ವತ್ತು ವರ್ಷಗಳಲ್ಲಿ ಶಿಕ್ಷಣದ ವಿಷಯವಾಗಿ ಸರಕಾರದವತು ಕಾಲಕಾಲಕ್ಕೆ ಮಾಡಿದ ಸುಧಾರಣೆಗಳನ್ನು ವಿವರಿಸಿ ಸಮ್ಮೇಲನಗಳ ಅವಶ್ಯಕತೆಯನ್ನು ವಿಶದವಾಗಿ ಪ್ರತಿಪಾದಿಸಿದರು. ಸಮ್ಮೇಲನದ ಅಂತರ್ವ್ಯವಸ್ಥೆಯಲ್ಲಿ ವಿಶೇಷವಾಗಿ ಶ್ರಮತಕ್ಕೊಂಡ ಮಿಸ್ತರ ಬಸಪ್ಪಾ ಹಾವೇರಿ ಅ.| ಮಾಸ್ತರ ರೋಣ ಇವರ, ಹಾಗು ಬ್ರಾಹ್ಮಣ, ಲಿಂಗಾಯತ, ಮುಸಲ್ಮಾನ ಶಿಕ್ಷಕರಿಗೆ ಭೋಜನದ ವ್ಯವಸ್ಥೆಯನ್ನು ಮಾಡಿದ ಮು. ರಾ. ರಾ. ವೀರಭದ್ರಗೌಡ ಪಾಟೀಲ, ವೀರನಗೌಡ ಪಾಟೀಲ, ವಿರೂಪಾಕ್ಷಪ್ಪಾ ಕುಲಕರ್ಣಿ, ಹಸನಸಾಬ ಬೆಟಿಗೇರಿ ಇವರ ಆಭಾರವನ್ನು ಮನ್ನಿಸಿದರು.

ತರುವಾಯ ರಾ. ಸಾ. ಡೆಪುಟಿ ಎಜ್ಯುಕೇಶನಲ್ ಇನಸ್ಪೆಕ್ಟರರು ಈ ತಾಲೂಕಿನಲ್ಲಿ ಶಿಕ್ಷಕರು ಪ್ರದರ್ಶನದ ವಸ್ತುಗಳನ್ನು ವಿಶೇಷವಾಗಿ

ತಂದದ್ದಕ್ಕೂ ಶಾರೀರಶಿಕ್ಷಣದ ಬಗ್ಗೆ ಹೆಚ್ಚು ಪ್ರಯತ್ನವನ್ನು ಮಾಡಿದ್ದಕ್ಕೂ ಅ. ಡೆಪುಟಿಯವರಾದ ಮಿಸ್ತ್ರಿ ದೇಶಪಾಂಡೆ ಇವರ ಅಭಿನಂದನೆಯನ್ನು ಮಾಡಿದರು. ಹಾಗು ಅಧ್ಯಕ್ಷರಾದ ಮಿ. ಆರ್. ಜಿ. ಕೇಳಕರ ಇವರ ಸಮ್ಮತಿಯ ಪ್ರಕಾರ ಸಮ್ಮೇಲನದಲ್ಲಿ ಪಾಠಗಳನ್ನು ಕಲಿಸಿದಂಥ ಹಾಗೂ ನಿಬಂಧಗಳನ್ನು ಓದಿದಂಥ ಶಿಕ್ಷಕರ ಕೆಲಸದ ಪರಿಣಾಮವನ್ನು ಸಭಿಕರಿಗೆ ಹೇಳಿದರು. ಅದು ಹೇಗಂದರೆ: —

ಸೂಡಿಯ ಅ. ಮಾಸ್ತರರಾದ ಭೀ. ಶ. ಪೂಜಾರ ಇವರು ಆಟಗಳ ಅವಶ್ಯಕತೆಯೂ, ಅವುಗಳ ಸಂಬಂಧದ ನಿಯಮುಗಳೂ ಈ ವಿಷಯದ ಮೇಲೆ ಬರೆದ ನಿಬಂಧವೂ, ಗಜೇಂದ್ರಗಡ ಹೆಣ್ಣುಮಕ್ಕಳ ಸಾಲೆಯ ಹೆ. ಮಿಸ್ಟ್ರೆಸ್ ತುಳಸಾಬಾಯಿ ನೀಲಗಾರ, ಹಾಗು ಹಾಳಕೇರಿಯ ಹೆಡ್ಡಮಾಸ್ತರರಾದ ಉಳವಯ್ಯ ಸಾಸ್ವಿಹಳ್ಳಿ ಇವರಿಬ್ಬರೂ "ವಿದ್ಯಾರ್ಥಿಗಳ ತಾಯಿತಂದೆಗಳ ಸಹಕಾರಿತ್ವವನ್ನು ಸಂಪಾದಿಸುವದನ್ನು" ಕುರಿತು ಬರೆದ ನಿಬಂಧವೂ ಮೇಲಾದವುಗಳಿದ್ದವು. ಪ್ರತ್ಯಕ್ಷ ಶಿಕ್ಷಣದಲ್ಲಿ ನರೇಗಲ್ಲ ಶಾಲೆಯ ಹೆ. ಮಾಸ್ತರರಾದ ತ. ನಾ. ಅಮಿನಭಾವಿ ಇವರು ಕಲಿಸಿದ ನೀತಿಪಾಠವೂ, ಸೂಡಿಯ ಉರ್ದು ಶಾಲೆಯ ಹೆ. ಮಾಸ್ತರರಾದ ಅಬ್ದುಲ್ ವಹಾಬ ಕಾಜಿ ಇವರು ಕಲಿಸಿದ ಉರ್ದು ಅಕ್ಷರಗಳ ಶಿಕ್ಷಣವೂ ಮೇಲಾದವುಗಳೆಂದು ಎಣಿಸಲ್ಪಟ್ಟವು.

ಶಿಕ್ಷಣೋಪಕರಣಗಳ ಪ್ರದರ್ಶನದಲ್ಲಿ ಸವಡಿಯ ಅ.ಗಿ ಮಾಸ್ತರರಾದ ಮಹಾಂತ ಶಟ್ಟಿ ಇವರು ಹಿಂದುಸ್ತಾನದ ಪ್ರತಿಹಾಸಿಕ ಹಾಗು ಭೂಗೋಲ ಸಂಬಂಧವಾದ ನಕಾಶಗಳೂ, ರೋಣ ಶಾಲೆಯ ಅ.ಗಿ ಮಾಸ್ತರರಾದ ಹೊ. ರು. ಕರಡಿ ಇವರು ಬಾಲಕರ ವರ್ಗದ ಸಲುವಾಗಿ ಸಿದ್ಧ ಮಾಡಿದ ಪಟಗಳೂ ಕಿಂಡರಗಾರ್ಟನ್ ವ್ಯವಸಾಯದ ಒಡವೆಗಳೂ, ನರೇಗಲ ಸಾಲೆಯ ಹೆ. ಮಾಸ್ತರರಾದ ತ. ನಾ. ಅಮಿನಭಾವಿ ಇವರು ಸಂಖ್ಯಾಲೇಖನವನ್ನು ಕಲಿಸುವ ಬಗ್ಗೆ ಸಿದ್ಧಮಾಡಿದ "ಸಂಖ್ಯಾಪರಿಜ್ಞಾನ"ವೆಂಬ ನವೀನವಾದ ಪಟವೂ ಪ್ರಶಂಸನೀಯವಾಗಿದ್ದವು.

ಆಟಗಳಲ್ಲಿ ಸೂಡಿ ಶಾಲೆಯ ವಿದ್ಯಾರ್ಥಿಗಳ ತಿಳ್ಳೀ ಆಟವೂ, ರೋಣ, ಹಾಳಕೇರಿ ವಿದ್ಯಾರ್ಥಿಗಳ ಫುಟ್‌ಬಾಲ ಆಟವೂ ಎಲ್ಲರ ಮನಸಿಗೆ ಬಂದವು.

(ಇದರ ಮುಂದಿನ ಭಾಗವನ್ನು ಇದೇ ಸಂಚಿಕೆಯ ೨೬ ನೆಯ ಪುಟದಲ್ಲಿ ನೋಡಿರಿ.)

(ಕಳೆದ ತಿಂಗಳ ಸಂಚಿಕೆಯ ಗಿಡಗಳ ಪುಟದಿಂದ ಮುಂದೆ ಸಾಗಿದ್ದು.)

ಈ ಸಸ್ಯವು ಪೂರ್ಣವಾದ ಬೆಳೆಯನ್ನು ಹೊಂದಿದಾಗ ಅದರಲ್ಲಿ ಪುಷ್ಪಗಳು ಹೊರಟು ಇವು ಕಾಲಕ್ರಮದಲ್ಲಿ ಫಲಗಳಾಗಿ ಕೊನೆಗೆ ಬೀಜಗಳನ್ನು ಕೊಡುವವು. ನಮ್ಮ ತೋಟಗಳಲ್ಲಿಯೂ, ಕಾಡುಗಳಲ್ಲಿಯೂ ಬೆಳೆಯುವ ಸಸ್ಯಗಳಲ್ಲಿ ಕೆಲವು ಒಂದುಸಲ ಬೀಜಗಳನ್ನು ಕೊಟ್ಟ ನಂತರ ಒಣಗಿ ಸತ್ತುಹೋಗುವವು. ಇಂಥ ಸಸ್ಯಗಳ ಜೀವಮಾನದ ಚರಿತ್ರೆಯು ಅವು ಬೀಜಗಳಿಂದ ಮೊಳೆಯಾದಾಗ ಪ್ರಾರಂಭಿಸಿ, ಅವು ಬೀಜಗಳನ್ನು ಬಿಟ್ಟು ಒಣಗಿದಾಗ ಮುಗಿಯುವದು. ನಮ್ಮ ಸುತ್ತಲೂ ಇರುವ ಹಲವು ಸಸ್ಯಗಳು ಹೀಗೆ ಒಂದಾವರ್ತಿ ಫಲವನ್ನು ಬಿಟ್ಟು ಸಾಯದೆ ಪ್ರತಿವರ್ಷ ಫಲಗಳನ್ನು ಕೊಡುತ್ತಾ ನೂರಾರು ವರ್ಷಗಳ ಕಾಲ ಬದುಕಿರುತ್ತವೆ. ಇವುಗಳಲ್ಲಿ ಆಲ, ಹುಣಸೆ, ಮಾವಿನ ಮರ ಮೊದಲಾದವು ಸೇರುತ್ತವೆ.

ಮೂರನೇ ಅಧ್ಯಾಯ.

ಗಿಡಗಳ ಅಂಗರಚನೆ, ಆಕಾರ, ಸ್ವಭಾವಗಳು.

[ಸೂಚನೆ:—ಈ ಅಧ್ಯಾಯವನ್ನು ಪ್ರಾರಂಭಿಸುವದಕ್ಕೆ ಮುಂಚೆ ಒಂದು ಸೂಚನೆಯು ಅವಶ್ಯಕವೆಂದು ತೋರುತ್ತದೆ. ಈ ಪಾಠಗಳನ್ನು ಕಲಿಸುವವರು ಆಯಾ ಅಧ್ಯಾಯದ ವಿಷಯಗಳನ್ನು ತಿಳಿಸುವಾಗ ಅವುಗಳಿಗೆ ಅವಶ್ಯಕವಾದ ಸಸ್ಯಗಳನ್ನಾಗಲಿ ಸಸ್ಯಗಳ ಭಾಗಗಳನ್ನಾಗಲಿ ಒದಗಿಸಿಕೊಳ್ಳಬೇಕಾದದ್ದು ಅವರ ಮೊದಲನೇ ಕರ್ತವ್ಯವೆಂದು ತಿಳಿಯಬೇಕು. ಕೇವಲ ಚಿತ್ರಪಠಗಳನ್ನು ನಿದರ್ಶನಗಳಾಗಿಟ್ಟುಕೊಂಡು ಉಪನ್ಯಾಸಗಳನ್ನು ನಡೆಸುವದೆಂದಿಗೂ ಪ್ರಕೃತಿವಿಮರ್ಶೆಯಾಗಲಾರದು. ಸಾಧ್ಯವಾದರೆ ಪ್ರತಿಯೊಬ್ಬ ವಿದ್ಯಾರ್ಥಿಗೂ ಪ್ರತಿಯೊಂದು ಸಸ್ಯವನ್ನು ತರಿಸಿಕೊಡಬೇಕು.

ಅವಶ್ಯಕವಾದ ಸಸ್ಯಗಳು:—ಸಸ್ಯಗಳ ಭಾಗಗಳನ್ನು ಮತ್ತು ಗಿಡಗಳು ಬೆಳೆಯುವ ಕ್ರಮವನ್ನು ತಿಳಿಯುವದಕ್ಕೆ ನಮ್ಮ ಸುತ್ತಲೂ ಬೆಳೆಯುವ ಯಾವ ಗಿಡವನ್ನಾದರೂ ನಿರೀಕ್ಷಿಸಬಹುದು. ಯಾವದೂ ದೊರೆಯದೆ ಸಸ್ಯಗಳನ್ನು ತರಿಸಿ ಪಾಠವನ್ನು ನಡಿಸಬೇಕಾದರೆ ಸ್ವಲ್ಪ

ದಿವಸಗಳಿಗೆ ಮುಂಚಿತವಾಗಿಯೆ ಕೆಲವು ಅವರೆ ಬೀಜಗಳನ್ನು ಬಿತ್ತಿ ಅವಶ್ಯಕವಾದಷ್ಟು ಸಸ್ಯಗಳನ್ನು ಸಿದ್ಧಮಾಡಿಕೊಳ್ಳಬಹುದು.

ಈ ಪಾಠಗಳನ್ನು ಕಲಿಯುವವರು ತಾವು ನೋಡುವ ಅಂಶಗಳನ್ನು ಬರೆಯುವದರ ಜೊತೆಗೆ ಅವರು ವಿಮರ್ಶಿಸುವ ಸಸ್ಯಗಳ ಅಥವಾ ಸಸ್ಯಭಾಗಗಳ ಚಿತ್ರಗಳನ್ನು ಸ್ಪಷ್ಟವಾಗಿ ಬರೆದಿಡಬೇಕು. ಇವೆರಡು ಒಂದೇ ಕಡೆಯಲ್ಲಿರುವದು (ಅಂದರೆ ಎದುರುಬದುರಾಗಿರುವದು) ಉತ್ತಮ. ಚಿತ್ರಗಳನ್ನು ಬರೆಯುವಾಗ ವಸ್ತುಗಳ ಪ್ರಮಾಣಗಳನ್ನು ಕಂಡು ಹಿಡಿದು ಅವುಗಳ ಪ್ರಮಾಣಕ್ಕೂ ಚಿತ್ರಕ್ಕೂ ಸರಿಯಾದ ಸಂಬಂಧವನ್ನಿಟ್ಟುಕೊಳ್ಳಬೇಕು. ಸಸ್ಯದ ಭಾಗವು ಸೂಕ್ಷ್ಮವಾಗಿದ್ದರೆ ಚಿತ್ರವು ಅದಕ್ಕಿಂತ ದೊಡ್ಡದಾಗಿರಬೇಕಾದದ್ದು ಅವಶ್ಯಕ. ಸಸ್ಯದ ಹೆಸರನ್ನು ಚಿತ್ರದ ಅಡಿಯಲ್ಲಿ ಬರೆಯಬೇಕು. ಚಿತ್ರಗಳನ್ನು ತೆಗೆಯುವಾಗ ಸಸ್ಯಗಳನ್ನಾಗಲಿ ಸಸ್ಯಗಳ ಭಾಗಗಳನ್ನಾಗಲಿ ಎದುರಿಗೆ ಇಟ್ಟುಕೊಂಡು ಬರೆಯಬೇಕೇ ಹೊರತು, ಕೇವಲ ನೆನಪಿನಿಂದ ಬರೆಯಬಾರದು.]

ಸಸ್ಯಗಳ ಆಕಾರ, ಅಂಗರಚನೆ, ಬೆಳೆಯುವ ಕ್ರಮ, ಬದುಕುವ ರೀತಿ ಇವುಗಳನ್ನು ತಿಳಿದುಕೊಳ್ಳಬೇಕಾದರೆ ನಮ್ಮ ಸುತ್ತಲೂ ನಾನಾ ಸ್ಥಳಗಳಲ್ಲಿಯೂ, ಬೆಳೆದು ಬದುಕುತ್ತಿರುವ ಗಿಡಗಳನ್ನು ಲಕ್ಷ್ಯವಿಟ್ಟು ನೋಡಬೇಕು. ಕೆಲವು ವೈದಾನಗಳಲ್ಲಿಯೂ, ಕೆಲವು ಪರ್ವತಗಳ ತಪ್ಪಲುಗಳಲ್ಲಿಯೂ ಬೆಳೆಯುತ್ತಾ ಹಲವು ಬಗೆಯಾಗಿದ್ದರೂ ಸಾಮಾನ್ಯವಾಗಿ ಸಸ್ಯಗಳ ಅಂಗರಚನೆ, ಸ್ವಭಾವವು ಒಂದೇ ವಿಧವಾಗಿರುವದೆಂದು ಹೇಳಬಹುದು. ಆದುದರಿಂದ ನಮ್ಮ ಸುತ್ತಲೂ ಬೆಳೆಯುವ ಕೆಲವು ಗಿಡಗಳನ್ನು ಪರೀಕ್ಷಿಸುವದರಿಂದ ಗಿಡಗಳ ಭಾಗಗಳನ್ನೂ, ಅವು ಬೆಳೆಯುವ ಕ್ರಮವನ್ನೂ ತಿಳಿಯಬಹುದು. ನಮಗೆ ಬಹಳ ಬಳಕೆಯಾದ ಅಗಸೆ, ಅವರೆ, ಸೂರ್ಯಪಾನ, ಮುದಗುಣಿಕೆ, ಬದನೆ, ಔಡಲ, ಬೆಂಡೆ, ಗೋಧಿ, ಜೋಳ, ತೆಂಗು ಮೊದಲಾದವುಗಳಲ್ಲಿ ಕೆಲವು ಗಿಡಗಳನ್ನು ಪರೀಕ್ಷಿಸಬಹುದು.

ಇವುಗಳಲ್ಲಿ ಕೆಲವು ಪೂರ್ಣ ಸಸ್ಯಗಳನ್ನು ಪರೀಕ್ಷಿಸಿದರೆ ಪ್ರತಿಯೊಂದು ಸಸ್ಯದಲ್ಲಿಯೂ ಆಕಾರವರ್ಣಗಳಲಿ ಬಹು ಭಿನ್ನವಾದ ಭಾಗ

ಗಳಿರುವದು ಗೋಚರವಾಗುವದು. ಹೀಗೆ ಭಿನ್ನವಾಗಿರುವದಕ್ಕೆ ಕಾರಣವೇನೆಂದು ವಿಚಾರಮಾಡಿದರೆ, ಒಟ್ಟು ಸಸ್ಯದ ಪ್ರಯೋಜನಕ್ಕಾಗಿ ಒಂದೊಂದು ಭಾಗವು ಮಾಡಬೇಕಾದ ಕಾರ್ಯಕ್ಕೆ ತಕ್ಕ ಹಾಗೆ ಅದಕೆ ಆಕಾರವೂ ರಚನೆಯೂ ಇರುವದೆಂದು ತಿಳಿಯಬರುವದು. ನಾವು ಬೆಳೆಸಿರುವ ಅವರೆ ಗಿಡವು ಎಲ್ಲರಿಗೂ ತಿಳಿದ ಗಿಡವಷ್ಟೆ. ಇದು ನಮಗೆ ಬಹಳ ಪ್ರಯೋಜನಕರವಾದ ಸಸ್ಯ. ಇದನ್ನು ಎಲ್ಲೆಲ್ಲಿಯೂ ಬೆಳೆಸಬಹುದು. ಸಸ್ಯವು ಎಷ್ಟು ಚಿಕ್ಕದಾಗಿದ್ದರೂ ಅದರಲ್ಲಿ ಎರಡು ಭಾಗಗಳಾದರೂ ಇರುವದನ್ನು ನಾವು ಸುಲಭವಾಗಿ ನೋಡಬಹುದು. ಇದರಲ್ಲಿ ಒಂದು ಭಾಗವು ಭೂಮಿಯ ಒಳಗಿದ್ದು ಅಧೋಮುಖವಾಗಿ ಬೆಳೆಯುತ್ತಿರುವದು. ಮತ್ತೊಂದು ಭಾಗವು ಭೂಮಿಯ ಹೊರಗೆ ಇದ್ದು ಊರ್ಧ್ವಮುಖವಾಗಿ ಬೆಳೆಯುವದು. ಒಂದು ಅವರೆ ಸಸ್ಯವನ್ನು ಭೂಮಿಯಿಂದ ಪೂರ್ಣವಾಗಿ ತೆಗೆದು ಅದರ ಕೆಳಭಾಗವನ್ನು ತೊಳೆದು ಸ್ವಚ್ಛಮಾಡಿದರೆ ಸಸ್ಯದಲ್ಲಿರುವ ಭಾಗಗಳು ನಮಗೆ ಸ್ಪಷ್ಟವಾಗುವವು. ಭೂಮಿಯ ಒಳಗೆ ಕೆಳಮುಖವಾಗಿ ಬೆಳೆಯುತ್ತಾ ಗಿಡವು ಅದರ ಸ್ಥಾನದಲ್ಲಿ ನಿಲ್ಲುವದಕ್ಕೆ ಆಧಾರವಾಗಿರುವ ಭಾಗವನ್ನು ಬೇರೆಂದು ಕರೆಯುತ್ತೇವೆ. ಅವರೆ ಗಿಡದ ಬೇರಿನ ಭಾಗದಲ್ಲಿ ಭೂಮಿಯೊಳಗೆ ಆಳವಾಗಿ ಬೆಳೆಯುತ್ತಿರುವ ಒಂದು ದೊಡ್ಡ ಬೇರೂ, ಅದರಿಂದ ಹೊರಟ ಸಣ್ಣ ಸಣ್ಣ ಶಾಖೆಗಳೂ ಕಾಣುವವು.

ಗಿಡಗಳಲ್ಲಿ ಊರ್ಧ್ವಮುಖಕ್ಕೆ ಎದ್ದು, ಹವೆ ಬೆಳಕು ಚನ್ನಾಗಿ ತಗಲುವಂತೆ ಹೊರಕ್ಕೆ ಬೆಳೆದು ಬರುವ ಭಾಗವು, ಕಾಂಡ ಅಥವಾ ಪ್ರಕಾಂಡವೆನಿಸುವದು. ಇದರಲ್ಲಿ ಎರಡು ಭಾಗಗಳನ್ನು ನಾವು ಲಕ್ಷಿಸಬಹುದು. ೧. ತೆಳುವಾಗಿಯೂ ಅಗಲವಾಗಿಯೂ ಹಸರು ಬಣ್ಣವುಳ್ಳವಾಗಿಯೂ ಇರುವ ಎಲೆಗಳು; ೨. ಇವುಗಳನ್ನು ಹೊತ್ತುಕೊಂಡಿರುವ ದಂಟು. ಅವರೆ ಗಿಡದಲ್ಲಿ ಮೊದಲು ಬಂದ ಎಲೆಗಳನ್ನು ಬಿಟ್ಟು ಉಳಿದ ಎಲೆಗಳ ಅಗಲವಾದ ಭಾಗದಲ್ಲಿ ಮೂರು ಸಣ್ಣ ಪತ್ರಗಳಿರುತ್ತವೆ. ಈ ಮೂರು ಉಪಪತ್ರಗಳನ್ನು ಹೊರುವ ತೊಟ್ಟು ಕಾಂಡದಲ್ಲಿ ಸೇರಿರುತ್ತದೆ. ಕೆಲವು ಸಣ್ಣ ಅವರೆ ಸಸ್ಯಗಳ ಅಡಿಯ ಭಾಗದಲ್ಲಿ ಎರಡು ಬೀಜಗಳ ದಳಗಳು ಅಂಟಿಕೊಂಡಿರುವದು ಉಂಟು. ಇವು ಸಸ್ಯವು ದೊಡ್ಡದಾದ ಹಾಗೆಲ್ಲಾ

ಸಂಕುಚಿತವಾಗುವವು. ದಿನಗಳು ಕಳೆಯುತ್ತ ಅವರೆ ಗಿಡವು ಬೆಳೆಯುವದು ಮಾತ್ರವಲ್ಲದೆ ಅದರಲ್ಲಿ ಎಲೆಗಳು ಹೆಚ್ಚಿ ಶಾಖೆಗಳು ಬೆಳೆಯಲಾರಂಭಿಸುವವು. ಈ ಶಾಖೆಗಳು ಎಷ್ಟು ಹುಟ್ಟಿದರೂ ಅವು ಆಕಾರ-ಸಂಯೋಗಗಳಲ್ಲಿ ಒಂದೇ ಬಗೆಯಾಗಿರುವವು. ಗಿಡವು ದೊಡ್ಡದಾದ ಹಾಗೆಲ್ಲಾ ಅದರ ಕಾಂಡ ಭಾಗದಲ್ಲಿ ಪುಷ್ಪಗಳೂ, ಕಾಯಿಗಳೂ ಬರುವವು. ಗಿಡಗಳಲ್ಲಿ ಪ್ರಕಾಂಡವು ಅನೇಕ ವಿಧವಾಗಿರುತ್ತದೆ. ಅವರೆ, ಬದನೆ, ಬೆಂಡೆ, ಮೊದಲಾದವುಗಳಲ್ಲಿ ಸಣ್ಣದಾಗಿಯೂ ತಗ್ಗಾಗಿಯೂ ಆಲ, ಹುಣಿಸೆ ಮೊದಲಾದವುಗಳಲ್ಲಿ ಗಾತ್ರವುಳ್ಳದ್ದಾಗಿಯೂ ಎತ್ತರವಾದದ್ದಾಗಿಯೂ ಇರುವದು. ತೆಂಗು, ಅಡಿಕೆ ಮೊದಲಾದವುಗಳಲ್ಲಿ ಪ್ರಕಾಂಡದಲ್ಲಿ ಶಾಖೆಗಳು ಹೊರಡದೆ, ದಂಟು ಒಂದೇ ಭಾಗವಾಗಿರುತ್ತದೆ. ಮಾವಿನ ಮರ, ಬೇವಿನ ಮರ ಮೊದಲಾದವುಗಳಲ್ಲಿ ಪ್ರಕಾಂಡವು ಅನೇಕ ಕವಲುಗಳನ್ನುಳ್ಳದಾಗಿರುವದು. ದಂಟಿನಲ್ಲಿ ಎಲೆಗಳು ಸೇರಿರುವ ಸ್ಥಾನವು ಗಂಟು ಅಥವಾ ಗಿಣ್ಣು ಎಂದು ಕರೆಯಲ್ಪಡುವದು. ಈ ಸ್ಥಳವು ಸ್ವಲ್ಪ ಉಬ್ಬಿದ್ದಾಗಿ ಕಾಣುವದು. ನಮ್ಮ ಅವರೆ ಗಿಡಕ್ಕಿಂತ, ಕಬ್ಬು, ಬಿದುರು, ಜೋಳ, ಮೊದಲಾದವುಗಳಲ್ಲಿ ಇದು ಬಹಳ ಸ್ಪಷ್ಟವಾಗಿ ಕಾಣುವದು. ಇಂಥ ಎರಡು ಗಿಣ್ಣುಗಳ ನಡುವೆ ಇರುವ ದಂಟಿನ ಭಾಗವನ್ನು ಪರ್ವಮಧ್ಯವೆಂದು ಕರೆಯುತ್ತೇವೆ. ಕೆಲವು ಗಿಡಗಳಲ್ಲಿ ಅವರೆ ಗಿಡದಲ್ಲಿರುವ ಹಾಗೆ ಗಿಣ್ಣಿಗೆ ಒಂದು ಎಲೆಯು, ಕೆಲವು ಗಿಡಗಳಲ್ಲಿ ಸೀತಾಫಲ ಮೊದಲಾದವುಗಳಲ್ಲಿರುವ ಹಾಗೆ ಗಿಣ್ಣಿಗೆ ಉಭಯ ಪಾರ್ಶ್ವಗಳಲ್ಲಿಯೂ ಎಲೆಗಳು, ಕೆಲವು ಗಿಡಗಳಲ್ಲಿ ಕಣಗಲೆ ಗಿಡದಲ್ಲಿರುವ ಹಾಗೆ ಗಿಣ್ಣಿಗೆ ಮೂರು ಎಲೆಗಳು, ಕೆಲವು ಗಿಡಗಳಲ್ಲಿ ಇದಕ್ಕೂ ಹೆಚ್ಚಾಗಿಯೂ ಇರುವದುಂಟು. ಒಂದು ಗಿಡದಲ್ಲಿ ಎಲೆಗಳ ಜೋಡಣೆಯನ್ನು ನೋಡಿದರೆ, ಒಂದು ಗಿಣ್ಣಿನ ಎಲೆಗಳು ಅದಕ್ಕೆ ಕೆಳಗಿನ ಗಿಣ್ಣಿನ ಎಲೆಗಳನ್ನು ಮರೆ ಮಾಡುವದಿಲ್ಲವೆಂದು ತಿಳಿಯುವದು. ಅವರೆ ಗಿಡದಲ್ಲಿ ಎಲೆಗಳು ಕೆಳಗೆ ಮೇಲಾಗಿರದೆ ಒಂದಕ್ಕೊಂದು ಅಡ್ಡವಾಗಿ ಬೆಳೆಯುವವು. ಹೀಗೆ ಎಲೆಗಳು ಅಡ್ಡವಾಗಿ ಬೆಳೆಯುವದರಿಂದ ಸೂರ್ಯನ ಬೆಳಕು ಎಲ್ಲಾ ಎಲೆಗಳಿಗೂ ದೊರಕುವದು. ತಮ್ಮ ಎಲೆಗಳಿಗೆ ಸೂರ್ಯನ ಬೆಳಕನ್ನು ಸಂಪಾದಿ

ಸುವ ಉದ್ದೇಶದಿಂದ ಗಿಡಗಳು ನಾನಾ ವಿಧವಾದ ಉಪಾಯಗಳನ್ನು ಹುಡುಕುತ್ತವೆ. ಮರಗಿಡಗಳಲ್ಲಿ ಕವಲುಗಳು ಹೊರಟು ಎಲ್ಲ ಕಡೆಗಳಲ್ಲಿಯೂ ವಿಸ್ತರಿಸಿಕೊಂಡು ಬೆಳೆಯುವದು ಈ ಕಾರಣದಿಂದಲೇ. ಇದೇ ಉದ್ದೇಶದಿಂದಲೆ ಗಿಡಗಳು ಒತ್ತಾಗಿ ಬೆಳೆಯತಕ್ಕ ಬೀಲಿಗಳಲ್ಲಿಯೂ ಪೊದೆಗಳಲ್ಲಿಯೂ (ಹೊದರುಗಳಲ್ಲಿಯೂ) ಕತ್ತಲೆಯಾಗಿರುವ ಭಾಗಗಳನ್ನು ಬಿಟ್ಟು ಬೆಳಕು ಸಿಕ್ಕುವ ಭಾಗದಲ್ಲಿ ಎಲೆ, ಕವಲುಗಳು ಪುಷ್ಪಗಳು ಬೆಳೆಯುತ್ತವೆ. ಹಾಗೆಯೆ ಮರಗಿಡಗಳು ಹೆಚ್ಚಾಗಿ ಬೆಳೆದಿರುವ ತೋಪುಗಳಲ್ಲಿ ಆ ಗಿಡಗಳ ಆಧಾರದಿಂದ ಮೇಲಕ್ಕೆ ಬೆಳೆದು ಬರುವ ಬಳ್ಳಿಗಳು ಇತರ ಗಿಡಗಳ ಕೆಳಭಾಗಗಳಲ್ಲಿ ಕವಲೊಡೆದು ಹಬ್ಬದೆ ನೆರವಾಗಿ ಮೇಲು ಮುಖಕ್ಕೆ ಹತ್ತಿ, ಆ ಮರ ಗಿಡಗಳ ತುದಿಯ ಭಾಗಗಳನ್ನು ಸೇರಿ ಅಲ್ಲಿ ವಿಶೇಷವಾಗಿ ಹಬ್ಬಿ ಬೆಳೆಯುವವು ಇದೇ ರೀತಿಯಲ್ಲಿಯೆ ನಮ್ಮ ಮನೆಗಳಲ್ಲಿಯೂ, ತೋಟಗಳಲ್ಲಿಯೂ, ಹಂದರ (ಚಪ್ಪರ) ದ ಮೇಲೆ ಹಬ್ಬಿಸಲ್ಪಡುವ ದ್ರಾಕ್ಷಿ, ಅವರೆ, ಹಾಗಲ, ಪಡವಲ ಮೊದಲಾದ ಬಳ್ಳಿಗಳಲ್ಲಿ, ಹಂದರದ ಕೆಳಗೂ, ಬೆಳಕು ಬೀಳದೆ ಇರುವ ಕಡೆಗಳಲ್ಲಿಯೂ ಎಲೆಗಳು, ಕುಡಿಗಳು ಬರದೆ ಇರುವದನ್ನು ನಾವು ನೋಡಬಹುದು.

ಕೆಲವು ಗಿಡಗಳಲ್ಲಿ ಎಲೆಗಳು ಹೊರಡುವ ಸ್ಥಳಗಳಲ್ಲಿ ಉಭಯ ಪಾರ್ಶ್ವಗಳಲ್ಲಿಯೂ ಸಣ್ಣ ಸಣ್ಣ ಪುಚ್ಛಗಳು ಬೆಳೆಯುತ್ತವೆ. ಎಲೆಗಳು ಬಲಿತ ಮೇಲೆ ಗಿಣ್ಣು ಪುಚ್ಛಗಳು ಬಿದ್ದು ಹೋಗುವವು.

ಗಿಣ್ಣಿನಲ್ಲಿ ಎಲೆಗಳು ಹೊರಟ ಸ್ಥಳದಲ್ಲಿ ಎಲೆಗೂ ದಂಟಿಗೂ ನಡುವೆ ಒಂದು ಮೂಲೆಯುಂಟಾಗುವದು. ಇದನ್ನು ಗಿಣ್ಣು ಮೂಲೆ ಎಂದು ಹೇಳಬಹುದು. ಶಾಖೆಗಳು ಹುಟ್ಟಿರುವ ಗಿಡಗಳನ್ನು ನಾವು ಪರೀಕ್ಷಿಸಿದರೆ ಗಿಡಗಳಲ್ಲಿ ಶಾಖೆಗಳು ಕಾಂಡಕ್ಕೂ ಎಲೆಗೂ ಮಧ್ಯೆ ಇರುವ ಸಂದುಗಳಲ್ಲಿ (ಮೂಲೆಗಳಲ್ಲಿ) ಹೊರಡುವದು ಸ್ಪಷ್ಟವಾಗುವದು. ಗಿಡಗಳ ಕೊಂಬೆಗಳು ಗಿಡಗಳ ಅಡಿಯ ಭಾಗದಲ್ಲಿ ದೊಡ್ಡವಾಗಿಯೂ ಗಿಡಗಳ ಕೊನೆಗಳಲ್ಲಿ ಸಣ್ಣವಾಗಿಯೂ ಇರುತ್ತದೆ. ಮೇಲೆ ಮೇಲೆ ಹೋಗುತ್ತಾ ಕೊಂಬೆಗಳು ಸೂಕ್ಷ್ಮವಾದ ಮೊಗ್ಗೆಗಳಾಗಿ ಕಾಣುವವು. ಇದರಿಂದ ಕೊಂಬೆಗಳು ಆರಂಭದಲ್ಲಿ ಮೊಗ್ಗೆಗಳಾಗಿರು

ತ್ತವೆ ಎಂದು ತಿಳಿಯಬಹುದು. ಹಾಗೆಯೆ ಗಿಡಗಳ ತುದಿಯಲ್ಲಿಯೂ ಸಣ್ಣ ಮೊಗ್ಗೆಗಳು ಇರುತ್ತವೆ. ಎಲ್ಲಾ ಮರ-ಗಿಡಗಳಲ್ಲಿಯೂ, ದಂಟಿನ ತುದಿಯಲ್ಲಿಯೂ, ಕೊಂಬೆಗಳ ತುದಿಯಲ್ಲಿಯೂ, ಗಿಣ್ಣುಗಳ ಸಂದುಗಳಲ್ಲಿಯೂ ಮೊಗ್ಗೆಗಳು (ಅಂಕುರಗಳು) ಇರುವವು. ಕೆಲವು ವೇಳೆ ಚನ್ನಾಗಿ ಗಮನಿಸಿ ನೋಡಿದ ಹೊರತು, ಇವು ಕಣ್ಣಿಗೆ ಕಾಣಿಸುವದಿಲ್ಲ. ಶಾಖೆಗಳ ತುದಿಗಳಲ್ಲಿಯೂ, ಗಿಣ್ಣುಗಳ ಮೂಲೆಗಳಲ್ಲಿಯೂ ಅಲ್ಲದೆ ಇತರ ಕಡೆಗಳಲ್ಲಿ ಮೊಗ್ಗೆಗಳು ಸಾಮಾನ್ಯವಾಗಿ ಉಂಟಾಗುವದಿಲ್ಲ. ಶಾಖೆಗಳು ಉದ್ದವಾಗಿ ಬೆಳೆಯುವದು, ಗಿಡಗಳ ಕಾಂಡಗಳು ಎತ್ತರವಾಗಿ ಬೆಳೆಯುವದು, ಅವುಗಳ ತುದಿಯ ಮೊಗ್ಗೆಗಳ ಬೆಳವಳಿಕೆಯಿಂದಲೇ. ಗಿಣ್ಣುಗಳ ಸಂದುಗಳಲ್ಲಿ ಬರುವ ಮೊಗ್ಗೆಗಳಿಂದಲೇ ಶಾಖೆಗಳು ಬೆಳೆಯುವದು. ನಮ್ಮ ಅವರೆ ಸಸಿಗಳಲ್ಲಿ ಶಾಖೆಗಳು ಕಾಣದೆ ಇದ್ದರೆ, ಇತರ ಗಿಡಗಳನ್ನು ನೋಡಿ ಈ ವಿಷಯವನ್ನು ನಿರ್ಧರ ಮಾಡಿಕೊಳ್ಳ ಬಹುದು. ಗಿಡಗಳಲ್ಲಿ ಸಾಧಾರಣವಾಗಿ ಕಾಂಡದ ಮತ್ತು ಶಾಖೆಗಳ ತುದಿಯ ಮೊಗ್ಗೆಗಳು ಬೆಳೆಯುತ್ತಿರುವವರಿಗೂ ಗಿಣ್ಣಿನ ಮೊಗ್ಗೆಗಳು ಬೆಳೆಯುವದಿಲ್ಲ. ನಾವು ಅವರೆ ಗಿಡದಲ್ಲಿ ಎಲೆಗಳ ಸ್ಥಾನ, ಅವುಗಳ ಜೋಡಣೆಯನ್ನು ನಿರೀಕ್ಷಿಸಿದ ನಂತರ ಅದನ್ನು ಇತರ ಗಿಡಗಳೊಡನೆ ಹೋಲಿಸಿ ಅದಕ್ಕೂ ಇತರ ಸಸ್ಯಗಳಿಗೂ ಇರುವ ವ್ಯತ್ಯಾಸಗಳನ್ನು ಲಕ್ಷಿಸಬೇಕು. ಔಡಲ ಗಿಡವು ಎಲ್ಲೆಲ್ಲಿಯೂ ಬೆಳೆಯುತ್ತಿರುವ ಒಂದು ಸಾಮಾನ್ಯ ಗಿಡವಷ್ಟೆ. ನಾವು ಒಂದು ಅವರೆ ಸಸ್ಯವನ್ನು ಒಂದು ಔಡಲ ಗಿಡದೊಡನೆ ಹೋಲಿಸಿ ನೋಡೋಣ. ಔಡಲ ಗಿಡದಲ್ಲೂ ಗಿಣ್ಣೊಂದಕ್ಕೆ ಒಂದೆಲೆಯು ಮಾತ್ರ ಇರುವದು. ಈ ಎಲೆಗಳಿಗೆ ಅವರೆ ಎಲೆಗಳಿಗಿಂತಲೂ ಕಾವು (ತೊಟ್ಟು) ಬಹಳ ಉದ್ದವಾಗಿರುವದು. ಔಡಲ ಗಿಡದ ಎಲೆಗಳಿಗೂ ಅವರೆ ಗಿಡದ ಎಲೆಗಳಿಗೂ ಆಕಾರದಲ್ಲಿ ವ್ಯತ್ಯಾಸವಿರುವದು. ಅವರೆ ಎಲೆಯ ಪತ್ರಭಾಗವು ಮೂರು ಸಣ್ಣ ಎಲೆಗಳಾಗಿರುತ್ತದೆ. ಇಂಥ ಎಲೆಗಳನ್ನುಳ್ಳ ಸಸ್ಯಗಳಲ್ಲಿ ಗುಲಾಬಿ, ಹುಣಸೆ, ಬಟಾಣಿ ಮೊದಲಾದವುಗಳನ್ನು ಹೇಳಬಹುದು. ಔಡಲ ಗಿಡದ ಎಲೆಯು ಬದನೆ, ಬೆಂಡೆ, ಆಲ ಮೊದಲಾದ ಎಲೆಗಳ ಹಾಗೆ ಒಂದೇ ಅಖಂಡಪತ್ರವುಳ್ಳದ್ದಾಗಿರುತ್ತದೆ. ಅದರ ಅಂಚು ಕತ್ತರಿಸದ

ಅಂಚಿನಂತೆ ಹಲ್ಲುಗಳುಳ್ಳದ್ದಾಗಿರುತ್ತದೆ. ಮದಗುಣಿಕೆ, ಬದನೆ, ಕುಂಬಳ ಮೊದಲಾದ ಗಿಡಗಳಲ್ಲಿಯೂ ಎಲೆಗಳು ಗಿಣ್ಣಿಗೆ ಒಂದರಂತೆ ಉದ್ದವಾದ ತೊಟ್ಟಿನೊಡನೆ ಬೆಳೆಯುವವು.

ಮೇಲೆ ಹೇಳಿದ ಎಲ್ಲಾ ಗಿಡಗಳಲ್ಲಿಯೂ ಗಿಣ್ಣುಗಳ ಸಂದುಗಳೊಳಗಿನಿಂದ ಶಾಖೆಗಳು ಬರುವದು ಮಾತ್ರವಲ್ಲದೆ ಪುಷ್ಪಗಳು ಬಿಡುವದನ್ನು ನಾವು ನೋಡಬಹುದು. ಪುಷ್ಪಗಳು ಶಾಖೆಗಳ ಹಾಗೆಯೆ ಆರಂಭದಲ್ಲಿ ಮೊಗ್ಗೆಗಳಾಗಿರುವುವು. ನಾವು ಪುಷ್ಪಿಸಿರುವ ಒಂದು ಅವರೆ ಗಿಡದಲ್ಲಿ ಹೂಗಳು ಹೊರಡುವ ಸ್ಥಳವನ್ನು, ಗಿಡದ ಕೊನೆಯ ಭಾಗಗಳಲ್ಲಿ ಹೂಗಳು ಇರುವ ರೂಪಗಳನ್ನು ನೋಡಿದರೆ ಪುಷ್ಪಗಳು ಮೊಗ್ಗೆಗಳಾಗಿ ಪ್ರಾರಂಭಿಸಿ ಸ್ವಲ್ಪಕಾಲ ಬೆಳೆದ ನಂತರ ವಿಕಾಸವನ್ನು ಹೊಂದುವದೆಂದು ತಿಳಿಯಬರುವದು. ಗಿಡಗಳಲ್ಲಿ ಪುಷ್ಪಗಳ ಮತ್ತು ಶಾಖೆಗಳ ಸ್ಥಾನ ಮತ್ತು ಉತ್ಪತಿಕ್ರಮ, ಒಂದೇ ವಿಧವಾಗಿರುವದರಿಂದ ಇವೆರಡು ಸಮಾನವಾದ ಅಂಗಗಳೆಂದು ಎಣಿಸಬಹುದು. ಪುಷ್ಪಗಳು ಕಾಲಕ್ರಮದಲ್ಲಿ ಕಾಯಿ-ಹಣ್ಣುಗಳಾಗಿ ಕೊನೆಗೆ ಬೀಜಗಳನ್ನು ಬಿಡುತ್ತವೆ.

ಅವರೆ ಗಿಡದಲ್ಲಿ ಪುಷ್ಪಗಳು ಬಿಟ್ಟು ಸ್ವಲ್ಪ ದಿನಗಳಲ್ಲಿಯೆ ಅವರೆ ಕಾಯಿಗಳು ದೊರೆಯುತ್ತವೆ. ಇವು ನಮ್ಮ ಅಡಿಗೆಯಲ್ಲಿ ಎಷ್ಟರಮಟ್ಟಿಗೆ ಉಪಯೋಗವಾಗುವದೆಂಬ ಅಂಶವು ಎಲ್ಲರಿಗೂ ತಿಳಿದಿರುವದು. ಅವರೆ ಗಿಡವು ಕಾಯಿ-ಬೀಜಗಳನ್ನು ಬಿಡುವದು ನಮ್ಮ ಆಹಾರದ ಉದ್ದಿಶ್ಯವಾಗಿರುವದೆಂದು ಅನೆ ಕರು ತಿಳಿಯಬಹುದು. ನಾವು ವಿಚಾರಮಾಡಿದರೆ ಈ ಬೀಜಗಳಿಂದ ಗಿಡಕ್ಕೆ ಅವಶ್ಯಕವಾದ ಒಂದು ಉಪಯೋಗವಿರುವದೆಂದು ವ್ಯಕ್ತವಾಗುವದು. ಗಿಡದಲ್ಲಿ ಬೀಜಗಳನ್ನು ಚನ್ನಾಗಿ ಪಕ್ವವಾಗುವವರಿಗೂ ಇಟ್ಟಿದ್ದು ಅನಂತರ ಅವುಗಳನ್ನು ಅನುಕೂಲವಾದ ಕಾಲದಲ್ಲಿ ಸರಿಯಾದ ಕ್ಷೇತ್ರದಲ್ಲಿ ನಟ್ಟರೆ, ಸ್ವಲ್ಪ ದಿನಗಳಲ್ಲಿಯೆ ಅವುಗಳಿಂದ ಅವರೆ ಸಸ್ಯಗಳ ಮೊಳಕೆಗಳು ಬರುವವು. ಆದುದರಿಂದ ಗಿಡಗಳು ಬೀಜಗಳನ್ನು ಬಿಡುವದರಿಂದ ತಮ್ಮ ಸಂತಾನವೃದ್ಧಿಗೆ ಬೇಕಾದ ಏರ್ಪಾಡನ್ನು ಮಾಡಿಕೊಳ್ಳುತ್ತವೆ ಎಂದು ಹೇಳಬೇಕು.

ಪೂರ್ಣವಾಗಿ ಬೆಳೆದ ಸಸ್ಯಗಳಲ್ಲಿ ನಾವು ನಿರೀಕ್ಷಿಸಬಹುದಾದ ಅಂಗಗಳು ಯಾವವೆಂದರೆ— ಬೇರು, ಕಾಂಡದ ದಂಟು, ಎಲೆಗಳು,

ಪುಷ್ಪಗಳು. ಸಸ್ಯದ ಜೀವಮಾನದಲ್ಲಿ ನಡೆಯುವ ಕಾರ್ಯಗಳು ಈ ಅಂಗಗಳಲ್ಲಿ ವಿಭಾಗ ಮಾಡಲ್ಪಟ್ಟಿರುತ್ತವೆ. ಮೊದಲಿನ ಮೂರು ಅಂಗಗಳು ಸಸ್ಯವು ಬದುಕುವದಕ್ಕೆ ಅವಶ್ಯಕವಾದ ಶ್ವಾಸೋಚ್ಛ್ವಾಸ, ಆಹಾರ ಪದಾರ್ಥಗಳ ಸಂಪಾದನೆ, ಇವುಗಳಿಗಾಗಿ ಏರ್ಪಟ್ಟಿರುತ್ತವೆ. ಪುಷ್ಪಗಳು ಆಯಾ ಸಸ್ಯ ಜಾತಿಯನ್ನು ವೃದ್ಧಿ ಮಾಡುವ ಕೆಲಸಕ್ಕಾಗಿ ನಿಯಮಿತವಾಗಿರುತ್ತವೆ, ಎಂದು ಹಿಂದೆ ಹೇಳಿರುತ್ತದೆ. ಗಿಡಗಳಲ್ಲಿ ಪಕ್ವವಾಗಿ ಅಲ್ಲಿಂದ ಹೊರಬಿದ್ದ ಬೀಜಗಳು ನೆಲದ ಮೇಲೆ ಎಲ್ಲಾದರೂ ಒಂದು ಸ್ಥಳದಲ್ಲಿ ಸೇರಿ, ಸರಿಯಾದ ಕಾಲವು ಒದಗುವವರಿಗೂ ಹಾಗೆಯೆ ಇರುವವು. ನಮ್ಮ ದೇಶದಲ್ಲಿ ಒಂದೆರಡಾವರ್ತಿ ಮಳೆಯಾದೊಡನೆ ಈ ಬೀಜಗಳು ಮೊಳೆಯುವದಕ್ಕೆ ಪ್ರಾರಂಭಿಸುವವು. ಇವು ಚನ್ನಾಗಿ ಬೆಳೆದ ಮೇಲೆ ಇವುಗಳಿಂದ ಬೀಜಗಳು ಬರುವವು. ಈ ಕ್ರಮವು ಸರಿಯಾಗಿ ಸಾಗುತ್ತಿದ್ದರೆ ಕಾಡುಗಳು ಬೆಳೆಯುತ್ತಾ ಬರುವವು.

ಕೆಲವು ಸಸ್ಯಗಳು ನಮ್ಮ ಅವರೆ ಗಿಡದ ಹಾಗೆ ನಾವು ಬೀಜವನ್ನು ಬಿತ್ತಿದ ವರ್ಷದೊಳಗಾಗಿಯೇ ಅವುಗಳ ಜೀವಮಾನದ ಚರಿತ್ರೆಯನ್ನು ಮುಗಿಸುತ್ತವೆ. ಅಂದರೆ ಈ ಸಸ್ಯವು ಕೆಲವು ತಿಂಗಳಲ್ಲಿಯೆ ಬೀಜದಿಂದ ಮೊಳಕೆಯಾಗಿ ಆದರಲ್ಲಿ ಎಲೆ, ಪುಷ್ಪ, ಕಾಯಿ ಇವೆಲ್ಲಾ ಬಂದು, ಬೀಜವನ್ನು ಬಿಟ್ಟು ಒಣಗಿ ಹೋಗುವದು. ಇಂಥ ಸಸ್ಯಗಳನ್ನು ಏಕವಾರ್ಷಿಕ ಸಸ್ಯಗಳೆಂದು ಕರೆಯುತ್ತೇವೆ.

ಕೆಲವು ಸಸ್ಯಗಳು ಮೂಲಂಗಿ ಗಿಡದ ಹಾಗೆ ಮೊದಲನೇ ವರ್ಷದಲ್ಲಿ ಬೇರು, ಕಾಂಡ, ಎಲೆಗಳನ್ನು ಮಾತ್ರ ಬಿಟ್ಟು ಎರಡನೇ ವರ್ಷದವರಿಗೂ ಪುಷ್ಪಗಳನ್ನು ಬೀಜಗಳನ್ನೂ ಕೊಡುವದಿಲ್ಲ. ಇವುಗಳಲ್ಲಿ ಬೀಜಗಳು ಪಕ್ವವಾದಾಗ ಸಸ್ಯಗಳು ಒಣಗಿ ಸತ್ತು ಹೋಗುವವು, ಹೀಗೆ ಎರಡು ವರ್ಷಗಳ ವರಿಗೂ ಜೀವಮಾನವನ್ನು ಹೊಂದಿರುವ ಗಿಡಗಳನ್ನು ದ್ವಿವಾರ್ಷಿಕ ಸಸ್ಯಗಳೆಂದು ಹೇಳುತ್ತೇವೆ. ಅನೇಕ ಸಸ್ಯಗಳು ಆಲ, ಹುಣಿಸೆ, ಮಾವಿನಮರ ಇವುಗಳ ಹಾಗೆ ಅನೇಕ ವರ್ಷಗಳು ಬದುಕುತ್ತಾ ಸಾಮಾನ್ಯವಾಗಿ ವರ್ಷಂಪ್ರತಿ ಪುಷ್ಪಗಳನ್ನೂ ಬೀಜಗಳನ್ನೂ ಬಿಡುತ್ತಿರುತ್ತವೆ. ಇವುಗಳಲ್ಲಿ ಕೆಲವು ನಮ್ಮ ದೇಶದ ಆಲದ ಮರದ ಹಾಗೆ ೩೦೦, ೬೦೦ ವರ್ಷಗಳು ಬದುಕುತ್ತವೆ.

ಗದಗಿನಲ್ಲಿ ತಾ|| ೧೫-೧-೧೯೧೬ ನೇ ದಿವಸ ಆದ ಶಿಕ್ಷಕರ ಸಮ್ಮೇಲನದಲ್ಲಿ ಮೆ. ರೆವ್ಹೆರೆಂಡ ರಿವಿಂಗಟನ್ನ ಸಾಹೇಬ ಬಹದ್ದೂರವರು ಮಾಡಿದ ಭಾಷಣವು.

ಈ ಜಿಲ್ಲೆಯ ಡೆ. ಎ. ಇನಸ್ಪೆಕ್ಟರರಾದ ಮಿ. ಆರ್. ಎಸ್. ಕುಲ ಣಿ ಇವರು ಈ ಸಮ್ಮೇಲನದ ಅಧ್ಯಕ್ಷಸ್ಥಾನವನ್ನು ಸ್ವೀಕರಿಸುವ ಗ್ಗೆ ಹೇಳಿದ್ದಕ್ಕಾಗಿ ನಾನು ಅವರಿಗೆ ಆಭಾರಿಯಾಗಿದ್ದೇನೆ. ನಾನು ಂಥ ಸಮ್ಮೇಲನದ ಅಧ್ಯಕ್ಷತೆಯ ಕೆಲಸಕ್ಕೆ ತಕ್ಕವನಲ್ಲ. ಯಾಕಂದರೆ ನಗೆ ಹೊಸ ಶಿಕ್ಷಣ ಪದ್ಧತಿಗಳ ಪರಿಚಯವಿಲ್ಲ. ಆದರೂ ಶಿಕ್ಷಣದಲ್ಲಿ ನಗೆ ಪ್ರೀತಿಯು ವಿಶೇಷವಾಗಿರುವದು; ವಿದ್ಯಾಭ್ಯಾಸವು ಪ್ರತಿ ೊಬ್ಬ ಮನುಷ್ಯನಿಗೆ ಅತ್ಯವಶ್ಯವೆಂದು ನಾನು ತಿಳಿಯುತ್ತೇನೆ. ವಿದ್ಯೆ ಯಿಲ್ಲದ ಮನುಷ್ಯನಿಗೆ ಆಧುನಿಕ ಶಾಸ್ತ್ರಗಳಿಂದ ಆನಂದ ಪಡಲಿಕ್ಕೆ ಮಾರ್ಗವು ಉಳಿಯುವದಿಲ್ಲ. ಸೃಷ್ಟಿಯ ಜ್ಞಾನವೂ, ದೇವತ ಜಾಣ್ಮೆ ಯೂ ಗೊತ್ತಾಗುವದಿಲ್ಲ. ಹಲವು ಬಗೆಯ ಗ್ರಂಥಗಳನ್ನೋದುವದ ಂದ ಆಗುವ ಆನಂದಕ್ಕೆ ಎತವಾಗುವನು. ಇದಲ್ಲದೆ ದೇವರು ಕೊಟ್ಟ ವಿಚಾರಸಾಮರ್ಥ್ಯವನ್ನು ಅವನು ಉಪಯೋಗ ಮಾಡಿಕೊಳ್ಳುವದಿಲ್ಲ ನಾದ ಕಾರಣ, ಒಂದು ತರದ ದೋಷಕ್ಕೆ ಪಾತ್ರನಾಗುವನು.

ಈ ಸಮ್ಮೇಲನವನ್ನು ಈ ಊರಲ್ಲಿ ನೆರೆಯಿಸಿದ್ದಕ್ಕಾಗಿ ನಾನು ಡೆ. ಎ. ಇನಸ್ಪೆಕ್ಟರರಿಗೆ ಆಭಾರಿಯಾಗಿದ್ದೇನೆ. ಇಲ್ಲಿ ಸಮ್ಮೇಲನವಾದದ್ದ ಂದ ಇಲ್ಲಿಯ ಶಿಕ್ಷಕರಿಗೆ ಲಾಭವಾಯಿತಿಷ್ಟೇ ಅಲ್ಲ. ಈ ತರದ ಶಿಕ್ಷಣ ಸಭೆಗಳನ್ನು ನೆರೆಯಿಸುವ ಬಗ್ಗೆ ಈ ಊರ ಜನರಿಗೂ ಒಂದು ತರದ ಮಾದರಿಯ ಪಾಠವು ದೊರೆತಂತಾಯಿತು.

ಶಿಕ್ಷಕರನ್ನು ಕುರಿತು ನಾನು ಹೇಳುವದೇನಂದರೆ:- ನಿಮ್ಮ ಕೆಲ ಸವು ಬಹಳ ಮಹತ್ವದ್ದಿರುವದು; ಕಳೆದ ನಾತಾಳಿಯ ಸೂಟಿಯಲ್ಲಿ ಮುಂಬಯಿ ಪಟ್ಟಣದೊಳಗೆ ನೆರೆದ ಸಭೆಗಳಲ್ಲಿ ಸ್ವರಾಜ್ಯದ ಬಗ್ಗೆ ಅನೇಕ ಸಂಗತಿಗಳು ಹೇಳಲ್ಪಟ್ಟವು. ಸ್ವರಾಜ್ಯವಿರುವದು ಒಳ್ಳೇದು; ಆದರೆ ಸ್ವರಾಜ್ಯವನ್ನು ನಡೆಯಿಸಲಿಕ್ಕೆ ತಕ್ಕವರಾದ ಮುಂದಾಳುಗಳೂ, ಒಳ್ಳೇ ನೀತಿವಂತರಾದ ಪ್ರಜೆಗಳೂ ಇರಬೇಕಾಗುತ್ತದೆ. ಯೋಗ್ಯ

ಮುಂದಾಳುಗಳನ್ನು ಸಿದ್ಧಮಾಡುವ ಕೆಲಸವು ವಿಶ್ವವಿದ್ಯಾಲಯಗಳ ಕಡೆಗೆ ಇರುವದು. ಆದರೆ ನೀತಿವಂತರಾದ ಸಾಮಾನ್ಯ ಪ್ರಜೆಗಳನ್ನು ಸಿದ್ಧ ಮಾಡುವ ಭಾರವು ನಿಮ್ಮ ಮೇಲೆಯೇ ಇರುವದು. ಮತ್ತು ಭಾವೀ ರಾಷ್ಟ್ರದ ಸುಧಾರಣೆಯು ನಿಮ್ಮನ್ನೇ ಅವಲಂಬಿಸಿರುವದು. ಸ್ವರಾಜ್ಯವು ಸಿಗದಿರುವದಕ್ಕೆ ಜನರ ಅಜ್ಞಾನವೇ ಕಾರಣವಾಗಿರುತ್ತದೆ. ಮ್ಯುನಸಿಪಾಲಿಟಿಯ ಕೆಲಸದ ಅನುಭವವುಳ್ಳವರಿಗೆ ಈ ಮಾತಿನ ನಿಜ ತ್ವವು ಆಗಾಗ್ಗೆ ಕಂಡು ಬರುವದು. ಎಷ್ಟೋ ಜನರಿಗೆ ತಾವು ಏನು ಮಾಡುತ್ತೇವೆಂಬ ತಿಳುವಳಿಕೆಯೇ ಇರುವದಿಲ್ಲ.

ನಿಮ್ಮ ಧರ್ಮದಲ್ಲಿ ಹೇಳಿದ ಪ್ರಕಾರ ಶಿಕ್ಷಕರಾದ ನೀವು ಗುರು ಗಳು; ವಿದ್ಯಾರ್ಥಿಗಳ ನೀತಿಯನ್ನು ತಿದ್ದುವದು ಗುರುವಿನ ಕರ್ತವ್ಯ ವಾಗಿರುವದು. ನೀವು ಹಳ್ಳಿಯಲ್ಲಿ ಈ ಕೆಲಸವನ್ನು ಮಾಡಬೇಕಾಗಿ ರುವದರಿಂದ ನೀವು ಹೆಚ್ಚು ಕಷ್ಟವನ್ನು ಸೋಸಬೇಕಾಗುವದು. ಎಷ್ಟೋ ಸಾರೆ ನೀವು, ಮಾಡಿದ ಕೆಲಸವನ್ನೇ ಮೇಲಿಂದಮೇಲೆ ಮಾಡಬೇಕಾಗು ವದು; ಅದರಿಂದ ನಿಮಗೆ ನಿಮ್ಮ ಕೆಲಸವು ಬೇಸರವೆನಿಸಬಹುದು. ಎಷ್ಟೋ ಪ್ರಸಂಗಗಳಲ್ಲಿ ನಿಮಗೆ ಊರ ಜನರಿಂದ ಸಹಾನುಭೂತಿಯು ದೊರೆಯುವದಿಲ್ಲ. ಮತ್ತು ನಾನಾತರದ ತೊಂದರೆಗಳು ಒದಗುವವು. ನೀವು ರೇಲ್ವೆ ಮಾರ್ಗದಿಂದ ದೂರವಾದ ಒಂದು ಹಳ್ಳಿಯಲ್ಲಿದ್ದು ಕೆಲಸ ಮಾಡುತ್ತಿರುವದರಿಂದ ನಿಮ್ಮ ಕೆಲಸವನ್ನು ನೋಡುವದಕ್ಕೂ, ಉತ್ತೇ ಜನ ಕೊಡುವದಕ್ಕೂ ಪ್ರಸಂಗಗಳು ಹೆಚ್ಚಾಗಿ ಬರಲಾರವು. ಹೀಗಿ ದ್ದರೂ ನೀವು ಬಡತಿಯನ್ನು ಇಚ್ಛಿಸದೆ ಶ್ರೇಷ್ಠವಾದದ್ದೂ, ಪವಿತ್ರವಾ ದದ್ದೂ ಆದ ನಿಮ್ಮ ಕರ್ತವ್ಯವನ್ನು ಮಾಡತಕ್ಕದ್ದು. ನೀವು ಒಳ್ಳೇ ನಾಗರಿಕರನ್ನು ಸಿದ್ಧಮಾಡತಕ್ಕದ್ದಿರುವದೆಂಬದನ್ನು ಲಕ್ಷ್ಯದಲ್ಲಿಡತ ಕ್ಕದ್ದು. ಸದ್ಯಕ್ಕೆ ಹಿಂದೀ ಸೈನಿಕರು ಸಾಮ್ರಾಜ್ಯಸಂರಕ್ಷಣೆಗಾಗಿ ಅಸಾಮಾನ್ಯವಾದ ಸ್ವಾರ್ಥತ್ಯಾಗವನ್ನು ಮಾಡುತ್ತಲಿದ್ದಾರಲ್ಲವೆ? ಅವರ ಈ ಸ್ವಾರ್ಥತ್ಯಾಗದ ಉದಾಹರಣೆಯನ್ನು ನೀವೆಲ್ಲರೂ ಮುಂದಿಟ್ಟು ಕೊಂಡು ಸಾಮ್ರಾಜ್ಯಸಂರಕ್ಷಣೆಗಾಗಿಯೂ, ದೇಶೋನ್ನತಿಗಾಗಿಯೂ ಯತ್ನಿಸಿ ನಿಮ್ಮ ಕರ್ತವ್ಯವನ್ನು ಕೊನೆಗಾಣಿಸುವಿರೆಂದು ನಾನು ಆಶಿಸು

ತ್ತೇನೆ. ಈ ಮೇರೆಗೆ ಭಾವೀ ರಾಷ್ಟ್ರವು ಸ್ವರಾಜ್ಯಕ್ಕೆ ಆತುರವುಳ್ಳ ದ್ದಾಗುವಂತೆ ನೀವು ಸಿದ್ಧಮಾಡತಕ್ಕದ್ದು.

ನನ್ನ ದೃಷ್ಟಿಗೆ ಶಿಕ್ಷಣದಲ್ಲಿ ಎರಡು ಪದ್ಧತಿಗಳು ಕಂಡು ಬರುವವು:—

೧ನೆಯದು:—ನಮ್ಮ ದೇಶದಲ್ಲಿ ಒಂದು ತರದ ಕೋಳಿಗಳನ್ನು ಮಾರುವ ಜನರು ಅವು ಒಳ್ಳೇ ಪುಷ್ಟವಾಗಿ ಕಾಣಬೇಕೆಂದು ಅವುಗಳ ಬಾಯೊಳಗೆ ಜೇಕಳಿಯನ್ನಿಟ್ಟು, ಅನ್ನವನ್ನು ಒಂದೇ ಸವನೇ ತುಂಬುವರು. ಆ ಕಾಲಕ್ಕೆ ಅವರು ತಾವು ತುಂಬುವ ಅನ್ನವು ಆ ಕೋಳಿಗೆ ಪಚನವಾದೀತೋ ಇಲ್ಲವೋ ಎಂಬದನ್ನು ವಿಚಾರ ಮಾಡುವದಿಲ್ಲ. ಅದೇ ಪ್ರಕಾರ ಎಷ್ಟೋ ಶಿಕ್ಷಕರು ವಿದ್ಯಾರ್ಥಿಗಳ ತಲೆಯಲ್ಲಿ ಅನೇಕ ಸಂಗತಿಗಳನ್ನು ತಿಳಿಯಲಿ, ತಿಳಿಯದಿರಲಿ ತುಂಬಿ ಬಿಡುವರು. ಅವುಗಳಿಂದ ಅವರ ಬುದ್ಧಿಗೆ ಯಾವ ಸಂಸ್ಕಾರವೂ ಆಗುವದಿಲ್ಲ. ಈ ಪದ್ಧತಿಯು ಒಳ್ಳೆಯದಲ್ಲ.

೨ನೆಯದು:— ಬುದ್ಧಿಯನ್ನು ವಿಕಾಸಗೊಳಿಸುವದು. ಸ್ವಲ್ಪೇ ಸಂಗತಿಗಳನ್ನು ಹುಡುಗರ ಮುಂದಿಟ್ಟು ಅವುಗಳ ಬಗ್ಗೆ ಸ್ವತಂತ್ರವಾಗಿ ವಿಚಾರ ಮಾಡಲಿಕ್ಕೆ ಹಚ್ಚಬೇಕು. ಇಂದು ಪ್ರಾತಃಕಾಲಕ್ಕೆ ಈ ಸಮ್ಮೇಲನದಲ್ಲಿ ನಾನು ನೋಡಿದ ಇಬ್ಬರು ಶಿಕ್ಷಕರ ಶಿಕ್ಷಣವು ಈ ಪದ್ಧತಿಗೆ ಅನುಸರಿಸಿತ್ತು. ಒಬ್ಬ ಶಿಕ್ಷಕನು 'ಸಹಾನುಭೂತಿ' ಎಂಬ ನೀತಿಪಾಠವನ್ನು ಕಲಿಸಿದನು. ಮತ್ತೊಬ್ಬ ಶಿಕ್ಷಕನು 'ಕಣ್ಣಿನ ರಚನೆ' ಈ ವಿಷಯವಾಗಿ ಕಲಿಸಿದನು. ಈ ಎರಡೂ ಪಾಠಗಳನ್ನು ಹುಡುಗರು ಆನಂದದಿಂದ ಕಲಿಯುತ್ತಿದ್ದರು. ಶಿಕ್ಷಕರು ಅವರ ಕಲ್ಪನಾಶಕ್ತಿಯನ್ನು ಜಾಗ್ರತೆಗೊಳಿಸಿ ಕಲಿಸಿದರು. ಈ ಪದ್ಧತಿಯಿಂದ ಕಲಿಸುವದು ಬಹು ಕಠಿಣವಾದಾಗ್ಯೂ ವಿದ್ಯಾರ್ಥಿಗಳಿಗೆ ಬಹಳ ಪ್ರಯೋಜನವಾಗುವದು.

ಎಷ್ಟೋ ಶಿಕ್ಷಕರು ಹುಡುಗರಿಗೆ ಕೈಯಿಂದ ಪಾಟಿಯ ಮೇಲೆ ಬರೆದುಕೊಟ್ಟು 'ಕಕಾ' 'ಕಕಾ' ಎಂದು ತೀಡಲಿಕ್ಕೆ ಹಚ್ಚುವರು. ಇದರಿಂದ ಎಷ್ಟು ಮಾತ್ರಕ್ಕೂ ಪ್ರಯೋಜನವಾಗದೆ, ಹುಡುಗರು ಶಾಲೆಯಲ್ಲಿ ಕೂಡ್ರಲಿಕ್ಕೆ ಮಾತ್ರ ಬೇಸರಿಯುವರು.

ಈ ಎರಡನೆಯ ಪದ್ಧತಿಯಿಂದ ಶಿಕ್ಷಣವನ್ನು ಕೊಡಬೇಕಾದರೆ ನೀವು ಪೂರ್ವಸಿದ್ಧತೆಯನ್ನು ಮಾಡಿಕೊಂಡು ಪಾಠವನ್ನು ಕಲಿಸಬೇಕಾಗುವದು. ನಾಲ್ಕೈದು ವರ್ಷಗಳ ವರೆಗೆ ನಾವು ಶಿಕ್ಷಣದ ಹೋರೆಯನ್ನು ಮಾಡಿದ ಮೇಲೆ 'ಇನ್ನೇನು ಓದತಕ್ಕದ್ದದೆ' ಎಂದು ತಿಳಿಯಬಾರದು. ನೀವು ಕಲಿಸತಕ್ಕ ಸಂಗತಿಯು ಹುಡುಗರ ಮನಸ್ಸಿನಲ್ಲಿ ಬಿಂಬಿಸಬೇಕಾದರೆ, ಸದ್ಯದ ಕಾಲಕ್ಕೆ ನಡೆದ ಸಂಗತಿಗಳ ದೃಷ್ಟಾಂತಗಳನ್ನು ತೆಗೆದುಕೊಳ್ಳಬೇಕು. ಹುಡುಗರು ನಿಮ್ಮ ಶಿಕ್ಷಣದಿಂದ ಯಾವಾಗಲೂ ನಗುತ್ತಿರಬೇಕು. ಅದರಿಂದ ಅವರ ಆರೋಗ್ಯವು ಅಭಿವೃದ್ಧಿಯಾಗುವದು. ನೀವು ಮಾಸ್ತರರಾದಾಗ್ಯೂ ಕಡೆತನಕ ವಿದ್ಯಾರ್ಥಿದೆಸೆಯಲ್ಲಿರತಕ್ಕದ್ದು. ಮಾನಸಿಕ ಶ್ರಮ ಮಾಡುವವರ ಆಯುಷ್ಯವು ಅಭಿವೃದ್ಧಿಯಾಗುವದೆಂದು ನಾನು ನಂಬುವೆನು. ಅಲಸ್ಯಗಾರರು ಮಾತ್ರ ಬೇಗ ಸಾಯುವರು.

ಈಗ ಸಮ್ಮೇಲನದ ಒಂದು ಭಾಗವು ಮುಗಿಯಿತು. ಇನ್ನೊಂದು ಭಾಗವು ಉಳಿಯಿತು. ಇಲ್ಲಿ ಶಿಕ್ಷಣದ ವಿಷಯವಾಗಿ ಬರಿಯ ಮಾತುಗಳಾದವು. ಇನ್ನು ನೀವು ಇಲ್ಲಿ ಕಲಿತ ಸಂಗತಿಗಳನ್ನು ನಿಮ್ಮ ನಿಮ್ಮ ಶಾಲೆಗಳಲ್ಲಿ ಉಪಯೋಗ ಮಾಡಿಕೊಂಡು, ಈ ಸಮ್ಮೇಲನದಿಂದ ಲಾಭ ಮಾಡಿಕೊಳ್ಳಬೇಕು. ಮುಂದಿನ ವರ್ಷದ ಸಮ್ಮೇಲನವು ಇಲ್ಲಿಯೇ ನೆರೆದ ಕಾಲಕ್ಕೆ ನೀವು ವರ್ಷದ ವರೆಗೆ, ಇಲ್ಲಿ ಕಲಿತ ಸಂಗತಿಗಳ ಮೇಲಿಂದ ಅನುಭವ ತಕ್ಕೊಂಡ ಸಂಗತಿಗಳನ್ನು ಇಲ್ಲಿ ಹೇಳುವಿರೆಂದು ಆಶಿಸುತ್ತೇನೆ.

ವಿದ್ಯಾಖಾತೆಯ ನೋಟೀಸುಗಳು.

ಮಿಡಲ್‌ಸ್ಕೂಲ ಸ್ಕಾಲರಸಿಪ್ಪ ಪರೀಕ್ಷೆಯು.

ದಕ್ಷಿಣ ಭಾಗ.

ಎಲನೇ ಅಕ್ಟೊಂಬರ ೧೯೧೩ನೇ ಇಸವಿಯ ಮುಂಬಯಿ ಗವ್ಹರ್ನ್‌ಮೆಂಟ ಗ್ಯಾಝೆಟಿನ ಒಂದನೇ ಭಾಗದ ಎಬ್ಭಂಗನೇ ಪುಟದಿಂದ

೧೯೨೩ ನೇ ಪುಟದ ವರೆಗೆ ಛಾಪಿಸಿದಂತೆ, ಪ್ರತಿ ಒಂದು ಜಿಲ್ಲೆಗೆ ಆರು ಮಿಡಲ್‌ಸ್ಕೂಲ ಸ್ಕಾಲರಶಿಪ್ಪುಗಳನ್ನು ಕೊಡುವ ಸಂಬಂಧದ ಮೇಲಾಟದ ಪರೀಕ್ಷೆಯು ಬುಧವಾರ ಮತ್ತು ಗುರುವಾರ ತಾ|| ೫ ಮತ್ತು ೬ ನೇ ಎಪ್ರೇಲ್ ೧೯೧೯ನೇ ದಿವಸಗಳಲ್ಲಿ ಬೆಳಗಿನ ೧೧ ಘಂಟೆಗೆ ಸರಿಯಾಗಿ ಕೆಳಗೆ ನಮೂದಿಸಿದ ಸೆಂಟರುಗಳಲ್ಲಿ ತೆಗೆದುಕೊಳ್ಳಲ್ಪಡುವದು. ಆ ಸೆಂಟರುಗಳು ಯಾವವೆಂದರೆ: —

೧. ಧಾರವಾಡ ಹೈಸ್ಕೂಲ, ಬೆಳಗಾವ ಹೈಸ್ಕೂಲ, ವಿಜಾಪೂರ ಹೈಸ್ಕೂಲ, ಕಾರವಾರ ಹೈಸ್ಕೂಲ, ರತ್ನಾಗಿರಿ ಹಾಯಸ್ಕೂಲ, ಅಲೀಬಾಗ ಜಾನ್ ಎಲ್‌ಫಿನಸ್ಟನ್ ಹೈಸ್ಕೂಲ.

೨. ಈ ಆರು ಸ್ಕಾಲರಶಿಪ್ಪುಗಳಲ್ಲಿ ಎರಡು ಎಲ್ಲ ಉಮೇದವಾರರಲ್ಲಿ ಮೇಲಾದವರಿಗೆ ಸಿಗುವವು. ಎರಡು ಇಂಗ್ಲಿಷ ಅಭ್ಯಾಸದಲ್ಲಿ ಹಿಂದುಳಿದ ಬೀನಿ ಇಸ್ರಾಯಲ್, ಕುಣಬಿ, ಮತ್ತು ಕುಣಬಿಗಳಿಗಿಂತಲೂ ಹಿಂದುಳಿದ ಬೇರೆ ಜಾತಿಯವರಿಗಾಗಿ ಕಾದಿಟ್ಟಿಂಥವು, ೪ ಜಾತಿಯಲ್ಲಿ ಉತ್ಕೃತರಾದ ವಿದ್ಯಾರ್ಥಿಗಳಿಗೆ ಸಿಗುವವು. ಮತ್ತು ಎರಡು ಸ್ಕಾಲರಶಿಪ್ಪುಗಳು ಮುಸಲಮಾನರಿಗಾಗಿ ಕಾದಿಡಲ್ಪಡುವವು.

೩. ಮೇಲಿನ ಸ್ಕಾಲರಶಿಪ್ಪುಗಳ ಹೊರ್ತು ಶಾಲಾಖಾತೆಯ ಸರಕಾರ ಠರಾವ ನ. ೧೪೦೬ ತಾ|| ೧೬ನೇ ಜುಲೈ ೧೯೧೭ ರ ಪ್ರಕಾರ ತಿಂಗಳಿಗೆ ೫ ರೂಪಾಯಿ ಬೆಲೆಯ ಮತ್ತೊಂದು ಹೊಸ ಸ್ಕಾಲರಶಿಪ್ಪು ಮಂಜೂರು ಮಾಡಲ್ಪಟ್ಟಿರುವದು. ಈ ಸ್ಕಾಲರಶಿಪ್ಪು ಕೀಳುಜಾತಿಯ ಉಮೇದವಾರರಿಗೋಸ್ಕರವೇ ಇರುವದು. ಮಿಡಲ್ ಮತ್ತು ಸ್ಪೆಶಲ್ ಸ್ಕೂಲ ಸ್ಕಾಲರಶಿಪ್ಪ ಪರೀಕ್ಷೆಯ ಸಂಬಂಧವಾಗಿ ಈಗ ಅಮಲಿನಲ್ಲಿರುವ ನಿಯಮಗಳೇ ಈ ಸ್ಕಾಲರಶಿಪ್ಪಿಗೂ ಇರುವವು.

೪. ಈಗ ಖಾಲೀ ಬಿದ್ದಿರುವ ಕೆಳಗೆ ಕಾಣಿಸಿದ ಮಿಡಲ್‌ಸ್ಕೂಲ ಮತ್ತು ಸ್ಪೆಶಲ್‌ಸ್ಕೂಲ ಸ್ಕಾಲರಶಿಪ್ಪುಗಳೂ ಪರೀಕ್ಷೆಯಲ್ಲಿ ಮೇಲು ಪಡೆಯುವವರಿಗೆ ಹೊಳೆಯುವಂತೆ ಇವೆ: —

ನಂಬರ	ಜಿಲ್ಲಾ	ಯಾವ ಸ್ಕಾಲರ ಶಿಪ್ಪುಗಳು.	ಎಷ್ಟು ಕಾಲ ನಡೆಯುವದು.	
			ಯಾವ ತಾರೀಖಿನಿಂದ	ಯಾವ ತಾರೀಖಿನ ವರೆಗೆ.
೧	ಧಾರವಾಡ	ಹಿಂದುಳಿದ ಹಿಂದೂಗಳಿಗೋಸ್ಕರ ಕಾದಿಟ್ಟದ್ದು	೧ನೇ ಎಪ್ರೆಲ್ ೧೯೧೬	೩೧ನೇ ದಶಂಬರ ೧೯೧೭
೨	ವಿಜಾಪೂರ	ಸದರ	ಸದರ	ಸದರ
೩	ಸದರ	ಮುಸಲಮಾನರಿಗಾಗಿ ಕಾದಿಟ್ಟದ್ದು.	ಸದರ	ಸದರ
೪	ಧಾರವಾಡ	ಕೀಳುಜಾತಿಯವರಿಗೋಸ್ಕರ ಕಾದಿಟ್ಟದ್ದು	ಸದರ	ಸದರ
೫	ಬೆಳಗಾವ	ಸದರ	ಸದರ	ಸದರ
೬	ವಿಜಾಪೂರ	ಸದರ	ಸದರ	ಸದರ
೭	ಕಾನಡಾ	ಸದರ	ಸದರ	ಸದರ
೮	ರತ್ನಾಗಿರಿ	ಸದರ	ಸದರ	ಸದರ
೯	ಧಾರವಾಡ	ಸದರ	ಸದರ	೩೧ನೇ ಮೇ ೧೯೧೮
೧೦	ಬೆಳಗಾವ	ಸದರ	ಸದರ	ಸದರ
೧೧	ವಿಜಾಪೂರ	ಸದರ	ಸದರ	ಸದರ
೧೨	ಕಾನಡಾ	ಸದರ	ಸದರ	ಸದರ
೧೩	ರತ್ನಾಗಿರಿ	ಸದರ	ಸದರ	ಸದರ
೧೪	ಧಾರವಾಡ	ಹಿಂದುಳಿದ ಹಿಂದೂಗಳಿಗಾಗಿ ಕಾದಿಟ್ಟದ್ದು.	ಸದರ	ಸದರ
೧೫	ಸದರ	ಮುಸಲಮಾನರಿಗಾಗಿ ಕಾದಿಟ್ಟದ್ದು.	ಸದರ	ಸದರ
೧೬	ವಿಜಾಪೂರ	ಹಿಂದುಳಿದ ಹಿಂದೂಗಳಿಗಾಗಿ ಕಾದಿಟ್ಟದ್ದು.	ಸದರ	ಸದರ
೧೭	ಸದರ	ಸದರ	ಸದರ	ಸದರ

ಇವು, ಮೇಲೆ ಹೇಳಿದ ಪೂರ್ಣ ಅವಧಿಯ ಸ್ಕಾಲರಶಿಪ್ಪುಗಳು ದೊರೆತ ಉಮೇದವಾರರಲ್ಲಿ ಕಡೆಯ ನಂಬರಿನವನ ಕೆಳಗೇ ಯಾವ ಯೋಗ್ಯರಾದ ಉಮೇದವಾರರ ನಂಬರಗಳು ಬರುವವೋ ಅವರಿಗೆ ಕೊಡಲ್ಪಡುವವು.

೫. ಬೆಳಗಾವ ಸೆಂಟರಿನಲ್ಲಿ ಪರೀಕ್ಷೆಯು ಕನ್ನಡ ಹಾಗೂ ಮರಾಠಿ ಭಾಷೆಯ ಮುಖಾಂತರವಾಗಿ ತೆಗೆದುಕೊಳ್ಳಲ್ಪಡುವದು. ಧಾರವಾಡ,

ವಿಜಾಪೂರ ಮತ್ತು ಕಾರವಾರ ಸೆಂಟರುಗಳಲ್ಲಿ ಕನ್ನಡ ಭಾಷೆಯ ಮುಖಾಂತರವಾಗಿ ತೆಗೆದುಕೊಳ್ಳಲ್ಪಡುವದು. ರತ್ನಾಗಿರಿ ಕುಲಾಬಾ ಜಿಲ್ಲೆಗಳಲ್ಲಿ ಮರಾಠಿಯಲ್ಲಿ ತೆಗೆದುಕೊಳ್ಳಲ್ಪಡುವದು.

೬. ಪ್ರತಿ ಒಂದು ಸೆಂಟರಿನಲ್ಲಿ ಪರೀಕ್ಷೆಯು ಒಂದು ಕಮಿಟಿಯ ಮುಖಾಂತರವಾಗಿ ತೆಗೆದುಕೊಳ್ಳಲ್ಪಡುವದು. ಅಲ್ಲಲ್ಲಿಯ ಹೈಸ್ಕೂಲ ಹೆಡ್ ಮಾಸ್ತರರು ಪರೀಕ್ಷಾ ಕಮಿಟಿಯ ಅಧ್ಯಕ್ಷರಿರುವರು. ಅಲೀಬಾಗದ ಕಮಿಟಿಗೆ ಅಲ್ಲಿಯ ಡಿಪುಟಿ ಎಜ್ಯುಕೇಶನಲ್ ಇನ್ಸಪೆಕ್ಟರರು ಅಧ್ಯಕ್ಷರಿರುವರು. ಈ ಪರೀಕ್ಷೆಗೆ ಕೂಡ್ರಲಿಕ್ಕೆ ಪರವಾನಿಗಿಯನ್ನು ಕುರಿತು ಮಾಡುವ ಅರ್ಜಿಗಳನ್ನೆಲ್ಲ ಥಾಪಿಸಿದ ನಮೂನೆಗಳ ಮೇಲೆ ಮಾಡತಕ್ಕದ್ದು. ಅರ್ಜಿಯ ನಮೂನೆಗಳು ಪರೀಕ್ಷಾ ಕಮಿಟಿಯ ಅಧ್ಯಕ್ಷರ ಕಡೆಗಾಗಲಿ ನಮ್ಮ ಕಡೆಗಾಗಲಿ ಸಿಗುವವು. ಅವಕ್ಕೆ ಕ್ರಯ ಬೀಳಲಿಕ್ಕಿಲ್ಲ. ಉಮೇದವಾರರು ಅರ್ಜಿಗಳನ್ನು ೧೫ನೇ ಮಾರ್ಚ ೧೯೧೬ನೇ ಇಸವಿಯ ದಿವಸ ಅಥವಾ ಅದರ ಒಳಗಾಗಿ ತಮ್ಮ ತಮ್ಮ ಜಿಲ್ಲೆಯ ಅಧ್ಯಕ್ಷರಿಗೆ ತಲಪುವಂತೆ ಕಳಿಸಿ ಕೊಡಬೇಕು, ಆ ತಾರೀಖಿನ ನಂತರ ಬಂದ ಅರ್ಜಿಯನ್ನು ಹಿಡಿಯಲಿಕ್ಕಿಲ್ಲ.

೭. ಉಮೇದವಾರರ ವಯಸ್ಸು, ಪರೀಕ್ಷಾ ವಿಷಯಗಳು, ಸ್ಕೂಲ ರತಿಪ್ಪಿನ ರಕಮು, ಅವಧಿ, ಪರೀಕ್ಷೆಯ ಫೀ, ಮುಂತಾದ ಸಂಗತಿಗಳ ಸಂಬಂಧದ ಹೆಚ್ಚಿನ ಮಾಹಿತಿಯು ಸುಧಾರಿಸಿದ ನಿಯಮಗಳಲ್ಲಿ ಕಂಡು ಬರುವದು. ಈ ನಿಯಮಗಳ ಪ್ರತಿಗಳು ಕೆಳಗೆ ಸಹಿ ಮಾಡಿದವರ ಕಡೆಗಾಗಲಿ ಪರೀಕ್ಷಾಕಮಿಟಿಯ ಅಧ್ಯಕ್ಷರ ಕಡೆಗಾಗಲಿ ಅರ್ಜಿಯನ್ನು ಮಾಡಿದರೆ ಬೆಲೆ ತಕ್ಕೊಳ್ಳದೆ ಸಿಗುವವು.

ಧಾರವಾಡ ಎಜ್ಯುಕೇಶನಲ್
ಇನ್ಸಪೆಕ್ಟರರ ಆಫೀಸು ತಾ ೧೫ನೇ
ದಶಂಬರ ೧೯೧೫.

V. N. Ghate,
For Ag. Educational Inspector,
(S. D.)

ಹಾಯಸ್ಕೂಲುಗಳಲ್ಲಿ ದೊರೆಯುವ ಮೊಹಮಡನ್ ಬರ್ಸರಿ ಫಂಡಸ್ಕಾಲರಶಿಪ್ಪಿನಬಗ್ಗೆ ನೋಟೀಸು.

ಇದರ ಮೂಲಕ ನೋಟೀಸು ಕೊಡುವದೇನಂದರೆ:— ತಾ|| ೩೦ ನೇ ದಿಶೆಂಬರ ಸನ್ನ ೧೯೦೪ ಇಸವಿಯ ಮುಂಬಯಿ ಗ್ಯಾಝೆಟ್ಟಿನ ಭಾಗ ೧ನೆಯ ಪಂಟಿಕೆ ೫೦೬ ರಿಂದ ಪಂಟಿಕೆನೇ ಪುಟಗಳಲ್ಲಿ ಪ್ರಸಿದ್ಧ ಮಾಡಿದ ನಿಯಮಗಳ ಪ್ರಕಾರ ಧಾರವಾಡ ಜಿಲ್ಲೆಯಲ್ಲಿ ಮೊಹಮಡನ್ ಬರ್ಸರಿ ಫಂಡದಿಂದ ಒಂದು ಸ್ಕಾಲರಶಿಪ್ಪು ಕೊಡುವ ಬಗ್ಗೆ ಪರೀಕ್ಷೆಯು ಧಾರವಾಡ ಸೆಂಟರಿನಲ್ಲಿ ಧಾರವಾಡ ಹಾಯಸ್ಕೂಲಿನಲ್ಲಿ ಬುಧವಾರ ಮತ್ತು ಗುರುವಾರ ತಾ|| ೫ನೇ ಮತ್ತು ೬ನೇ ಎಪ್ರಿಲ್ ೧೯೦೬ ದಿವಸಗಳಲ್ಲಿ ಬೆಳಗಿನ ೧೦ ಘಂಟೆಗೆ ನಡೆಯುವದು.

೨. ಈ ಸ್ಕಾಲರಶಿಪ್ಪ ಪರೀಕ್ಷೆಗೆ ಧಾರವಾಡ ಜಿಲ್ಲೆಯೊಳಗಿನ ಶಾಳಾಖಾತೆಯಿಂದ ಮಾನ್ಯಮಾಡಲ್ಪಟ್ಟ ಬೇಕಾದ ಶಾಲೆಯ ಮುಸಲಮಾನ ಹುಡುಗರು ಬರಬಹುದು. ಆದರೆ ಅವರು ತಾವು ನಿಜವಾಗಿ ಧಾರವಾಡ ಜಿಲ್ಲೆಯ ವಾಸಸ್ಥರೆಂಬ ಬಗ್ಗೆಯೂ ಹಾಯಸ್ಕೂಲಿನಲ್ಲಿ ಇಂಗ್ಲಿಷ ಕಲಿಯಲಿಕ್ಕೆ ತಾಗುವ ಖರ್ಚನ್ನು ಮಾಡುವದಕ್ಕೆ ಆಗದಪ್ಪು ಬಡವರಿದ್ದ ಬಗ್ಗೆಯೂ ಇಬ್ಬರು ಪ್ರಸಿದ್ಧ ಸಂಭಾವಿತ ಗೃಹಸ್ಥರ ಸರ್ಟಿಫಿಕೀಟನ್ನು ಹಾಜರ ಮಾಡಲಿಕ್ಕೆ ಬೇಕು.

೩. ಪರೀಕ್ಷೆಯು ಕನ್ನಡದಿಂದ ಆಗುವದು.

೪. ಪರೀಕ್ಷೆಯು ಒಂದು ಕಮಿಟಿಯ ಮುಖಾಂತರವಾಗಿ ಆಗುವದು. ಆ ಕಮಿಟಿಗೆ ಧಾರವಾಡ ಸರಕಾರೀ ಹಾಯಸ್ಕೂಲಿನ ಹೆಡ್ ಮಾಸ್ತರರು ಪ್ರೆಸಿಡೆಂಟರಿರುವರು. ಈ ಪರೀಕ್ಷೆಯ ಬಗ್ಗೆ ಮಾಡತಕ್ಕ ಅರ್ಜಿಗಳನ್ನು ಮಿಡಲ್‌ಸ್ಕೂಲ ಸ್ಕಾಲರಶಿಪ್ಪ ಪರೀಕ್ಷೆಗೆ ಕೂಡ್ರುವ ಪರವಾನಗಿಯ ಬಗ್ಗೆ ಅರ್ಜಿಯನ್ನು ಮಾಡತಕ್ಕ ಛಾಪೀ ನಮೂನೆಯಲ್ಲಿ ತಕ್ಕ ಬದಲಾವಣೆಗಳನ್ನು ಮಾಡಿ ಅದರ ಮೇಲೆಯೇ ಮಾಡತಕ್ಕದ್ದು. ಈ ನಮೂನೆಗಳು ಕೆಳಗೆ ಸಹೀ ಮಾಡಿದವರ ಕಡೆಗೆ ಅಥವಾ ಪರೀಕ್ಷಾ ಕಮಿಟಿಯ ಅಧ್ಯಕ್ಷರ ಕಡೆಗೆ ತಿಙ್ಗಳ ಬೀಳದೆ ಸಿಗುವವು. ಪರೀ

ಕೆಯ ಬಗ್ಗೆ ಅರ್ಜಿಗಳನ್ನು ಪರೀಕ್ಷಾ ಕಮಿಟಿಯ ಅಧ್ಯಕ್ಷರ ಕಡೆಗೆ ತಾ॥ ೧೫ ನೇ ಮಾರ್ಚ ೧೯೧೬ ನೇ ದಿವಸ ಅಥವಾ ಅದಕ್ಕೂ ಮೊದಲು ತಲಪುವಂತೆ ಕಳಿಸಲಿಕ್ಕೆ ಬೇಕು. ಆ ನಂತರ ಬಂದ ಅರ್ಜಿಗಳು ಹಿಡಿಯಲ್ಪಡಲಿಕ್ಕಿಲ್ಲ.

೫. ಈ ಪರೀಕ್ಷೆಗೆ ಬತಲಪೇಕ್ಷಿಸುವ ಉಮೇದವಾರರ ವಯಸ್ಸು, ಪರೀಕ್ಷೆಗಳ ವಿಷಯ, ಸ್ಕಾಲರಶಿಪ್ಪನ್ನು ಕೊಡೋಣ, ಮತ್ತು ಬಂದ ಮಾಡೋಣ, ಸ್ಕಾಲರಶಿಪ್ಪ ದೊರೆದ ಉಮೇದವಾರರ ಹೆಸರು ಪ್ರಸಿದ್ಧ ಮಾಡೋಣ, ಸ್ಕಾಲರಶಿಪ್ಪಿನ ರಕಮು ಮತ್ತು ಅವಧಿ, ಶಾಲೆಯ ಫೀ ಬಗ್ಗೆ ನಿಯಮ ಇವೆಲ್ಲವುಗಳೂ ಮಿಡಲ್‌ಸ್ಕೂಲ ಸ್ಕಾಲರಶಿಪ್ಪುಗಳಂತೆಯೇ ಇರುವವು. ಆದರೆ ಈ ಸ್ಕಾಲರಶಿಪ್ಪ ಪರೀಕ್ಷೆಗೆ ಪರೀಕ್ಷಾ ಫೀ ಮಾತ್ರ ತೆಗೆದುಕೊಳ್ಳಲ್ಪಡಲಿಕ್ಕಿಲ್ಲ.

ಎಜ್ಯುಕೇಶನಲ್ ಇನಸ್ಪೆಕ್ಟರ ದಕ್ಷಿಣಭಾಗ
ರವರ ಆಫೀಸು.
೧೪ ನೇ ದಶಂಬರ ೧೯೧೬.

V. N. Ghate.
ನಿ॥ ಅ. ಎ. ಇನಸ್ಪೇಕ್ಟರ,
ದಕ್ಷಿಣಭಾಗ.

ಹ್ವರ್ನ್ಯಾಕ್ಯೂಲರ ಫಾಯನಲ್ ಪರೀಕ್ಷೆಯು.

ದಕ್ಷಿಣ ಭಾಗ.

೧೯೧೫ ನೇ ಇಸ್ವಿಯ ಜೂನ ತಿಂಗಳ ೨೪ ನೇ ತಾರೀಖಿನ ಮುಂಬಯಿ ಗವ್ಹರಮೆಂಟ ಗ್ಯಾಝೆಟ ೧ ನೇ ಭಾಗದ ೧೬೨೧ ನೆಯಿಂದ ೧೬೨೪ ನೇ ಪುಟಗಳಲ್ಲಿ ಪ್ರಕಟಿಸಲ್ಪಟ್ಟ ವಿದ್ಯಾಖಾತೆಯ ಸರಕಾರೀ ಜಾಹೀರಾತ ನಂ। ೧೭೩೪ ಅ. ತಾರೀಖು ೧೪ ನೇ ಜೂನ ೧೯೧೫ ನೇದರ ಮೇರೆಗೆ ಸಪ್ಟಂಬರ ೧೯೧೬ ರಲ್ಲಿ ನಡೆಯತಕ್ಕ ಪರೀಕ್ಷೆಗೆ ಕೆಳಗೆ ಕಾಣಿಸಿದ ಪುಸ್ತಕಗಳು ನಿಯಮಿಸಲ್ಪಟ್ಟಿವೆ:—

ಮರಾಠಿ.

ಗದ್ಯ:— ಹೊಸ ಕ್ರಮಿಕ ಪುಸ್ತಕಗಳಲ್ಲಿ ೩ ನೇ ಪುಸ್ತಕ (೧೯೧೫ ನೇ ಇಸವಿಯ ಮುದ್ರಣ) ಪೂರ್ಣ.

ಪದ್ಯ:— ಹೊಸ ಕ್ರಮಿಕ ಪುಸ್ತಕಗಳಲ್ಲಿ ೩ ನೇ ಪುಸ್ತಕದಲ್ಲಿರುವ

ಮೊದಲಿನ ೩೦೦ ಸಾಲುಗಳನ್ನು ಪಾಠಮಾಡುವದು; ಮತ್ತು ಅವುಗಳ ಅರ್ಥವನ್ನು ಹೇಳುವದು.

ಕ ನ್ನ ಡ.

ಗದ್ಯ:— ಹೊಸ ಕ್ರಮಿಕ ಪುಸ್ತಕಗಳಲ್ಲಿ ೭ ನೇ ಪುಸ್ತಕವು ಪೂರ್ಣ.

ಪದ್ಯ:— ಹೊಸ ಕ್ರಮಿಕ ಪುಸ್ತಕಗಳಲ್ಲಿ ೭ ನೇ ಪುಸ್ತಕದಲ್ಲಿರುವ ಮೊದಲನೆಯ ೩೦೦ ಸಾಲುಗಳನ್ನು ಪಾಠ ಮಾಡುವದು; ಮತ್ತು ಅವುಗಳ ಅರ್ಥವನ್ನು ಹೇಳುವದು.

ಉ ದು ೯.

ಗದ್ಯ:— ಉರ್ದು ಮಿಡಲ್ ಕೋರ್ಸ ಭಾಗ ೨, ಪಂಜಾಬ, ಪುಟಗಳು ೪೫ ರಿಂದ ೧೪೭.

ಪದ್ಯ:— ಮುಸದ್ದಸೆ ಹಾಲಿ ೫೦ ಸ್ಯ್ಯಾಂಖ್ಯಾ (ಅಂದರೆ ಮುಸದ್ದಸೆ) ಗಳು, ಅಥವಾ ೧೦೬ ನೇ ಮುಸದ್ದಸೆಯಿಂದ ಪ್ರಾರಂಭ ಮಾಡಿ ೩೦೦ ಮಿಸ್ರಾಗಳು (ಹೇಮಿಸ್ಟಿಕ್ಸ)

ಎಜ್ಯುಕೇಶನಲ್ ಇನ್ಸಪೆಕ್ಟರ ದಕ್ಷಿಣಭಾಗ
ರವರ ಆಫೀಸು
ಧಾರವಾಡ ತಾ|| ೧೪ನೇ ದಶಂಬರ ೧೯೧೬

V. N. Ghate.
ಸಿ|| ಅಕ್ಟಿಂಗ ಎಜ್ಯುಕೇಶನಲ್ ಇನಸ್ಪೆಕ್ಟರ
ದಕ್ಷಿಣಭಾಗ.

ರೋಣದಲ್ಲಿ ಕೂಡಿದ ಸಮ್ಮೇಲನವು.

[ಇದೇ ಸಂಚಿಕೆಯ ೮ ನೇ ಪುಟದಿಂದ ಮುಂದೆ ಸಾಗಿದ್ದು]

ಇಷ್ಟಾದ ಬಳಿಕ ಡೆಪುಟಿಯವರು ಸಮ್ಮೇಲನದ ಅಂತರ್ಯವಸ್ಥೆಯ ಸಂಬಂಧದಿಂದ ಒಂದು ತಿಂಗಳಿಂದ ಅವಿಶ್ರಾಂತ ಶ್ರಮಮಾಡಿದ ಬಸಪ್ಪಾ ಹಾವೇರಿ ಅ|| ಮಾಸ್ತರ ರೋಣ ಇವರ ಕೆಲಸದ ವಿಷಯವಾಗಿ ಸಂತೋಷವನ್ನು ವ್ಯಕ್ತಪಡಿಸಿದರು.

ಮೇಲೆ ಹೇಳಿದಂತೆ ಉತ್ತಮವಾಗಿ ಕೆಲಸಮಾಡಿದ ಶಿಕ್ಷಕರಿಗೆ ಉತ್ತೇಜನಾರ್ಥವಾಗಿ ಇನಾಮುಗಳನ್ನು ಕೊಡುವದಕ್ಕಾಗಿ ನಮ್ಮ ವರಿಷ್ಠರ ಅಪ್ಪಣೆಯನ್ನು ಪಡೆಯಲು ಯತ್ನಮಾಡುವೆವೆಂದು ಹೇಳಿ ಶಿಕ್ಷಕರಿಗೆ ಮುಂದಿನ ವರ್ಷದ ಸಮ್ಮೇಲನದ ಸಲುವಾಗಿ ಕೆಲವು ಸೂಚನೆಗಳನ್ನು ಮಾಡಿದರು. ಅವೇನಂದರೆ:—

೧. ಕಾಲೇಜದಲ್ಲಿ ಹೊಂದಿದ ಶಿಕ್ಷಣದ ಮೂಲತತ್ವಗಳಿಗನುಸರಿಸಿ ಶಿಕ್ಷಣವನ್ನು ಸಾಗಿಸಿ ಯಶಸ್ಕರವಾದ ಪದ್ಧತಿಯನ್ನು ಹುಡುಕಿ ಕೊಳ್ಳಬೇಕು. ಉತ್ತಮವಾದ ಪಾಠಗಳನ್ನು ಕಲಿಸಲಿಕ್ಕೆ ಹೆಚ್ಚು ಜನರು ಮುಂದರಿಯಬೇಕೆಂದು ನಮ್ಮ ಇಚ್ಛೆಯಿರುವದು.

೨. ಈ ವರ್ಷ ತಂದ ಉಪಕರಣಗಳು ಮುಂದಿನ ವರ್ಷಕ್ಕೆ ಹಳೆ ಯವಾಗುವವು. ಹೊಸ ಹೊಸ ಉಪಕರಣಗಳನ್ನು ಸಿದ್ಧಪಡಿಸಿ ಅವುಗಳನ್ನು ತಮ್ಮ ಶಿಕ್ಷಣದಲ್ಲಿ ಉಪಯೋಗಿಸಿ ಪ್ರದರ್ಶನಕ್ಕೆ ತರಬೇಕು.

ಆ ಬಳಿಕ ಅಧ್ಯಕ್ಷರು ತಮ್ಮ ಸ್ವಾಭಾವಿಕವಾದ ಉತ್ಸಾಹದ ಭಾಷಣದಿಂದ ಸಭಾಕಾರ್ಯವನ್ನು ಸಾಂಗಮಾಡಿದರು. ತರುವಾಯ ರಾ. ಸಾ. ಡೆಪುಟಿಯವರು ಅಧ್ಯಕ್ಷರ, ಮಿ. ಮುದಿಯಪ್ಪಾ ಮಣ್ಣೂರ ಇವರು ಡೆಪುಟಿ ಹಾಗು ಅ. ಡೆಪುಟಿಯವರ, ರಾ. ಅವಿನಭಾವಿ ಇವರು ಎಲ್ಲ ಶಾಲಾ ಮಾಸ್ತರರ ವತಿಯಿಂದ ಕಾರ್ಯದರ್ಶಿಗಳ ಹಾಗು ಡೆಪುಟಿ, ಅ. ಡೆಪುಟಿಯವರ ಆಭಾರವನ್ನು ಮನ್ನಿಸಿದರು. ಆನಂತರ ಪನ್ನೀರು ಪರಿಮಳ ತಾಂಬೂಲಾದಿಗಳಿಂದ ಸಭಿಕರು ಸತ್ಕರಿಸಲ್ಪಟ್ಟರು. ಆ ಬಳಿಕ ಜಗಚ್ಚಾಲಕನಾದ ಪರಮಾತ್ಮನನ್ನು ನೆನಿಸಿ, ರಾಷ್ಟ್ರಗೀತವನ್ನು ಹಾಡಿ ರಾಜಾಧಿರಾಜರಾದ ಜಾರ್ಜ ಬಾದಶಹರ ಹಾಗು ಮೇರೀ ರಾಣಿಯವರ ಜಯಘೋಷದೊಂದಿಗೆ ಸಮ್ಮೇಲನದ ಕಾರ್ಯವು ಪೂರ್ಣಮಾಡಲ್ಪ ಟ್ಟಿತು. ತರುವಾಯ ರಾತ್ರಿ ೮ ರಿಂದ ೯॥ ವರೆಗೆ ರಾ. ಅವಿನಭಾವಿ ಹಿರ್ಡ್ಲಮಾಸ್ತರ ಶಾಳಾ ನರೇಗಲ್ಲ, ಇವರು ಬ್ರಹ್ಮ ದೇಶದ ವಿಷಯವಾಗಿ ಮ್ಯಾಜಿಕ್ ಲ್ಯಾಂಟರ್ನದ ಚಿತ್ರಗಳ ಸಹಾಯದಿಂದ ಚಿಕ್ಕ ಮಕ್ಕಳಿಗೂ ಸೂಡ ಚನ್ನಾಗಿ ತಿಳಿಯುವಂಥ ಸುಲಭ ಭಾಷೆಯಿಂದ ಹೇಳಿದರು. ಇಷ್ಟಾದ ಬಳಿಕ ಸಭಾವಿಸರ್ಜನವಾಯಿತು.

ಪ್ರಾಥಮಿಕ ಶಾಲೆಗಳ ಉಪಯೋಗಕ್ಕಾಗಿ ಸರಕಾರದವರಿಂದ ಮಂಜೂರ ಮಾಡಿದ ಪುಸ್ತಕಗಳ ಪಟ್ಟಿಯನ್ನು ಎಲ್ಲ ಜನರ ಮಾಹಿತಿಗಾಗಿ ಕೆಳಗೆ ಕೊಟ್ಟಿದ್ದೇವೆ.

ಅನುಕ್ರಮ ನಂಬರು.	ಪುಸ್ತಕಗಳ ಹೆಸರು.	ಪುಸ್ತಕದ ಭಾಷೆ.	ಮಂಜೂರ ಮಾಡಿದ ಉದ್ದೇಶ.	ಬೆಲೆ ರೂ.	ಆ.	ಪೈ.	ಶರಾ.
	ಆನವಟ್ಟಿ ರಾಮರಾವ ಮೈಸೂರ ಸಿಟಿ:--						
೧	ಸನಾತನ ಧರ್ಮಕಥಾವಳಿ ಭಾಗ ೧ ...	ಕನ್ನಡ	ಕನ್ನಡ ಪ್ರಾಥಮಿಕ ಹಾಗೂ ಆಂಗ್ಲೋ ವ್ಹರ್ನ್ಯಾಕ್ಯುಲರ ಶಾಲೆಗಳ ಲಾಯಬ್ರರಿಗಾಗಿಯೂ ಇನಾಮಿಗಾಗಿಯೂ-	೦	೩	೦	
	ದಾತಾರ, ಆರ್, ಎನ್. ವ್ಹಿ. ಎನ್. ಹಾಗೂ ಜಿ. ಎನ್. ಪುಣೆಸಿಟಿ. :—						
೨	ಒಂಟೆಯ ಚಿತ್ರವು ...	,,	ಕನ್ನಡ ಪ್ರಾಥಮಿಕ ಶಾಲೆಗಳ ಉಪಯೋಗಕ್ಕಾಗಿ.	೦	೬	೦	
೩	ಸಿಂಹದ ಚಿತ್ರವು ...	,,	,,	೧	೮	೦	
	ಕುಲಕರ್ಣಿ, ಎಸ್. ಎಸ್. ನೆಗಳೂರ, ಜಿಲ್ಹಾ ಧಾರವಾಡ :—						
೪	ಭೂಮಂಡಲ ಬೋಧಿನಿ ಭಾಗ ೧ ...	,,	ಲಾಯಬ್ರರಿಗಾಗಿಯೂ ಇನಾಮಿಗಾಗಿಯೂ.	೦	೫	೬	
	ಅಬ್ದುಲ್ಲಾಖಾನ ಲಾಹೋರ :—						
೫	ಸಿಲ್‌ಸಿಲಾ ಇ ಹಿಸಾಬ ... ಭಾಗ ೧ ರಿಂದ ೪	ಉರ್ದು	ಉರ್ದು ಶಾಲೆಗಳ ಉಪಯೋಗಕ್ಕಾಗಿ.				೨ ಆಣೆಗಳಿಂದ ೧೦ ಆಣೆಗಳ ವರೆಗೆ
	ಭಾರ್ಗವ ಅಯೋಧ್ಯಾಪ್ರಸಾದ ಲಖನೌ:-						
೬	ಇಂಡಿಯನ್ ಡ್ರಾಯಿಂಗ ಕಾಪಿ ಸ್ಲಿಪ್ಸ ನಂಬರ ೧ ರಿಂದ ೬	,,	ಉರ್ದು ಶಾಲೆಗಳ ಉಪಯೋಗಕ್ಕಾಗಿಯೂ ಇನಾಮಿಗಾಗಿಯೂ.	೦	೧	೦	ಪ್ರತಿಯೊಂದಕ್ಕೆ
೭	ಉರ್ದು ವಾಚನ ಪಾಠಮಾಲೆ ಹುಡುಗರ ಸಲುವಾಗಿ ನಂಬರು ೧	,,	ಉರ್ದು ಶಾಲೆಗಳ ಇನಾಮಿಗಾಗಿ.	೦	೧	೦	

ಸ್ಥಾನ	ಸಂಖ್ಯೆ	ಹೆಸರು	ಉದ್ಯೋ	ಸಂಖ್ಯೆ	ಹೆಸರು	ಉದ್ಯೋ	ಸಂಖ್ಯೆ	ಹೆಸರು	ಉದ್ಯೋ
೧೦		ಉದ್ಯೋ ಪೋಲೀಸಿನವರು ನಯುಸೆಟಾ ಹುದುಗರ ಸಲು	,,		,,	,,		,,	,,
		ಮಾಗಿ							
೧೦		ಹುದುಗೆಯರ ಸಲುವಾಗಿ ...	,,		,,	,,		,,	,,
		ಪಕ್ಕನೆಂತೆ:—							
೧೦		ಇಲ್ಲ ಉಳ್ ಹೊಸಾಖ ...	,,		ಉದ್ಯೋ ಶಾಲೆಗಳ ಉಪಯೋಗಕ್ಕಾಗಿ.				
		ಗುಲಾಬಿಸಿಂಗ್ ಅಂಡ್ ಸನ್ಸ್ ಪಾಹೋರ್:—							
೧೨		ಅಪ್ಪಿಕಾಕಾ ನಕ್ಲಾ ...	,,		,,				
೧೩		ಅಮೆರಿಕಾಕಾ ನಕ್ಲಾ ...	,,		,,				
೧೪		ಸತಿಯಾಕಾ ನಕ್ಲಾ ...	,,		,,				
೧೫		ಬನಾಚುನ್‌ಸಬ್. ನಾಲ್ಕುಂದ ಅಚ್ಚುಮ್ಮೆ ದಕ್ಕೆಳ ...	,,		,,				
೧೬		ಬೇಂಕಲಿ ಹೊಸಾಖ ಕೆಲಾಖ ಬೇಂಬಯಗಾಲ ವಿವರಯ	,,		,,				
		ಉಕ್ಕಿಕೆ ಭಾಗ ೧							
		ಸದರ ಭಾಗ ೨ ...	,,		,,				
೧೨		ಯನಿಯಕಾ ನಕ್ಲಾ ...	,,		,,				
೧೫		ಯುಬೋಂಕಾ ನಕ್ಲಾ ...	,,		,,				
೧೬		ಭೂಗೋಂಲಯ ಸಾಚಯಗಳು ...	,,		,,				
೧೦		ಹಿಂದುಸ್ತಾ ನಕ್ಲಾ ...	,,		,,				
೧೧		ಜಗಪ್ಪಿಯೋಂ ಇ ಅಲಮ್ ಭಾಗ ೧ ಮುಲು ...	,,		,,				
		೧. ಎಚ್. ಎಸ್. ಸೋಂಲ ನೋಕ್ಲಳ ...	,,		,,				
೧೧		ಜಗಪ್ಪಿಯೋಂ ಇ ಪಡಯು ಕೆಡಾರನಾಡಕ್ಲಳ ...	,,		,,				
೧೨		ಸದರ ಭುಜಕ್ಲುಲ್ಲ ಕ್ಲಳ ...	,,		,,				
೧೫		ಮಿರಾತ ಉಲ್ ಉರೂಜ ನಾಲ್ಕುಂದ ಅಚ್ಚುಮ್ಮೆ ದಕ್ಕೆಳ	,,		,,				
೧೫		ಮನ್ಸ ಹರ ತಾರಿಂಗೆ ಇಂಡಂಡ ...	,,		,,				

ಭಾಗ ೧ ಕ್ಕೆ
ಭಾಗ ೮ ಕ್ಕೆ

೨೬	ಮುಸದ್ದಸೆ ಹಾಲಿ ಮೌಲ್ವಿ ಅತ್‌ಲಫ ಹುಸೇನ ಅಲ್ಲಿ ಕೃತ	ಸದರ	ಉರ್ದು ಶಾಲೆಗಳ ಉಪಯೋಗಕ್ಕಾಗಿಯೂ, ಇ ನಾಮಿಗಾಗಿಯೂ ಲಾಯಬ್ರರಿಗಾಗಿಯೂ	೦	೯	೦	
೨೭	ಪ್ರಾಯಮರ ಯಾನಿ ಇಬತಿದಾಯಿ ರಿಸಾಲಾ. ಸಿಮೆ ಕೃತ	,,	ಉರ್ದು ಶಾಲೆಗಳ ಉಪಯೋಗಕ್ಕಾಗಿ.	೦	೦	೯	
೨೮	ರಿಸಾಲೆ ಹಿಫಜೆ ಸೆಹತ್ ...	,,	,,	೦	೦	೦	
೨೯	ರಿಸಾಲಾ ಇ ಇಲ್ಮಿತಬಯಿತ್ ಉರ್ದು ...	,,	,,	೦	೩	೯	
೩೦	ಸುಘರ ಬಿಬ್ಲಿ ಉರ್ದು ಭಾಗ೧ ಮತ್ತು ೨ ...	,,	,,	೦	೩	೪	ಭಾಗ ೧ಕ್ಕೆ
				೦	೬	೮	ಪತಗೆ ೨ ಕ್ಕೆ
೩೧	ತಾರಿಗ್ ಆಸ್ ಸಿಹಟ್ ...	,,	,,	೦	೦	೦	
೩೨	ಉರ್ದು ಕಾಪಿ ಸ್ಲಿಪ್ಸ. ನಂಬರ ೧ ರಿಂದ ೪ ...	,,	,,				
೩೩	ಉರ್ದು ಹಿಸ್ಟರಿ ಆಫ ಇಂಡಿಯಾ ಮಾರ್ಷಡೆನ ಜಿಯರಾ ಮಕೃತಮತ್ತು ಮ್ಯಾಕಮಿಲನ್ ಕಂಪನಿ, ಮುಂಬಯಿ	,,	,,	೦	೧೨	೦	೫ ಪೈಯಿಂದ ೪ಪೈ
೩೪	ಉರ್ದು ಕಿತಾಬನ್‌ಕಾ ನಯಾ ಸಿಲಸಿಲಾ ನಂಬರು ೧ ರಿಂದ ೪ ಸಿಮೆ ಮತ್ತು ತೇಜಭಾನಕೃತ	,,	,,	೦	೨	೫	ಭಾಗ ೧ ಕ್ಕೆ
					೨	೫	ಯಿಂದ ೪ ಪೈವ.
೩೫	ಉರ್ದು ರೀಡರ್ ಬುಕ್ಸ ೨ ರಿಂದ ೫ ಹುಡುಗಿಯರ ಸಲುವಾಗಿ	,,	,,		೧	೧೧	ಯಿಂದ ೪ ಆಣೆ ವರೆಗೆ
	ಹಕೀಮ ಮಹ್ಮುದ ಹುಶೇನ ಲಾಹೋರ						
೩೬	ಲಿಟರರಿ ಪ್ಲೇಯಿಂಗ ಕಾರ್ಡ್ಸ	,,	,,	೦	೦	೬	೬ ಆಣೆಯಿಂದ ೧೦ ಆಣೆವರೆಗೆ ಉತ್ತಮ ವಿದ್ವಂತೆ ಬೆಲೆಯು ಹೆಚ್ಚು
	ಜಾಫರಿ ಎಮ್, ಎಚ್, ಜಲಾಲವುದ್ದೀನ ಅಹಮ್ಮದ ಕಾನಪೂರ:—						
೩೭	ಚಮ್‌ಕಾರುಸಾರ ಇ ಉರ್ದು ...	ಉರ್ದು	ಉರ್ದು ಶಾಲೆಗಳ ಉಪಯೋಗಕ್ಕಾಗಿಯೂ ಮತ್ತು	೦	೮	೦	
೩೮	ಗುಲ್ದಸ್ತಯಿ ಅಖಿಲಗ ...	,,	ಉರ್ದು ಶಾಲೆಗಳ ಲಾಯಬ್ರರಿಗಾಗಿಯೂ.	೦	೪	೦	
೩೯	ಗುಲ್ಜಾರ ಇ ಉರ್ದು ...	,,	ಇನಾಮಿಗಾಗಿಯೂ	೦	೧೦	೦	
೪೦	ಕಲಿದ್ ಇ ಉರ್ದು ...	,,	,,	೦	೧	೬	

೪೨	ನಾಖಲಸ್ತಾನ ಇ ಉರ್ದು ...	,,	,,	೦	೩	೦
೪೩	ವಾಯಿದ್ ಇ ಉರ್ದು ೧ನೇ ಭಾಗ...	,,	,,	೦	೭	೦
೪೪	,, ೨ನೇ ಭಾಗ...	,,	,,	೦	೧	೬
೪೫	,, ೩ನೇ ಭಾಗ...	,,	,,	೦	೨	೦
೪೬	,, ೪ನೇ ಭಾಗ...	,,	,,	೦	೫	೬
೪೭	,, ೫ನೇ ಭಾಗ...	,,	,,	೦	೬	೬
೪೮	ತಫೀಮುಲ್ ಕವಾಯಿದ್ ೨ನೇ ಆವೃತ್ತಿ (೧೯೧೩)	,,	ಉರ್ದು ಶಾಲೆಗಳ ಉಪಯೋಗಕ್ಕಾಗಿ.	೦	೩	೦
	ಮ್ಯೂಕ ಮಿಲನ ಮತ್ತು ಕಂಪನಿ ಮುಂಬಯಿ:—					
೪೯	ಉರ್ದು ಅಂಕಗಣಿತ ಭಾಗ ೧ ರಿಂದ ೪ ಲಾಕ್ ಮತ್ತು ಲೂಯಿಜ ಕೃತ	,,	,,	೦	೦	೦
೫೯	ಇಂಟೇಖಬ್ ಎ ಹಬೀಬ ಅಥವಾ ಮೊಲ್ಲಾ ಮೂಲ್ತಫ್ಯೀಬ ೩ನೇಯ ಭಾಗ ಎಮ್. ಎಚ್. ಹಬೀಬುಲ್ಲಾ ಎಮ್ ಎ ಕೃತ	,,	ಉರ್ದು ತಾಲೆಗಳ ಲಾಯಬ್ರರಿಗಾಗಿ	೦	೨	೦
೬೦	ಮಿಡಲ್ ವ್ಹರ್ನಾಕ್ಯುಲರ ಸಾಯೆನ್ಸ ರೀಡರ ...	,,	,,	೦	೧೦	೦
೬೧	ರಹೇನುಮಾ ಈ ತಾಲಿಮ ಅಥವಾ ಮ್ಯಾನುಅಲ್ ಫಾರ ಟೀಚರ್ಸ ಆಫ್ ಪ್ರಾಯಮರಿ ಸ್ಕೂಲ್ಸ ಇನ್ ಇಂಡಿಯಾ ಮೌಲ್ವಿ ಗುಲಾಮ ಹುಶೇನ ಕ್ಯೂರೇಶಿ ಇವರಿಂದ ಭಾಷಾಂತರಿಸಲ್ಪಟ್ಟಿದ್ದು	,,	,,	೧	೮	೦
೬೨	ಅಪ್ಪರ ಪ್ರಾಯಮರಿ ಸಾಯೆನ್ಸ ರೀಡರ ...	,,	,,	೦	೪	೦
೬೩	ಉರ್ದು ನ್ಯೂಕೋಡ ಜಾಗ್ರಫಿ ೩ನೇ ೪ನೇ ಇಯತ್ತೆಗಳಿಗೆ ಆರ್. ಎನ್. ಘೋಸ ಎಫ್. ಆರ್. ಜಿ. ಎಸ್. ಕೃತ	,,	ಉರ್ದು ತಾಲೆಗಳ ಲಾಯಬ್ರರಿಗಾಗಿ	೦	೮	೦

ಪೈಲಿ ಪಲಿಪಿ ಪಲಿಪಿ ಪಲಿಪಿ.
ಪಲಿಪಿ. ಪಿ. ಪಲಿಪಿಪಿ.

೨೬	ಮುಸದ್ದಸೆ ಹಾಲಿ ಮೌಲ್ವಿ ಅತ್‌ಲಫ ಹುಸೇನ ಅಲ್ಲಿ ಕೃತ	ಸದರ	ಉರ್ದು ಶಾಲೆಗಳ ಉಪಯೋಗಕ್ಕಾಗಿಯೂ, ಇನಾಮಿಗಾಗಿಯೂ ಲಾಯಬ್ರರಿಗಾಗಿಯೂ	೦	೯	೦	
೨೭	ಪ್ರಾಯಮರ ಯಾನಿ ಇಬತಿದಾಯಿ ರಿಸಾಲಾ. ಸಿವೆ ಕೃತ	,,	ಉರ್ದು ಶಾಲೆಗಳ ಉಪಯೋಗಕ್ಕಾಗಿ.	೦	೦	೯	
೨೮	ರಿಸಾಲೆ ಹಿಫಜಿ ಸೆಹತ್ ...	,,	,,	೦	೦	೦	
೨೯	ರಿಸಾಲಾ ಇ ಇಲ್ಮಿತಬಯಿತ್ ಉರ್ದು ...	,,	,,	೦	೩	೯	
೩೦	ಸುಫರ ಬಿವ್ವಿ ಉರ್ದು ಭಾಗ೧ ಮತ್ತು ೨ ...	,,	,,	೦	೩	೪	ಭಾಗ ೧ ಕ್ಕೆ
				೦	೬	೮	ಭಾಗ ೨ ಕ್ಕೆ
೩೧	ತಾರಿಗ್ ಅಸ್ ಸಿಪಟ್ ...	,,	,,	೦	೦	೦	
೩೨	ಉರ್ದು ಕಾಪಿ ಸ್ಲಿಪ್ಸ್. ನಂಬರ ೧ ರಿಂದ ೪ ...	,,	,,				
೩೩	ಉರ್ದು ಹಿಸ್ಟರಿ ಆಫ ಇಂಡಿಯಾ ಮಾರ್ಷಡೆನ ಜಿಯರಾ ಮಕೃತಮತ್ತು ಮ್ಯಾಕವಿಲನ್ ಕಂಪನಿ, ಮುಂಬಯಿ	,,	,,	೦	೧೨	೦	೫ ಪೈಯಿಂದ ಲಪೈ
೩೪	ಉರ್ದು ಕಿತಾಬನ್‌ಕಾ ನಯಾ ಸಿಲಸಿಲಾ ನಂಬರು ೧ ರಿಂದ ೪ ಸಿವೆ ಮತ್ತು ತೇಜಭಾನಕೃತ	,,	,,	೦	೨	೫	ಭಾಗ ೧ ಕ್ಕೆ
					೨	೫	ಯಿಂದಲಿ ೬ಪೈವ
೩೫	ಉರ್ದು ರೀಡರ್ ಬುಕ್ಸ ೨ ರಿಂದ ೫ ಹುಡುಗೆಯರ ಸಲುವಾಗಿ	,,	,,		೧೧	೧	ಯಿಂದ ೪ಆಣೆ ವರೆ
	ಹಕೀಮ ಮಮ್ಮುಪರ ಹುಶೇನ ಲಾನೋರ						
೩೬	ಲಿಟರರಿ ಪ್ಲೇಯಿಂಗ ಕಾರ್ಡ್ಸ	,,	,,	೦	೦		೬ ಆಣೆಯಿಂದ ೧೦ ಆಣೆವರೆಗೆ ಉತ್ತಮ ವಿದ್ದಂತೆ ಬೆಲೆಯು ಹೆಚ್ಚು
	ಜಾಫರಿ ಎನ್., ಎಚ್., ಜಲಾಲವುದ್ದೀನ ಅಹಮ್ಮದ ಕಾನಪೂರ:—						
೩೭	ಚಮ್‌ಕಾರುಸಾರ ಇ ಉರ್ದು ...	ಉರ್ದು	ಉರ್ದು ಶಾಲೆಗಳ ಉಪಯೋಗಕ್ಕಾಗಿಯೂ ಮತ್ತು	೦	೮	೦	
೩೮	ಗುಲ್ದಸ್ತಯಿ ಅಖಲಗ ...	,,	ಉರ್ದು ಶಾಲೆಗಳ ಲಾಯಬ್ರರಿಗಾಗಿಯೂ.	೦	೪	೦	
೩೯	ಗುಲ್ಜಾರ ಇ ಉರ್ದು ...	,,	ಇನಾಮಿಗಾಗಿಯೂ	೦	೧೦	೦	
೪೦	ಕಲಿದ್ ಇ ಉರ್ದು ...	,,	,,	೦	೧೦	೬	

	...ಲ್ಲಿಯ ಶಾಲ್ಲಾ ತಕ್ಷೀಲ	...	ಉರ್ದು					
೪೨	ನಾಖಲಿಸ್ತಾನ ಇ ಉರ್ದು	...		,,	,,	೦	೭	೦
೪೩	ವಾಯಿದ್ ಇ ಉರ್ದು	೧ನೇ ಭಾಗ...		,,	,,	೦	೭	೦
೪೪	,,	೨ನೇ ಭಾಗ...		,,	,,	೦	೭	೦
೪೫	,,	೩ನೇ ಭಾಗ...		,,	,,	೦	೭	೦
೪೬	,,	೪ನೇ ಭಾಗ...		,,	,,	೦	೭	೦
೪೭	ತಫೀಮುಲ್ ಕವಾಯಿದ್ ೨ನೇ ಆವೃತ್ತಿ (೧೯೧೩)			,,	,,	೦	೬	೦
	ಮ್ಯೂಕ ಮಿಲನ ಮತ್ತು ಕಂಪನಿ ಮುಂಬಯಿ:—							
೪೮	ಉರ್ದು ಅಂಕಗಣಿತ ಭಾಗ ೧ ರಿಂದ ೪ ಲಾಕ್ ಮತ್ತು ಲೂಯಿಜ ಕೃತ			,,	ಉರ್ದು ಶಾಲೆಗಳ ಉಪಯೋಗಕ್ಕಾಗಿ.	೦	೩	೦
೪೯	ಇಂಟೇಖಬ್ ಎ ಹಬೀಬ ಅಥವಾ ಮೊಲ್ಲಿ ಮೂಲ್ತಫೀಬ ೩ನೇಯ ಭಾಗ ಎಮ್. ಎಚ್. ಹಬೀಬುಲ್ಲಾ ಎಮ್ ಎ ಕೃತ			,,	,,	೦	೨	೦
೫೦	ಮಿಡಲ್ ವ್ಹರ್ನಾಕ್ಯುಲರ ಸಾಯೆನ್ಸ ರೀಡರ	...		,,	,,	೦	೧೦	೦
೫೧	ಪಹೇನುಮಾ ಈ ತಾಲೀಮ ಅಥವಾ ಮ್ಯಾನುಅಲ್ ಫಾರ ಟೀಚರ್ಸ ಆಫ್ ಪ್ರಾಯಮರಿ ಸ್ಕೂಲ್ಸ ಇನ್ ಇಂಡಿಯಾ ಮೌಲ್ವಿ ಗುಲಾಮ ಹುಶೇನ ಕ್ಯೂರೇಶಿ ಇವರಿಂದ ಭಾಷಾಂತರಿಸಲ್ಪಟ್ಟಿದ್ದು			,,	,,	೧	೪	೦
೫೨	ಅಪ್ಪರ ಪ್ರಾಯಮರಿ ಸಾಯೆನ್ಸ ರೀಡರ	...		,,	,,	೦	೬	೦
೫೩	ಉರ್ದು ಸ್ಯೂಕೋಡ ಜಾಗ್ರಫಿ ೩ನೇ ೪ನೇ ಇಯತ್ತೆಗಳಿಗೆ, ಆರ್. ಎನ್. ಘೋಸ ಎಫ್. ಆರ್. ಜಿ. ಎಸ್. ಕೃತ			,,	ಉರ್ದು ಶಾಲೆಗಳ ಲಾಯಬ್ರರಿಗಾಗಿ	೦	೪	೦

ಮೇಲಿನ ೪ ಪೈಸೆಯಿಂದ ೧೨ ಆಣೆಯವರೆಗೆ

ಬೆಲೆಯಲ್ಲಿ ಶೇ. ೧೦೦ ರಿಯಾಯಿತಿ

೫೪	ಉರ್ದು ಫಿಜಿಕಲ್ ಡ್ರಿಲ್ ಕೆಮಸ್ಟರ ಮತ್ತು ಕಾಯಕೃತ	ಉರ್ದು	,,	೦	೧೫	೦
೫೫	ಉರ್ದು ವ್ಯಾಯಮರಿ ಸಾಯೆನ್ಸರೀಡರ ಎಚ್. ಆರ್ಮಸ್ಟೆಡ್ ಬಿ ಎಸ್ ಸಿ ಮತ್ತು ಎನ್ ಸಿ ಮಹಾಲಾ ಸೋಫಿಸ್ ಬಿ, ಎಸ್. ಬ ಕೃತ	,,	,,	೦	೬	೦
	ಮಿಸುರಾ ಗಿರಧಿರೀಲಾಲ ಇಟಾವಾ :—					
೫೬	ಸಾವಂಚ ಉಮರಿ ಎಶಾಯಿನ್ ಶಾಹಾಜಾರ್ಜ ಪಂಚಮ ಪಂಡಿತ ಉದಯನಾರಾಯಣ ಬಾಜಪೈ ಕೃತ	,,	ಉರ್ದು ಶಾಲೆಗಳ ಇನಾಮುಗಳಿಗಾಗಿ	೦	೨	೦
	ಮೌಲ್ವಿ ಸಯ್ಯದ ಅಹಮ್ಮದ ದಿಲ್ಲಿ:—					
೫೭	ಇನ್ ಶಾ ಇ ಹಾದಿ ಉನ್ನಿಸಾ ಮಾಯಿ ತಫರೀರ ಉನ್ನಿಸಾ	,,	ಉರ್ದು ಹೆಣ್ಣುಮಕ್ಕಳ ಶಾಲೆಗಳ ಉಪಯೋಗಕ್ಕಾಗಿಯೂ ಲಾಯಬ್ರರಿಗಾಗಿಯೂ	೦	೧೨	೦
೫೮	ಮುಮಕ್ಸುರ ಇ ತಫಧೀರ ವಾ ತದಬಿ ...	,,	ಉರ್ದು ಶಾಲೆಗಳ ಇನಾಮಿಗಾಗಿಯೂ ಲಾಯಬ್ರರಿಗಾಗಿಯೂ	೦	೬	೦
೫೯	ಕ್ವಿನಾಎ ಮೆಹೆರ ಅಪರುಝು ...	,,	,,	೦	೮	೦
೬೦	ರಾಹತ್ ಝಾಮನಿಕಿ ಮಝೋದಾರ ಕಹನಿ ...	,,	,,	೧	೦	೦
೬೧	ತಕ್ಸೀರ ಇಶೋಹರ ...	,,	,,	೦	೮	೦
೬೨	ತಾಲಿಮ ಇ ತಬಯಿ ...	,,	ಉರ್ದು ಶಾಲೆಗಳ ಇನಾಮಿಗಾಗಿ	೦	೬	೦
	ಮುನ್ಸಿರಾಮ ಪ್ರಸಾದ ಮುಥಾ:—					
೬೩	ಇಬ್ತಿದಾಯಿ ತಾಲಿಮಕಿ ರಾಮು ಕಾಹಾನಿ. ...	,,	,,	೧	೪	೦

ಶಾಲಾಪತ್ರಿಕೆ.

ಪುಸ್ತಕ ೫೨. | ಫೇಬ್ರುವರಿ ೧೯೧೬. | ಸಂಚಿಕೆ ೨.

ಹಿಂದೂ ವಿಶ್ವವಿದ್ಯಾಪೀಠದ ಕೋಣಶಿಲಾಸ್ಥಾಪನಸಮಾರಂಭವು.

ಹಿಂದೂ ವಿಶ್ವವಿದ್ಯಾಪೀಠದ ಮುಂದಿನದ ಕೋಣಶಿಲೆಯನ್ನು ಸ್ಥಾಪಿಸುವ ಅಪೂರ್ವವಾದ ಸಮಾರಂಭವು ಇದೇ ಫೆಬ್ರುವರಿ ತಿಂಗಳ ಸಾಲ್ಗನೆಯ ತಾರೀಖಿನ ದಿವಸ ಶ್ರೀ ಕಾಶೀ ಕ್ಷೇತ್ರದಲ್ಲಿ ನೆರವೇರಿಸಲ್ಪಟ್ಟಿತು. ಈ ಸಮಾರಂಭದ ಸಲುವಾಗಿ ಭವ್ಯವಾದದ್ದೊಂದು ಸಭಾಗೃಹವನ್ನು ನಿರ್ಮಿಸಿದ್ದರು. ಸನ್ ೧೯೨೨ನೆಯ ಇಸ್ವಿಯಲ್ಲಿ ಲಾರ್ಡ್ ಲಿಟನ್ ಸಾಹೇಬರವರು ದಿಲ್ಲಿಯಲ್ಲಿ ದರ್ಬಾರವನ್ನು ನೆರೆಯಿಸಿದಾಗ ರಚಿತವಾದ ಸಭಾಗೃಹದಂತೆಯೇ ಇದಾದರೂ ಇತ್ತು. ಈ ಮುಂದಿನದಲ್ಲಿ ನಾಲ್ಕೂ ಕಡೆಗೆ "ಯೂನಿಯನ್‌ಜಾಕ"ದ ಪತಾಕೆಗಳು ಒಪ್ಪುತ್ತಿದ್ದವು. ಸಭಾ ಮಂಟಪದ ಮಧ್ಯಭಾಗದಲ್ಲಿ ಸಾ. ವ್ಹಾಯಿಸರಾಯ ಸಾಹೇಬರವರ ಸಲುವಾಗಿ ಭವ್ಯವಾದ ಆಸನವನ್ನು ಇರಿಸಿದ್ದರು. ಅದರ ಬಲಗಡೆಗೆ ಬೇರೆ ಬೇರೆ ಅರಸು ಮನೆತನದವರ ಸಲುವಾಗಿಯೂ ಎಡಗಡೆಗೆ ಹಿಂದು ಸ್ಥಾನದ ಬೇರೆ ಬೇರೆ ಪ್ರಾಂತಗಳ ಅಧಿಕಾರಿಗಳ ಹಾಗು ದೇಶದೊಳಗಿನ ವಿಶ್ವವಿದ್ಯಾಪೀಠಗಳ ಚಾನ್ಸೆಲರರ ಸಲುವಾಗಿಯೂ ಸ್ಥಳಗಳನ್ನು ಬಿಡಿಟ್ಟಿದ್ದರು. ಹಾಗು ಅದಕ್ಕೆ ಹೊಂದಿಯೇ ಆಯಾ ಪ್ರಾಂತಿಕ ಕೌನ್ಸಿಲ ಸಭಾಸದರ, ಕಾಲೇಜಗಳ ಪ್ರಿನ್ಸಿಪಾಲರ, ಪ್ರಾಚ್ಯ ಹಾಗು ಪಾಶ್ಚಾತ್ಯ ದೇಶಗಳ ಧರ್ಮ-ತತ್ವಜ್ಞಾನ-ಭಾಷೆಗಳನ್ನು ಅರಿತಂಥ ಪಂಡಿತರ ಸ್ಥಾನವಿತ್ತು. ಈ ವಿಶ್ವವಿದ್ಯಾಪೀಠದ ಸ್ಥಾಪನೆಗೆ ಧನಸಹಾಯವನ್ನು ಮಾಡಿದಂಥ ಅರಸರು, ಸಬಾಬರು ಮುಂತಾದವರ ದೆಸೆಯಿಂದ ಸ್ಥಳಾನುಕೂಲವನ್ನು ಮಾಡಿದ್ದರು. ವಿಶ್ವವಿದ್ಯಾಪೀಠದ ಸ್ಥಲತುದ್ಧೀಕರಣಕ್ಕಾಗಿ ದರ್ಭಂಗದ ಮಹಾರಾಜರು, ಸರ್ ಸುಭಾಶಂಕರ ಪಟ್ಟಣೀ, ಪಂಡಿತ ಮದನ

ಮೋಹನ ಮಾಲವೀಯ ಎಂಬವರು ಮುಂದಾಳುಗಳಾಗಿ ಪೂಜಾಕಾರ್ಯವನ್ನು ಮೊದಲೇ ನೆರವೇರಿಸಿದ್ದರು. ತೀಖಿ ಪಂಥದವರ ಗುರುಗಳಲ್ಲಿ ಅತ್ತರ ಸಿಂಗರೆಂಬವರು ತಮ್ಮ ಶಿಷ್ಯಗಣದೊಂದಿಗೆ ಅಲ್ಲಿಗೆ ಬಿಜಯಂಗೈಸಿದ್ದು ತಮ್ಮ ಧರ್ಮನಿಯಮದಂತೆ ಪೂಜೆಯನ್ನು ಮಾಡಿದ್ದರು. ಅದೇ ಮೇರೆಗೆ ಜೈನ ಧರ್ಮದವರ ವತಿಯಿಂದಲೂ ಅಲ್ಲಿಯ ಸ್ಥಲದೇವತೆಯ ಆರಾಧನೆಯು ಯಥಾರೀತಿಯಾಗಿ ನೆರವೇರಿಸಲ್ಪಟ್ಟಿತ್ತು.

ನಾಮದಾರ ವ್ಹಾಯಿಸರಾಯ ಸಾಹೇಬರವರಿಗೆ ಕೋಣಶಿಲೆಯನ್ನು ಸ್ಥಾಪಿಸುವದಕ್ಕೆ ವಿನಂತಿಯನ್ನು ಮಾಡಿಕೊಳ್ಳುವಾಗ ವಿಶ್ವ ವಿದ್ಯಾಪೀಠದ ಸಭಾಸದರ ವತಿಯಿಂದ ದರಭಂಗದ ಮಹಾರಾಜರವರು ವ್ಹಾಯಿಸರಾಯರವರಿಗೆ ಕೆಳಗಿನ ಅಭಿಪ್ರಾಯವುಳ್ಳ ಒಂದು ಮಾನಪತ್ರವನ್ನು ಅರ್ಪಿಸಿದರು: —

ನಾ. ಲಾರ್ಡ ಹಾರ್ಡಿಂಜರವರಿಗೆ ಕೊಡಲ್ಪಟ್ಟ ಮಾನಪತ್ರವು: —

"ವಿದ್ಯಾಪೀಠದ ಸಂಬಂಧದಿಂದ ಪ್ರಾಚೀನ ಕಾಲದಿಂದಲೂ ಪ್ರಸಿದ್ಧವಾಗಿದ್ದ ಈ ಕಾಶೀ ಕ್ಷೇತ್ರದಲ್ಲಿ ಹಿಂದೂ ವಿಶ್ವವಿದ್ಯಾಪೀಠದ ಮುಂದಿರದ ಕೋಣಶಿಲೆಯನ್ನು ಸ್ಥಾಪಿಸುವ ಸಮಾರಂಭದ ಆಮಂತ್ರಣವನ್ನು ತಾವು ಸ್ವೀಕರಿಸಿದ್ದಕ್ಕಾಗಿ ಈ ವಿದ್ಯಾಪೀಠದ ಸಂಘದವರ ವತಿಯಿಂದ ನಾನು ತಮ್ಮ ಆಭಾರವನ್ನು ಮನ್ನಿಸುತ್ತೇನೆ. ತಮ್ಮ ಉದಾರಾಶ್ರಯದಿಂದಲೂ ಸಹಾನುಭೂತಿಪೂರ್ಣವಾದ ಉತ್ತೇಜನದಿಂದಲೂ ಹಿಂದೂ ಜನರ ಆಕಾಂಕ್ಷೆಗಳಿಗೆ ಮೂರ್ತಸ್ವರೂಪವುಂಟಾಗಹತ್ತಿರುವದರಿಂದ ನಾವೆಲ್ಲರು ತಮಗೆ ಅತ್ಯಂತ ಋಣಿಗಳಾಗಿರುವೆವು. ಈ ವಿಶ್ವ ವಿದ್ಯಾಪೀಠವನ್ನು ಸ್ಥಾಪಿಸುವ ಕಲ್ಪನೆಯು ಮೊಟ್ಟಮೊದಲು ೧೯೦೪ ನೇ ಇಸ್ವಿಯಲ್ಲಿ ಉಂಟಾಯಿತು. ಮುಂದೆ ೧೯೧೧ ನೇ ಇಸ್ವಿಯ ವರೆಗೆ ಈ ಮಾತಿನ ವಿಷಯವಾಗಿ ಅನೇಕ ವಾದವಿವಾದಗಳು ನಡೆದು ವಿಶ್ವವಿದ್ಯಾಪೀಠದ ಸಂಬಂಧದ ಒಂದು ಸಂಘವು ಸ್ಥಾಪಿತವಾಯಿತು. ತರುವಾಯ ಅಲ್ಪಾವಧಿಯಲ್ಲಿಯೇ ಈ ಸಂಘವನ್ನು ಸ್ಥಾಪಿಸುವ ಬಗ್ಗೆ ಸ್ಟೇಟ ಸೆಕ್ರೆಟರಿಯವರ ಅನುಮತಿಯು ದೊರೆಯಿತು; ಮತ್ತು ೧೯೧೫ ನೇ ಇಸ್ವಿಯ ಅಕ್ಟೋಬರ ತಿಂಗಳ ಮೊದಲನೆಯ ತಾರೀಖಿನ ದಿವಸವಂತೂ ಈ ವಿಶ್ವವಿದ್ಯಾಪೀಠವನ್ನು ಸ್ಥಾಪಿಸುವದರ ಬಗ್ಗೆ ವರಿಷ್ಠ ಕಾಯದೆಯ

ನ್ನಿಲಿನಲ್ಲಿ ಒಂದು ಬಿಲ್ಲು ಮುಂಜೂರು ಮಾಡಲ್ಪಟ್ಟಿತು. ಈ ದೇಶದೊ
ಗಿನ ರಾಜರಿಗೂ ಮಹಾರಾಜರಿಗೂ ಈ ವಿಚಾರವು ಯೋಗ್ಯವೆಂದು
ೋರಿದ್ದರಿಂದ ಈ ವಿದ್ಯಾಪೀಠಕ್ಕಾಗಿ ಬೇಕಾಗುವ ಹಣವನ್ನು ಕೂಡಿ
ುವ ಕಾರ್ಯವು ಒಳ್ಳೇ ಭರದಿಂದ ಆರಂಭವಾಯಿತು. ಈ ಸಂಸ್ಥೆಯ
ಂಡಿನಲ್ಲಿ ಸದ್ಯಕ್ಕೆ ಒಂದು ಕೋಟಿ ರೂಪಾಯಿಯು ಕೂಡಿರುವದು;
ಾಗು ಸರಕಾರದವರಾದರೂ ಪ್ರತಿವರ್ಷ ಒಂದು ಲಕ್ಷ ರೂಪಾಯಿಗಳ
ಹಾಯವನ್ನು ಮಾಡಲು ಒಪ್ಪಿಕೊಂಡಿರುವರು. ವಿಶ್ವ ವಿದ್ಯಾಪೀಠ
ಂಥ ದಿನದಿನಕ್ಕೆ ಬೆಳೆಯುತ್ತ ಹೋಗುವ ಸಂಸ್ಥೆಯ ಅನುಕೂಲಕ್ಕಾಗಿ
ಾಧ್ಯವಿದ್ದಷ್ಟು ಸ್ಥಳವನ್ನು ದೊರಕಿಸುವ ಸಂಬಂಧದಿಂದ ಮೊದಲು
ಹಳ ವಾದವಿವಾದಗಳು ನಡೆದವು. ಆದರೆ ಈಗ ನಮಗೆ ಈ
ಾರ್ಯಕ್ಕೆ ಯೋಗ್ಯವಾದ ಸ್ಥಳವು ದೊರೆತಿರುವದು; ಹಾಗು ಸಂಘದ
ು ೧೦೦ ಎಕರೆ ಸ್ಥಳವನ್ನು ತಮ್ಮ ಆಧೀನದಲ್ಲಿ ತೆಗೆದುಕೊಂಡಿರು
ು. ಹಿಂದೂ ವಿಶ್ವ ವಿದ್ಯಾಪೀಠವನ್ನು ಸ್ಥಾಪಿಸುವ ಸಂಬಂಧದ ವಿಚಾ
ರ ಮೊಟ್ಟಮೊದಲು ಹೊರಟಾಗ ಕಾಶಿಯೊಳಗಿನ ಸೆಂಟ್ರಲ್ ಹಿಂದೂ
ಲೇಜವನ್ನು ಈ ವಿದ್ಯಾಪೀಠದ ಮೊದಲನೆಯ ಕಾಲೇಜದವೆಂದು
ದು ಅದನ್ನು ಇದಕ್ಕೆ ಜೋಡಿಸಬೇಕೆಂದು ನಾವು ಯೋಜಿಸಿದ್ದೆವು.
ರಂತೆ ಮಿಸೆಸ್ ಆನಿಬಿಸೆಂಟರವರು ಆ ಕಾಲೇಜವನ್ನು ನಮ್ಮ
ಸ್ಥೆಗೆ ಜೋಡಿಸುವ ಬಗ್ಗೆ ಸಮ್ಮತಿಯನ್ನು ಕೊಟ್ಟಿರುವರು.

ಸದ್ಯಕ್ಕೆ ಹಿಂದುಸ್ಥಾನಗೊಳಗಿರುವ ಎಲ್ಲ ವಿಶ್ವವಿದ್ಯಾಪೀಠಗಳು
ವಲ ಪರೀಕ್ಷೆಯನ್ನು ತೆಗೆದುಕೊಳ್ಳುವ ಸಂಸ್ಥೆಗಳಾಗಿರುವವು; ಆದರೆ
ವಿದ್ಯಾಪೀಠದಲ್ಲಿ ಬರೇ ಪರೀಕ್ಷೆಯನ್ನು ತೆಗೆದುಕೊಳ್ಳುವ ವ್ಯವ
ರು ಇರುವದಕ್ಕಿಂತ ಅದರಲ್ಲಿ ಜ್ಞಾನವನ್ನು ಬೆಳೆಯಿಸುವಂಥ ಹಾಗೂ
ತ ಸಂಗಡ ಸಂಶೋಧನಾತ್ಮಕವಾದ ಶಾಸ್ತ್ರೀಯ ಹಾಗು ಔದ್ಯೋಗಿಕ
ಣಗಳನ್ನು ಕೊಡುವ ವ್ಯವಸ್ಥೆಯೂ ಆದರೆ, ಹಾಗು ವಿಶ್ವವಿದ್ಯಾಪೀ
ವಸತಿಗೃಹವನ್ನು ಜೋಡಿಸಿ ವಿದ್ಯಾಭ್ಯಾಸವು ಮುಗಿಯುವ ವರೆಗೆ
ವಿದ್ಯಾರ್ಥಿಗಳು ಗುರುಗಳ ಅಡಳತೆಯ ಕೆಳಗೆ ಇದ್ದರೆ, ಅವರ ಚರಿತ್ರಕ್ಕೆ
ೀಗ್ಯವಾದ ದಿಶೆಯು ದೊರೆಯಬಹುದು. ಆದ್ದರಿಂದ ದೇಶದೊಳಗಿನ
ಂದಾಳುಗಳೆಲ್ಲರೂ ಬಹು ದಿವಸಗಳಿಂದಲು ಇಂಥದೊಂದು ವಿಶ್ವವಿ

ದ್ಯಾಪೀಠವು ಅತ್ಯವಶ್ಯವಾಗಿ ಬೇಕೆಂದು ಕೋರುತ್ತಿದ್ದರು. ಮೇಲಾಗಿ ಸಾಂಪ್ರತಕ್ಕೆ ಈದೇಶದಲ್ಲಿರುವ ವಿಶ್ವವಿದ್ಯಾಪೀಠಗಳಲ್ಲಿ ಬೌದ್ಧಿಕ, ಕಲಾ ಕೌಶಲ್ಯದ ಅಥವಾ ಶಾಸ್ತ್ರೀಯ ವಿಷಯದ ಶಿಕ್ಷಣವು ದೊರೆಯುತ್ತಿದ್ದರೂ ಅದು ಯೌರೋಪ್ಯ ಸಂಸ್ಕೃತಿಯ ಪೋಷಕವಾಗಬಹುದಾದ ಪದ್ಧತಿಯಿಂದ ಕೊಡಲ್ಪಡುವದು ಅದರಿಂದಲೇ ಹಿಂದುಸ್ತಾನದ ಸಾಂಪ್ರತಿಕ, ಸಾಮಾಜಿಕ ಹಾಗು ಆಧ್ಯಾತ್ಮಿಕ ಉನ್ನತಿಯಾಗಿ ದೇಶದ ಮೇಲೆ ಬೇಕಾದಷ್ಟು ಸಂಕಟಗಳು ಬಂದರೂ ಹಿಂದುಸಮಾಜದ ಸಂಸ್ಕೃತಿಯು ಸ್ಥಿರವಾಗಿ ಉಳಿಯುವದಕ್ಕೆ ನಮ್ಮ ವಿದ್ಯಾರ್ಥಿಗಳಿಗೆ ನಾವೇ ಕಲಿಸಬೇಕು, ಇದೂ ಒಂದು ಈ ವಿದ್ಯಾಪೀಠವನ್ನು ಸ್ಥಾಪಿಸುವ ಮುಖ್ಯ ಉದ್ದೇಶವಾಗಿರುವದು. ಅರ್ವಾಚೀನ-ಶಾಸ್ತ್ರೀಯ-ಜ್ಞಾನಕ್ಕೆ ಪ್ರಾಚೀನ ಆರ್ಯರ ಸಂಸ್ಕೃತಿಯನ್ನು ಜೋಡಿಸುವಂಥ ಶಿಕ್ಷಣವನ್ನು ಕೊಡುವ ಉದ್ದೇಶದಿಂದ ಹೊರಡುತ್ತಿರುವ ಈ ವಿಶ್ವವಿದ್ಯಾಪೀಠದ ಸ್ಥಾಪನೆಯ ಕಾರ್ಯವು ಈ ಹೊತ್ತು ದಯಾಮಯನಾದ ಪರಮೇಶ್ವರನ ಪ್ರಸಾದದಿಂದಲೂ ಸಾರ್ವಭೌಮ ಸರಕಾರದ ಹಾಗು ಹಿಂದು ಸಂಘಗಳವರ ಉದಾರ ಆಶ್ರಯದಿಂದಲೂ ನೆರವೇರುತ್ತಿರುವದನ್ನು ನೋಡಿ ನಮೆಲ್ಲರಿಗೂ ಅತಿಶಯ ಆನಂದವೆನಿಸುವದು.

ಹಿಂದು ವಿಶ್ವವಿದ್ಯಾಪೀಠದ ಸ್ಥಾಪನೆಯ ಈ ಹೊತ್ತಿನ ಪವಿತ್ರವಾದ ದಿವಸವು ಹಿಂದುಸ್ತಾನದ ಇತಿಹಾಸದಲ್ಲಿ ಚಿರಸ್ಮರಣೀಯವಾಗಿ ಉಳಿಯುವದು. ಸಾರ್ವಭೌಮ ಸರಕಾರದ ಪ್ರತಿನಿಧಿಗಳೂ ಪ್ರಾಂತ ಪ್ರಾಂತಗಳೊಳಗಿನ ಹಿಂದೀ ಮಾಂಡಲಿಕರೂ ಇಂತಹ ಸಮಾರಂಭಕ್ಕಾಗಿ ಒಟ್ಟುಗೂಡಿದ್ದು ಇದೇ ಮೊದಲನೆಯ ಪ್ರಸಂಗವಾಗಿರುವದು. ಈ ನೂತನ ವಿದ್ಯಾಮಂದಿರದ ವ್ಯಾಪ್ತಿಯನ್ನು ಬೆಳೆಯಿಸುವದಕ್ಕೆ ನಮಗಿನ್ನೂ ಬಹಳಷ್ಟು ಹಣವು ಬೇಕಾಗಿರುವದು. ಈ ಹಣದ ಕೊರತೆಯನ್ನು ಹಿಂದೀ ಸಮಾಜದವರು ಪೂರೈಸುವರೆಂದು ನಾವು ನಿಶ್ಚಯವಾಗಿ ನಂಬುತ್ತೇವೆ. ತಮ್ಮ ಹಿಂದುಸ್ತಾನದ ರಾಜ್ಯಕಾರಭಾರದ ಅವಧಿಯು ಮುಗಿಯುತ್ತ ಬಂದಿರುವದರಿಂದ ನನಗೆ ಅತ್ಯಂತ ವಿಷಾದವೆನಿಸುವದು ವಸತಿಗೃಹವನ್ನು ಜೋಡಿಸಿದ, ಹಾಗು ಪರೀಕ್ಷೆಯ ಅಭ್ಯಾಸದೊಡನೆ ಫಾರ್ಮಿಕ ಶಿಕ್ಷಣವನ್ನು ಕೊಡುವಂಥ ಈ ವಿಶ್ವವಿದ್ಯಾಪೀಠದ ಪ್ರಾ

ಗೀ ಸಂಸ್ಥೆಯನ್ನು ಸ್ಥಾಪಿಸುವದಕ್ಕೆ ಅನುಜ್ಞೆಯನ್ನು ದಯಪಾಲಿಸಿದು ವ ಈ ತಮ್ಮ ಶಿಕ್ಷಣವಿಷಯಕ ಉದಾರಧೋರಣದ ಮೂಲಕವಾಗಿ ತಮ್ಮ ಆಳಿಕೆಯನ್ನು ಹಿಂದೂ ಜನರು ಎಂದೂ ಮರೆಯಲಾರದು. ಹಿಂದೂ ವಿಶ್ವವಿದ್ಯಾಲಯದ ಸಂಬಂಧದ ತಮ್ಮ ಈ ಕೃಪಾದೃಷ್ಟಿಯ ಸ್ಮಾರಕವೆಂದು ಯಾಂತ್ರಿಕ ಶಿಕ್ಷಣದ "ಪ್ರೊಫೆಸರಶಿಪ್ಪು" ನ್ನು ಇಡುವ ದಕ್ಕಾಗಿ ಜೋಧಪುರದ ಸರಕಾರದವರು ಎಳಂಂ ರೂಪಾಯಿಗಳನ್ನು ಕೊಟ್ಟಿರುವರು. ಈ ತರದ ಸ್ಮಾರಕವನ್ನು ಇಡಲಿಕ್ಕೆ ತಾವು ಸಮ್ಮತಿ ಸುವಿರೆಂದು ನಾವೆಲ್ಲರೂ ಅರಿಸುವೆವು. ಇನ್ನು ಈ ಹೊತ್ತು ಹಿಂದು ಸ್ತಾನದೊಳಗಿನ ರಾಜರೂ, ಮಹಾರಾಜರೂ, ಅನೇಕ ಸನ್ಮಾನ್ಯ ಗೃಹ ಸ್ಥರೂ ಇಲ್ಲಿ ನೆರೆದಿರುವದಕ್ಕೆ ಕಾರಣವಾದ ಕೋಣಶಿಲಾಸ್ಥಾಪನೆಯ ಸಮಾರಂಭಕಾರ್ಯವನ್ನು ತಾವು ನೆರವೇರಿಸಬೇಕೆಂದು ನಾವು ವಿನಯ ವಿಂದ ವಿಜ್ಞಾಪಿಸಿಕೊಳ್ಳುವೆವು."

ದರಭಂಗದ ಮಹಾರಾಜರು ಓದಿತೋರಿಸಿದ ಈ ಆಶಯವುಳ್ಳ ಮಾನಪತ್ರವನ್ನು ಒಂದು ಸುವರ್ಣದ ಕರಡಿಗೆಯಲ್ಲಿ ಇಟ್ಟು ಅದನ್ನು ಸರ್ ಗುರುದಾಸ ಬ್ಯಾನರ್ಜಿಯವರು ನಾ. ವ್ಹಾಯಿಸರಾಯರವರಿಗೆ ಅರ್ಪಿ ಸಿದರು. ಆ ಸುವರ್ಣದ ಕರಡಿಗೆಯೊಂದಿಗೆ ಕಾಶೀಕ್ಷೇತ್ರದೊಳಗಿನ ಶಿವಮಂದಿರದ ಕೊರೆದು ಮಾಡಿದ ಒಂದು ಪ್ರತಿಮೆಯು ಕೊಡಲ್ಪಟ್ಟಿತು. ತರುವಾಯ ವ್ಹಾಯಿಸರಾಯರವರು ಆ ಮಾನಪತ್ರಕ್ಕೆ ಉತ್ತರವಾಗಿ ಮುಂದಿನ ಅಭಿಪ್ರಾಯವವುಳ್ಳ ಭಾಷಣವನ್ನು ಮಾಡಿದರು.

ನಾ. ಲಾರ್ಡ ಹಾರ್ಡಿಂಜರವರ ಭಾಷಣವು:—

"ಭಾರತೀಯ ವಿದ್ವದ್ವರರೇ, ರಾಜಾಧಿರಾಜರೇ, ಹಾಗು ಸರ ಕಾರದ ಪ್ರತಿನಿಧಿವರ್ಗದವರೇ, ಈ ಭರತಖಂಡದ ಬಹು ದೂರ ದೂರದ ಪ್ರದೇಶಗಳಿಂದ ನಮ್ಮೆಲ್ಲರನ್ನು ಆಕರ್ಷಿಸಿ ಇಲ್ಲಿಗೆ ಎಳೆದು ತಂದ ಲೋ ಹಚುಂಬಕವು ಯಾವದು? ಈ ನಮ್ಮ ಮುಂದಿರುವ ಸಂಗಮರವರೀ ಕಲ್ಲೇ ಆ ಆಕರ್ಷಕ ಕೇಂದ್ರವಲ್ಲವೇ? ಈ ಶಿಲೆಯು ಹೊರಗಿನಿಂದ ಸಾಮಾನ್ಯವಾಗಿ ತೋರಿದರೂ ಹಿಂದುಸ್ತಾನದ ಇತಿಹಾಸಕ್ಕೆ ತೀರ ಖಾಸ ಸ್ವರೂಪವನ್ನು ಉಂಟುಮಾಡುವ ಅಸಾಧಾರಣವಾದ ಶಕ್ತಿಯು ದರ ಅಂತರಂಗದಲ್ಲಿ ಅಡಕವಾಗಿರುವದು. ಈಗ ಬಹು ದಿನಗಳಿಂ

ಕ್ಕಾಗಿ ಹಿಂದು ಜನರು ಪ್ರಯತ್ನಮಾಡುತ್ತಿದ್ದರೋ ಆ ಧ್ಯೇಯಸಿದ್ಧಿಯ
ಮಾರ್ಗದಲ್ಲಿ ಅವರು ಇಂದು ಒಂದು ಅಡಿಯನ್ನು ಮುಂದಿಟ್ಟರೆಂಬುದನ್ನು
ಈ ಶಿಲೆಯು ಸಿದ್ಧಮಾಡಿತೋರಿಸಿತು. ದೇಶದಲ್ಲಿ ಸುಶಿಕ್ಷಿತರ ಸಂಖ್ಯೆ
ಯನ್ನು ಬೆಳೆಯಿಸುವದರ ಕಡೆಗೆ ಸರಕಾರದ ಲಕ್ಷ್ಯವಿರುವದಿಲ್ಲವೆಂಬ
ದೊಂದು ಆರೋಪವು ಸರಕಾರದ ಮೇಲಿರುವದು. ಇಂಗ್ಲಂಡ, ಅಮೇ
ರಿಕಾ ಮುಂತಾದ ದೇಶಗಳೊಳಗಿನ ವಿಶ್ವವಿದ್ಯಾಲಯಗಳ ಸಂಖ್ಯೆಂ
ನ್ನೂ ಮೂವತ್ತುಕೋಟಿ ಜನಸಂಖ್ಯೆಯುಳ್ಳ ಹಿಂದುಸ್ತಾನದ ವಿಶ್ವವಿದ್
ಪೀಠಗಳ ಸಂಖ್ಯೆಯನ್ನೂ ಒರೆಹಚ್ಚಿನೋಡಿದರೆ ಈ ಆರೋಪವು ಕೇವ
ನಿರಾಧಾರವಾದದ್ದೆಂದು ಹೇಳಲಿಕ್ಕೆ ಬರುವಂತಿಲ್ಲ. ಆದರೆ ಹಿಂದುಸ್ತಾನ
ಸರಕಾರದ ಮನಃಪೂರ್ವಕವಾದ ಬಯಕೆಯು ಹೀಗಿರುವದಿಲ್ಲ; ಸ
ಧ್ಯವಿದ್ಯಮಟ್ಟಿಗೂ ಉಚ್ಚ ಶಿಕ್ಷಣದ ಪ್ರಸಾರಕ್ಕಾಗಿ ಅದು ಯತ್ನಿಸು
ಲೇ ಇರುವದು. ಹಿಂದುಸ್ತಾನದಲ್ಲಿ ಇನ್ನೂ ಅನೇಕ ವಿಶ್ವವಿದ್ಯಾಪೀಠ
ಳನ್ನು ಸ್ಥಾಪಿಸುವದು ಅವಶ್ಯವು ಎಂಬ ವಿಚಾರವು ಸರಕಾರದ ಲಕ್ಷ್ಯದ
ಬಂದಿರುವದು. ಹಾಗು ಹೊಸದಾಗಿ ಸ್ಥಾಪಿಸಲ್ಪಡುವ ಢಾಕ್ಕಾ ಮತ್ತ
ಎಂಕೀಪುರಗಳ ವಿಶ್ವವಿದ್ಯಾಲಯಗಳ ಹಿಂದಿನಿಂದಲೇ ಬ್ರಹ್ಮದೇಶ
ಲ್ಲೊಂದು ಮಧ್ಯಪ್ರಾಂತದಲ್ಲೊಂದು ಹೀಗೆ ಎರಡು ವಿದ್ಯಾಪೀಠಗಳ
ಸ್ಥಾಪಿಸಲ್ಪಡುವವು. ಹಿಂದು ವಿಶ್ವವಿದ್ಯಾದವರು ಕೊಡುವ ಪದವಿ
ಳನ್ನು ಸರಕಾರದವರು ಮಾನ್ಯಮಾಡುವರು, ಇಷ್ಟೇ ಅಲ್ಲ; ಈ ವಿದ್
ಪೀಠದಿಂದ ಹೊರಬೀಳುವ ಪದವೀಧರರು ಸರಕಾರೀ ವಿಶ್ವವಿದ್ಯಾಪೀ
ಗಳ ಪದವೀಧರರಿಗಿಂತಲೂ ಹೆಚ್ಚಿನ ಯೋಗ್ಯತೆಯವರಾಗಬಹುದ
ದಂಥ ಶಿಕ್ಷಣವು ಈ ವಿದ್ಯಾಪೀಠದಲ್ಲಿ ಕೊಡಲ್ಪಡಬಹುದೆಂದು ಆದ
ಚಾಲಕರು ಬಯಸುವರು. ಬೌದ್ಧಿಕ ಹಾಗು ಔದ್ಯೋಗಿಕ ಶಿಕ್ಷಣದ
ಭ್ಯಾಸಕ್ರಮವನ್ನು ಸಂಪೂರ್ಣಮಾಡಿಕೊಳ್ಳುವದಕ್ಕಾಗಿ ಹಿಂದೀ ವಿದ್
ರ್ಥಿಗಳಿಗೆ ಪರದೇಶಕ್ಕೆ ಹೋಗುವ ಪ್ರಸಂಗವು ಬಾರದಿರುವಂಥ ಯೋ
ಜನೆಯನ್ನು ಮಾಡಬೇಕೆಂದು ಈ ವಿದ್ಯಾಪೀಠದ ಚಾಲಕರು ಪ್ರಯ
ನಡೆಯಿಸಿರುವರು. ಇವೆಲ್ಲ ಸುಗತಿಗಳನ್ನು ವಿಚಾರಮಾಡಿ ನೋಡ
ಹಿಂದು ಸಮಾಜದ ಮುಂದಾಳುಗಳ ಈ ಪ್ರಯತ್ನವು ಅಭಿನಂದನೀ
ವಾಗಿರುವದು; ಹಾಗು ಸರಕಾರದವರಾದರೂ ಅವರ ಈ ಪ್ರಯತ್ನ
ಯೋಗ್ಯ ಉತ್ತೇಜನವನ್ನು ಕೊಡುವದಕ್ಕೆ ಎಷ್ಟು ಮಾತ್ರವೂ ಶ

ಮುಂದೆ ನೋಡಲಾರರು. ಈ ವಿಶ್ವವಿದ್ಯಾಪೀಠದ ಉದ್ದೇಶವು ಸಾಂಪ್ರತಕ್ಕೆ ಈ ದೇಶದಲ್ಲಿರುವ ಇತರ ವಿದ್ಯಾಪೀಠಗಳಂತೆ ಬರೇ ಪರೀಕ್ಷೆಯನ್ನು ತೆಗೆದುಕೊಳ್ಳುವದಷ್ಟೇ ಇರದೆ, ಶಿಕ್ಷಣವನ್ನು ಕೊಡುವ ವ್ಯವಸ್ಥೆಯೂ ಇದರಲ್ಲಿ ಇರುವದು. ಇದೇ ಇದರ ನೂತನತ್ವದ ಕುರುಹಾಗಿರುವದು. ಆದರೆ ಹಿಂದುಸ್ತಾನದ ಪ್ರಾಚೀನ ಇತಿಹಾಸದ ಕಡೆಗೆ ತುಸು ದೃಷ್ಟಿಯನ್ನು ತಿರುಗಿಸಿದರೆ, ಹಾಗು ವಸಿಷ್ಠ-ಗೌತಮರೇ ಮೊದಲಾದ ಮಹರ್ಷಿಗಳಿಂದ ಸ್ಥಾಪಿತವಾಗಿದ್ದ ಗುರುಕುಲಗಳ ವಿಚಾರವು ಸ್ಮರಣೆಗೆ ಬಂದರೆ, ಈ ಮಾತು ಹಿಂದುಸ್ತಾನಕ್ಕಾದರೂ ಕೇವಲ ನೂತನವಾದದ್ದಲ್ಲವೆಂಬದು ಕಂಡುಬರುವದು. ಪ್ರಾಚೀನ ಕಾಲದ ಗುರುಕುಲವಾಸದ ಪದ್ಧತಿಯನ್ನನುಸರಿಸಿ ಶಿಕ್ಷಣ ಸಂಸ್ಥೆಗಳನ್ನು ಆರಂಭಿಸುವ ಉಚ್ಚಧ್ಯೇಯವನ್ನು ಮುಂದಿಟ್ಟುಕೊಂಡು ದೇಶದೊಳಗಿನ ಹಿಂದು ಮುಸಲ್ಮಾನ ಸಮಾಜದವರು ಪ್ರಯತ್ನಮಾಡುತ್ತಿದ್ದಾಗ ಸರಕಾರವು ಅವರಿಗೆ ತಕ್ಕ ಸಹಾಯವನ್ನು ಮಾಡದೆ ಇದ್ದರೆ, ಅದು ರಾಜನೀತಿಯ ದೃಷ್ಟಿಯಿಂದ ತೀರ ತಪ್ಪಾಗುತ್ತಿತ್ತು. ಈ ವಿಶ್ವವಿದ್ಯಾಪೀಠದಲ್ಲಿ ಇತರ ವ್ಯಾವಹಾರಿಕ ಶಿಕ್ಷಣದೊಂದಿಗೆ ಧಾರ್ಮಿಕ ಶಿಕ್ಷಣವನ್ನೂ ಕೊಡುವ ವ್ಯವಸ್ಥೆಯನ್ನು ಮಾಡತಕ್ಕವರಿರುವರು. ಈ ಧಾರ್ಮಿಕ ಶಿಕ್ಷಣದ ವಿಚಾರವು ಕೆಲವರಿಗೆ ಕುಕಲ್ಪನೆಗೆ ಕಾರಣವಾಗಿರುವದು. ಆದರೆ ಸ್ವಧರ್ಮದಲ್ಲಿ ಸಂಪೂರ್ಣ ವಿಶ್ವಾಸವಿದ್ದ ಮಾತ್ರದಿಂದ ಪರಧರ್ಮದವರ ತಿಳುವಳಿಕೆಗಳ ಸಂಬಂಧದಿಂದ ಆದರವೂ ಸಹಿಷ್ಣುತೆಯೂ ಉಂಟಾಗಲಾರವೆಂದು ನನಗಂತೂ ಅನಿಸುವದಿಲ್ಲ. ಶಿಕ್ಷಣ ಸಂಸ್ಥೆಯಲ್ಲಿ ಧಾರ್ಮಿಕ ಶಿಕ್ಷಣವನ್ನು ಕೊಡಬೇಕೋ ಕೊಡಬಾರದೋ ಎಂಬ ಬಗ್ಗೆ ಅನೇಕ ವಾದವಿವಾದಗಳು ನಡೆದಿರುವವು. ಲಾರ್ಡ ರಿಪನ್ ಸಾಹೇಬರು ನೇಮಿಸಿದ "ಎಜ್ಯುಕೇಶನ್ ಕಮಿಶನ್ನ"ದವರು ಈ ಸಂಬಂಧದಿಂದ ಅನುಕೂಲ ಮತವನ್ನು ಕೊಟ್ಟಿರುವರು; ಹಾಗು ಸದ್ಯಕ್ಕೆ ನಡೆದಿರುವ ವಿಶ್ವ ವಿದ್ಯಾಪೀಠಗಳಲ್ಲಿ ಧಾರ್ಮಿಕ ಶಿಕ್ಷಣವನ್ನು ಕೊಡದಿರುವದೂ ಒಂದು ದೊಡ್ಡ ದೋಷವೇ ಆಗಿರುವದು, ಎಂದು ಆ ಕಮಿಶನ್ನದವರು ದೋಷವನ್ನು ತೆಗೆದಿರುವರು. ಧಾರ್ಮಿಕ ಶಿಕ್ಷಣವಿಲ್ಲದಿದ್ದರೆ ಬರೇ ಇತರ ಶಿಕ್ಷಣದಿಂದ ಏನೂ ಪ್ರಯೋಜನವಾಗಲಾರದೆಂದು ನನ್ನ ಅಭಿ

ಕ್ಕಾಗಿ ಹಿಂದು ಜನರು ಪ್ರಯತ್ನಮಾಡುತ್ತಿದ್ದರೋ ಆ ಧ್ಯೇಯಸಿದ್ಧಿಯ
ಮಾರ್ಗದಲ್ಲಿ ಅವರು ಇಂದು ಒಂದು ಅಡಿಯನ್ನು ಮುಂದಿಟ್ಟರೆಂಬದನ್ನು
ಈ ಶಿಲೆಯು ಸಿದ್ಧಮಾಡಿತೋರಿಸಿತು. ದೇಶದಲ್ಲಿ ಸುಶಿಕ್ಷಿತರ ಸಂಖ್ಯೆ
ಯನ್ನು ಬೆಳೆಯಿಸುವದರ ಕಡೆಗೆ ಸರಕಾರದ ಲಕ್ಷ್ಯವಿರುವದಿಲ್ಲವೆಂಬ
ದೊಂದು ಆರೋಪವು ಸರಕಾರದ ಮೇಲಿರುವದು. ಇಂಗ್ಲಂಡ, ಅಮೇ
ರಿಕಾ ಮುಂತಾದ ದೇಶಗಳೊಳಗಿನ ವಿಶ್ವವಿದ್ಯಾಲಯಗಳ ಸಂಖ್ಯೆಯ
ನ್ನೂ ಮೂವತ್ತುಕೋಟಿ ಜನಸಂಖ್ಯೆಯುಳ್ಳ ಹಿಂದುಸ್ತಾನದ ವಿಶ್ವವಿದ್ಯಾ
ಪೀಠಗಳ ಸಂಖ್ಯೆಯನ್ನೂ ಒರೆಹಚ್ಚಿನೋಡಿದರೆ ಈ ಆರೋಪವು ಕೇವಲ
ನಿರಾಧಾರವಾದದ್ದೆಂದು ಹೇಳಲಿಕ್ಕೆ ಬರುವಂತಿಲ್ಲ. ಆದರೆ ಹಿಂದುಸ್ತಾನದ
ಸರಕಾರದ ಮನಃಪೂರ್ವಕವಾದ ಬಯಕೆಯು ಹೀಗಿರುವದಿಲ್ಲ; ಸಾ
ಧ್ಯವಿದ್ದಮಟ್ಟಿಗೂ ಉಚ್ಚ ಶಿಕ್ಷಣದ ಪ್ರಸಾರಕ್ಕಾಗಿ ಅದು ಯತ್ನಿಸುತ್ತ
ಲೇ ಇರುವದು. ಹಿಂದುಸ್ತಾನದಲ್ಲಿ ಇನ್ನೂ ಅನೇಕ ವಿಶ್ವವಿದ್ಯಾಪೀಠಗ
ಳನ್ನು ಸ್ಥಾಪಿಸುವದು ಅವಶ್ಯವು ಎಂಬ ವಿಚಾರವು ಸರಕಾರದ ಲಕ್ಷ್ಯದಲ್ಲಿ
ಬಂದಿರುವದು. ಹಾಗು ಹೊಸದಾಗಿ ಸ್ಥಾಪಿಸಲ್ಪಡುವ ಢಾಕ್ಕಾ ಮತ್ತು
ಬಂಕೀಪುರಗಳ ವಿಶ್ವವಿದ್ಯಾಲಯಗಳ ಹಿಂದಿನಿಂದಲೇ ಬ್ರಹ್ಮದೇಶದ
ಲ್ಲೊಂದು ಮಧ್ಯಪ್ರಾಂತದಲ್ಲೊಂದು ಹೀಗೆ ಎರಡು ವಿದ್ಯಾಪೀಠಗಳು
ಸ್ಥಾಪಿಸಲ್ಪಡುವವು. ಹಿಂದು ವಿಶ್ವವಿದ್ಯಾದವರು ಕೊಡುವ ಪದವಿಗ
ಳನ್ನು ಸರಕಾರದವರು ಮಾನ್ಯಮಾಡುವರು, ಇಷ್ಟೇ ಅಲ್ಲ; ಈ ವಿದ
ಪೀಠದಿಂದ ಹೊರಬೀಳುವ ಪದವೀಧರರು ಸರಕಾರೀ ವಿಶ್ವವಿದ್ಯಾಪೀ
ಠಗಳ ಪದವೀಧರರಿಗಿಂತಲೂ ಹೆಚ್ಚಿನ ಯೋಗ್ಯತೆಯವರಾಗಬಹುದ
ದಂಥ ಶಿಕ್ಷಣವು ಈ ವಿದ್ಯಾಪೀಠದಲ್ಲಿ ಕೊಡಲ್ಪಡಬಹುದೆಂದು ಆದ
ಚಾಲಕರು ಬಯಸುವರು. ಬೌದ್ಧಿಕ ಹಾಗು ಔದ್ಯೋಗಿಕ ಶಿಕ್ಷಣದ
ಭ್ಯಾಸಕ್ರಮವನ್ನು ಸಂಪೂರ್ಣಮಾಡಿಕೊಳ್ಳುವದಕ್ಕಾಗಿ ಹಿಂದೀ ವಿದ
ರ್ಥಿಗಳಿಗೆ ಪರದೇಶಕ್ಕೆ ಹೋಗುವ ಪ್ರಸಂಗವು ಬಾರದಿರುವಂಥ ಯೋ
ಜನೆಯನ್ನು ಮಾಡಬೇಕೆಂದು ಈ ವಿದ್ಯಾಪೀಠದ ಚಾಲಕರು ಪ್ರಯ
ನಡೆಯಿಸಿರುವರು. ಇವೆಲ್ಲ ಸುಗತಿಗಳನ್ನು ವಿಚಾರಮಾಡಿ ನೋಡಿದ
ಹಿಂದು ಸಮಾಜದ ಮುಂದಾಳುಗಳ ಈ ಪ್ರಯತ್ನವು ಅಭಿನಂದನೀಯ
ವಾಗಿರುವದು; ಹಾಗು ಸರಕಾರದವರಾದರೂ ಅವರ ಈ ಪ್ರಯತ್ನ
ಯೋಗ್ಯ ಉತ್ತೇಜನವನ್ನು ಕೊಡುವದಕ್ಕೆ ಎಪ್ಪು ಮಾತ್ರವೂ ಹಿ

ಮುಂದೆ ನೋಡಲಾರರು. ಈ ವಿಶ್ವವಿದ್ಯಾಪೀಠದ ಉದ್ದೇಶವು ಸಾಂಪ್ರತಕ್ಕೆ ಈ ದೇಶದಲ್ಲಿರುವ ಇತರ ವಿದ್ಯಾಪೀಠಗಳಂತೆ ಬರೀ ಪರೀಕ್ಷೆಯನ್ನು ತೆಗೆದುಕೊಳ್ಳುವದಷ್ಟೇ ಇರದೆ, ಶಿಕ್ಷಣವನ್ನು ಕೊಡುವ ವ್ಯವಸ್ಥೆಯೂ ಇದರಲ್ಲಿ ಇರುವದು. ಇದೇ ಇದರ ನೂತನತ್ವದ ಕುರುಹಾಗಿರುವದು. ಆದರೆ ಹಿಂದುಸ್ತಾನದ ಪ್ರಾಚೀನ ಇತಿಹಾಸದ ಕಡೆಗೆ ತುಸು ದೃಷ್ಟಿಯನ್ನು ತಿರುಗಿಸಿದರೆ, ಹಾಗು ವಸಿಷ್ಠ-ಗೌತಮರೇ ಮೊದಲಾದ ಮಹರ್ಷಿಗಳಿಂದ ಸ್ಥಾಪಿತವಾಗಿದ್ದ ಗುರುಕುಲಗಳ ವಿಚಾರವು ಸ್ಮರಣೆಗೆ ಬಂದರೆ, ಈ ಮಾತು ಹಿಂದುಸ್ತಾನಕ್ಕಾದರೂ ಕೇವಲ ನೂತನವಾದದ್ದಲ್ಲವೆಂಬದು ಕಂಡುಬರುವದು. ಪ್ರಾಚೀನ ಕಾಲದ ಗುರುಕುಲವಾಸದ ಪದ್ಧತಿಯನ್ನನುಸರಿಸಿ ಶಿಕ್ಷಣ ಸಂಸ್ಥೆಗಳನ್ನು ಆರಂಭಿಸುವ ಉಚ್ಚಧ್ಯೇಯವನ್ನು ಮುಂದಿಟ್ಟುಕೊಂಡು ದೇಶದೊಳಗಿನ ಹಿಂದು ಮುಸಲ್ಮಾನ ಸಮಾಜದವರು ಪ್ರಯತ್ನವಾಡುತ್ತಿದ್ದಾಗ ಸರಕಾರವು ಅವರಿಗೆ ತಕ್ಕ ಸಹಾಯವನ್ನು ಮಾಡದೆ ಇದ್ದರೆ, ಅದು ರಾಜನೀತಿಯ ದೃಷ್ಟಿಯಿಂದ ತೀರ ತಪ್ಪಾಗುತ್ತಿತ್ತು. ಈ ವಿಶ್ವವಿದ್ಯಾಪೀಠದಲ್ಲಿ ಇತರ ವ್ಯಾವಹಾರಿಕ ಶಿಕ್ಷಣದೊಂದಿಗೆ ಧಾರ್ಮಿಕ ಶಿಕ್ಷಣವನ್ನೂ ಕೊಡುವ ವ್ಯವಸ್ಥೆಯನ್ನು ಮಾಡತಕ್ಕವರಿರುವರು. ಈ ಧಾರ್ಮಿಕ ಶಿಕ್ಷಣದ ವಿಚಾರವು ಕೆಲವರಿಗೆ ಕುಕಲ್ಪನೆಗೆ ಕಾರಣವಾಗಿರುವದು. ಆದರೆ ಸ್ವಧರ್ಮದಲ್ಲಿ ಸಂಪೂರ್ಣ ವಿಶ್ವಾಸವಿದ್ದ ಮಾತ್ರದಿಂದ ಪರಧರ್ಮದವರ ತಿಳುವಳಿಕೆಗಳ ಸಂಬಂಧದಿಂದ ಆದರವೂ ಸಹಿಷ್ಣುತೆಯೂ ಉಂಟಾಗಲಾರವೆಂದು ನನಗಂತೂ ಅನಿಸುವದಿಲ್ಲ. ಶಿಕ್ಷಣ ಸಂಸ್ಥೆಯಲ್ಲಿ ಧಾರ್ಮಿಕ ಶಿಕ್ಷಣವನ್ನು ಕೊಡಬೇಕೋ ಕೊಡಬಾರದೋ ಎಂಬ ಬಗ್ಗೆ ಅನೇಕ ವಾದವಿವಾದಗಳು ನಡೆದಿರುವವು. ಲಾರ್ಡ ರಿಪನ್ ಸಾಹೇಬರು ನೇಮಿಸಿದ "ಎಜ್ಯುಕೇಶನ್ ಕಮಿಶನ್ನ"ದವರು ಈ ಸಂಬಂಧದಿಂದ ಅನುಕೂಲ ಮತವನ್ನು ಕೊಟ್ಟಿರುವರು; ಹಾಗು ಸದ್ಯಕ್ಕೆ ನಡೆದಿರುವ ವಿಶ್ವ ವಿದ್ಯಾಪೀಠಗಳಲ್ಲಿ ಧಾರ್ಮಿಕ ಶಿಕ್ಷಣವನ್ನು ಕೊಡದಿರುವದು ಒಂದು ದೊಡ್ಡ ದೋಷವೇ ಆಗಿರುವದು, ಎಂದು ಆ ಕಮಿಶನ್ನದವರು ದೋಷವನ್ನು ತೆಗೆದಿರುವರು. ಧಾರ್ಮಿಕ ಶಿಕ್ಷಣವಿಲ್ಲದಿದ್ದರೆ ಬರೀ ಇತರ ಶಿಕ್ಷಣದಿಂದ ಏನೂ ಪ್ರಯೋಜನವಾಗಲಾರದೆಂದು ನನ್ನ ಅಭಿ

ಸಾಯವಿರುವದು. ಈ ವಿಶ್ವವಿದ್ಯಾಪೀಠದಲ್ಲಿ ಧಾರ್ಮಿಕಶಿಕ್ಷಣವನ್ನು ಕೊಡುವ ಅನುಕೂಲವನ್ನು ಮಾಡಿರುವದರಿಂದ ಹಿಂದು ಧರ್ಮದ ಉದಾತ್ತ ತತ್ವಗಳು, ಅದರ ಉಚ್ಚ ಪರಂಪರೆ, ಮತ್ತು ಆರ್ಯರ ಸಂಸ್ಕೃತಿ ಇವುಗಳನ್ನು ಸ್ಥಿರವಾಗಿಡಲಿಕ್ಕೆ ಸಹಾಯವಾಗಬಹುದು ಹಾಗು ಈ ಶಿಕ್ಷಣಕ್ಕೆ ಪಾಶ್ಚಾತ್ಯ ಶಾಸ್ತ್ರೀಯ ಶಿಕ್ಷಣವು ಜೋಡಾಗುವದರಿಂದ ಈ ವಿಶ್ವವಿದ್ಯಾಪೀಠದಲ್ಲಿ ಶಿಕ್ಷಣವನ್ನು ಪಡೆದು ಹೊರಬೀಳುವ ತರುಣರು ತಮ್ಮ ಮಾತೃಭೂಮಿಯ ಉನ್ನತಿಯ ಕಾರ್ಯಕ್ಕೆ ಸಹಾಯಮಾಡುವದಕ್ಕೆ ತಕ್ಕ ಯೋಗ್ಯತೆಯುಳ್ಳವರಾಗ ಬಹುದೆಂದು ನನಗೆ ತೋರುವದು.

ಹಿಂದು ವಿಶ್ವವಿದ್ಯಾಪೀಠದ ಸಂಘಟನೆಯ ಸಂಬಂಧದಿಂದ ಶಿಕ್ಷಣ ಖಾತೆಯೊಳಗಿನ ಸರಕಾರೀ ಮಂತ್ರಿಗಳಿಗೂ, ಹಿಂದು ವಿಶ್ವವಿದ್ಯಾಪೀಠದ ಸಂಘದವರಿಗೂ ಅನೇಕ ವಾದವಿವಾದಗಳು ನಡೆದು ಕೊನೆಗೆ ಸಂಸ್ಥೆಯ ಚಾಲಕರಿಗೆ ಸಾಧ್ಯವಿದ್ದ ಮಟ್ಟಿಗೂ ಸ್ವಾತಂತ್ರ್ಯವು ಕೊಡಲ್ಪಟ್ಟಿತು. "ಸರ್ ಜೀವ್ಸ ಮೆಸ್ಸನ್" ಎಂಬವರು ಮೊಟ್ಟಮೊದಲು ಈ ಸಂಸ್ಥೆಯನ್ನು ನೋಡಲಿಕ್ಕೆ ಬಂದಿದ್ದರು. ಅವರು ಆಗ ಸಹಾನುಭೂತಿಪೂರ್ವಕವಾಗಿ ಕೊಟ್ಟ ಉಪದೇಶಪರವಾದ ಅಭಿಪ್ರಾಯದ ಮೇರೆಗೆ ಈ ಸಂಸ್ಥೆಯ ಚಾಲಕರು ನಡೆಯಲಿಕ್ಕೆ ಏನೂ ಅಡ್ಡಿಯಿಲ್ಲವೆಂದು ನನಗೆ ತೋರುತ್ತದೆ. ವಿಶ್ವ ವಿದ್ಯಾಪೀಠದ ಕಲ್ಪನೆಯು ಹೊರಟಂದಿನಿಂದ ಅದಕ್ಕೆ ಇಂದಿನ ಸ್ವರೂಪವು ಬರುವವರೆಗೆ ನಾ. ಮದನಮೋಹನ ಮಾಲವೀಯ ಮತ್ತು ದರಭಂಗದ ಮಹಾರಾಜರು ಇವರು ಸ್ವಾರ್ಥವನ್ನು ತ್ಯಜಿಸಿ ಶ್ರಮಪಟ್ಟರು. ಹಿಂದೂ ಸಮಾಜದವರಾದರೂ ಅವರಿಗೆ ಒಳ್ಳೇ ಉತ್ತೇಜನದಿಂದ ಸಹಾಯಮಾಡಿದರು; ವಿಶೇಷವಾಗಿ, ಹಿಂದೂ ಅರಸುವ ತನಕ್ಕೆ ಸೇರಿದವರು ಈ ಕಾರ್ಯಕ್ಕೆ ಮಹತ್ವದ ಸಹಾಯಮಾಡಿದರು. ಇದರಿಂದ ಈ ಸಂಸ್ಥೆಯು ಅವರಿಗೆ ಅತ್ಯಂತ ಋಣಿಯಾಗಿರುವದು. ವಿಶ್ವವಿದ್ಯಾಪೀಠಕ್ಕೆ ಬೇಕಾಗಿರುವ ಎಲ್ಲ ಇಮಾರತುಗಳು ಸಿದ್ಧವಾಗಿ ಆವಶ್ಯವಿದ್ದ ಎಲ್ಲ ವ್ಯವಸ್ಥೆಯು ಸರಿಯಾಗಿ ಆಗಬೇಕಾದರೆ ಇನ್ನೂ ಬಹಳ ಧನವು ಬೇಕಾಗುವದು. ಅದರಿಂದ ಶಿಕ್ಷಣದ ಮಹತ್ವವನ್ನು ಅರಿತಂಥ ಹಿಂದೂ ಧನಿಕರು ತಮ್ಮ ಉದಾರಬುದ್ಧಿಯಿಂದ ಇದೇ ರೀತಿಯಾಗಿ ಮುಂದಾದರೂ ನಡೆಯುವರೆಂದು ನಾನು ನಂಬುತ್ತೇನೆ."

ಪ್ರಕೃತಿವಿಮರ್ಶೆ.

(ಜನವರಿ ತಿಂಗಳಿಂದ ಮುಂದೆಸಾಗಿದ್ದು)

ಸಮಶೀತೋಷ್ಣವಲಯಗಳಲ್ಲಿ ವಿಶೇಷವಾಗಿ ಬೆಳೆಯುವ ಓಕ್ ಸಮುದಾಯವು ೨೦೦೦ ವರ್ಷಗಳವರಿಗೂ ಬದುಕುವದುಂಟು. ಹೀಗೆ ಅನೇಕ ವರ್ಷಗಳು ಜೀವಿಸುವ ಮರಗಿಡಗಳನ್ನು ಬಹುವಾರ್ಷಿಕ ಸಸ್ಯಗಳೆಂದು ಕರೆಯುತ್ತೇವೆ. ಇವು ಸಾಧಾರಣವಾಗಿ ತಮ್ಮ ಜೀವಮಾನದಲ್ಲಿ ಕೆಲವು ವರ್ಷಗಳು ಕಳೆಯುವವರಿಗೂ ಪುಷ್ಪಗಳನ್ನು ಬಿಡುವದಿಲ್ಲ.

ನಾವು ಇಲ್ಲಿಯವರಿಗೂ ವಿಚಾರಮಾಡಿದ ಮರಗಿಡಗಳಲ್ಲಿ ಪುಷ್ಪಗಳಿಂದ ಬೀಜಗಳು ಸಿಕ್ಕುತ್ತವೆ. ಹೀಗೆಯೆ ಎಲ್ಲಾ ಪುಷ್ಪಿಸುವ ಗಿಡಗಳಲ್ಲಿ ಬೀಜಗಳು ದೊರೆಯುತ್ತವೆ ಎಂದು ಹೇಳಲಾಗುವದಿಲ್ಲ. ಅನೇಕ ಗಿಡಗಳ ಪುಷ್ಪಗಳಲ್ಲಿ ಎಲ್ಲಾ ಭಾಗಗಳಿದ್ದರೂ ಬೀಜಗಳಾಗುವದಿಲ್ಲ. ದಾಸನಾಳ, ಗುಲಾಬಿ ಮೊದಲಾದ ಗಿಡಗಳನ್ನು ಇದಕ್ಕೆ ನಿದರ್ಶನಗಳನ್ನಾಗಿ ಹೇಳಬಹುದು. ಕೆಲವು ಗಿಡಗಳು ತಮ್ಮ ಜೀವಮಾನದಲ್ಲಿ ಒಂದಾವರ್ತಿಯೂ, ಕೆಲವು ಅನೇಕಾವರ್ತಿಯೂ ಪುಷ್ಪಗಳನ್ನು ಬಿಡುತ್ತವೆ ಎಂದು ಹಿಂದೆ ಹೇಳಿರುತ್ತದೆ. ನಮ್ಮ ಸುತ್ತಲೂ ಇರುವ ಮರಗಿಡಗಳಲ್ಲಿ ಒಂದುಸಾರಿಯಾಗಲಿ ಅನೇಕಸಾರಿಯಾಗಲಿ ಪುಷ್ಪಿಸುವ ಸಸ್ಯಗಳೇ ಹೆಚ್ಚಾಗಿದ್ದರೂ, ತಮ್ಮ ಜೀವಮಾನದಲ್ಲಿ ಯಾವಾಗಲೂ ಪುಷ್ಪಗಳನ್ನೇ ಬಿಡದೇ ಇರುವ ಅನೇಕ ಸಸ್ಯಗಳಿರುತ್ತವೆ. ನೀರಿನ ಮೇಲೂ ತಿಲಿಗಳ ಮೇಲೂ ಬೆಳೆಯುವ ಹಸುರುಬಣ್ಣದ ಪಾಚಿ (ಹಾವಸೆ), ಮಳೆಯಾದಾಗ ಅಲ್ಲಲ್ಲಿ ಹೊರಡುವನಾಯಿಕೊಡೆ, ಶೀತ ದೇಶಗಳಲ್ಲಿ ವಿಶೇಷವಾಗಿ ಬೆಳೆಯುವ ಫರ್ನ್ ಮೊದಲಾದವು, ಈ ಗುಂಪಿಗೆ ಸೇರುತ್ತವೆ. ಈಗ ನಾವು ಒಟ್ಟು ಸಸ್ಯಗಳನ್ನು, ಪುಷ್ಪಿಸುವ ಸಸ್ಯಗಳೆಂತಲೂ ಪುಷ್ಪಿಸದೆ ಇರುವ ಸಸ್ಯಗಳೆಂತಲೂ, ಎರಡು ದೊಡ್ಡಪಂಗಡಗಳನ್ನಾಗಿ ವಿಭಾಗ ಮಾಡಬಹುದು.

ನಾವು ವಾಸಮಾಡುವ ಗ್ರಾಮದ ನೆರೆಯಲ್ಲೆಲ್ಲಾದರೂ ತಿರುಗಾಡಿ ನೋಡಿದರೆ, ಒಂದೊಂದು ಪ್ರದೇಶದಲ್ಲಿ ಒಂದು ಬಗೆಯಾದ ಗಿಡಗಳು ನೆಲೆಯಾಗಿರುವದು ನಮಗೆ ಗೋಚರವಾಗುವದು. ಅಂದರೆ, ಕೆಲವು ವಿಸ್ತಾರವಾದ ಬೈಲುಸ್ಥಳಗಳನ್ನು, ಕೆಲವು ಗಿಡಗಳು ಒತ್ತಾಗಿ ಬೆಳೆದು ಕತ್ತಲಾಗಿರತಕ್ಕ ಕಾಡುಗಳನ್ನು,

ಕೆಲವು ನದೀ-ಕೆರೆಗಳ ಪಾರ್ಶ್ವಗಳಲ್ಲಿರುವ ತೇವವಾದ ಮಣ್ಣನ್ನು, ಕೆಲವು ಗುಡ್ಡಗಳ ರುಕ್ಷಪ್ರದೇಶಗಳನ್ನು, ತಮ್ಮ ವಾಸಸ್ಥಾನಗಳನ್ನಾಗಿ ಮಾಡಿಕೊಂಡಿರುತ್ತವೆ. ಹೀಗೆ ಒಂದೊಂದು ಜಾತಿಯ ಗಿಡಗಳು ಒಂದು ನಿರ್ದಿಷ್ಟ ಪ್ರದೇಶವನ್ನೇ ಆರಿಸಿಕೊಳ್ಳುವದಕ್ಕೆ ಕಾರಣವೆನೆಂದು ವಿಚಾರಮಾಡಿದರೆ, ಅವುಗಳಿಗೆ ಬೇಕಾದ ಮಣ್ಣು, ಬೆಳಕು, ತೇವವು ಆ ಸ್ಥಳದಲ್ಲಿ ದೊರಕುವವೇ ಹೊರತು ಉಳಿದ ಸ್ಥಳಗಳಲ್ಲಿ ತಿಕ್ಕುವದಿಲ್ಲವೆಂದು ತಿಳಿಯಬರುವದು. ಗಿಡಗಳ ಈ ಸ್ವಭಾವದಿಂದಲೆ ಒಂದೊಂದು ಪ್ರದೇಶದಲ್ಲೂ ಅದಕ್ಕನುಗುಣವಾದ ಕೆಲವು ಜಾತಿಯ ಗಿಡಗಳು ವೃದ್ಧಿಯನ್ನು ಹೊಂದಿ, ಇತರ ಸಸ್ಯಗಳು ಅಲ್ಲಿ ಬೆಳೆಯುವದಿಲ್ಲ. ದೊಡ್ಡ ಪರ್ವತಗಳ ಎತ್ತರವಾದ ಪ್ರದೇಶಗಳಲ್ಲಿ ವಿಶೇಷವಾಗಿರುವ ಮರಗಿಡಗಳು ಮೈದಾನಗಳ ಕಾಡುಗಳಲ್ಲಿ ಕಾಣುವದಿಲ್ಲ. ಉಷ್ಣವಲಯಗಳಲ್ಲಿ ಅಧಿಕವಾಗಿ ಬೆಳೆಯುವ ತೆಂಗು, ಅಡಿಕೆ ಮೊದಲಾದವು ಸಮಶೀತೋಷ್ಣವಲಯದ ರಾಷ್ಟ್ರಗಳಲ್ಲಿ ನೆಲೆಯಾಗದೆ ಹೋಗುವದು, ಗಿಡಗಳ ಈ ಲಕ್ಷಣವನ್ನೆ ನಿದರ್ಶಿಸುವದು.

ನಾವಿರುವ ಪ್ರಾಂತ್ಯವನ್ನು ಬಿಟ್ಟು ಉತ್ತರ ದಿಕ್ಕಿಗೆ ಪ್ರಯಾಣಮಾಡಿದರೆ, ನಾವು ಉತ್ತರಕ್ಕೆ ಹೋದ ಹಾಗೆಲ್ಲ ನಮ್ಮ ದೃಷ್ಟಿಗೆ ಬೀಳುವ ಮರಗಿಡಗಳಲ್ಲಿ ವ್ಯತ್ಯಾಸಗಳಿರುತ್ತವೆ. ಕಾಶ್ಮೀರಸಂಸ್ಥಾನದಲ್ಲಿರುವ ಮರಗಳಿಗೂ ನಮ್ಮ ಪ್ರಾಂತ್ಯಗಳಲ್ಲಿ ಹರಡಿಕೊಂಡಿರುವ ಮರಗಳಿಗೂ ಏನೇನು ಸಂಬಂಧವು ತೋರುವದಿಲ್ಲ. ಬೇರೆ ಬೇರೆ ಪ್ರಾಂತ್ಯಗಳ ವಾಯುಗುಣವು ವಿವಿಧ ತೆರನಾಗಿರುವದೇ ಇಂತಹ ವ್ಯತ್ಯಾಸಕ್ಕೆ ಕಾರಣವು. ಹೀಗೆಯೇ ಯಾವನಾದರೂ ಒಬ್ಬ ಪ್ರವಾಸಿಯು ಹಿಮವತ್ಪರ್ವತದ ಬುಡವನ್ನು ಸೇರಿ ಅಲ್ಲಿಂದ ಪರ್ವತದ ಒಂದು ತಿಖರಕ್ಕೆ ಹತ್ತುವನಾದರೆ, ಬುಡದಿಂದ ತುದಿಯವರಿಗೆ ಬಗೆಬಗೆಯ ವೃಕ್ಷದ ಸಮುದಾಯಗಳು ಅವನಿಗೆ ಗೋಚರವಾಗುವವು. ಆ ಮಹಾಪರ್ವತದ ಬುಡದಲ್ಲಿ ತಾಳೆಯ ಮತ್ತು ಬಾಳೆಯ ಗಿಡಗಳ ಸಾಲುಗಳು; ಸ್ವಲ್ಪ ಎತ್ತರದಲ್ಲಿ ಬಿದುರುಗಳು, ಅತ್ತಿಯ ಮರದ ಕುಟುಂಬಕ್ಕೆ ಸೇರಿದ ಮರಗಳು, ಫರನ್ ಮೊದಲಾದವುಗಳು; ಇವುಗಳ ನಂತರ ನೇರಳೆ ಮತ್ತು ಡಾಲ್ಫೀನಿಯ ಕುಟುಂಬದವುಗಳು; ಇನ್ನೂ ಎತ್ತರದಲ್ಲಿ ದೇವದಾರೀಯ

ಗಳು; ಇವುಗಳಿಗೂ ಮೇಲೆ, ಪುಷ್ಪಿಸುವ ಸಸ್ಯಗಳು ನಿಂತುಹೋಗಿ ಪುಷ್ಪಿಸದೇ ಇರುವ ಅನೇಕ ಜಾತಿಯ ಗಿಡಗಳು ಅವನಿಗೆ ಕಾಣುವವು. ವಿಷುವದ್ರೇಖೆಯಿಂದ ಉತ್ತರಕ್ಕಾಗಲಿ ದಕ್ಷಿಣಕ್ಕಾಗಲಿ ಹೋದ ಹಾಗೆ ಮರಗಿಡಗಳಲ್ಲಿ ಯಾವ ವ್ಯತ್ಯಾಸಗಳಿರುವವೋ, ಅದೇ ವ್ಯತ್ಯಾಸಗಳು ಒಂದು ಎತ್ತರವಾದ ಪರ್ವತದ ಮೇಲಕ್ಕೆ ಹೋದ ಹಾಗೆಲ್ಲ ತೋರಿಬರುವವು.

ಯಾವದೊಂದು ದೇಶದಲ್ಲಿ ಬೆಳೆಯುವ ಸಸ್ಯಸಮುದಾಯಗಳು ಆ ದೇಶದ ಪ್ರಾಕೃತಿಕಸ್ಥಿತಿಗಳಿಗೆ ತಕ್ಕ ಹಾಗೆ ಇರುತ್ತವೆ. ಇವೆರಡಕ್ಕೂ ಇರುವ ನಿತ್ಯ ಸಂಬಂಧದಿಂದ, ಯಾವದಾದರೂ ಒಂದು ಪ್ರದೇಶದ ಹವೆಯ ಶೀತೋಷ್ಣ, ಭೂಗುಣಗಳು ನಮಗೆ ತಿಳಿದರೆ, ಅಲ್ಲಿ ಶಿಕ್ಕ ಬಹುದಾದ ಮರಗಿಡಗಳ ಪಟ್ಟಿಯನ್ನು ತಯಾರ್ಮಾಡಬಹುದು. ಹಾಗೆಯೆ ನಾವು ಒಂದು ಸ್ಥಳಕ್ಕೆ ಬಂದು ಅಲ್ಲಿ ಬೆಳೆಯುವ ಸಸ್ಯಗಳನ್ನು ನಿರೀಕ್ಷಿಸುವದರಿಂದ, ಆ ಸ್ಥಳದ ಮಣ್ಣು ಮತ್ತು ಇತರ ಸ್ವಭಾವಗಳನ್ನು ಊಹಿಸಬಹುದು.

ಒಂದು ಗಿಡವು ಅನೇಕ ಪ್ರದೇಶಗಳಲ್ಲಿ ಬೆಳೆದರೂ, ಅದು ಎಲ್ಲಾ ಕಡೆಗಳಲ್ಲೂ ಒಂದೆಸವನಾದ ಬೆಳೆಯನ್ನು ತೋರಿಸುವದಿಲ್ಲ. ಒಂದು ಸಸ್ಯವು ಉತ್ತಮವಾದ ಬೆಳೆಯನ್ನು ಹೊಂದಬೇಕಾದರೆ, ಅದಕ್ಕೆ ಹವೆಯಿಂದಲೂ ಭೂಮಿಯಿಂದ ದೊರೆಯುವ ಅಹಾರ ವಸ್ತುಗಳ ಜೊತೆಗೆ ಶೀತೋಷ್ಣಗಳ ಸರಿಯಾದ ಪ್ರಮಾಣಗಳು ಅವಶ್ಯಕ.

ಇವು ಯಾವಾಗಲೂ ಒಂದೇಸಮವಾಗಿರುವದಿಲ್ಲ. ಒಂದು ಪ್ರದೇಶದಲ್ಲಿ ಒಂದು ವರ್ಷ ಮಳೆಯು ಹೆಚ್ಚಾಗಿಯೂ, ಮತ್ತೊಂದು ವರ್ಷ ಕಡಿಮೆಯಾಗಿಯೂ ಇರುತ್ತದೆ. ಕಾಲಸ್ಥಿತಿಯ ವ್ಯತ್ಯಾಸಗಳಿಂದ ಗಿಡಗಳಲ್ಲಿ ಒಂದು ವರ್ಷದ ಬೆಳೆಗೂ ಮತ್ತೊಂದು ವರ್ಷದ ಬೆಳೆಗೂ ಹೆಚ್ಚುಕಡಿಮೆಯುಂಟಾಗುವದು. ಒಂದು ವರ್ಷ ಕೆಲವು ಜಾತಿಗಳ ಸಸ್ಯಗಳು ಉತ್ತಮ ಸ್ಥಿತಿಯನ್ನು ಹೊಂದಿ ಮತ್ತೊಂದು ವರ್ಷ ಮಧ್ಯಮ ಅಥವಾ ಕನಿಷ್ಠಾವಸ್ಥೆಯಲ್ಲಿರುವದು, ಭತ್ತ, ಜೋಳ, ಗೋದಿ, ಮೊದಲಾದ ಧಾನ್ಯಗಳ ಬೆಳೆಯಲ್ಲಿ ನಮಗೆ ಗೋಚರವಾಗುವದು.

ಗಿಡಗಳ ಸ್ವಭಾವದಲ್ಲಿ ಮತ್ತೊಂದು ಲಕ್ಷಣವು ನಿರೀಕ್ಷಿಸುವವನ ಗಮನಕ್ಕೆ ಬರುವದು. ಜಂತುವರ್ಗಕ್ಕೆ ಸೇರಿದ ಪ್ರಾಣಿಗಳಲ್ಲಿ ಕೆಲವು

ಂಹ, ಹುಲಿ ಮೊದಲಾದವುಗಳ ಹಾಗೆ ಒಂಟೊಂಟಿಯಾಗಿಯೂ, ೀಲವು ಆನೆ, ಚಿಗರೆ (ಜಿಂಕೆ), ತೋಳ ಮೊದಲಾದವುಗಳ ಹಾಗೆ ುಂದೆಯಾಗಿಯೂ ಕಾಡುಗಳಲ್ಲಿ ವಾಸಮಾಡುತ್ತವಪ್ಪೆ. ಇದೇ ರೀತಿ ುಲ್ಲಿ ಸಸ್ಯಗಳಲ್ಲಿಯೂ, ಕೆಲವು ಜಾತಿಗಳ ಸಸ್ಯಗಳು ಇಲ್ಲೊಂದು ೀಲ್ಲೊಂದು ಬೆಳೆಯುತ್ತಾ, ಇತರ ಜಾತಿಗಳೊಡನೆ ಸೇರಿಕೊಂಡಹಾಗಿರು ತ್ತವೆ; ಕೆಲವು ಜಾತಿಯ ಸಸ್ಯಗಳು ಗುಂಪುಗುಂಪಾಗಿ ಬೆಳೆಯುತ್ತಾ ಂದು ಪ್ರದೇಶವನ್ನು ಪೂರ್ತಿಯಾಗಿ ಆಕ್ರಮಿಸಿಕೊಂಡಹಾಗೆ ಕಾಣು ತ್ತವೆ. ಒತ್ತಾಗಿ ಸಮುದಾಯಗಳಾಗಿ ಬೆಳೆಯುವ ಗಿಡಗಳಿಗೆ ನಿದರ್ಶ ವಾಗಿ, ಭೂಮಿಗೆ ಅಲಂಕಾರಕ್ಕಾಗಿ ಏರ್ಪಟ್ಟಿದೆಯೊ ಎಂಬಂತೆ ಇರುವ ುಸ್ತಾರವಾದ ಹಸುರು ಹುಲ್ಲಿನ ವೈದಾನಗಳನ್ನು ಹೇಳಬಹುದು. ಕಾಡು ುಳಲ್ಲಿ ಗುಂಪುಗುಂಪಾಗಿ ಬೆಳೆಯುವ ಗಿಡಗಳಲ್ಲಿ ಬಿದುರು, ಜಾಲಿ (ಗೊ ುಳಿ) ಮೊದಲಾದವು ಸೇರುತ್ತವೆ.

ಒಂದು ಗಿಡದ ಪೂರ್ಣ ಸ್ವಭಾವವನ್ನು ನಿರೀಕ್ಷಿಸುವಾಗ ನಾವು ಿಮನಿಸಬೇಕಾದ ಅಂಶಗಳು ಯಾವವೆಂದರೆ:—

(1) ಅದು ಬೆಳೆಯುವ ಪ್ರದೇಶದ ಪ್ರಾಕೃತಿಕ ಲಕ್ಷಣಗಳು.
(2) ಅದು ಒಂಟಿಯಾಗಿ ಅಥವಾ ಸಮುದಾಯದಲ್ಲಿ ಬೆಳೆಯು ವದು.
(3) ಅದರ ಬೆಳೆಯ ಸ್ಥಿತಿ (ಉತ್ತಮ. ಮಧ್ಯಮ. ಅಥವಾ ಅಧಮ.)
(4) ಅದರ ಜೀವಮಾನಕಾಲ.
(5) ಅದರ ಕಾಂಡದ ಲಕ್ಷಣ.
(6) ಅದರ ಬೇರಿನ ಸ್ವರೂಪ (ಸಾಧ್ಯವಾದಷ್ಟು ಮಟ್ಟಿಗೆ.)
(7) ಅದರ ಎಲೆಗಳ ಭಾಗಗಳು ಮತ್ತು ಜೋಡಣೆಯ ಕ್ರಮ.
(8) ಅದರ ಪುಷ್ಪಗಳ ವಿಚಾರ, (ಫಲ ಮತ್ತು ಬೀಜಗಳು ಸಹ)

ಮನುಷ್ಯರು ಯಾವದಾದರೂ ಒಂದು ಗಿಡದ ಪ್ರಯೋಜನಗ ುನ್ನು ತಿಳಿದ ನಂತರ ಆ ಗಿಡವನ್ನು ವಿಶೇಷವಾಗಿ ಬೆಳೆಸಲು ಪ್ರಯತ್ನ ುಡುವರಷ್ಟೆ. ಅವರು ಆ ಗಿಡದ ಸಹಜವಾದ ಸನ್ನಿವೇಶಗಳಿಂದ ುದನ್ನು ಇತರಸ್ಥಳಗಳಿಗೆ ತೆಗೆದುಕೊಂಡುಹೋಗುವಾಗ, ಅದಕ್ಕೆ

ಹೊಸಸನ್ನಿವೇಶಗಳಲ್ಲಿರುವ ಕೊರತೆಗಳನ್ನು ಸರಿಪಡಿಸಿ, ಅದನ್ನು ನಿಲ್ಲಿ
ಸುವದಕ್ಕೆ ಸಾಹಸಗಳನ್ನು ನಡಿಸುವರು. ಇದಲ್ಲದೆ ಮನುಷ್ಯರು, ತಾವ
ಹೋಗುವ ಹೊಸ ರಾಜ್ಯಗಳಿಗೂ, ತಮ್ಮ ದೇಶದ ಸಸ್ಯಗಳನ್ನು, ಹಾಗೆಯೆ
ಇತರ ದೇಶಗಳ ಸಸ್ಯಗಳನ್ನು, ತೆಗೆದುಕೊಂಡು ಹೋಗಿ, ಅವುಗಳನ್ನು
ಅಲ್ಲಿ ನೆಟಿಸಲು ಪ್ರಯತ್ನಮಾಡುವರು. ಹೀಗೆ ಗಿಡಗಳು ವಿವಿಧ
ರಾಷ್ಟ್ರಗಳಲ್ಲಿ ನೆಲೆಯಾಗುವದಕ್ಕೆ, ಮನುಷ್ಯನೇ ಮುಖ್ಯಕಾರಣನಾಗಿ
ರುವನು. ಈ ಕ್ರಮದಲ್ಲಿ ನಮ್ಮದೇಶಕ್ಕೆ ಅನೇಕ ಹೊಸಗಿಡಗಳು
ಬಂದು ಇಲ್ಲಿ ಚನ್ನಾಗಿ ಬೆಳೆಯುತ್ತಿವೆ. (ಕಾಫಿ, ಹೊಗೆಯಸೊಪ್ಪು,
ಬಟಾಟಿ, ಮೆಣಸು), ಮನುಷ್ಯನೇ ವಿಸ್ತಾರವಾದ ಕಾಡುಗಳನ್ನು
ಕಡಿದು, ದವಸಧಾನ್ಯಗಳನ್ನು, ಇತರ ಉಪಯೋಗಕರವಾದ ಸಸ್ಯಾದಿಗ
ಳನ್ನು ಬೆಳೆಯಿಸತಕ್ಕ ಗದ್ದೆಗಳನ್ನು ಮಾಡಿದವನು. ಅವನೇ ಜವುಗು
ಭೂಮಿಗಳ ನೀರು ಬಸಿದು ಹೋಗುವಂತೆ ಮಾಡಿ, ಮರುಭೂಮಿಗಳ
ಮೇಲೆ ನೀರು ಹಾಯಿಸಿ, ಫಲವತ್ತಾದ ಜಮೀನುಗಳನ್ನು ಸ್ಥಾಪಿಸಿದ
ವನು.

ನಾಲ್ಕನೇ ಅಧ್ಯಾಯ.

ಬೇರುಗಳು.

[ಸಿದ್ಧಪಡಿಸಿಕೊಳ್ಳಬೇಕಾದವು: — ಹಿಂದಿನ ಅಧ್ಯಾಯದ ಪಾಠ
ವನ್ನು ಪ್ರಾರಂಭಿಸುವಾಗ ಬೆಳೆಸಲ್ಪಟ್ಟ ಅವರೆ ಸಸ್ಯಗಳು ಈಗ ಸ್ವಲ್ಪ
ದೊಡ್ಡವಾಗಿರುವವು. ಇವುಗಳ ಜೊತೆಗೆ ಸಾಸಿವೆ, ಬಟಾಣಿ, ಮೂಲಂಗಿ,
ಗೋಧಿ, ಜೋಳ ಮೊದಲಾದ ಸಸ್ಯಗಳನ್ನು ಬೆಳೆಸಿರಬೇಕು. ಪಾಠ
ವನ್ನು ನಡಿಸುವದಕ್ಕೆ ಹಿಂದಿನದಿವಸ ಕೆಲವು ಅವರೆಬೀಜಗಳನ್ನು
ನೀರಿನಲ್ಲಿ ನೆನೆಸಿ, ಅವುಗಳಿಂದ ಮೊಳೆ ಬರುವ ಹಾಗೆ ಇಟ್ಟಿರಬೇಕು
ಪಾಠ ಕಾಲದಲ್ಲಿ ನಾನಾಜಾತಿಯ ಗಿಡಗಳ ಬೇರುಗಳನ್ನು ಪರೀಕ್ಷಿಸಲು
ನಮ್ಮ ಸುತ್ತಲೂ ಬೆಳೆಯುವ ಕೆಲವು ಕಾಡು ಸಸ್ಯಗಳನ್ನು ಬೇರುಸಹಿತ
ತಂದುಕೊಳ್ಳಬೇಕು. ಮುಖ್ಯವಾಗಿ ಔಡಿಲ, ಮದಗುಣಿಕೆ, ಗರಿಕೆ
ಹುಲ್ಲು, ಇವು ಇರಬೇಕು. ಮೇಲೆ ಹೇಳಿದ ಎಲ್ಲಾಸಸ್ಯಗಳ ಬೇರುಗ
ಳನ್ನು ಲಕ್ಷಿಸಿದ ನಂತರ ಆಲ, ಹುಣಿಸೆ, ತೆಂಗು, ಈಚಲು ಮೊದಲಾದ

ಮರಗಳ ಬೇರುಗಳ ಲಕ್ಷಣಗಳನ್ನು ತಿಳಿಯಲು ಪ್ರಯತ್ನಮಾಡಬಹುದು.]

ಒಂದು ಸಸ್ಯವು ಎಷ್ಟು ಚಿಕ್ಕದಾದರೂ ಅದರಲ್ಲಿ ಕಾಂಡ ಮತ್ತು ಬೇರೆಂಬ ಎರಡು ಭಾಗಗಳಿರುತ್ತವೆಯೆಂದು ಹಿಂದಿನ ಅಧ್ಯಾಯದಿಂದ ತಿಳಿದಿರುತ್ತದೆ. ಗಿಡಗಳಲ್ಲಿ ಭೂಮಿಯೊಳಕ್ಕೆನುಗ್ಗಿ, ಕವಲೊಡೆದು ಬೆಳೆಯತಕ್ಕ ಭಾಗವು ಬೇರೆಂದು ತಿಳಿದುಕೊಂಡವಪ್ಪೆ. ಬೇರುಗಳ ರಚನೆ, ಅವುಗಳಿಂದ ಗಿಡಗಳಿಗಾಗುವ ಪ್ರಯೋಜನಗಳನ್ನು ವಿಚಾರಮಾಡುವದಕ್ಕೆ ಮೊದಲು ಒಂದು ಗಿಡದಲ್ಲಿ ಬೇರಿಗೂ ಕಾಂಡಕ್ಕೂ ಇರುವ ವ್ಯತ್ಯಾಸಗಳನ್ನು ಸ್ಪಷ್ಟವಾಗಿ ತಿಳಿದುಕೊಳ್ಳಬೇಕು. ನಾವು ಬೆಳೆಸಿರುವ ಅವರೆ ಗಿಡವನ್ನು ನಿರೀಕ್ಷಿಸಿದರೆ, ಗಿಡಗಳ ಈ ಎರಡು ಅಂಗಗಳಿಗೂ ಪರಸ್ಪರ ವಿರುವ ವ್ಯತ್ಯಾಸಗಳು ಗೋಚರವಾಗುವವು. ಸಾಮಾನ್ಯವಾಗಿ ಗಿಡಗಳಲ್ಲಿ, ಬೇರುಗಳು ಭೂಮಿಯೊಳಗೂ ಕಾಂಡಗಳೂ ಭೂಮಿಯ ಹೊರಗೂ ಬೆಳೆದರೂ, ಈ ವ್ಯತ್ಯಾಸವೇ ಮುಖ್ಯವಾದದ್ದೆಂದು ತಿಳಿಯಬಾರದು; ಇತರ ನಿಷ್ಕೃಷ್ಟವಾದ ವ್ಯತ್ಯಾಸಗಳನ್ನು ಲಕ್ಷಿಸಬೇಕಾದದ್ದು ಆವಶ್ಯಕ. ಕಾಂಡದಲ್ಲಿ ಕವಲುಗಳು ಹೊರಡುವಂತೆಯೆ ಬೇರುಗಳಲ್ಲಿಯೂ ಕವಲುಗಳು ಬರುವವು. ಆದರೆ ಕಾಂಡದಲ್ಲೂ ಅದರ ಶಾಖೆಗಳಲ್ಲೂ, ಎಲೆಗಳೂ, ಮೊಗ್ಗೆಗಳು ಬರುತ್ತವೆ. ಇವು ಬೇರುಗಳಲ್ಲಿ ಹುಟ್ಟುವದಿಲ್ಲ. ಇವು ಕಾಂಡದಲ್ಲಿ ಮಾತ್ರವೆ ಇರುವವು. ಒಂದು ಗಿಡದಲ್ಲಿ ಭೂಮಿಯೊಳಗೆ ಬೆಳೆಯುವ ಭಾಗದಲ್ಲಿ ಎಲೆಗಳಾಗಲಿ ಮೊಗ್ಗೆಗಳಾಗಲಿ ಕಂಡು ಬಂದರೆ, ಅದನ್ನು ಬೇರೆಂದು ಎಣಿಸಲಾಗುವದಿಲ್ಲ. ಇವುಗಳನ್ನು ಹೊಂದಿರತಕ್ಕ ಗುಣವು ಕಾಂಡಕ್ಕೆ ಶೇರಿದ್ದು. ಎಲೆಗಳೂ ಮೊಗ್ಗೆಗಳೂ ಇಲ್ಲದೆ, ಶಾಖೆಗಳು ಮಾತ್ರ ಇರುವದೆ ಬೇರುಗಳ ಮುಖ್ಯ ಗುಣವೆಂದು ಹೇಳಬಹುದು. ಬೇರುಗಳು ಭೂಮಿಯೊಳಗೆ ನುಗ್ಗಿ ಬೆಳೆದರೂ, ಅಥವಾ ಭೂಮಿಯ ಹೊರಗೆ ಬೆಳೆದರೂ, ಬೇರುಗಳಲ್ಲಿ ಎಲೆಗಳಾಗಲಿ ಮೊಗ್ಗೆಗಳಾಗಲಿ ಇರುವದಿಲ್ಲ. ಬೇರುಗಳು ಭೂಮಿಯ ಹೊರಗೆ ಇದ್ದರೂ ಅಥವಾ ಭೂಮಿಯೊಳಗೆ ಇದ್ದರೂ ಅವು ಅಧೋಮುಖವಾಗಿ ಬೆಳೆಯುವವು. ಹಾಗೆಯೆ ಕಾಂಡದ ಭಾಗಗಳು ಭೂಮಿಯ ಹೊರಗೆ ಇದ್ದರೂ ಅಥವಾ ಒಳಗೆ ಇದ್ದರೂ ಊರ್ಧ್ವಮುಖವಾಗಿಯೇ ಬೆಳೆಯುವವು. ಇದಕ್ಕೆ

ಕಾರಣವೆನೆಂದು ವಿಚಾರಮಾಡಿದರೆ, ಕಾಂಡವು ಬೆಳೆಯುವದಕ್ಕೆ ಹವೆ ಬೆಳಕು ಅವಶ್ಯಕವೆಂದು ಕಂಡುಬರುವದು. ಬೇರು ಇವೆರಡನ್ನು ಬಿಟ್ಟು ಭೂಮಿಯೊಳಗೆ ಶಿಕ್ಕುವ ತೇವವನ್ನು ಹುಡಿಕಿಕೊಂಡು ಅಧೋಮುಖವಾಗಿ ಬೆಳೆಯುವದು. ಭೂಮಿಯ ಹೊರಗೆ ಬೆಳೆಯತಕ್ಕ ಬೇರುಗಳ ಕೊನೆಯ ಭಾಗಗಳಲ್ಲಿ ಒಂದು ಬಗೆಯಾದ ಮುಸುಕು ಅಥವಾ ಟೊಪ್ಪಿಗೆ ಇರುವದು. ಇದನ್ನು ಆಲದ ಮರಗಳಲ್ಲಿ ನೇತಾಡುವ ಬೇರುಗಳಲ್ಲಿ ನಾವು ನೋಡಬಹುದು. ಇಂತಹ ಮುಸುಕು ಭೂಮಿಯೊಳಗೆ ಇರುವ ಬೇರುಗಳ ಕೊನೆಗಳಲ್ಲೂ ಇರುವದು; ಆದರೆ ನಾವು ಸಸ್ಯವನ್ನು ಭೂಮಿಯಿಂದ ಕೀಳುವಾಗ ಅದು ಭೂಮಿಯಲ್ಲಿಯೇ ಶಿಕ್ಕಿಕೊಳ್ಳುವದು.

ನಾವು ಒಂದು ಗಿಡದ ಕಾಂಡಕ್ಕೂ ಬೇರಿಗೂ ಇರುವ ವ್ಯತ್ಯಾಸಗಳನ್ನು ಸಂಕ್ಷೇಪವಾಗಿ ಹೇಳಬೇಕಾದರೆ:—

ಕಾಂಡ.	ಬೇರು.
1. ಕಾಂಡದಲ್ಲಿ ಶಾಖೆಗಳು ಬರುತ್ತವೆ,	1. ಬೇರಿನಲ್ಲೂ ಶಾಖೆಗಳು ಬರುತ್ತವೆ.
2. ಇದರಲ್ಲಿ ಎಲೆಗಳು, ಮೊಗ್ಗೆಗಳು ಬರುವವು.	2. ಇದರಲ್ಲಿ ಎಲೆಗಳಾಗಲಿ, ಮೊಗ್ಗೆಗಳಾಗಲಿ ಬರುವದಿಲ್ಲ.
3. ಇದು ಊರ್ಧ್ವಮುಖವಾಗಿ ಬೆಳೆಯುವದು.	3. ಇದು ಅಧೋಮುಖವಾಗಿ ಬೆಳೆಯುವದು
4. ಕಾಂಡದ ಕೊನೆ ಭಾಗಗಳಲ್ಲಿ ಬೇರುಗಳಲ್ಲಿರು ಹಾಗೆ ಮುಸುಕು ಇರುವದಿಲ್ಲ.	4. ಬೇರುಗಳ ಕೊನೆ ಭಾಗಗಳಲ್ಲಿ ಒಂದು ಬಗೆಯಾದ ಮುಸುಕು (ಟೊಪ್ಪಿಗೆ) ಇರುವದು.

ನಾವು ಯಾವದಾದರೂ ಒಂದು ಸಸ್ಯವನ್ನು ಬೇರು ಸಹಿತ ಕೀಳುವಾಗ, ಸ್ವಲ್ಪ ಶಕ್ತಿಯನ್ನಾದರೂ ಉಪಯೋಗಿಸಬೇಕಾದದ್ದು ಅವಶ್ಯಕ. ಸಸ್ಯವು ದೊಡ್ಡದಾದಷ್ಟು ಹೆಚ್ಚು ಶಕ್ತಿಯು ಬೇಕಾಗುವದು. ಇದಕ್ಕೆ ಕಾರಣವೇನೆಂದರೆ:— ಸಸ್ಯದ ಬೇರು ಭೂಮಿಯೊಳಗೆ ಆಳವಾಗಿಯೂ ನಾಲ್ಕು ಕಡೆಗಳಲ್ಲೂ ಹರಡಿಕೊಂಡಿದ್ದಾಗಿಯೂ ಇರುವದು. ಹೀಗೆ ಭೂಮಿಯಲ್ಲ ಎಲ್ಲಾ ಕಡೆಗಳಲ್ಲೂ ಬೆಳೆಯುವದರಿಂದಲೆ ಅದು ಸಸ್ಯವನ್ನು ತನ್ನ ಸ್ಥಾನದಲ್ಲಿ ಸ್ಥಿರವಾಗಿ ನಿಲ್ಲಿಸುತ್ತದೆ. ಒಂದು ಗಿಡದ ಬೇರಿ

ನಗಾತ್ರವು ಅದರ ಕಾಂಡದ ಗಾತ್ರಕ್ಕೆ ತಕ್ಕ ಹಾಗೆ ಇರುತ್ತದೆ. ಅವರೆ ಸಾಸಿವೆ, ಬಟಾಣಿ ಮೊದಲಾದ ಸಣ್ಣ ಸಸ್ಯಗಳಲ್ಲಿ ಬೇರುಗಳು ತೆಳುವಾಗಿಯೂ, ಆಲ, ಹುಣಿಸೆ ಮೊದಲಾದ ಮರಗಳಲ್ಲಿ ಗಡುತರವಾಗಿಯೂ ಇರುವದನ್ನು ನಾವು ನೋಡುತ್ತೇವೆ. ಈ ಬೇರುಗಳ ಆಧಾರದಿಂದಲೆ ಎಂತಹ ಬಿರುಗಾಳಿ ಬೀಸಿದರೂ, ಗಿಡಗಳು ಅವುಗಳ ಸ್ಥಾನದಲ್ಲಿ ಭದ್ರವಾಗಿ ನಿಲ್ಲುತ್ತವೆ.

ನಾವು ಪರೀಕ್ಷೆಗಾಗಿ ಬೇರು ಸಹಿತ ಕಿತ್ತು ಅವರೆ ಗಿಡವು ಸ್ವಲ್ಪ ಹೊತ್ತಿಗೆ ಬಾಡಿ ಸುರುಟಿಕೊಳ್ಳುವದು. ಹೀಗೆ ಬಾಡಿ ಸುರುಟಿಕೊಂಡ ಗಿಡವನ್ನು ತೆಗೆದುಕೊಂಡು, ಅದರ ಬೇರನ್ನು ನೀರಿನಲ್ಲಿ ಅದ್ದಿ ಇಟ್ಟರೆ ಸ್ವಲ್ಪ ಹೊತ್ತಿಗೆ, ಈ ಗಿಡವು ಬಾಡಿದ ಸ್ಥಿತಿಯನ್ನು ಬಿಟ್ಟು, ಮೊದಲಿದ್ದ ಸ್ಥಿತಿಗೆ ಬರುವದು. ಇದರಿಂದ ನಾವು ತಿಳಿಯಬಹುದಾದುದೇನಂದರೆ, ಅವರೆ ಗಿಡವನ್ನು ಭೂಮಿಯಿಂದ ಕಿತ್ತು ಹಾಕಿದ ಮೇಲೆ ಅದರಲ್ಲಿದ್ದ ಎಲ್ಲಾ ಜಲಾಂಶವು ಹವೆಯಲ್ಲಿ ಆವಿ ರೂಪದಿಂದ ಸೇರಿಕೊಂಡಿತು. ಈ ನೀರು ಹೋದ ನಂತರ ಬೇರೆ ನೀರು ಬರದೆ ಇದ್ದದ್ದರಿಂದ ಗಿಡವು ಬಾಡಿ ಸುರುಟಿಕೊಳ್ಳಬೇಕಾಯಿತು. ನಾವು ಸಸ್ಯವನ್ನು ನೀರಿನಲ್ಲಿಡುವದರಿಂದ ಅದರಿಂದ ಆವಿಯಾಗಿ ಹೋಗುವ ನೀರಿಗೆ ಭರ್ತಿಯಾಗಿ ಬೇರೆ ನೀರು ಬರಲು ಅವಕಾಶವಾಯಿತು. ಇದರಿಂದ ಬೇರುಗಳಮೂಲಕ ಗಿಡಗಳಿಗೆ ಭೂಮಿಯೊಳಗಣ ನೀರು ಬರುತ್ತಿರುವದೆಂದು ಸ್ಪಷ್ಟವಾಗುವದು. ಬೇರುಗಳಿಂದ ಗಿಡಗಳಿಗೆ ಆಗುವ ಪ್ರಯೋಜನಗಳು ಯಾವವೆಂದರೆ:—

(1) ಅವುಗಳು ಗಿಡಗಳನ್ನು ತಮ್ಮ ಸ್ಥಾನಗಳಲ್ಲಿ ಭದ್ರವಾಗಿ ನಿಲ್ಲುವ ಹಾಗೆ ಮಾಡುತ್ತವೆ.

(2) ಗಿಡಗಳು ಬೇರುಗಳ ಮೂಲಕ ಭೂಮಿಯೊಳಗಣ ನೀರನ್ನು ಎಳೆದುಕೊಳ್ಳುತ್ತವೆ. ಈ ನೀರಿನಲ್ಲಿ ಗಿಡದ ಆಹಾರಕ್ಕೆ ಉಪಯೋಗವಾಗುವ ಲವಣಾದಿಗಳು ಕರಗಿ ಇರುತ್ತವೆ.

ಬೇರುಗಳ ರಚನೆಯು ಅವುಗಳ ಈ ಎರಡು ಕಾರ್ಯಗಳಿಗೂ ತಕ್ಕದ್ದಾಗಿಯೆ ಇರುವದೆಂದು ಮುಂದಿನ ಸಂಗತಿಗಳಿಂದ ತಿಳಿಯಬರುವದು.

ಪುರಂದರ ದಾಸರ ಚರಿತ್ರೆ.

(ಬರೆದು ಬಂದದ್ದು)

ಇತಿಹಾಸದಲ್ಲಿ ಹದಿನಾರನೇ ಶತಮಾನವು ಅನೇಕ ಕಾರಣಗಳಿಂದ ಮಹತ್ವವುಳ್ಳದ್ದಾಗಿರುತ್ತದೆ. ಅವುಗಳಲ್ಲಿ ಒಂದು ಕಾರಣವು ಯಾವ ದೆಂದರೆ, ಆ ಶತಮಾನದಲ್ಲಿ ಜನರ ಧಾರ್ಮಿಕ ಕಲ್ಪನೆಗಳಲ್ಲುಂಟಾದ ದೊಡ್ಡ ಕದಿಮೆಯು. ಯುರೋಪಖಂಡದಲ್ಲಿ ಧರ್ಮಸುಧಾರಕನೆಂದು ಹೆಸರಾದ ಮಾರ್ಟಿನ್ ಲ್ಯೂಥರನು ಆ ಕಾಲದಲ್ಲಿ ಪ್ರಚಲಿತವಾಗಿದ್ದಂಥ ಕ್ರಿಶ್ಚನ್‌ಧರ್ಮದ ರೋಮನ್ ಕ್ಯಾಥೊಲಿಕ್ ಪಂಥದ ಮಠಗಳಲ್ಲಿ ನಡೆ ಯುತ್ತಿದ್ದ ಅವ್ಯವಸ್ಥೆಗೂ, ಅತ್ಯಾಚಾರಗಳಿಗೂ ಬೇಸತ್ತು, ಅದರ ವಿರು ದ್ಧವಾಗಿ ಜನರಿಗೆ ಪರಮಾತ್ಮನ ನ್ಯಾಯಬುದ್ಧಿಯ ವಿಷಯದಲ್ಲಿಯೂ, ಸದಾಚರಣೆಯ ವಿಷಯದಲ್ಲಿಯೂ ಉಪದೇಶಿಸಿ, ಸಾವಿರಾರು ಅನು ಯಾಯಿಗಳನ್ನು ಮಾಡಿಕೊಂಡು, ಪ್ರೊಟೆಸ್ಟಂಟಪಂಥವೆಂಬ ಹೊಸ ಪಂಥವನ್ನು ಸ್ಥಾಪಿಸಿದ್ದು ಈ ಶತಕದಲ್ಲಿಯೇ; ತುರುಕರಿಂದ ಕಾನಸ್ತಾಂ ನೋಪಲದಿಂದ ಓಡಿಸಲ್ಪಟ್ಟ ಗ್ರೀಕ ಮತ್ತು ಲ್ಯಾಟಿನ್ ಪಂಡಿತರು ಶಿಷ್ಟಿಮ ಯುರೋಪದಲ್ಲೆಲ್ಲ ಪ್ರಸಾರಗೊಂಡು ತಮ್ಮ ಜ್ಞಾನದಿಂದ ಜನ ನ್ನು ಧರ್ಮದ ನಿಜವಾದ ಕಲ್ಪನೆಗಳ ಕಡೆಗೆ ಒಲಿಸಿದ್ದು ಇದೇ ಶತಕ ದಲ್ಲಿಯೇ; ಧರ್ಮಭಾಷೆಯಾದ ಲ್ಯಾಟಿನ್‌ದ ಮಹತ್ವವು ಕಡಿಮೆಯಾಗಿ ಯಾ ದೇಶಭಾಷೆಗಳು ಪ್ರಬಲಹೊಂದಹತ್ತಿದ್ದು ಇದೇ ಶತಕದಲ್ಲಿಯೇ. ಈ ಬದಲಾವಣೆಗಳು ಬರೇ ಯುರೋಪಖಂಡದಲ್ಲಿಯೇ ಆಗಹತ್ತಿದ್ದಿಲ್ಲ. ಭಂದುಸ್ತಾನದಲ್ಲಿಯೂ ನಿರರ್ಥಕವಾದ ಅಸಂಖ್ಯ ಧರ್ಮವಿಧಿಗಳಿಗೂ ಕಪಟಪಟುಗಳಾದ ಧರ್ಮಗುರುಗಳ ಪೀಡೆಗೂ ಅಸಹ್ಯಬಟ್ಟು ಶೀಖಧ ರ್ಮವನ್ನುಪದೇಶಿಸಿದ ನಾನಕ (೧೪೬೯-೧೫೩೯)ನು ಹೆಸರಾದದ್ದು ಇದೇ ಕಾಲಕ್ಕೇ. ಶುದ್ಧವಾದ ವೈಷ್ಣವಭಕ್ತಿಯನ್ನೂ ಸದಾಚರಣವನ್ನೂ ಜನ ರಲ್ಲಿ ಬಂದುಭಾವವನ್ನೂ ಮಂಜುಳವಾದ ಹಾಡುಗಳಿಂದ ಬಂಗಾಲದಲ್ಲಿ ಹಬ್ಬುಗೊಳಿಸಿದ ಚೈತನ್ಯ (೧೪೮೫-೧೫೩೩)ನು ಇದ್ದದ್ದೂ ಇದೇ ಸುಮಾರಿ ನೇ. ಕರ್ನಾಟಕದಲ್ಲಿ ತಮ್ಮ ಭಕ್ತಿಪ್ರಚುರವಾದ ಪದ್ಯಗಳಿಂದ ಅತಿ ಕಠಿಣ ಹೃದಯಿಗಳಾದ ಚಾರ್ವಾಕರ ಮನಸ್ಸುಗಳನ್ನೂ ಕರಗಿಸಿದಂಥ ಪುರಂದ

ರದಾಸರೂ ಇದೇ ಶತಮಾನದಲ್ಲಿ ಆಗಿ ಹೋದರು. ಇವರ ಚರಿತ್ರವೇ ಇಷ್ಟು ಪ್ರಸ್ತಾವನೆಯನ್ನು ಮಾಡಿದ್ದರ ಉದ್ದೇಶವೆಂದು ಚಾಣಾಕ್ಷ ವಾಚಕರು ಕಂಡು ಹಿಡಿದಿರಬಹುದು. ಇವರ ಅಲ್ಪ ಚರಿತ್ರವು ಪ್ರತಿಯೊಬ್ಬ ಕನ್ನಡಿಗನಿಗೆ ಮನೋರಂಜಕವಾಗದೆ ಇರದು.

ಪುರಂದರದಾಸರು ೧೪೮೦ ನೇ ವರುಷ ಅಹಮ್ಮದನಗರ ಜಿಲ್ಲೆಯೊಳಗಿನ ಸಾಸವಡ (ಪುರಂದರಗಡ) ವೆಂಬ ಗ್ರಾಮದಲ್ಲಿ ಹುಟ್ಟಿದರು. ಆ ಕಾಲಕ್ಕೆ ಕನ್ನಡಭಾಷೆಯು ಅಲ್ಲಿಯ ವರೆಗೆ ಹಬ್ಬಿತ್ತೆಂದು ಬೇರೆಯಾಗಿ ಹೇಳಬೇಕಾಗಿಲ್ಲ. ಇವರು ಆ ಊರಲ್ಲಿ ಸುಪ್ರಸಿದ್ಧರಾದ ಚಿನಿವಾಲರಿದ್ದರು. ಬಹುಶಃ ಎಲ್ಲ ಚಿನಿವಾಲರಂತೆ, ಇವರಾದರೂ ಅತಿಶಯ ಜೀನರಿದ್ದದರಿಂದ ಇವರ ಹೆಂಡತಿಯು ಇವರ ಜೀನತನವನ್ನು ಸಹಿಸಲಾರದೆ ತನ್ನ ಮೂಗಿನಲ್ಲಿಯ ನತ್ತನ್ನು ಭಿಕ್ಷೆಗೆ ಬಂದ ಒಬ್ಬ ಬ್ರಾಹ್ಮಣನಿಗೆ ದಾನವಿತ್ತಳು. ಆ ಬ್ರಾಹ್ಮಣನು ಅದೇ ನತ್ತನ್ನು ಬೆಲೆಗೆ ಮಾರಲಿಕ್ಕೆ ದಾಸರ ಕಡೆಗೆ ಹೋಗಲು, ಅವರಿಗೆ ಸಂಶಯ ಬಂದು, ಸಂಜೇ ಮುಂದೆ ಬೆಲೆಕೊಡುವೆನೆಂದು ಹೇಳಿ ಆ ಬ್ರಾಹ್ಮಣನನ್ನು ಕಳಿಸಿದರು ಮನೆಗೆ ಬಂದು ನೋಡಲಾಗಿ, ಹೆಂಡತಿಯ ಮೂಗಿನಲ್ಲಿ ನತ್ತು ಇದ್ದಿಲ್ಲ. ಆಕೆಯು ಹೇಗಾದರೂ ಇನ್ನು ಅಪಮಾನವಾಗುವದೆಂದು ನೆನೆಸಿ, ವಿಷತುಂಬಿದ ಬಟ್ಟಿಲವನ್ನು ಕುಡಿಯಲಿಕ್ಕೆ ಎತ್ತಲು ಅದರಲ್ಲಿ ಆಕೆಯ ನತ್ತು ಹೊಳೆಯುಹತ್ತಿತು. ಆಗ ಆಕೆಯು ದೇವರೆ ತನ್ನನ್ನು ಕಾಪಾಡಿದನೆಂದು ಹಾರೈಸಿ, ಅದನ್ನು ತಂದು ಗಂಡನಿಗೆ ಒಪ್ಪಿಸಿದಳು. ದಾಸರು ಅಂಗಡಿಗೆ ಹೋಗಲು, ಪೆಟ್ಟಿಗೆಯೊಳಗೆ ಬ್ರಾಹ್ಮಣನು ಕೊಟ್ಟ ನತ್ತು ಅಡಗಿ ಹೋಗಿತ್ತು. ಕೊನೆಗೆ ನಿಜವಾದ ಸಂಗತಿಯು ತಿಳಿಯಲಾಗಿ, ದೇವರೇ ತಮ್ಮ ದ್ರವ್ಯಲೋಭಕ್ಕೆ ಬೇಸತ್ತು ತಮ್ಮನ್ನು ಸಂಸಾರದ ಮೋಹದೊಳಗಿಂದ ಬಿಡುಗಡೆ ಮಾಡಲಿಕ್ಕೆ ಬಂದನೆಂದು ಆಲೋಚಿಸಿ, ಅವರು ಇದ್ದ ಆಸ್ತಿಯನ್ನೆಲ್ಲ ದಾನಮಾಡಿ, ವೈರಾಗ್ಯವನ್ನವಲಂಬಿಸಿದರು. ಆ ಮೇಲೆ ಊರೂರು ತಿರುಗುತ್ತ ಹೋಗಿ ಹಂಪಿಯ ವ್ಯಾಸರಾಯ ಮತದ ಸ್ವಾಮಿಗಳ ಶಿಷ್ಯರಾದರು. ಅಂದಿನಿಂದ ಮಧ್ವಮತವನ್ನು ಸ್ವೀಕರಿಸಿ (ಮೊದಲು ಇವರು ಸ್ಮಾರ್ತ ಬ್ರಾಹ್ಮಣರಿದ್ದರು) ಕೃಷ್ಣನ ಲೀಲೆಯನ್ನೂ, ದಾನಧರ್ಮದ ಪುಣ್ಯಫಲವನ್ನೂ

ಕೊಂಡಾಡಹತ್ತಿದರು. ವಿಷ್ಣುವಿನ ಭಕ್ತಿಯಲ್ಲಿ ಒಮ್ಮೆ ತಲ್ಲೀನರಾದರೆಂದರೆ, ಇವರಿಗೆ ಹೊರಗಿನ ವಸ್ತುಗಳ ಅರಿವೇ ಇರುತ್ತಿದ್ದಿಲ್ಲ; ಕೃಷ್ಣನ ಮಹಿಮೆಯನ್ನು ಹಾಡತೊಡಗಿದರೆ, ನಿದ್ದೆ ನೀರಡಿಕೆಗಳ ಪರಿವೆಯಿಲ್ಲದೆ ಅದನ್ನೇ ಮಾಡುತ್ತಿದ್ದರು. ಸಾಮಾನ್ಯ ಬ್ರಾಹ್ಮಣರಂತೆ, ಇವರು ಸಂಧ್ಯಾವಂದನಾದಿ ವಿಧಿಗಳನ್ನು ಎಂದೂ ನಿಯಮದಿಂದ ಪಾಲಿಸಲಿಲ್ಲ. ಇಷ್ಟೇ ಅಲ್ಲ, ನಿಜವಾದ ಭಕ್ತಿಯಿಲ್ಲದಿದ್ದರೆ, ಈ ಅಸಂಖ್ಯ ವಿಧಿಗಳು ನಿರರ್ಥಕವಾದವುಗಳೆಂದು ಅವರು ಸಾರಿ ಹೇಳುತ್ತಿದ್ದರು. ಮಾಧ್ವಮತವನ್ನೇ ಇವರು ಪ್ರತಿಪಾದಿಸಿದ್ದರೂ, ದೇವರ ದೃಷ್ಟಿಯಲ್ಲಿ ಎಲ್ಲ ಮತದವರೂ ಸಮಾನರೆಂದು ಇವರ ಹಾಡುಗಳಿಂದ ಧ್ವನಿತವಾಗುತ್ತದೆ. ಭಕ್ತಿಜ್ಞಾನಗಳ ಬಲದಿಂದ ಇವರ ಕೈಯಿಂದ ಅನೇಕ ಚಮತ್ಕಾರಗಳು ಘಟಿಸುತ್ತಿದ್ದವು.

ಆದರೆ ಇವರ ಶ್ರೇಷ್ಠತೆಯು ಈ ಚಮತ್ಕಾರಗಳಲ್ಲಿಯೇ ಇರದೆ, ಸುಲಲಿತವಾದ ಮನೋಹರ ಪದ್ಯಗಳಲ್ಲಿ ಕೂಸಿಗೆ ಸಹ ತಿಳಿಯುವ ಹಾಗೆ ದೊಡ್ಡ ದೊಡ್ಡ ನೀತಿತತ್ವಗಳನ್ನೂ ಸಂಸಾರದ ಮಾರ್ಮಿಕ ಸಂಗತಿಗಳನ್ನೂ ಬೋಧಿಸಿದರಿಂದಲೂ, ಅದರಿಂದ ಕನ್ನಡದಲ್ಲಿ ಪ್ರಭೂತವಾಗಿ ಭಕ್ತಿಪರವಾದ ವಾಙ್ಮಯವನ್ನುಂಟು ಮಾಡಿ ದುರ್ಮಾರ್ಗಿಗಳನ್ನು ಸಹ ಹಾದಿಗೆ ಹಚ್ಚಲೆಳಿಸಿದರಿಂದಲೂ, ಇವರು ಇಷ್ಟು ಹೆಸರುವಾಸಿಯಾಗಿದ್ದಾರೆ. ಇಂಥ ಮಹಾತ್ಮರು ಆಗಾಗ್ಗೆ ಹುಟ್ಟಿದ್ದರಿಂದಲೇ ನಮ್ಮಲ್ಲಿ ಈಗಿದ್ದಷ್ಟಾದರೂ ಸುಧಾರಣೆ, ಸದ್ಭಾವ, ಪಾವನತೆ ಮೊದಲಾದವುಗಳುಳಿದಿವೆ.

ನಾಮಸ್ಮರಣೆಯು ಭಕ್ತಿಯ ಸಾರವೆಂದು ಇವರ ಮತವಿತ್ತು. ನಾಮಸ್ಮರಣೆಯ ಮಹತ್ವವನ್ನೂ, ಅದೊಂದಿದ್ದರೆ ಬೇರೆ ವಿಧಿಗಳು ಹೇಗೆ ಅನವಶ್ಯಕವೆಂಬದನ್ನು ಇವರು ಅನೇಕ ಕಡೆಗೆ ಹೇಳಿದ್ದಾರೆ: —

ಕಾಮಿತ ಫಲವೀವ ನಾಮವೊಂದಿರಲಿಕ್ಕೆ।
ನೇಮ ಹೋಮ ಜಪತಪವ್ಯಾಕೆ? ॥

ಈ ಸಂದರ್ಭದಲ್ಲಿ ಇವರ ವಿಚಾರಗಳು ಸುಸ್ಪಷ್ಟವಿದ್ದ ಸಾಧುವರ್ಯನಾದ ಟಾಮಸ್ ಎ ಕೆಂಪಿಸನ್ನನ ವಿಚಾರಗಳನ್ನು ಹೋಲುತ್ತವೆ. ಅವನು ಹೇಳುವದೇನಂದರೆ * ನೀನು ಇಡೀ ಬಾಯಬಲವನ್ನೂ ತತ್ವಜ್ಞಾನಿಗಳ

* " If thou didst know the whole Bible by heart and the sayings of all the philosophers, what would all that profit thee without the love of God and without grace ? " —(of the Imitation of Christ)

ವಚನಗಳನ್ನು ಬಾಯಿಪಾಠ ಮಾಡಿದರೂ ದೇವರಲ್ಲಿ ಭಕ್ತಿಯು
ದೇವರ ಒಲುಮೆಯೂ ಇಲ್ಲದಿದ್ದರೆ, ಅವುಗಳಿಂದ ನಿನಗೆ ಏನುಫಲ?"

ಧರ್ಮದ ಬರೇ ಆಡಂಬರವನ್ನು ಕಂಡು ದಾಸರು ಈ ಪ್ರಕಾ
ಹೇಳುತ್ತಾರೆ.

ನಗೆಯು ಬರುತದೆ । ಎನಗೆ । ನಗೆಯು ಬರುತದೆ ॥ ಪಲ್ಲ ॥
ಜಗದೊಳಗಿನ ಮನುಜರೆಲ್ಲ । ಹಗರಣವ ಮಾಡುವದ ಕಂ
॥ ಅನುಪ
ಪರರ ವನಿತೆಯೊಲಿಮೆಗೊಲಿದು । ಹರುಷದಿಂದ ಅ
ನೆರೆದ
ಹರಿವ ನೀರಿನೊಳಗೆ ಮುಳುಗಿ । ಬೆರಳ ಎಣಿಸುವವರ ಕಂ
॥ ೧
ಪತಿಯ ಸೇವೆ ಬಿಟ್ಟುಪರ । ಸತಿಯ ಕೂಡೆ ಸರಸವಾಡಿ ॥
ಸತತ ಮೈಯ ತೊಳೆದು ಹಲವು । ವ್ರತವ ಮಾಡೋ ಸತಿ
ಕಂಡು ।'
ಕಾಮ ಕ್ರೋಧ ಮನದೊಳಿಟ್ಟು । ತಾನು ವಿಷದ ಪುಂಜನಾ
ಸ್ವಾಮಿ ಪುರಂದರ ವಿಠಲನ । ನಾಮ ನೆನೆವವರ ಕಂಡು ॥೩

ಲೌಕಿಕದ ಬಗ್ಗೆಯೂ ಅವರ ಅನುಭವವು ಒಳ್ಳೇ ಮಹತ್ವದ
ಗಿದೆ. ಸತಿಗೆ ಸ್ವತಂತ್ರವ ಕೊಡುವವರು ಮತಿಗೆಟ್ಟು ಬಾಯಬಿಡು
ರೆಂದೂ, ಆಕೆಯು ಗಂಡನನ್ನು ಕೊಂಡ ಕ್ರೋತಿಯಂತೆ ಕುಣಿಸುವಳೆಂದು
ದಾಸರು ಒಂದು ಕಡೆಗೆ ಹೇಳಿದ್ದಾರೆ. ಅವರ ಯಥಾರ್ಥವಾದ ಕಲಿಯ
ಗದ ಮಹಿಮೆಯ ವರ್ಣನವು ಅವರ ತೀಕ್ಷ್ಣಬುದ್ಧಿಗೂ ನಿರೀಕ್ಷಣ
ಶಕ್ತಿಗೂ ಸಾಕ್ಷಿಯಾಗಿದೆ.

ಇಂಥ ಮಹಾತ್ಮರ ಚರಿತ್ರೆಯೂ, ಪದಗಳ ಸಂಗ್ರಹವೂ ಇನ
ಕನ್ನಡಿಗರಿಗೆ ಪುಸ್ತಕರೂಪದಿಂದ ಸಿಕ್ಕಿಲ್ಲವೆಂಬದು ದುಃಖದ ಸಂಗ
ಯಾಗಿದೆ. ಆದರೆ ಈಗೀಗ ಆ ದಿಕ್ಕಿನಲ್ಲಿ ಅಲ್ಲಲ್ಲಿ ಪ್ರಯತ್ನಗಳು
ದಿವೆ. ತುಸು ವರುಷಗಳಲ್ಲಿಯೇ ಕನ್ನಡದಲ್ಲಿ ಅವರದೊಂದು ವಿಶ್ವ
ಯವಾದ ಚರಿತ್ರೆಯನ್ನೂ, ತಕ್ಕಷ್ಟು ಪದಗಳ ಸಂಗ್ರಹವನ್ನೂ ಕ
ಬಹುದು. ಆದರೆ ಆ ವರೆಗೆ ಉಪಲಬ್ಧವಾದ ಸಾಮಾಗ್ರಿಯ ಮೇಲೆ

ಾಸರ ಪದಗಳ ಮಹತ್ವವನ್ನೂ, ಅವರು ಹೇಳಿ ಹೋದ ಶುದ್ಧ ಭಕ್ತಿಯ
ರೂಪವನ್ನೂ ಅರಿತುಕೊಂಡರೆ, ಕನ್ನಡಿಗರು ಅವರ ಕೃತಜ್ಞತೆಯ
ಣದೊಳಗಿಂದ ಪಾರಾದಂತಾಗುವದು. D.

ರಾಣೇಬೆನ್ನೂರಲ್ಲಿ ನೆರೆದ ಶಿಕ್ಷಕ ಸಮ್ಮೇಲನದಲ್ಲಿ ಅಧ್ಯಕ್ಷರಾದ
ನಾಮದಾರ ರಾ. ಸಾ. ವ್ಹಿ. ಎಸ್. ನಾಯಿಕ ಇವರು
ಮಾಡಿದ ಭಾಷಣ.

"ನಮ್ಮ ತಾಲೂಕಿನ ಈ ದರ್ಶನೀಯವಾದ ಶಿಕ್ಷಕ ಸಮ್ಮೇಲನವನ್ನು
ೇಡಿ, ನನಗೆ ಬಹಳ ಸಂತೋಷವಾಗುತ್ತದೆ. ಈ ಸಮ್ಮೇಲನಕ್ಕೆ
ನು ಅಧ್ಯಕ್ಷನಾಗಬೇಕೆಂದು ರಾ. ರಾ. ಆರ್. ಎಸ್. ಕುಲಕರ್ಣಿಯ
ು ಸೂಚಿಸಿದ್ದರಿಂದ ನಾನು ಅಧ್ಯಕ್ಷಸ್ಥಾನವನ್ನು ಸ್ವೀಕರಿಸುತ್ತೇನೆ.
ಣದ ವಿಷಯದಲ್ಲಿ ನನಗೆ ವಿಶೇಷ ಜ್ಞಾನವು ಇರುವದಿಲ್ಲ. ಆ ಸಂಬಂ
ಗ್ರಂಥಗಳನ್ನಾದರೂ ನಾನು ವಿಶೇಷವಾಗಿ ಓದಿರುವದಿಲ್ಲ. ಆದಾ
ನನಗೆ ಅಧ್ಯಕ್ಷಸ್ಥಾನವನ್ನು ಕೊಟ್ಟಿದ್ದರಿಂದ ರಾ. ಸಾ. ಕುಲಕರ್ಣಿ
ರಿಗೆ ನಾನು ಪೂರ್ಣ ಆಭಾರಿಯಾಗಿದ್ದೇನೆ.

ಮೊದಲಿನ ಶಿಕ್ಷಣಕ್ಕೂ ಈಗಿನ ಶಿಕ್ಷಣಕ್ಕೂ ಮಹದಂತರವಾಗಿದೆ.
ಲಿನ ಕಾಲದಲ್ಲಿ ವಿದ್ಯಾರ್ಥಿಗಳಿಗೆ ಚನ್ನಾಗಿ ಕಲಿಸುವ ಸಾಧನವು
ದಂಡನವೇ ಆಗಿತ್ತೆಂದು ಹೇಳಬಹುದು. ಮತ್ತು ಬಾಯಿಪಾಠವಾ
ವದೇ ಶಿಕ್ಷಣದ ಮುಖ್ಯ ಪದ್ಧತಿಯಾಗಿತ್ತು. ಮೊದಲಿನ ಶಿಕ್ಷಣವನ್ನು
ಿಸುವ ಒಂದು ಕಥೆಯನ್ನು ಕೀರ್ತನಕಾರರ ಮುಖದಿಂದ ಎಲ್ಲರೂ
ರಬಹುದು. ಅದೇನಂದರೆ, "ಒಬ್ಬ ವೈದಿಕನು ತನ್ನ ಮಗನಿಗೆ
ು ಶ್ಲೋಕಗಳನ್ನು ಗಟ್ಟಿಮಾಡಿಸಿ ಅದನ್ನು ತೋರಿಸುವದಕ್ಕಾಗಿ
ನನ್ನು ಸಭೆಗೆ ಕರಕೊಂಡು ಬಂದನು. ಮಲಗಿಕೊಂಡೇ ಪಾಠಮಾ
ಆ ಹುಡುಗನಿಗೆ ಏನೂ ನೆನಪಾಗಲಿಲ್ಲ. ಆಗ ತಂದೆಯು ಸಂತಪ್ತ
ಕಸುವಿನಿಂದ ಹೊಡೆಯಲು ಆ ಹುಡುಗನು ನೆಲಕ್ಕೆ ಬಿದ್ದಕೂಡಲೆ
ದ್ದು ನೆನಪಿಗೆ ಬಂದು, ಒಂದೇ ಉಸಲಿನಿಂದ ಆ ಶ್ಲೋಕಗಳನ್ನು
ು ಬಿಟ್ಟನು." ಈ ಉದಾಹರಣೆಯಿಂದ ಮೊದಲಿನ ಶಿಕ್ಷಣದಕ್ರಮ

ವೂ ಪರಿಣಾಮವೂ ಎಲ್ಲರ ಮನಸಿನಲ್ಲಿ ಬಂದಿರಬಹುದು. ಸಾರಾಂಶ ವೇನಂದರೆ, ಮೊದಲಿನ ಶಿಕ್ಷಣದಿಂದ ವಿದ್ಯಾರ್ಥಿಗಳಿಗೆ ವಿಷಯದ ಮರ್ಮಜ್ಞಾನವೂ ವಿಚಾರಶಕ್ತಿಯ ಬೆಳವಣಿಗೆಯೂ ಆಗುತ್ತಿದ್ದಿಲ್ಲ.

ಪಾಶ್ಚಿಮಾತ್ಯರ ಹಲವು ಸುಧಾರಣೆಗಳಲ್ಲಿ ಶಿಕ್ಷಣದ ಹೊಸ ಪದ್ಧತಿಯೂ ಒಂದಾಗಿದೆ. ಶಿಕ್ಷಣವೆಂದರೆ, ಮನುಷ್ಯನಲ್ಲಿ ಇರತಕ್ಕ ಬೇರೆ ಬೇರೆ ಗುಣಗಳೂ ಶಕ್ತಿಗಳೂ ಕ್ರಮಕ್ರಮವಾಗಿ ವಿಕಾಸ ಹೊಂದುವಂತೆ ಮಾಡಿ, ಅವನಲ್ಲಿ ಪೂರ್ಣವಾದ ಮನುಷ್ಯತ್ವವನ್ನು ಉಂಟುಮಾಡುವದಿರುತ್ತದೆ. ಬುದ್ಧಿಸಾಮರ್ಥ್ಯ, ನೀತಿ ಮತ್ತು ಶರೀರದಾರ್ಢ್ಯ ಇವುಗಳನ್ನು ಪೂರ್ಣವಾಗಿ ಪಡೆದವನಿಗೆ ಶಿಕ್ಷಣ ಹೊಂದಿದವನೆನ್ನುತ್ತಾರೆ. ಹುಡುಗರಲ್ಲಿ ಚಿಕಿತ್ಸಾಬುದ್ಧಿಯು ಸ್ವಾಭಾವಿಕವಾಗಿರುತ್ತದೆ. ಅದನ್ನು ಪ್ರೀತಿಯಿಂದ ಬೆಳಿಸಿದರೆ, ಹುಡುಗರು ಉತ್ಸಾಹವಂತರೂ ಬುದ್ಧವಂತರೂ ಆಗುವರು. ಇದೇ ಹೊಸ ಪದ್ಧತಿಯ ಮರ್ಮವಾಗಿರುವದು.

ಈ ಹೊತ್ತು ಕಲಿಸಿದವರ ಶಿಕ್ಷಣದ ಕ್ರಮವು ಮೇಲೆ ಹೇಳಿದ ಹೊಸ ಪದ್ಧತಿಯನ್ನು ಪೂರ್ಣವಾಗಿ ಅನುಸರಿಸಿತ್ತೆಂದು ಹೇಳಲಿಕ್ಕೆ ನನಗೆ ಬಹಳ ಸಂತೋಷವಾಗುತ್ತದೆ. ಇಂಥ ಶಿಕ್ಷಣದಿಂದ ನಮ್ಮ ಹುಡುಗರು, ಅಂದರೆ ಭಾವೀ ಪ್ರಜೆಗಳು ಸುಶೀಲರಾಗುವರೆಂದು ನಿಸ್ಸಂದೇಹವಾಗಿ ಹೇಳಬಹುದು; ಮತ್ತು ನೀವೆಲ್ಲ ಶಿಕ್ಷಕರು ಭಾವಿ ರಾಷ್ಟ್ರವನ್ನು ಉಂಟುಮಾಡುವ ಗುರುಗಳೇ ಆಗಿದ್ದೀರಿ. ರಾಷ್ಟ್ರದ ಉನ್ನತಿಯನ್ನು ಮಾಡುವದೂ, ಅವನತಿಯನ್ನು ಮಾಡುವದೂ, ಶಿಕ್ಷಕರಾದ ನಿಮ್ಮೆಲ್ಲರ ಕೈಯೊಳಗೇ ಅದೆ. ಅಂದಮೇಲೆ, ನಿಮ್ಮ ಕೆಲಸವು ಎಷ್ಟು ಮಹತ್ವದ್ದಾಗಿರುತ್ತದೆ, ನೋಡಿರಿ! ಇದರಿಂದ ಶಿಕ್ಷಕನೆಂದರೆ, ಪೂಜ್ಯನಾದ ಸದ್ಗೃಹಸ್ಥನೆಂದು ಯಾರು ಅನ್ನಲಿಕ್ಕಿಲ್ಲ! ಈ ನುಡಿಯು ಸುಶಿಕ್ಷಿತರ ಬಾಯಿಂದ ಬಾರದೆ ಎಂದೂ ಇರಲಾರದು. ಆದಕಾರಣ ನಾವೆಲ್ಲರೂ ಶಿಕ್ಷಕರ ಕೂಡ ಪ್ರೀತಿಯಿಂದ ನಡಕೊಳ್ಳಬೇಕು. ಮ್ಯುನಿಸಿಪಾಲಿಟಿ ಇದ್ದ ಊರುಗಳಲ್ಲಿ ಮತಕೊಡುವದರ ಸಲುವಾಗಿ ಪರಸ್ಥಳದವರಾದ ಮಾಸ್ತರರಿಗೆ ಒಮ್ಮೊಮ್ಮೆ ಬಹಳ ಎಡರುಗಳು ಬರುತ್ತವೆ. ತಿಳಿಯದ ಜನರು ಅವರ ಕೂಡ ದ್ವೇಷಮಾಡುತ್ತಾರೆ. ಇದು ಸರಿಯಲ್ಲ. ಹಳ್ಳಿಗ

ಲ್ಲಂತೂ ಉಪದ್ವ್ಯಾಪಿಗಳಾದ ಜನರಿಂದ ಶಿಕ್ಷಕರಿಗೆ ಬಹಳ ಕಷ್ಟಗಳು ಒದಗಿದ್ದನ್ನು ಎಷ್ಟೋಸಾರಿ ಕೇಳಿದ್ದೇವೆ. ಆದರೆ ಇದು ಬಹಳ ಅಯೋಗ್ಯವಾದದ್ದು. ಶಿಕ್ಷಕನು ಹಳ್ಳಿಯ ಸುಧಾರಕನೆಂದು ತಿಳಿದು, ಗ್ರಾಮಸ್ಥರು ಅವನ ಕೂಡ ಪ್ರೀತಿಯಿಂದ ನಡಕೊಳ್ಳಬೇಕು. ಈಗಿನ ಹೊಸ ಪದ್ಧತಿಯ ಶಿಕ್ಷಣದಲ್ಲಿ ಮಾಸ್ತರರು ಆಟ ಆಡಿಸುತ್ತಾರೆಂದು ಹಳೇತರದಿಂದ ಕಲಿತ ಕೆಲವು ಜನರ ಆಕ್ಷೇಪಣೆ ಅದೆ. ಆದರೆ ನಿಜವಾಗಿ ಪ್ರತಿಯೊಬ್ಬ ಬಾಲಕನ ಶಿಕ್ಷಣವು ಅವನು ಹುಟ್ಟಿದಂದಿನಿಂದ ಪ್ರಾರಂಭವಾಗುತ್ತದೆಂಬ ಮಾತನ್ನು ಅವರು ಮರೆಯಲಾಗದು. ನಾವೆಲ್ಲರೂ ಅರಿತಿದ್ದ ಎಷ್ಟೋ ಸಂಗತಿಗಳನ್ನು ಆಟನೋಟಗಳಿಂದಲೇ ಕಲಿತುಕೊಂಡಿರುತ್ತೇವೆ. ಆಟನೋಟಗಳು ಹುಡುಗರ ಶಿಕ್ಷಣದ ಸ್ವಾಭಾವಿಕ ಮಾರ್ಗಗಳಾಗಿರುತ್ತವೆ. ಅಂದಮೇಲೆ, ಈ ಹೊಸ ಶಿಕ್ಷಣ ಪದ್ಧತಿಗೆ ಆಟವೆಂದು ದೋಷವಿಡುವದು ಸರಿಯಲ್ಲ.

ಇಂಥ ಅನುಕರಣೀಯವಾದ ಸಮ್ಮೇಲನದಿಂದ ಶಿಕ್ಷಕರಿಗೆ ಜಾಗ್ರತೆಯೂ ಹೊಸ ಹೊಸ ಜ್ಞಾನವೂ ಆಗುವದಲ್ಲದೆ, ಬೇರೆ ಜನರಿಗೂ ಎಷ್ಟೋ ತಿಳುವಳಿಕೆ ಉಂಟಾಗುತ್ತದೆ.

ಇಲ್ಲಿ ಕಲಿಸಿದ ಎಲ್ಲ ಮಾಸ್ತರರಿಗೆ ಇನಾಮುಗಳು ಕೊಡಲ್ಪಟ್ಟವಷ್ಟೇ. ಆದರೆ ಇಲ್ಲಿ ಕಲಿಸಿ ತೋರಿಸದೆ ಇದ್ದವರು ತಾವು ಅಯೋಗ್ಯರೆಂದು ಮಾತ್ರ ಸರ್ವಥಾ ತಿಳಿಯಬಾರದು. ಸ್ವಲ್ಪ ವೇಳೆಯಲ್ಲಿ ಎಲ್ಲರೂ ಕಲಿಸುವ ಬಗೆ ಹ್ಯಾಗೆ? ಮುಂದಿನ ಸಮ್ಮೇಲನದಲ್ಲಿ ಮತ್ತೆ ಕೆಲವರು ಕಲಿಸಿ ಉತ್ತೇಜನಪಡೆಯಬಹುದು.

ಈ ಸಮ್ಮೇಲನದ ಎರಡನೇ ಭಾಗವಾದ ಪ್ರದರ್ಶನವು ಉತ್ಕೃಷ್ಟವಾಗಿತ್ತು. ಅದರಲ್ಲಿದ್ದ ಶಿಕ್ಷಕರ ಹಾಗು ವಿದ್ಯಾರ್ಥಿಗಳ ಅಚ್ಚುಕಟ್ಟಾದ ಕೆಲಸಗಳನ್ನು ನೋಡಿ ನಮಗೆ ಬಹಳ ಆನಂದವಾಯಿತು. ಈ ಪ್ರಕಾರ ಶಿಕ್ಷಣದ ಅಭಿವೃದ್ಧಿಯ ದೆಸೆಯಿಂದ ಸಮ್ಮೇಲನವನ್ನೂ ಪ್ರದರ್ಶನವನ್ನೂ ನಮ್ಮ ಊರಲ್ಲೇ ಮಾಡಿದ್ದಕ್ಕಾಗಿ ರಾ. ಸಾ. ಕುಲಕರ್ಣಿಯವರಿಗೂ, ಕೊಪ್ಪೀಕರ ಇವರಿಗೂ ಪೂರ್ಣವಾಗಿ ಆಭಾರಿಯಾಗಿರುತ್ತೇನೆ.

ಇಲ್ಲಿ ಇನ್ನೊಂದು ಆನಂದದ ಸಂಗತಿಯನ್ನು ಹೇಳಬೇಕಾಗಿದೆ. ಅದೇನಂದರೆ, ನಮ್ಮ ಊರ ೧ನೇ ನಂಬರ ಶಾಲೆಯು ಬಹಳ ದಿವಸಗಳ ವರೆಗೆ ಕೀಳು ಸ್ಥಿತಿಯಲ್ಲಿತ್ತು. ಆದರೆ, ಹೆಡ್‌ಮಾಸ್ತರ ಮಿ. ಕುರಂದವಾಡ ಇವರೂ ೧ನೇ ಅ. ಮಿ. ಮತ ಇವರೂ ಬಂದಂದಿನಿಂದ ಶಾಲೆಯ ಸ್ಥಿತಿಯು ಬಹಳ ಸುಧಾರಿಸುತ್ತ ನಡೆದದೆ. ಹೋದ ವರ್ಷ ವ್ಹ. ಫಾಯನಲ್ ಪರೀಕ್ಷೆಗೆ ಹೋದ ೯ ಹುಡುಗರಲ್ಲಿ ೭ ಮಂದಿ ಪಾಸಾದರು. ಈ ವರ್ಷ ಹೋದ ೭ ಮಂದಿಯಲ್ಲಿ ಎಲ್ಲರೂ ಪಾಸಾಗಿದ್ದಾರೆ. ಇಂಥ ಸುಧಾರಣೆಯನ್ನು ನೋಡಿ ಸಂತೋಷ ಹೊಂದಿ, ಈ ಊರ ಒಬ್ಬ ಸಭ್ಯಗೃಹಸ್ಥರಾದ ಮು. ರಾ. ಹನುಮಂತರಾವ ಖಾಸನೀಸ ಇವರು ಈ ಸಾಲೆಯ ಶಿಕ್ಷಣದ ಉಪಕರಣಕ್ಕಾಗಿ ೧೦೦ ರೂಪಾಯಿಗಳನ್ನು ಉಚಿತವಾಗಿ ಕೊಟ್ಟಿದ್ದಾರೆ.

ಇಂಥ ಸಮ್ಮೇಲನಗಳು ಮೇಲಿಂದ ಮೇಲೆ ನೆರೆದು ಶಿಕ್ಷಣದ ಸುಧಾರಣೆಯಾಗಿ ಪ್ರಜೆಗಳಿಗೆ ಸುಖವು ಅಭಿವೃದ್ಧಿಸಲೆಂದು ಅಪೇಕ್ಷಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ."

ವಿದ್ಯಾಖಾತೆಯ ನೋಟೀಸುಗಳು.

ವಿದ್ಯಾಖಾತೆಯ ಕನ್ನಡ ಕ್ರಮಿಕ ವಾಚನ ಪುಸ್ತಕಗಳ ಕ್ರಯಗಳು ಒಳಗಡೆಯಲ್ಲಿ ಕಡಿಮೆ ಮಾಡಲ್ಪಟ್ಟಿದ್ದರೂ, ಪುಸ್ತಕಗಳನ್ನು ಮಾರುವ ಕೆಲವು ಅಂಗಡಿಕಾರರು ಅವುಗಳನ್ನು ಕಡಿಮೆಮಾಡಿದ ಕ್ರಯಕ್ಕೆ ಮಾರುವದಿಲ್ಲೆಂದು ಕೆಲಜನರಿಂದ ತಕರಾರುಗಳು ಬಂದದ್ದರಿಂದ, ಎಲ್ಲವರ ತಿಳುವಳಿಕೆಗಾಗಿ ಕ್ರಮಿಕ ವಾಚನ ಪುಸ್ತಕಗಳ ಕಡಿಮೆ ಮಾಡಿದ ಕ್ರಯಗಳನ್ನು ಇದರಡಿಯಲ್ಲಿ ಕಾಣಿಸಿದ್ದೇವೆ. ಈ ಕ್ರಯಗಳಿಗಿಂತ ಹೆಚ್ಚು ಕ್ರಯಗಳನ್ನು ಪುಸ್ತಕ ಮಾರುವ ಯಾವ ಅಂಗಡಿಕಾರರಾದರೂ ತಕ್ಕೊಂಡರೆ ಆ ಸಂಗತಿಯನ್ನು ಮೆಸರ್ಸ ಮ್ಯಾಕಮಿಲನ್ ಮತ್ತು ಕಂಪನಿ, ಮುಂಬಯಿ, ಇವರಿಗೆ ತಿಳಿಸಿದರೆ ಸದರಿ ಕಂಪನಿಯವರು ಆ ಬಗ್ಗೆ ಸಂತೋಷಪಡುವರು. ಕಡಿಮೆ ಮಾಡಿದ ಕ್ರಯಗಳು ಸದರೀ ಪುಸ್ತಕಗಳ ಹೊಸ ಆವೃತ್ತಿಗಳಲ್ಲಿ ಮುದ್ರಿಸಲ್ಪಡುವವು:—

ಪುಸ್ತಕದ ಹೆಸರು.		ಕಡಿಮೆ ಮಾಡಿದ ಕ್ರಮ.
		ರು. ಆ. ಪೈ.
೭ನೆಯ ಪುಸ್ತಕ:—ಪೂರ್ಣ ಅರಿವೆಯ ಬೈಂಡಿಂಗದ್ದು.	...	೦ ೮ ೦
ಕಾಗದ ರಟ್ಟಿನ ಬೈಂಡಿಂಗದ್ದು.	...	೦ ೭ ೦
೬ನೆಯ ಪುಸ್ತಕ:—ಪೂರ್ಣ ಅರಿವೆಯ ಬೈಂಡಿಂಗದ್ದು.	...	೦ ೭ ೦
ಕಾಗದ ರಟ್ಟಿನ ಬೈಂಡಿಂಗದ್ದು.	...	೦ ೬ ೦
೫ನೆಯ ಪುಸ್ತಕ:—ಪೂರ್ಣ ಅರಿವೆಯ ಬೈಂಡಿಂಗದ್ದು.	...	೦ ೬ ೦
ಕಾಗದ ರಟ್ಟಿನ ಬೈಂಡಿಂಗದ್ದು.	...	೦ ೫ ೦
೪ನೆಯ ಪುಸ್ತಕ:—ಪೂರ್ಣ ಅರಿವೆಯ ಬೈಂಡಿಂಗದ್ದು.	...	೦ ೫ ೦
ಕಾಗದ ರಟ್ಟಿನ ಬೈಂಡಿಂಗದ್ದು.	...	೦ ೪ ೬
೩ನೆಯ ಪುಸ್ತಕ:—ಪೂರ್ಣ ಅರಿವೆಯ ಬೈಂಡಿಂಗದ್ದು.	...	೦ ೪ ೦
ಕಾಗದ ರಟ್ಟಿನ ಬೈಂಡಿಂಗದ್ದು.	...	೦ ೩ ೬
೨ನೆಯ ಪುಸ್ತಕ:—ಕಾಗದದ ಮೇಲೆ ಅರಿವೆ ಪಟ್ಟಿದ ಬೈಂಡಿಂಗದ್ದು.		೦ ೩ ೬
ಮ್ಯಾನಿಲಾ	...	೦ ೨ ೬
೧ನೆಯ ಪುಸ್ತಕ:—ಮ್ಯಾನಿಲಾ.	..	೦ ೨ ೬
ಬಾಲಬೋಧಿನಿ:— ...	...	೦ ೧ ೬
		ಅಫೀಸಾ
		೦ ೧ ೦

ಧಾರವಾಡ ಎಜ್ಯುಕೇಶನಲ್ ಇನ್ಸಪೆಕ್ಟರ
ದಕ್ಷಿಣಭಾಗ ಇವರ ಆಫೀಸು
ತಾರೀಖು ೯-೧೨-೧೫

V. N. Ghate
ನಿ. ಎಜ್ಯುಕೇಶನಲ್ ಇನ್ಸಪೆಕ್ಟರ್
ದಕ್ಷಿಣಭಾಗ.

ಜಾ ಹೀ ರಾ ತು

ಪ್ರಾಥಮಿಕ ಶಾಲೆಗಳಿಗೋಸ್ಕರ ಮಂಜೂರು ಮಾಡಿದಂಥ ಈ ಕೆಳಗಿನ ಪುಸ್ತಕಗಳ ಪಟ್ಟಿಯನ್ನು ಎಲ್ಲ ಜನರ ತಿಳುವಳಿಕೆಯ ಬಗ್ಗೆ ಪ್ರಸಿದ್ಧ ಮಾಡಿರುತ್ತದೆ.

ಅನುಕ್ರಮ ಸಂಖ್ಯೆ.	ಪುಸ್ತಕದ ಹೆಸರು.	ಯಾವ ಭಾಷೆಯಲ್ಲಿ ಪುಸ್ತಕವು ಛಾಪಿಸಲ್ಪಟ್ಟಿದೆ.	ಯಾತರ ಬಗ್ಗೆ ಮಂಜೂರೆ ಮಾಡಿರುತ್ತದೆ.	ಕ್ರಯ. ರು.	ಆ.	ಪೈ.	ಶರಾ.
	ಬೆದರ ಅಶ್ವತ್ಥ ನಾರಾಯಣಶಾಸ್ತ್ರಿ ಮೈಸೂರು:—						
೧	ಧರ್ಮಸಾಮ್ರಾಜ್ಯ ಅಥವಾ ಜನಾನದ ಉನ್ನತಿಗೆ ಮೂಲಾಧಾರ	ಕನ್ನಡ	ಕನ್ನಡ ಪ್ರಾಥಮಿಕ ಶಾಲೆಗಳ ಉಪಯೋಗಿಗಳಿಗೆ ಹಾಗು ಇನಾಮುಗಳಿಗೆ ಮತ್ತು ಹಾಯಸ್ಕೂಲು ತೆಳಲ್ಲಿ "ಟೆಕ್ಸ್ಟ" ಮಾಡುವ ಬಗ್ಗೆ.	೧	೪	೦	
	ಸಾತೂರ ಆರ್. ಎನ್. ಪ್ಲಿ. ಎನ್. ಮತ್ತು ಜಿ. ಎನ್. ಪೂಜಾ ಸಿಜೀ:—						
೨	ಬೆಕ್ಕಿನ ಚಿತ್ರ	ಬಣ್ಣ ಸಹಿತವಾಗಿ ಮುದ್ರಿಸಿದ್ದು ಹಾಗು ವಾರ್ನಿಸವನ್ನು ಹಚ್ಚಿ ಅರಿವೆಯನ್ನು ಅಂಟಿಸಿ ರೂಲುಗಳನ್ನು ಕೂಡ್ರಿಸಿದ್ದು	ಕನ್ನಡ	ಕನ್ನಡ ಪ್ರಾಥಮಿಕ ಶಾಲೆಗಳ ಉಪಯೋಗಕ್ಕಾಗಿ.	೦	೮	೦	
೩	ನಾಯಿಯ ಚಿತ್ರ	,,	ಸದರ	೦	೮	೦	
	ಎಚ್. ಚಿಪಂಬರಯ್ಯಾ ಕುರ್ಸಕೋಟಿ:—						
೪	ರಾಜಳಕ್ಕಿ	,,	ಕನ್ನಡ ಪ್ರಾಥಮಿಕ ಶಾಲೆಗಳ ಇನಾಮಿನ ಸಲುವಾಗಿ.	೦	೩	೦	
	ಅಬ್ದುಲ್‌ಕಾದರ ಇಬ್ರಾಹಿಮಜಿ ಪೂಜಾ ಸಿಟೀ						
೫	ಹಂಮಸ್ಥಾನದ ನಕಾಶೆ ಬಣ್ಣ ಸಹಿತವಾಗಿ ಮುದ್ರಿಸಿದ್ದು ಹಾಗು ವಾರ್ನಿಸ ಹಚ್ಚಿ ಅರಿವೆಯನ್ನು ಅಂಟಿಸಿ ರೂಲುಗಳನ್ನು ಕೂಡ್ರಿಸಿದ್ದು	ಉರ್ದು	ಉರ್ದು ಶಾಲೆಗಳ ಉಪಯೋಗಕ್ಕೆ ಮತ್ತು ಇನಾಮಿನ ಸಲುವಾಗಿ.	೦	೧೨	೦	

೬	ಮುಂಬಯಿ ಇಲಾಖೆಯ ನಕಾಶೆ ಮೇಕ ನಿಲನ್ ಬಿಂಡ ಕೊ. ಮುಂಬಯಿ:—	ಉರ್ದು	ಉರ್ದು ಶಾಲೆಗಳ ಇನಾಮಿನ ಸಲುವಾಗಿ.	೦	೯	೦	ಅರಿವೆಯನ್ನು ಹಚ್ಚಿ ತಯಾರಿಸಿದ ಪ್ರತಿ.
				೦	೫	೦	ಸಾದಾ ಪ್ರತಿ.
೭	ಕವಾಯಿದೆ ಇ-ಉರ್ದು ಮೊದಲನೆಯ ಭಾಗ ಎಮ್. ಎಮ್. ಹಾಬಿಬುಲ್ಲಾ ಎಮ್. ಬಿ. ಇವರು ಬರೆದದ್ದು.	,,	ಉರ್ದು ಶಾಲೆಗಳ ಉಪಯೋಗಕ್ಕಾಗಿ	೦	೧	೦	
೮	ಸದರ ಎರಡನೆಯ ಭಾಗ ಸದರ	,,	ಸದರ	೦	೨	೦	
೯	ಹಿಂದುಸ್ತಾನದ ಉರ್ದು ಇತಿಹಾಸ ಶಿನೇ ೬ನೇ ಇಯತ್ತೆಗಳಿಗೆ ಇ. ಮಾರ್ಸ್‌ಡೆನ್ ಬಿ. ಎ. ಇವರು ಬರೆದದ್ದು	,,	ಉರ್ದು ಶಾಲೆಗಳ ಉಪಯೋಗಕ್ಕಾಗಿ ಮತ್ತು ಇನಾಮುಗಳ ಹಾಗು ಲಾಯಬ್ರರಿಗಳ ಬಗ್ಗೆ.	೦	೮	೦	
೧೦	ಸದರ ಶನೇ ೭ನೇ ಇಯತ್ತೆಗಳಿಗೆ ಸದರ	,,	ಸದರ	೦	೯	೦	
೧೧	ಉರ್ದು ಹಿಸ್ಟ್ರೀರೀಡರ ಅಪ್ಪರ ವ್ಯಾಯಮರೀ ಸದರ	,,	ಸದರ	೦	೧೦	೬	
೧೨	"ಉರ್ದು ಲೆಸನ್ಸ ಇನ್ ಎಕ್ಸ್‌ಪೆರಿಮೆಂಟಲ್ ಎಂಡ್ ಪ್ರ್ಯಾಕ್ಟಿಕಲ್ ಜೊಮೆಟ್ರ್ರಿ" ಎಚ್. ಎಸ್. ಹಾಲ್ ಮತ್ತು ಎಫ್. ಎಚ್. ಸ್ಟಿವನ್ಸ ಇವರು ಬರೆದದ್ದು	,,	ಉರ್ದು ಶಾಲೆಗಳ ಉಪಯೋಗಕ್ಕಾಗಿ ಮತ್ತು ಲಾಯಬ್ರರಿಗಳ ಬಗ್ಗೆ	೦	೮	೦	
೧೩	"ಉರ್ದು ನ್ಯೂಕೋಡ ಜೊಮೆಟ್ರಿ" ಶಿನೇ ೪ನೇ ಇಯತ್ತೆಗಳ ಬಗ್ಗೆ ರೆವ್. ಎ. ಸಿಮ್ಸ. ಎಮ್. ಎ. ಇವರು ಬರೆದದ್ದು	,,	ಉರ್ದು ಶಾಲೆಗಳಲ್ಲಿ ಉಪಯೋಗಿಸುವ ಬಗ್ಗೆ.	೦	೪	೦	
೧೪	ಸದರ ಶನೇ ೬ನೇ ಇಯತ್ತೆಗಳ ಬಗ್ಗೆ ಸದರ	,,	ಸದರ	೦	೬	೬	
೧೫	"ಉರ್ದು ನ್ಯೂಕೋಡ ಮೆನ್ಸುರೇಶನ್" ೪ನೇ ಶನೇ ಇಯತ್ತೆಯ ಬಗ್ಗೆ ರೆವ್. ಸಿಮ್ಸ. ಎಮ್. ಎ. ಇವರು ಬರೆದದ್ದು	,,	ಸದರ	೦	೩	೦	

೧೬	"ಉರ್ದು ಸ್ಕೂಲ ಜೊಮೆಟ್ರ್ರಿ" ಮೊದಲನೆಯ ಭಾಗ ಎಚ್. ಎಸ್. ಹಾಲ್ ಮತ್ತು ಎಫ್. ಎಚ್. ಸ್ಟೀವನ್ಸ ಇವರು ಬರೆದದ್ದು	ಉರ್ದು	ಉರ್ದು ಶಾಲೆಗಳ ಉಪಯೋಗಕ್ಕಾಗಿ ಮತ್ತು ಲಾಯಬ್ರರಿಗಳ ಸಲುವಾಗಿ	೦	೬	೦
೧೭	ಸದರಿ ನಾಲ್ಕನೆಯ ಭಾಗ ಸದರ	,,	ಸದರ	೦	೩	೦
೧೮	"ಉರ್ದು ಟಿಕ್ಸ್ಟ್ ಬುಕ್ ಆನ್ ಹಾಜಿಜಿನ ಎಂಡ ಡು ಮೆಸ್ಟಿಕ್ ಎಕಾನಮಿ" ಫನೀ ಳನೀ ಇಯತ್ತೆಗಳ ಸಲುವಾಗಿ ಡಾ. ಚಾರ್ಲಾಸ ಬಾಂಕ್ಸ ಇವರು ಬರೆದದ್ದು	,,	ಉರ್ದು ಶಾಲೆಗಳ ಉಪಯೋಗಕ್ಕಾಗಿ.	೦	೩	೦
೧೯	ಸದರ ಫನೀ ೬ನೀ ಇಯತ್ತೆಗಳ ಬಗ್ಗೆ ಸದರ ಮುನಶಿ ಗುಲಾಮ ರಾಸೂಲ, ಸುರತ:—	,,	ಸದರ	೦	೪	೦
೨೦	"ಅಯಿನಿ ಹಿಸಾಬ"	,,	ಉರ್ದು ಶಾಲೆಗಳ ಲಾಯಬ್ರರಿಯ ಬಗ್ಗೆ.	೦	೨	೦

— ೬೯ —

ಫೀಸ್, ಡಿರೆಕ್ಟರ ಆಫ್ ಪಬ್ಲಿಕ್ ಇನ್‌ಸ್ಟ್ರಕ್ಷನ್ ಇವರ ಆಫೀಸು.

ತಾರೀಖು ೧೦ನೇ ಜನೆವರಿ ೧೯೧೬ ಇಸವಿ.

P LORY,

ಆಕ್ಟಿಂಗ ಡಿಪುಟಿ ಡಾಯರೆಕ್ಟರ ಆಫ್ ಪಬ್ಲಿಕ್ ಇನ್‌ಸ್ಟ್ರಕ್ಷನ್.

"ಕನ್ನಡ ಆರೋಗ್ಯವಿಜ್ಞಾನ"

ಮಿ. ಆರ್. ಎಮ್. ಜೋತಿ, ಎಮ್. ಏ. ಎಲ್. ಎಲ್. ಬೀ. ಇವರು ಬರೆದದ್ದು. ಇದು ವಿದ್ಯಾಖಾತೆಯ ಸರಕಾರ ಠರಾವ ನಂ. ೩೭೫೭ ತಾ|| ೩೦ ದಿಶಂಬರ ೧೯೧೫ ರ ಮೇರೆಗೆ ಕನ್ನಡ ಪ್ರಾಥಮಿಕ ಶಾಲೆಗಳಲ್ಲಿ ಉಪಯೋಗಿಸುವದಕ್ಕೆ ಮಂಜೂರು ಮಾಡಲ್ಪಟ್ಟಿದೆ.

ಈ ಪುಸ್ತಕವನ್ನು ಪ್ರಾಥಮಿಕ ಶಾಲೆಗಳ ೫ನೇ ೬ನೇ ಇಯತ್ತೆಗಳಲ್ಲಿ ಓದಿಸತಕ್ಕದ್ದು, ಮತ್ತು ೭ನೆಯ ಇಯತ್ತೆಯಲ್ಲಿ ಸಂಕ್ಷಿಪ್ತವಾಗಿ ಪುನರಾವರ್ತನ ಮಾಡಿಸತಕ್ಕದ್ದು. ಇದರ ಜೊತೆಗೆ ವಸ್ತುಪಾಠಗಳನ್ನಾಗಲಿ ಶಾಸ್ತ್ರೀಯ ಪಾಠಗಳನ್ನಾಗಲಿ ಅಭ್ಯಾಸಿಸಬೇಕು. ವ್ಹರ್ನ್ಯಾಕ್ಯುಲರ ಫಾಯನಲ್ ಪರೀಕ್ಷೆಗೆ "ಆರೋಗ್ಯ ವಿಜ್ಞಾನ" ಮತ್ತು ೭ನೆಯ ಪುಸ್ತಕದೊಳಗಿನ ಶಾಸ್ತ್ರೀಯ ಪಾಠಗಳು ಇವೆರಡನ್ನೂ ನೇಮಿಸಿರುತ್ತದೆ.

ಧಾರವಾಡ ಎಜ್ಯುಕೇಶನಲ್ ಇನಸ್ಪೆಕ್ಟರ
ದಕ್ಷಿಣಭಾಗ ಇವರ ಆಫೀಸು.
ತಾ|| ೯-೮-೧೯೧೬.

V. N. Ghate.
ನಿ|| ಎಜ್ಯುಕೇಶನಲ್ ಇನ್ಸಪೆಕ್ಟರ
ದಕ್ಷಿಣಭಾಗ.

ಪತ್ರವ್ಯವಹಾರ.

ಸಂಖ್ಯಾವಿಭಾಗ ಕೌತುಕ.

[ನಮ್ಮ ಕಡೆಗೆ ಮೇಲಿನ ವಿಷಯವನ್ನು ಕುರಿತು ಅನೇಕ ಲೇಖಗಳು ಬಂದಿವೆ. ಅವುಗಳಲ್ಲಿ ಉತ್ತಮವಾದ ಎರಡು ಲೇಖಗಳನ್ನು ಕೆಳಗೆ ಸಾದ್ಯಂತವಾಗಿ ಮುದ್ರಿಸಿದ್ದೇವೆ. ಉಳಿದ ಲೇಖಗಳಲ್ಲಿ ಕೇ. ರ. ಜೋತಿ ಗಲಗಲಿ, ಗೋಪಾಳ ವೆಂಕಟೇಶ ಮುಗದ, ನರಸಿಂಹ ಪಾಂಡುರಂಗ ಮೋಡಕ, ಅಮೀನ ಅಲ್ಲೀಸಾಹೇಬ ಟಪಾಲ, ಭೀಮಾಜಿ ತಿರಕಂಭಟ್ಸ ಜೊತೀ ಶ್ರೀನಿವಾಸ ವೆಂಕಟೇಶ ಅಲಗೂತ, ಶೇಷೋ ಹಣಮಂತ ಕುಲಕರ್ಣಿ ಇವರು ಬರೆದು ಕಳುಹಿದ ಲೇಖಗಳೂ ಸಮರ್ಪಕವಾಗಿದ್ದು ಸ್ತುತಿಗೆ ಪಾತ್ರವಾದವುಗಳಿರುತ್ತವೆ. ಬೋಧೋ ನರಸಿಂಹ ಕುಲಕರ್ಣಿ ಮತ್ತು ರಾಮಾ ಗಣಪ ಹೆಗಡೆ ಇವರೂ ಈ ವಿಷಯದ ಚರ್ಚೆಯನ್ನು ಯಥಾಮತಿ ಮಾಡಿರುವರು. ಕುಮಠಾ ಶಾಲೆಯ ವಿದ್ಯಾರ್ಥಿಯಾದ ಪುಂಡಲೀಕ ಪಾಂಡುರಂಗನೆಂಬವನೂ ಕೂಡ ಈ ಪ್ರಶ್ನೆಯನ್ನು

ಕುರಿತು ತನ್ನ ಅಲ್ಪಮತಿಗೆ ತಿಳಿದಷ್ಟು ಶ್ರಮವನ್ನು ಪಟ್ಟಿರುವನು. ಮುಗದ ಇವರು ಬರೆದ ಉದಾಹರಣೆಗಳು ಸುಲಭವಿರುವದರಿಂದ ಅವುಗಳನ್ನು ಶಾಲಾಪತ್ರಕದಲ್ಲಿ ಮುದ್ರಿಸುವದು ಅವಶ್ಯವಿಲ್ಲ.

ಸಂಖ್ಯಾ ವಿಭಾಗದ ಮೂಲ ತತ್ವಗಳನ್ನು ಬೇರೆಯಿಂದು ಸಂಚಿಕೆಯಲ್ಲಿ ವಿವರಿಸುವೆವು.] ಸಂಪಾದಕ—ಶಾಲಾಪತ್ರಕ.

ಸಂಖ್ಯಾವಿಭಾಗ, ಕೌತುಕಾದರ್ಶ, ಅಥವಾ,

ವಿ|| ತ. ನಾ. ದಂಡಾಪುರ ಇವರ ಪ್ರಶ್ನೆಗೆ ಉತ್ತರ.

ಶ್ಲೋಕ

अष्टैकशून्यं दशरुद्रशून्य ।
चत्वारिपञ्चद्वि च सप्तरंध्र ॥
शून्यं च शून्यं चादित्यषट्च
त्रिणेत्रनाम्ना मनोभीष्टपूर्ण ॥ १ ॥

ಹದಿನಾರು ಕೋಷ್ಟಕಗಳುಳ್ಳ ಚೌರಸಿನಲ್ಲಿ ಮೇಲಿನ ಶ್ಲೋಕದಲ್ಲಿ ಹೇಳಿದಂತೆ ಅಂಕೆಗಳನ್ನು ಬರೆದಿಡಬೇಕು. ಇನ್ನು ಇದರಲ್ಲಿ ಲಕ್ಷ್ಯದಲ್ಲಿಡತಕ್ಕದ್ದೇನಂದರೆ:— ಅಭೀಷ್ಟ ಸಂಖ್ಯೆಯು ಯಾವಾಗಲೂ ೧೧ ಕ್ಕಿಂತ ದೊಡ್ಡದಿರಲಿಕ್ಕೆ ಬೇಕು. ಆದುದರಿಂದ ಅಂಥ ಯಾವದೊಂದು ಅಭೀಷ್ಟ ಸಂಖ್ಯೆಯನ್ನು ಕಲ್ಪಿಸಿ, ಅದರಲ್ಲಿ ೧೧ನ್ನು (ಇದು ನಮ್ಮ ಕೋಷ್ಟಕಗಳೊಳಗಿನ ದಕ್ಷಿಣೋತ್ತರ ಮೊದಲನೆಯ ಸಾಲಿನೊಳಗಿರುವ ಅಂಕೆಗಳ ಬೇರೀಜು) ಕಳೆದು, ಬರುವ ಬಾಕಿಯನ್ನು ಒಂದನೆಯ ಸಾಲಿನೊಳಗಿನ ಶೂನ್ಯಸ್ಥಾನದಲ್ಲಿಯೂ, ಅದರ ಮುಂದಿನ ಅನುಕ್ರಮವಾಗಿ ೨ನೆಯ, ೩ನೆಯ, ಮತ್ತು ೪ನೆಯ ಸಾಲುಗಳೊಳಗಿನ ಶೂನ್ಯಗಳ ಸ್ಥಾನಗಳಲ್ಲಿಯೂ ಬರೆಯಬೇಕು. ಅಂದರೆ ಅಭೀಷ್ಟ ಸಂಖ್ಯೆಯು ಇಷ್ಟದಂತೆ ವಿಭಾಗಿತವಾಗುವದು.

ಉದಾಹರಣಾರ್ಥ:—ಅಭೀಷ್ಟ ಸಂಖ್ಯೆಯು ೪೦ ಎಂದು ಕಲ್ಪಿಸುವಾ,

∴ ೪೦−೨೧=೧೯ ಮೊದಲನೆಯ ಸಾಲಿನೊಳಗಿನ ಶೂನ್ಯಸ್ಥಾನ ವಲಿ ಬರೆಯತಕ್ಕ ಸಂಖ್ಯೆಯು ಇದರಂತೆ:—

೨೦=ಎರಡನೆಯ ಸಾಲಿನೊಳಗಿನ ಶೂನ್ಯಸ್ಥಾನದಲ್ಲಿ ಬರೆಯತಕ್ಕ ಸಂಖ್ಯೆ.
೨೧=ಮೂರನೆಯ ,, ,, ,,
೨೨=ನಾಲ್ಕನೆಯ ,, ,, ,,

∴ ೪೦ ಈ ಅಭೀಷ್ಟ ಸಂಖ್ಯೆಯನ್ನು ಮುಂದಿನ ಕೋಷ್ಟಕಗ ಲ್ಲಿ ತೋರಿಸಿದಂತೆ ವಿಭಾಗಿಸಿದಂತಾಗುವದು.

೪೦	೪೦	೪೦	೪೦	೪೦
೪೦	೮	೧	೨೧	೧೦
೪೦	೧೧	೨೦	೪	೫
೪೦	೨	೭	೯	೨೨
೪೦	೧೪	೧೨	೬	೩
೪೦	೪೦	೪೦	೪೦	೦

ಇದೇ ಮೇರೆಗೆ ಮಿ. ದಂಡಾಪೂರರವರ ೫೦ ಈ ಅಭೀಷ್ಟ ಂಖ್ಯೆಯನ್ನಾದರೂ ವಿಭಾಗಿಸಬಹುದು.

ಟಿಪ್ಪಣಿ:—ಶ್ಲೋಕದಲ್ಲಿ ಕಥಿತವಾದ ಎಲ್ಲ ಅಂಕೆಗಳಲ್ಲಿ (ಶೂನ್ಯ ನ್ನುಳಿದು) ಯಾವದೊಂದು ಸಂಖ್ಯೆಯನ್ನು ಕೂಡಿಸಿಯಾದರೂ ಮೇಲಿನ ೀತಿಯನ್ನು ಉಪಯೋಗಿಸಬಹುದು. ಆದರೆ ಇದರಿಂದ ಅಭೀಷ್ಟ ಂಖ್ಯೆಯಲ್ಲಿ ಕಳೆಯತಕ್ಕ ಸಂಖ್ಯೆಯು ನಾವು ಕೂಡಿಸಿದ ಸಂಖ್ಯೆಯ ುರಪ್ಪರಿಂದ ದೊಡ್ಡದಾಗುವದೆಂಬದನ್ನು ಮರೆಯಬಾರದು. ಯಾಕಂ ರೆ ಪ್ರತಿಯೊಂದು ಸಾಲಿನಲ್ಲಿ ಒಂದು ಮನೆಯಲ್ಲಿ ಮಾತ್ರ ಶೂನ್ಯವಿರು ದೆ; ಉಳಿದ ಮೂರು ಮನೆಗಳಲ್ಲಿ ಅಂಕೆಗಳಿರುತ್ತವೆ. ಆ ಪ್ರತಿ ೂಂದು ಅಂಕೆಯಲ್ಲಿ ನಾವು ಯಾವದೊಂದು ಸಂಖ್ಯೆಯನ್ನು ಕೂಡಿಸು ೀವೆ. ಆದುದರಿಂದ ನಾವು ಕೂಡಿಸುವ ಸಂಖ್ಯೆಯ ಮೂರಪ್ಪು ಹಾಗು, ೧ ಇವುಗಳ ಬೇರೀಜು ಅಭೀಷ್ಟ ಸಂಖ್ಯೆಗಿಂತ ಕಡಿಮೆ ಇರಲಿಕ್ಕೆ ೇಕು.

ಉದಾಹರಣೆಗಾಗಿ ನಮ್ಮ ಮಿತ್ರರ ೫೦೦ ಈ ಅಭೀಷ್ಟ ಸಂಖ್ಯೆಯನ್ನೇ ತೆಗೆದುಕೊಳ್ಳುವಾ. ಮತ್ತು ಶ್ಲೋಕದಲ್ಲಿ ಹೇಳಿದ ಪ್ರತಿಯೊಂದು ಅಂಕೆಯಲ್ಲಿ ೫೦ ಈ ಸಂಖ್ಯೆಯನ್ನು ಕೂಡಿಸುವಾ.

∴ ಅಭೀಷ್ಟ ಸಂಖ್ಯೆಯಲ್ಲಿ ಕಳೆಯತಕ್ಕ ಸಂಖ್ಯೆಯು (೫೦+೫೦+೫೦+೨೧)=೧೭೧ ಆಯಿತು; ಮತ್ತು ಮೊದಲನೆಯ ಸಾಲಿನೊಳಗಿನ ಶೂನ್ಯಸ್ಥಾನದಲ್ಲಿ ಬರೆಯತಕ್ಕ ಸಂಖ್ಯೆಯು (೫೦೦-೧೭೧)=೩೨೯ ಆಯಿತು.

∴ ೨ನೆಯ, ೩ನೆಯ, ಮತ್ತು, ೪ನೆಯ ಸಾಲಿನೊಳಗಿರುವ ಶೂನ್ಯಗಳ ಸ್ಥಳಗಳಲ್ಲಿ ಬರೆಯತಕ್ಕ ಸಂಖ್ಯೆಗಳು ಅನುಕ್ರಮವಾಗಿ ೩೩೦, ೩೩೧, ಹಾಗು ೩೩೨ ಆದವು. ಈ ಪ್ರಕಾರ ವಿಭಾಗಿಸಿಯೇ ಮಿ|| ದಂಡಾಪೂತವರು ಪ್ರಶ್ನವಾಡಿದ್ದರೆಂಬದನ್ನು ಕೆಳಗಿನ ಕೋಷ್ಟಕಗಳಿಂದ ಕಂಡುಕೊಳ್ಳಬಹುದು:—

೫೦೦	೫೦೦	೫೦೦	೫೦೦	
೫೪	೫೧	೩೩೧	೬೦	೫೦೦
೬೧	೩೩೦	೫೪	೫೫	೫೦೦
೫೨	೫೭	೫೯	೩೩೨	೫೦೦
೩೩೯	೬೨	೫೬	೫೩	೫೦೦
೫೦೦	೫೦೦	೫೦೦	೫೦೦	

ಇದೇ ಮೇರೆಗೆ ೨೧ ಕ್ಕಿಂತ ದೊಡ್ಡದಾದ ಯಾವ ಸಂಖ್ಯೆಯನ್ನಾದರೂ ಮೇಲಿನ ರೀತಿಯಿಂದ ಸಹಜವಾಗಿ ವಿಭಾಗಿಸಬಹುದು.

ವಿಧೇಯ

ಭೀಮಾಜಿ ಜೀವಾಜಿ ಹುಲಿಕವಿ,

೩ನೆಯ ವರ್ಷದ ವಿದ್ಯಾರ್ಥಿ.

ಶಂಕರಶಾಸ್ತ್ರೀ ನರೆಗಲ್ಲ ಎಂಬವರು ಬರೆದ ಇದೇ ವಿಷಯದ ಎರಡನೇ ಲೇಖನವು ಮುಂದಿನ ಸಂಚಿಕೆಯಲ್ಲಿ ಮುದ್ರಿಸಲ್ಪಡುವದು.

ಎ. ಶಾ. ಪ.

ಶಾಲಾಪತ್ರಿಕೆ

ಸಂಪುಟ ೫೨ | ಮಾರ್ಚ ೧೯೧೬. | ಸಂಚಿಕೆ ೩.

ಶಿಕ್ಷಕರ ಸಮ್ಮೇಲನಗಳು.

ಜಾನೇವಾರಿ ತಿಂಗಳಲ್ಲಿ ಈ ಜಿಲ್ಲೆಯೊಳಗೆ ಧಾರವಾಡ, ರೋಣ, ದಗ, ರಾಣೇಬೆನ್ನೂರ, ಸಿಗ್ಗಾವ ಈ ಸ್ಥಳಗಳಲ್ಲಿಯೂ ಫೇಬ್ರುವರಿ ಂಗಳಲ್ಲಿ ಹುಬ್ಬಳ್ಳಿಯಲ್ಲಿಯೂ ಆಯಾ ತಾಲೂಕಿನೊಳಗಿನ ಲೋಕಲ್ ಬೋರ್ಡ ಹಾಗು ಮ್ಯುನಿಸಿಪಾಲಿಟಿಗಳ ಶಿಕ್ಷಕರ ಸಮ್ಮೇಲನಗಳು ಜರಗಿ ವು. ಧಾರವಾಡ-ರೋಣಗಳಲ್ಲಾದ ಸಮ್ಮೇಲನಗಳ ಸಾದ್ಯಂತ ವೃತ್ತಾಂ ವೂ ಗದಗಿನ ಸಮ್ಮೇಲನದ ಅಧ್ಯಕ್ಷರ ಭಾಷಣವೂ ಕಳೆದ ಸಂಚಿಕೆ ುಲ್ಲಿ ಕೊಡಲ್ಪಟ್ಟಿರುವವು. ಈ ಸಂಚಿಕೆಯಲ್ಲಿ ಉಳಿದ ಸಮ್ಮೇಲನಗ ಲ್ಲಿ ನಡೆದ ವಿಶೇಷ ಸಂಗತಿಗಳನ್ನು ಮಾತ್ರ ಕೊಡುವೆವು.

೧. ಗದಗಿನ ಸಮ್ಮೇಲನವು.

ಈ ಸಮ್ಮೇಲನವು ಅಂ. ವ್ಯ. ಸ್ಕೂಲಿನ ಹಾಲಿನಲ್ಲಿ ಜಾನೇವಾರಿ ಂಗಳ ೧೦ನೇ ೧೩ನೇ ತಾರೀಖುಗಳ ದಿವಸ ನೆರೆದಿತ್ತು. ಅಧ್ಯಕ್ಷಸ್ಥಾನ ನ್ನು ಮೆ. ರೆ. ರಿವಿಂಗಟನ್ನ ಸಾಹೇಬ ಎಮ್. ಎ. ಇವರು ಅಲಂಕರಿಸಿ ರು. ಈ ಸಮ್ಮೇಲನಕ್ಕೆ ಅಂ. ವ್ಯ. ಸ್ಕೂಲ ಹೆಡ್‌ಮಾಸ್ತರರೂ, ಎಲ್ಲ ಕ್ಷಕರೂ ಹಾಜರ ಇದ್ದದ್ದಲ್ಲದೆ, ಊರೊಳಗಿನ ಕೆಲವು ಸಭ್ಯಗೃಹ ರೂ ಬಂದಿದ್ದರು. ಸಮ್ಮೇಲನದಲ್ಲಿ ಕೆಳಗೆ ಬರೆದ ಶಿಕ್ಷಕರು ನಿಬಂಧ ಗಳನ್ನು ಓದಿದರು; ಹಾಗು ಪಾಠಗಳನ್ನು ಪ್ರತ್ಯಕ್ಷವಾಗಿ ಕಲಿಸಿ ೋರಿಸಿದರು.

ನಿಬಂಧಗಳನ್ನು ಓದಿದವರು.

೧. ಬ. ಹ. ಉಪ್ಪಿನ. ಮಾಸ್ತರ ಲಿಂಗಧಾಳ: ಶಾರೀರಿಕ ವ್ಯಾಯಾಮ.
ಹ. ದು. ಹಡಗಲಿ. ಥೇಡಸ್ಕೂಲ ಮಾಸ್ತರ ಕೊಟುಮಚಗಿ: ಶಾಲೆಯು ತೋಗ್ಯತೆ ಷಿ. ರು. ಸಿ. ಪಿಡ್ಡನಗೌಡರ ಮಾಸ್ತರ ಹುಲಕೋಟಿ: ಸಾಲೆ

ಯು ತೋಟ. ಳ. ಪ್ರ. ಕ. ಮಾಳೇಕೊಪ್ಪ. ಮಾ. ಗದಗ-ಬೆಟಗೇರಿ: ಪಾಲಕರ ಸಹಕಾರಿಕ್ಷ್ವ. ಶಿ. ಆಯ್. ಪಿ. ನಿಂಬಾಳಕರ. ಮಾ. ಮಿಶನ್ ಸ್ಕೂ. ಸ್ವಿತ್ಸರ್ಲಂಡದ ವಿದ್ಯಾಭ್ಯಾಸ. ಪಾಠಗಳನ್ನು ಕಲಿಸಿ ತೋರಿಸಿದವರು:—
೬. ಸು. ನ. ಪೂಜಾರ. ಮಾ. ಕುರ್ತಕೋಟಿ. ೭. ಗು. ನ ಜೋಶಿ. ಅ. ಮಾ. ಹುಲಕೋಟಿ. ೮. ಹಂದಿಗೋಳ ಅ. ಮಾ. ಚಿಕ್ಕಹಂದಿಗೋಳ. ೯. ರೇ. ಸಿ. ಲಕ್ಕ್ಮೇಶ್ವರ. ಮಾ. ಗದಗ ಬಾ. ಸ್ಕೂಲ. ೧೦. ಪ್ರ. ಕ. ಮಾಳೇಕೊಪ್ಪ ಮಾ. ಗದಗ-ಬೆಟಗೇರಿ. ೧೧. ಬ. ಲ. ಮುಲ್ಲಾಪೂರ. ಅ. ಮಾ. ಲಕ್ಕುಂಡಿ. ೧೨. ಮು. ಬಾ. ಕುಲಕರ್ಣಿ ಮಾ. ಶಹಾಪೂರ ಪೇಠ. ೧೩. ತ. ನಾ. ಅವಿೂನಭಾವಿ. ಮಾ. ನರೇಗಲ್ಲ. ೧೪. ತಿ. ಬಾ. ನರಗುಂದ ಮಾ. ಹೊಂಬಳ. ೧೫. ಗು. ಕೇ. ಕುಲಕರ್ಣಿ. ಅ. ಮಾ. ಗಜೇಂದ್ರಗಡ ೧೬. ಗದಗ ಮ್ಯು. ಸಾಲೆಗಳ ತಾಲೀಮು ಮಾಸ್ತರ (ಡ್ರಿಲ್.)

ತಾರೀಖು ೧೦ನೇ ದಿವಸ ರಾತ್ರಿ ಮಿ. ತ. ನಾ. ಅವಿೂನಭಾವಿ ಹೆ. ಮಾ. ನರೇಗಲ್ಲ ಇವರು ಬ್ರಹ್ಮದೇಶದ ಐತಿಹಾಸಿಕ ಹಾಗು ಭೂಗೋಲ ಸಂಬಂಧದ ಉಪಯುಕ್ತವಾದಂಥ ಮನೋರಂಜಕವಾದಂಥ ಮಾಹಿತಿಯನ್ನು ಮ್ಯಾಜಿಕ್‌ಲ್ಯಾಂಟರ್ನದ ಚಿತ್ರಗಳ ಸಹಾಯದಿಂದ ಹೇಳಿದರು.

ತಾರೀಖು ೧೩ನೇ ದಿವಸ ರಾತ್ರಿ ಡಾಕ್ಟರ ಎಲ್. ಕೆ. ಢವಳಿ ಇವರು ಪ್ಲೇಗ, ಮಾರಿಕಾ ಜೇನೆಗಳ ಉತ್ಪತ್ತಿ ಹಾಗು ನಿವಾರಣೋಪಾಯ ಇವುಗಳ ಬಗ್ಗೆ ಮ್ಯಾಜಿಕ್‌ಲ್ಯಾಂಟರ್ನದ ಚಿತ್ರಗಳ ಸಹಾಯದಿಂದ ವ್ಯಾಖ್ಯಾನವನ್ನು ಕೊಟ್ಟರು.

ಇಲ್ಲಿಯ ಪ್ರಸಿದ್ಧ ಸಾವುಕಾರರು ಸಮ್ಮೇಲನದ ವೆಚ್ಚದ ಸಲುವಾಗಿ ಹಣದ ಸಹಾಯವನ್ನು ಮಾಡಿದ್ದಕ್ಕಾಗಿ, ಅವರೆಲ್ಲರ ಉಪಕಾರವು ಸಮಾರೋಪಣಸಮಾರಂಭದ ಕಾಲಕ್ಕೆ ಸಭೆಯಲ್ಲಿ ಸ್ಮರಿಸಲ್ಪಟ್ಟಿತು. ಸಮಾರಂಭವು ಮುಗಿದ ಬಳಿಕ ಇಲ್ಲಿಯ ಒಬ್ಬ ಫೋಟೋಗ್ರಾಫರರು ಸ್ವಂತ ವೆಚ್ಚದಿಂದ ಸಮ್ಮೇಲನಕ್ಕಾಗಿ ನೆರೆದ ಜನರ ಫೋಟೊ ತೆಗೆದು ಕೊಂಡರು

೨. ರಾಣೇಬೆನ್ನೂರಿನ ಸಮ್ಮೇಲನವು.

ಈ ಸಮ್ಮೇಲನವು ಮೊದಲೇ ಗೊತ್ತಾದ ಮೇರೆಗೆ ಎರಡು ದಿವಸ ಾಗದೆ, ಅಪರಿಹಾರ್ಯವಾದ ಕೆಲವು ಕಾರಣಗಳ ಮೂಲಕವಾಗಿ ಂದೇ ದಿವಸ, ಅಂದರೆ ತಾರೀಖು ೧೯ನೇ ಜಾನೇವಾರಿ ದಿವಸ ಜರ ಿತು. ಮುಂಬಯಿ ಲೆಜಿಸ್ಲೇಟೀವ್ಕೌನ್ಸಿಲದ ಸಭಾಸದರಾದ ಆನರೇ ಬಲ್ ವೆಂಕಣ್ಣಾನಾಯಿಕ ಇವರು ಅಧ್ಯಕ್ಷಸ್ಥಾನವನ್ನು ಸ್ವೀಕರಿಸಿದ್ದರು. ಮತ್ತು ಸದರ್ನ ಡಿವ್ಹಿಜನದ ಎಜ್ಯುಕೇಶನಲ್ ಇ. ಸಾಹೇಬರವರ ಪರಸ ಬಲ್ ಅ. ರಾದ ಮೇ. ವ್ಹಿ. ಎಸ್. ಘಾಟೆ ಇವರು ರಾ. ಸಾ. ಡೆಪೂಟಿ ಂ. ಇ. ರವರ ಆಮಂತ್ರಣಕ್ಕೆ ಮಾನಕೊಟ್ಟು, ಅದೇ ದಿವಸ ಧಾರವಾ ತದಿಂದ ಇಲ್ಲಿಗೆ ಬಂದು, ಸದ್ಯದ ಯುರೋಪದ ಮಹಾಯುದ್ಧದ ಸಾಧ ಗಳನ್ನೂ ಅದರ ಕ್ರಮವನ್ನೂ ಮ್ಯಾಜಿಕ್ಲ್ಯಾಂಟರ್ನದ ಚಿತ್ರಗಳ ಸಹಾಯದಿಂದ ವಿವರಿಸಿದರು. ಅವರು ಒಳ್ಳೇ ಶ್ರಮಬಟ್ಟು ವಿಪುಲವಾಗಿ ಸಂಗ್ರಹಿಸಿದ ಉಪಯುಕ್ತವೂ, ಮನೋರಂಜಕವೂ ಆದ ಮಾಹಿತಿ ಯನ್ನು ಅಸ್ಖಲಿತವಾದ ವಾಣಿಯಿಂದ ಹೇಳಿದರು. ಅವರ ಈ ವ್ಯಾಖ್ಯಾ ನವು ರಾಣೇಬೆನ್ನೂರ ಜನರಿಗೆ ಅಪೂರ್ವವಾದದ್ದಾಯಿತು.

ಈ ಸಮ್ಮೇಲನದಲ್ಲಿ ಕೆಲಸ ಮಾಡಿದ ಶಿಕ್ಷಕರ ಹೆಸರುಗಳು: ೧. ಕೃ. ಶ್ರೀ. ವೈದ್ಯ ಮಾಸ್ತರ ಧಾರವಾಡ. ೨. ಮುಲ್ಗಾಪೂರ ಅ. ಮಾ. ಲಕ್ಕುಂಡಿ. ೩. ಲಿ. ರಾ. ಅಕ್ಕೂರ ಮಾ. ರಟ್ಟಿಹಳ್ಳಿ. ೪. ಬೂದಿ ಹಾಳ ಮಾ. ಮೇಡ್ಲೇರಿ. ೫. ಬಿ. ಕೇ. ಕಾನಡೆ ಮಾ. ಅಲೂರ.

ಈ ಸಮ್ಮೇಲನದಲ್ಲಿ ಶಿಕ್ಷಕರು ಮಾಡಿ ತಂದ ಶಿಕ್ಷಣೋಪಕರ ಣಗಳಲ್ಲಿ ಮಿ. ದಿವೇಕರ ಮಾಸ್ತರ ತುಮ್ಮಿನಕಟ್ಟಿ ಇವರು ಮಿಡುಳಿನ ರಚನೆಯನ್ನು ತೋರಿಸುವ ಮಾಡೆಲನ್ನು ಮಾಡಿ ತಂದಿದ್ದರು.

ಅಧ್ಯಕ್ಷರಾದ ಆನರೇಬಲ್ ವೆಂಕಣ್ಣಾ ನಾಯಿಕ ಇವರು ತಮ್ಮ ಸ್ವಾಭಾವಿಕವಾದ ಗಾಂಭೀರ್ಯ ಉಲ್ಲಾಸವೃತ್ತಿಗಳಿಂದ ಮಾಡಿದ ಸಮಾ ರೋಪಣದದ ಭಾಷಣವನ್ನು ಕಳೆದ ತಿಂಗಳ ಸಂಚಿಕೆಯಲ್ಲಿ ಕೊಟ್ಟೇ ಇದ್ದೇವೆ.

೩. ಸಿಗ್ಗಾವಿಯ ಸಮ್ಮೇಲನವು.

ಈ ಸಮ್ಮೇಲನವು ತಾರೀಖು ೨೬ನೇ ೨೪ನೇ ಜಾನೇವಾರಿ

ದಿವಸ ನೆರೆಯಿತು; ಈ ಸ್ಥಳವು ರೇಲ್ವೆ ಸ್ಟೇಶನವನ್ನು ಬಿಟ್ಟು ದೂರ ಇದ್ದ ದ
ರಿಂದಲೂ ಬೇರೆ ಅಗತ್ಯದ ಕೆಲಸಗಳು ಇದ್ದದರಿಂದಲೂ, ಮೆ. ಡೆಪ್ಯೂಟಿ
ಎಜ್ಯುಕೇಶನಲ್ ಇನಸ್ಪೆಕ್ಟರವರಿಗೆ ಈ ಸಮ್ಮೇಲನದಲ್ಲಿ ಹಾಜರ ಇ
ಲಿಕ್ಕೆ ಅನುಕೂಲವಾಗಲಿಲ್ಲ. ಮೇ. ೪ ನೇ ಅ. ಡೆಪ್ಯೂಟಿ ಎ. ಇ. ಇ
ರೂ ಅಲ್ಲಿಯ ತಾಲೂಕ ಮಾಸ್ತರರಾಗಿದ್ದ ಮಿ. ಕಾಂತನವರ ಇವರು
ಕೂಡಿ ಸಮ್ಮೇಲನದ ಎಲ್ಲ ಕಾರ್ಯಗಳನ್ನು ಜರಗಿಸಿದರು.

ಈ ಸಮ್ಮೇಲನದಲ್ಲಿ ಕೆಲಸ ಮಾಡಿದ ಶಿಕ್ಷಕರ ಹೆಸರುಗಳು.

ನಿಬಂಧವನ್ನು ಓದಿದವರು.

೧. ಸೀ. ಚ. ವಸ್ತ್ರದ ಮಾಸ್ತರ ಇಂಗಳಿಗಿ. ೨. ಭ. ಕ. ಪೂಜಾರ
ಷಿ. ಮುಗದ, ಮಾಸ್ತರ ತಡಸ. ೪. ನಾ. ರಾ. ಕುಲಕರ್ಣಿ ಮಾಸ್ತರ
ಅತ್ತಿಗೇರಿ. ೫. ನ. ವ್ಯಾ. ಆಲೂರ ಮಾಸ್ತರ ಕಳಸ. ೬. ಮು. ಬ
ಪಾಟೀಲ, ಮಾಸ್ತರ ಧುಂಡಸಿ. ೭. ನೀ. ಲ. ಪೂಜಾರ ಅ. ಮಾಸ್ತರ
ಬಂಕಾಪೂರ.

ಪಾಠಗಳನ್ನು ಕಲಿಸಿದವರು.

೧. ಮುಗದ. ಮಾಸ್ತರ ತಡಸ. ೨. ನ. ವ್ಯಾ. ಆಲೂರ, ಮಾಸ್ತರ
ಕಳಸ. ೩. ಮು. ಬ. ಪಾಟೀಲ, ಮಾಸ್ತರ ಧುಂಡಸಿ. ೪. ಫು. ಗು. ಪಾ
ಟೀಲ ಮಾಸ್ತರ ತರ್ಲಘಟ್ಟಿ. ೫. ಹ. ವಿ. ಹಳೇಪ್ಯಾಟಿ ಅಸಿ. ಮಾಸ್ತರ
ತಿಗ್ಗಾವ. ೬. ಕಾಂತನವರ ಮಾಸ್ತರ ತಿಗ್ಗಾವ. ೭. ನೀ. ಲ. ಪೂಜಾರ
ಅ. ಮಾಸ್ತರ ಬಂಕಾಪೂರ. ೮. ಬ. ಚ. ಮುಳಗುಂದ ಅ. ಮಾಸ್ತರ
ಸಿಗ್ಗಾವ. ೯. ಮ. ಹು. ಪಠಾಣ ಉರ್ದು ಸ್ಕೂ. ಮಾ. ಬಂಕಾಪೂರ.
೧೦. ಪ. ಗು. ಪಾಟೀಲ ಮಾಸ್ತರ ತರ್ಲಘಟ್ಟಿ.

೪. ಹುಬ್ಬಳ್ಳಿಯ ಸಮ್ಮೇಲನವು.

ಧಾರವಾಡ ಜಿಲ್ಲೆಯಲ್ಲಿ ಹುಬ್ಬಳ್ಳಿಯು ಎಲ್ಲಕ್ಕೂ ದೊಡ್ಡ ಪಟ್ಟಣ
ವಾಗಿರುವದು. ಇಡೀ ತಾಲೂಕಿನೊಳಗಿನ ಲೋಕಲ್ ಬೋರ್ಡಿನೊಳ
ಗಿನ ಶಿಕ್ಷಕರ ಸಂಖ್ಯೆಗಿಂತ ಇಲ್ಲಿಯ ಮುನಿಸಿಪಾಲಿಟಿಯ ಶಿಕ್ಷಕರ ಸಂಖ್ಯೆ
ಯು ಹೆಚ್ಚು ಇರುವದು. ಈ ಊರಲ್ಲಿ ಹಾಯಸ್ಕೂಲ, ಕೋರ್ಟ ಕಚೇರಿ
ಗಳು ಇದ್ದದರಿಂದ ಇಲ್ಲಿ ಎಫೆಕ್ಟೀ ಪದವೀಧರರಾದ ಶಿಕ್ಷಕರೂ, ವಕೀ
ಲರೂ, ಡಾಕ್ಟರರೂ ಮೊದಲಾದ ವಿದ್ವಜ್ಜನರು ಇರುವರು. ಇದಲ್ಲದೆ ಈ

ಪಟ್ಟಣವು ವ್ಯಾಪಾರದ ಮುಖ್ಯಸ್ಥಳವಾಗಿರುವದರಿಂದ ದೊಡ್ಡ ದೊಡ್ಡ ವ್ಯಾಪಾರಸ್ಥರೂ ಸೆಟ್ಟಿ ಸಾವಕಾರರೂ ಬಹುಜನರಿರುವರು, ಈ ಎಲ್ಲ ಕಾರಣಗಳಿಂದ ಇಲ್ಲಿಯ ಸಮ್ಮೇಲನವು ಶಿಕ್ಷಕರ ಸಂಖ್ಯೆಯಿಂದಲೂ, ಪ್ರತಿಷ್ಠಿತರಾದ ಹಲವು ಜನ ಸಭಿಕರಿಂದಲೂ, ಉಳಿದ ಎಲ್ಲ ಸಮ್ಮೇಲನಗಳಿಗಿಂತ ಮಹತ್ವದ್ದೆಂದು ಹೇಳಬಹುದು.

ಸಮ್ಮೇಲನವು ಇಲ್ಲಿಯ ಮ್ಯುನಿಸಿಪಾಲಿಟಿಯ ಅಟ್ಟಿದ ಮೇಲಿನ ವಿಶಾಲವಾದ ಹಾಲಿನಲ್ಲಿ ನೆರೆದಿತ್ತು. ಚೀಫ ಆಫೀಸರರಾದ ರಾ ಸಾ. ಗುಂಜೀಕರ ಇವರು ಎಲ್ಲ ತರದ ಅನುಕೂಲತೆಗಳನ್ನು ಮಾಡಿಕೊಟ್ಟಿದ್ದರು.

ಇಲ್ಲಿಯ ಸ್ಕೂಲ ಬೋರ್ಡ ಚೇಅರಮನ್ನರೂ, ಮುನಿಸಿಪಾಲಿಟಿಯ ಅಧ್ಯಕ್ಷರೂ ಆದ ಮ. ರಾ ರಾ. ವಾಳವೇಕರ ಇವರು ಈ ಸಮ್ಮೇಲನದ ಅಧ್ಯಕ್ಷಸ್ಥಾನವನ್ನು ಅಲಂಕರಿಸಿದ್ದರು.

ಈ ಸಮ್ಮೇಲನದಲ್ಲಿ ಕೆಲಸ ಮಾಡಿದ ಶಿಕ್ಷಕರ ಹೆಸರುಗಳು.

ನಿಬಂಧಗಳನ್ನು ಓದಿದವರು.

೧. ಹಂಚಿನಾಳ ಮಾಸ್ತರ ಹುಬ್ಬಳ್ಳಿ. ೨. ವೆ. ಗೊ. ಡೋಣಿಸಾಲ ಮಾಸ್ತರ ಉಣಕಲ್ಲ. ೩. ಮುಂಡರಿಗಿ ಮಾಸ್ತರ ಹುಬ್ಬಳ್ಳಿ. ೪. ಹಿರೇ ನರ್ತಿ ಮಾಸ್ತರ ಹುಬ್ಬಳ್ಳಿ. ೫. ಹೊಳಿಯಪ್ಪಾ ಮಾಸ್ತರ ತಿರಗುಪ್ಪಿ. ೬. ಶ. ಚ. ಜೋತಿ ಮಾಸ್ತರ ಹುಬ್ಬಳ್ಳಿ.

ಪಾಠಗಳನ್ನು ಕಲಿಸಿದ ಶಿಕ್ಷಕರು.

೧. ಡೋಣಿಸಾಲ ಮಾಸ್ತರ ಉಣಕಲ್ಲ. ೨. ತಮಣಾಚಾರ್ಯ ಅ. ಮಾಸ್ತರ ಹುಬ್ಬಳ್ಳಿ. ೩. ಹಿರೇಗೌಡರ ಅ|| ಮಾಸ್ತರ ಹುಬ್ಬಳ್ಳಿ. ೪. ಶ. ಚ. ಪಶುವತಿ ಅ. ಮಾಸ್ತರ ಧಾರವಾಡ. ೫. ಮುಲ್ಲಾ ಅ. ಮಾಸ್ತರ ಉರ್ದು ಸ್ಕೂಲ ಹುಬ್ಬಳ್ಳಿ. ೬. ಹ. ಕೃ. ರಾಯಚೂರ ಅ. ಮಾಸ್ತರ ಉಣಕಲ್ಲ. ೭. ತ. ಸಾ, ಅಮ್ಮಿನಭಾವಿ ಮಾಸ್ತರ ನರೇಗಲ್ಲ. ೮. ಕಟ್ಟೀಮನಿ ಮಾಸ್ತರ ಬೀಡನಹಾಳ. ೯. ತಿ. ಅ. ಸೆಟ್ಟಿ ಮಾಸ್ತರ ಕೋಳಿವಾಡ.

ಈ ಸಮ್ಮೇಲನದಲ್ಲಿ ಜಿಲ್ಲೆಯ ಪ್ರಸಿದ್ಧ ವಕೀಲರೂ ಸ್ಯಾನಿಟರಿ ಸೋಸಿಏಶನ್ನಿನ ಮೆಂಬರರೂ ಆದ ಮಿಸ್ತರ ವಾಗಳೆ ಇವರು "ಹಳ್ಳಿ

ಯ ಆರೋಗ್ಯತೆ" ಈ ವಿಷಯವಾಗಿ ಒಂದು ಉಪಯುಕ್ತವಾದ ನಿಬಂಧವನ್ನು ಓದಿ ಶಿಕ್ಷಕರಿಗೆ ಬಹಳ ಲಾಭವನ್ನು ಮಾಡಿಕೊಟ್ಟರು.

ಉಣಕಲ್ಲ ಶಾಲೆಯ ಕೆಲವು ವಿದ್ಯಾರ್ಥಿಗಳು ಕುಸ್ತಿ, ದಾಂಡಪಟ್ಟಿ ತಿರುವೋಣ ಮೊದಲಾದ ಶಾರೀರಿಕ ಶಿಕ್ಷಣದ ಕೆಲಸಗಳನ್ನು ಮಾಡಿ ತೋರಿಸಿದರು.

ಸೂಡಿ ಶಾಲೆಯ ಅ. ಮಾಸ್ತರ ಭೀ. ಶ. ಪೂಜಾರ ಇವರು ತಾವು ಕಲಿಸಿ ತಯಾರಮಾಡಿದ ತಿಳ್ಳೀ ಆಟವಾಡುವ ಹುಡುಗರನ್ನು ಇಲ್ಲಿಗೆ ಕರಕೊಂಡು ಬಂದು ಇಲ್ಲಿಯ ಹುಡುಗರ ಸಂಗಡ ಆಡಿಸಿದರು. ಆಟದಲ್ಲಿ ಅವರಿಗೆ ಜಯವು ದೊರೆಯದಿದ್ದಾಗ್ಯೂ ಹಳ್ಳಿಯಲ್ಲಿ ಕಲಿತ ಹುಡುಗರಿಗೆ ಪಟ್ಟಣದ ಹುಡುಗರ ಚಾತುರ್ಯ, ವ್ಯವಹಾರಜ್ಞಾನ, ಚಟುವಟಿಕೆ ಮೊದಲಾದ ಗುಣಗಳನ್ನು ಕಲಿತುಕೊಳ್ಳಲಿಕ್ಕೆ ಆಸ್ಪದವಾಯಿತು.

ಮೊದಲನೇ ದಿವಸ, ಅಂದರೆ ತಾರೀಖು ೨ ನೇ ಫೇಬ್ರುವರಿ ದಿವಸ ಸಾಯಂಕಾಲಕ್ಕೆ ದಕ್ಷಿಣಭಾಗದ ಎಜ್ಯುಕೇಶನಲ್ ಇನಸ್ಪೆಕ್ಟರಸಾಹೇಬರವರ ಪರಸನಲ್ ಅಶಿಸ್ಟಂಟರಾದ ಮೆ. ಬ್ಲಿ. ಎಸ್ ಘಾಟೆ ಇವರು ರಾ. ಸಾ. ಡೆಪ್ಯೂಟಿಯವರ ಆಮಂತ್ರಣಕ್ಕೆ ಮಾನಕೊಟ್ಟು ಇಲ್ಲಿಗೆ ಬಂದು ಯುರೋಪದ ಮಹಾಯುದ್ಧವು ನೆಲದಮೇಲೆಯೂ, ಸಮುದ್ರದ ಮೇಲೆಯೂ ಆಕಾಶದಲ್ಲಿಯೂ, ಯಾವ ಯಾವ ಪ್ರಕಾರ ನಡೆದಿರುವದೆಂಬದನ್ನು ಮ್ಯಾಜಿಕ್‌ಲ್ಯಾಂಟರ್ನದ ಚಿತ್ರಗಳ ಸಹಾಯದಿಂದ ಒಳ್ಳೇ ಸುರಸವಾಗಿಯೂ ಮನೋರಂಜಕವಾಗಿಯೂ ವ್ಯಾಖ್ಯಾನಕೊಟ್ಟು ಅಲ್ಲಿ ನೆರೆದ ಪ್ರಾಥಮಿಕ ಶಾಲಾಶಿಕ್ಷಕರು ತಮಗೆ ಋಣಿಯಾಗುವಂತೆ ಮಾಡಿದರು.

ಪ್ರೊ. ಜೋಶಿ ಎಂಬವರು ಪ್ರಾಣಾಯಾಮದಿಂದ ಕಬ್ಬಿಣದ ಸರಪಳಿಯನ್ನು ಹರಿಯೋಣ, ಅಜ್ಞಾತವಾದ ವಸ್ತುಗಳನ್ನು ಹೇಳೋಣ ಇಂಥೆ ಮೊದಲಾದ ಅದ್ಭುತವಾದ ಕಾರ್ಯಗಳನ್ನು ಮಾಡುವದು ಶಕ್ಯವಿರುವದೆಂಬದನ್ನು ಕೆಲವು ಪ್ರಯೋಗಗಳನ್ನು ಮಾಡಿತೋರಿಸಿ ಸಭಿಕರನ್ನು ಆಶ್ಚರ್ಯಪಡಿಸಿದರು.

ಬ್ಯಾಡಿಗಿ ಶಾಲೆಯ ವಿದ್ಯಾರ್ಥಿಗಳಿಂದ ತಯಾರಿಸಲ್ಪಟ್ಟ "ಪ್ಲೇಗ

ಮೈಲಿ ಚುಚ್ಚಿಸಿಕೊಳ್ಳೋಣ" ಎಂಬ ವಿಷಯವಾಗಿ ಒಂದು ಚಿಕ್ಕಪಾಠವು ನಾಟಕರೂಪವಾಗಿ ಸಭೆಯಲ್ಲಿ ಮಾಡಿತೋರಿಸಲ್ಪಟ್ಟಿತು.

ಬೀಳಗಿ ತಾಲೂಕಿನೊಳಗಿನ ಸಭ್ಯಗೃಹಸ್ಥರಂತೆ ಈ ತಾಲೂಕಿನೊಳಗಿನ ಕೆಲವು ಸದ್ಗೃಹಸ್ಥರು ಸಮ್ಮೇಲನದ ವೆಚ್ಚಕ್ಕಾಗಿಯೂ ಶಿಕ್ಷಕರ ಆದರಾತಿಥ್ಯಕ್ಕಾಗಿಯೂ ಹಣದ ಸಹಾಯವನ್ನು ಮಾಡಿದರು. ಸಭೆಯಲ್ಲಿ ಅವರೆಲ್ಲರ ಉಪಕಾರವು ಸ್ಮರಿಸಲ್ಪಟ್ಟಿತು.

ಸಮ್ಮೇಲನದ ಅಧ್ಯಕ್ಷರಾದ ಮು. ರಾ. ರಾ. ವಾಳವೇಕರ ವಕೀಲ ಇವರು ಒಳ್ಳೇ ಉತ್ಸಾಹದಿಂದ ಸಮಾರೋಪಣದ ಕಾಲಕ್ಕೆ ಮಾತಾಡಿದ್ದೇನಂದರೆ: —

"ಈ ಸಮ್ಮೇಲನವನ್ನು ಲೋಕಲ್‌ಬೋರ್ಡಿನ ಶಾಲೆ ಇರುವ ಯಾವದೊಂದು ಊರಲ್ಲಿ ಮಾಡದೆ ಹುಬ್ಬಳ್ಳಿಯಲ್ಲಿ ಮಾಡಿದ್ದರಿಂದ ಲೋಕಲ್‌ಬೋರ್ಡಿನ ಮಾಸ್ತರರಿಗೂ, ಮ್ಯುನಿಸಿಪಾಲಿಟಿಯ ಮಾಸ್ತರರಿಗೂ ಸರಿಯಾಗಿ ಲಾಭವಾಯಿತು. ನಾವು ಪ್ರತಿವರ್ಷ ಇಲ್ಲಿಯ ಶಿಕ್ಷಕರ ಸಮ್ಮೇಲನವನ್ನು ಮಾಡಿಸುತ್ತಿರುತ್ತೇವೆ. ಆದರೆ ಈ ಸಮ್ಮೇಲನದಲ್ಲಿ ಪ್ರತ್ಯಕ್ಷಪಾಠಗಳನ್ನು ಕಲಸೋಣ, ಶಾಲಾವಸ್ತುಗಳ ಪ್ರದರ್ಶನ ಈ ಕೆಲಸಗಳು ಹೊಸವಾಗಿಯೂ ಅನುಕರಣೀಯವಾದವುಗಳೂ ಆದವು. ಈ ಸಮ್ಮೇಲನದಲ್ಲಿ ನೈತಿಕಶಿಕ್ಷಣ, ಬಾಲಕರ ಶಿಕ್ಷಣ ಹಳ್ಳಿಯ ಶಾಲೆಗಳನ್ನು ನಡೆಯಿಸುವ ಕ್ರಮ ಈ ಮಾದರಿಯ ಪಾಠಗಳು ಹೆಚ್ಚು ಪರಿಣಾಮಕಾರಕವಾದವುಗಳಾದವು. ಶಿಕ್ಷಕರೆ, ನೀವು ನಿಮಗೆ ದೊರೆಯುವ ವೇತನವು ನಿಮ್ಮ ಕೆಲಸದ ಮಾನದಿಂದ ಅತ್ಯಲ್ಪವಾಗಿರುವದೆಂದು ಅಸಂತುಷ್ಟರಾಗದೆ ಲೋಕಕಲ್ಯಾಣದ ಅತಿಪವಿತ್ರವಾದ ಕಾರ್ಯವನ್ನು ವಹಿಸಿರುವಿರೆಂಬದನ್ನು ಲಕ್ಷದಲ್ಲಿಟ್ಟು, ಆ ಕಾರ್ಯವನ್ನು ಮನಃಪೂರ್ವಕವಾಗಿ ಮಾಡಬೇಕೆಂದು ನಿಮಗೆ ಸೂಚಿಸುತ್ತೇನೆ." ಇತ್ಯಾದಿ.

ಕೊನೆಗೆ ಈ ಸಮ್ಮೇಲನಗಳಿಂದ ಈ ಜಿಲ್ಲೆಯಲ್ಲಿ ಶಿಕ್ಷಕರ ಮೇಲೆಯೂ, ಸಾಮಾನ್ಯ ಜನ ಸಮಾಜದ ಮೇಲೆಯೂ ಯಾವತರದ ಪರಿಣಾಮಗಳಾಗುವವೆಂಬ ಬಗ್ಗೆ ರಾ. ಸಾ. ಡೆ. ಎ. ಇನಸ್ಪೇಕ್ಟರ ಅಭಿಪ್ರಾಯವನ್ನು ಇಲ್ಲಿ ಕೊಡುವೆವು: —

ಈ ಜಿಲ್ಲೆಯೊಳಗೆ ಸದ್ಯಕ್ಕೆ ಇರುವ ಶಿಕ್ಷಕರಲ್ಲಿ ಮೂರ್ಕ

ಗುಂಪುಗಳನ್ನು ಮಾಡಬಹುದು. ಟ್ರೇಂಡರಾದ ಅನುಭವಿಕ ಶಿಕ್ಷಕರು, ಟ್ರೇಂಡರಾದ ಹೊಸ ಶಿಕ್ಷಕರು, ಅಂಟ್ರೇಂಡ ಅನ್‌ಪಾಸ ಶಿಕ್ಷಕರು ಸಮ್ಮೇಲನಗಳಿಂದ ಈ ಮೂರು ತರದ ಶಿಕ್ಷಕರಿಗೂ ಲಾಭವಾಗಿರುವದು. ಅನುಭವಿಕರಾದ ಶಿಕ್ಷಕರಿಗೆ ತಮ್ಮ ಅನುಭವಗಳನ್ನು ಪರಸ್ಪರವಾಗಿ ವಿನಿಮಯ ಮಾಡಲಿಕ್ಕೆ ಅನುಕೂಲವಾಯಿತು. ಹೊಸಬರಾದ ಟ್ರೇಂಡರಿಗೆ ಅನುಭವಿಕ ಶಿಕ್ಷಕರ ಅನುಭವದ ಲಾಭವೂ, ಅನುಭವಿಕರಾದ ಹಳೆ ಟ್ರೇಂಡರಿಗೆ ಹೊಸ ಶಿಕ್ಷಣದ ಮೂಲತತ್ವಗಳ ಲಾಭವೂ ಆದವು. ಮೂರನೇ ವರ್ಗದ ಶಿಕ್ಷಕರು ಹಲಕೆಲವು ಮಾದರಿಯ ಪಾಠಗಳನ್ನು ನೋಡಿದ್ದರಿಂದ ಟ್ರೇನಿಂಗ ಕಾಲೇಜಕ್ಕೆ ಹೋಗಿ ಎರಡು ದಿವಸ ಪಾಠಗಳನ್ನು ನೋಡಿ ಬಂದಂತೆ ಆಯಿತು. ಮತ್ತು ಎಲ್ಲ ಶಿಕ್ಷಕರಲ್ಲಿಯೂ ಮುಂದಿನ ವರ್ಷದ ಸಮ್ಮೇಲನದಲ್ಲಿ ಮಾದರಿಯ ಪಾಠಗಳನ್ನು ಕೊಡುವ ವಿಷಯದಲ್ಲಿಯೂ ನಿಬಂಧಗಳನ್ನು ಬರೆಯುವ ವಿಷಯದಲ್ಲಿಯೂ ಹೊಸ ಹೊಸ ಶಿಕ್ಷಣೋಪಕರಣಗಳನ್ನು ಸಿದ್ಧ ಮಾಡುವವಿಷಯದಲ್ಲಿಯೂ ಒಂದು ಪ್ರಕಾರದ ಜಾಗ್ರತೆಯು ಉತ್ಪನ್ನವಾಗಿರುವದು.

ತೀರ ಹಳ್ಳಿಯ ಶಾಲೆಯಲ್ಲಿ ಮನಮುಟ್ಟಿ ಕೆಲಸ ಮಾಡುವ ಒಬ್ಬ ಸಣ್ಣ ಶಿಕ್ಷಕನಿಗೂ ಕೂಡ ತನ್ನ ಕೆಲಸವನ್ನು ವರಿಷ್ಠರ ಕಣ್ಣುಮುಂದೆ ಇಡಲಿಕ್ಕೆ ಅನುಕೂಲವಾಯಿತೆಂಬ ನಂಬಿಗೆಯು ಹುಟ್ಟಿರುವದು.

ಶಿಕ್ಷಣದಲ್ಲಿ ಶಾರೀರಿಕ ಶಿಕ್ಷಣವು ಮಹತ್ವದ ಅಂಗವಾಗಿರುವದೆಂಬ ಸಂಗತಿಯು ಎಲ್ಲ ಶಿಕ್ಷಕರಿಗೂ ಗೊತ್ತಿದ್ದಾಗ್ಯೂ ಕೆಲವು ಶಿಕ್ಷಕರು ಅದನ್ನು ವ್ಯವಸ್ಥೆಯಿಂದ ಕಲಿಸಿದ್ದನ್ನು ಬೇರೆ ಶಿಕ್ಷಕರು ನೋಡಿದರು. ಇದರಿಂದ ಎರಡು ತರದ ಪರಿಣಾಮಗಳಾಗಿರುವವು. ಮೇಲೆ ಹೇಳಿದಂತೆ ಶಾರೀರಿಕ ಶಿಕ್ಷಣದ ಬಗ್ಗೆ ಪ್ರಯತ್ನ ಮಾಡಿದ ಶಿಕ್ಷಕರು ಹೆಚ್ಚು ಉತ್ಸಾಹಗೊಂಡು ತಮ್ಮ ಊರುಗಳಿಗೆ ಮರಳಿ ಕಲಿಕ್ಕರ ಆಳಿ ಕಲಿಕ್ಕರ ಮೊದಲಾದ ಅಧಿಕಾರಿಗಳು ಬಂದಾಗ ಅವರಿಂದ ಶಾರೀರಿಕ ಶಿಕ್ಷಣಕ್ಕೆ ಅವಶ್ಯವಾದ ಬೈಲುಗಳ ಅನುಕೂಲತೆಗಳನ್ನೂ ಊರ ಜನರಿಂದ ಹಣದ ಅನುಕೂಲತೆಯನ್ನೂ ಮಾಡಿಕೊಂಡಿರುವರು. ಉಳಿದವರಲ್ಲಿ ಕೆಲವರು ತಾವೂ ಆ ತರದ ಪ್ರಯತ್ನಗಳನ್ನು ಮಾಡಬೇಕೆಂದು ಹುರುಪುಗೊಂಡಿರುವರು.

ಪ್ರಕೃತಿವಿಮರ್ಶೆಯ ಪಾಠಗಳು.

(ಫೆಬ್ರುವರಿ ತಿಂಗಳಿಂದ ಮುಂದೆ ಸೇರಿದ್ದು.)

ಒಂದು ಬೀಜವು ಬದುಕಿ ಸಸ್ಯವಾಗಿ ಬೆಳೆದು ಬರುವದು ಆದರಿಂದ ಮೊಳೆಯು ಹೊರಟಾಗ ಸೂಚಿಸಲ್ಪಡುವದು. ಬೀಜದಿಂದ ಮೊದಲು ಬರುವ ಮೊಳೆಯು ಸಸ್ಯದ ಬೇರಿನ ಭಾಗವು. ನಾವು ಅವರೆ, ಕಡಲೆ ಮೊದಲಾದ ಸಸ್ಯಗಳ ಬೀಜಗಳನ್ನು ಸ್ವಲ್ಪಕಾಲ ನೀರಿನಲ್ಲಿ ನೆನಸಿದ್ದರೆ ಮೊಳೆಯು ಹೊರಡುವದು ಸುಲಭವಾಗಿ ಗೋಚರವಾಗುವದು. ಬೇರಿನ ಕಾರ್ಯಗಳಲ್ಲಿ ಸಸ್ಯವನ್ನು ಆದರಸ್ಥಾನದಲ್ಲಿ ನಿಲ್ಲಿಸುವದು ಮುಖ್ಯವಾದವುಗಳಲ್ಲೊಂದೆಂಬುವದನ್ನು ಗಮನಿಸಿದರೆ ಒಂದು ಸಸ್ಯವು ಬೆಳೆಯುವಾಗ ಮೊದಲು ಬೇರು ಬರುವದು ಸರಿಯಾದ ಕ್ರಮವೆಂದು ತೋರಿಬರುವದು. ಒಂದು ಮನೆಯ ಮೇಲ್ಛಾಗವು ಏಳುವದಕ್ಕೆ ಮೊದಲು ಅದಕ್ಕೆ ಸರಿಯಾದ ತಳಹದಿಯು ಹೇಗೆ ಅವಶ್ಯಕವೋ, ಹಾಗೆಯೆ ಒಂದು ಗಿಡದ ಕಾಂಡ, ಎಲೆಗಳು ಶಾಖೆಗಳು ಬೆಳೆಯುವದಕ್ಕೆ ಮುಂಚೆ ಅವುಗಳಿಗೆ ಆಧಾರವಾದ ಬೇರು ಭೂಮಿಯಲ್ಲಿ ಊರಿರಬೇಕಾದದ್ದು ಅವಶ್ಯಕ. ನಾವು ಬೀಜವನ್ನು ಅದರ ಸ್ಥಾನದಲ್ಲಿ ಹೇಗೆ ಇಟ್ಟರೂ, ಅದರಿಂದ ಹೊರಡುವ ಬೀಜಾಂಕುರವು ಅಧೋಮುಖವಾಗಿ ಬೆಳೆಯುವದು.

ಬೇರುಗಳಲ್ಲಿ ಲಕ್ಷಿಸತಕ್ಕ ವಿಧಗಳು.—(೧) ಕೆಲವು ಗಿಡಗಳಲ್ಲಿ ಅವರೆ ಸಸ್ಯದಲ್ಲಿ ಬರುವ ಹಾಗೆ, ಬೀಜದಿಂದ ಹೊರಟ ಅಂಕುರವು ಬಲಿತು ದೊಡ್ಡದಾಗಿ, ಅದರಿಂದ ಕವಲುಗಳುಂಟಾಗಿ, ಅವೂ ಬಲಿತು ದೊಡ್ಡವಾಗಿ, ಎಲ್ಲವೆ ಬೆಳೆಯುತ್ತಲೆ ಇರುವವು. ಸಸ್ಯಗಳು ದೊಡ್ಡವಾದಹಾಗೆ ಮೊದಲು ಬಂದ ಬೇರು ಗಡುತರವಾಗಿ ಬೆಳೆದು, ಅದರಲ್ಲಿ ಅನೇಕ ಕವಲುಗಳೂ, ಆ ಕವಲುಗಳಿಂದ ಮತ್ತೂ ಸಣ್ಣವಾದ ಕವಲುಗಳೂ ಹೊರಟು ಎಲ್ಲಾ ಕಡೆಗಳಲ್ಲಿ ವ್ಯಾಪಿಸಿಕೊಂಡಿರುತ್ತವೆ. ಹೀಗೆ ಒಂದು ಪ್ರಧಾನವಾದ ಬೇರನ್ನು (ಅದರಿಂದ ಹೊರಟ ಅನೇಕ ಶಾಖೆಗಳು ಸಹಿತವಾಗಿ) ತಾಯಿಬೇರೆಂದು ಕರೆಯುತ್ತೇವೆ.

(೨) ಕೆಲವು ಸಸ್ಯಗಳ ಬೇರಿನ ಭಾಗದಲ್ಲಿ ಹೀಗೆ ಒಂದು ಗಡುತರವಾದ ಬೇರೂ ಅದರಿಂದ ಹೊರಟ ಕವಲುಗಳೂ ಕಾಣದೆ, ಒಂದೆ ಸಮ

ವಾಗಿ ಕಾಣುವ ಅನೇಕ ಸಣ್ಣ ಸಣ್ಣ ಬೇರುಗಳು ಇರುತ್ತವೆ. ಹುಲ್ಲು ಭತ್ತ, ಜೋಳ, ಕಬ್ಬು ಮುಂತಾದವುಗಳಲ್ಲಿ ಕಾಂಡದ ಅಡಿಯಲ್ಲಿ ತಂ ಗಳಂತಿರುವ ಅನೇಕ ಬೇರುಗಳಿರುವದನ್ನು ನಾವು ನೋಡಬಹುದು ಇವುಗಳನ್ನು ತೊಡಕುಬೇರುಗಳೆಂದು ಹೇಳಬಹುದು. ಈ ಸಸ್ಯಗಳ ಬೀಜಗಳಿಂದ ಮೊಳೆಯುವಾಗ ಬರತಕ್ಕ ಮೊಳೆಯು ಬಹು ಬೇಗ ಕೆಟ್ಟುಹೋಗುವದರಿಂದ, ಒಂದು ಪ್ರಧಾನವಾದ ಬೇರು ಬರಲು ಅ ಕಾಶವಿರುವದಿಲ್ಲ.

ನಮ್ಮ ಸುತ್ತಲೂ ಇರುವ ಮರ ಗಿಡಗಳ ಬೇರುಗಳನ್ನು ಪರೀಕ್ಷಿ ಸಿ ನೋಡಿದರೆ, ಅವು ಮೇಲೆ ಹೇಳಿದ ಎರಡು ಜಾತಿಗಳ ಬೇರುಗಳಲ್ಲಿ ಯಾವದಾದರೂ ಒಂದಾಗಿರುವದೆಂದು ತಿಳಿಯುವದು. ಸಸ್ಯಗಳಲ್ಲಿ ಮುಖ್ಯವಾಗಿರತಕ್ಕವು ಈ ಎರಡು ಜಾತಿಯ ಬೇರುಗಳು:–ಅವರೆ, ಬದನೆ, ಬೆಂಡೆ, ಆಲ, ಹುಣಸೆ, ಮೊದಲಾದವುಗಳಲ್ಲಿ ತಾಯಿಬೇರು ಗಳು; ಭತ್ತ, ಗೋಧಿ, ಜೋಳ, ತೆಂಗು, ಅಡಿಕೆ, ಈಚಲು ಮುಂತಾದ ವುಗಳಲ್ಲಿ ತೊಡಕು ಬೇರುಗಳು.

ಪ್ರತಿಯೊಂದು ಸಸ್ಯದಲ್ಲಿ ಬೇರಿನ ಗಾತ್ರವು ಕಾಂಡದ ಗಾತ್ರಕ್ಕೆ ಸರಿಯಾಗಿಯೇ ಇರುವದು. ಅವರೆ, ಸಾಸಿವೆ, ಬಟಾಣಿ ಮೊದಲಾದ ಚಿಕ್ಕ ಸಸ್ಯಗಳಲ್ಲಿ ಅವುಗಳ ಪ್ರಮಾಣಕ್ಕೆ ತಕ್ಕ ತೆಳುವಾದ ಬೇರುಗಳು ಇರುತ್ತವೆ. ಆಲ, ಹುಣಿಸೆ, ಮೊದಲಾದ ದೊಡ್ಡ ಮರಗಳ ಬೇರು, ನೇರ ವಾಗಿ ಕೆಳಕ್ಕೆ ಹೊರಟು, ಹತ್ತುಹದಿನೈದು ಗಜಗಳ ಆಳಕ್ಕೂ, ಪಕ್ಕ ಗಳಲ್ಲಿ ಐವತ್ತು, ಅರವತ್ತು, ಕೆಲವು ವೇಳೆಗಳಲ್ಲಿ ನೂರು ಗಜಗಳ ದೂರಕ್ಕೂ ಹರಡಿಕೊಂಡಿರುವದುಂಟು. ಎತ್ತರವಾಗಿ ಬೆಳೆಯತಕ್ಕ ಮರ ಗಿಡಗಳ ಬೇರುಗಳು ಭೂಮಿಯೊಳಕ್ಕೆ ಆಳವಾಗಿಯೂ, ಹೆಚ್ಚಾಗಿ ಹರ ಡಿಕೊಂಡಿರುವ ಕವಲುಗಳುಳ್ಳ ಮರಗಳ ಬೇರುಗಳು ಭೂಮಿಯಲ್ಲಿ ಎಲ್ಲ ಕಡೆಗಳಲ್ಲಿಯೂ ವ್ಯಾಪಿಸಿದವುಗಳಾಗಿಯೂ ಇರುತ್ತವೆ. ಹೀಗೆ ಮರಗಳ ಬೇರುಗಳು ಭೂಮಿಯಲ್ಲಿ ನಾಲ್ಕು ಕಡೆಗಳಲ್ಲಿಯೂ ವ್ಯಾಪಿ ಸುವದರಿಂದ, ಮರಗಳು ಅವುಗಳ ಸ್ಥಾನದಲ್ಲಿ ನಿಲ್ಲುವದಕ್ಕೆ ಸಹಾಯ ವಾಗುವದು. ಇದಲ್ಲದೆ ಸಸ್ಯಗಳು ಬೆಳೆಯುವದಕ್ಕೆ ಅವಶ್ಯಕವಾದ ತೇವವನ್ನು ಸಂಪಾದಿಸಲು, ಬೇರುಗಳು ಭೂಮಿಯೊಳಗೆ ಕವಲೊಡೆದು

ಎಲ್ಲ ಕಡೆಗಳಲ್ಲಿಯೂ ವ್ಯಾಪಿಸಿ, ನೀರನ್ನು ಹುಡುಕುತ್ತ ಸಂಚಾರ ಮಾಡುತ್ತಿರುವವು. ನೀರು ಭೂಮಿಯಲ್ಲಿ ಒಂದು ಕಡೆ ಹೆಚ್ಚಾಗಿ ಸಿಕ್ಕದೇ ಇರುವದರಿಂದಲೂ, ನೆಲದಲ್ಲಿ ಮೇಲೆ ಮೇಲೆ ಬಹಳ ಸ್ವಲ್ಪ ವಾಗಿರುವದರಿಂದಲೂ, ಬೇರುಗಳು ತೇವವಿರತಕ್ಕ ಸ್ಥಳಗಳನ್ನು ಹುಡುಕಿಕೊಂಡು ಹೋಗಬೇಕಾಗಿರುವದು. ಒಂದು ಗಿಡದ ಬೇರಿನ ಶಾಖೆಗಳು ತಾಯಿಬೇರಿಗೆ ಕಾಟಕೋನ (ಸಮಕೋನ) ದಲ್ಲಿ ನಾಲ್ಕು ಕಡೆಗಳಲ್ಲಿ ಹೊರಟಾಗಲಿ, ಅದಕ್ಕೆ ಸಮಾಂತರವಾಗಿ ಅದು ಹೊರಟಿರುವ ದಿಕ್ಕನ್ನೇ ಹಿಡಿದವುಗಳಾಗಿಯಾಗಲಿ ಇರುತ್ತವೆ. ಬೇರುಗಳ ಶಾಖೆಗಳು ಮೊದಲನೆ ಕ್ರಮದಲ್ಲಿ ಹೊರಟಿರುವವೆ, ಅಥವಾ ಎರಡನೇ ಕ್ರಮದಲ್ಲಿ ಬಂದಿರುವವೆ ಎಂದು ತಿಳಿಯಬೇಕಾದರೆ, ಸಸ್ಯಗಳನ್ನು ಬೇರು ಸಹಿತ ಭೂಮಿಯಿಂದ ತೆಗೆಯಬೇಕಾದದ್ದು ಅನವಶ್ಯಕ-ಒಂದು ಗಿಡದಲ್ಲಿ ಎಲೆಗಳ ಸ್ವಭಾವವನ್ನು ನಿರೀಕ್ಷಿಸುವದರಿಂದ ಬೇರಿನ ಶಾಖೆಗಳ ಕ್ರಮವನ್ನು ತಿಳಿಯಬಹುದು. ಒಂದು ಸಸ್ಯದ ಎಲೆಗಳ ಒಳಪಾರ್ಶ್ವಗಳು ಅದರ ದಂಟಿನ ಕಡೆಗೆ ತಿರಿಗಿದ್ದರೆ ಅದರ ಬೇರಿನ ಶಾಖೆಗಳು ಮೇಲೆ ಹೇಳಿದ ಎರಡನೇ ಕ್ರಮದಲ್ಲಿ ಬಂದಿರುವವೆಂದು ತಿಳಿಯಬಹುದು. ಒಂದು ಸಸ್ಯದ ಎಲೆಗಳ ತುದಿಯ ಭಾಗಗಳು ದಂಟಿಗೆ ವಿಮುಖವಾಗಿ ತಿರಿಗಿ, ಎಲೆಗಳು ಬಹುದೂರ ಹರಡಿದ್ದರೆ, ಬೇರುಗಳ ಶಾಖೆಗಳು ಮೊದಲನೇ ತೆರನಾದವುಗಳಿಂದು ಹೇಳಬಹುದು. ಇದಕ್ಕೆ ಕಾರಣವೇನಂದರೆ: — ದಂಟಿಗೆ ವಿಮುಖವಾಗಿ ಹೊರಟ ಎಲೆಗಳ ತುದಿಯ ಭಾಗಗಳಿಂದ ನೀರು ತೊಟ್ಟು ತೊಟ್ಟಾಗಿ ಭೂಮಿಯ ಮೇಲೆ ಬೀಳುವದು. ಆಗ ನೀರಿನ ಶಾಖೆಗಳು ಭೂಮಿಯಲ್ಲಿ ಹರಡಿಕೊಂಡಿದ್ದರೆ ಈ ನೀರು ಅವುಗಳಿಗೆ ಮುಟ್ಟುವದು. ಎಲೆಗಳು ದಂಟಿಗೆ ಅಭಿಮುಖವಾಗಿದ್ದರೆ, ಅವುಗಳ ಮೇಲೆ ಬೀಳುವ ನೀರಿನ ಕಣಗಳು ತಾಯಿಬೇರಿನ ಕಡೆಗೆ ಹೋಗುವವು. ಹೀಗೆ ಎಲೆಗಳು ಬೆಳೆಯುವ ಗಿಡಗಳ ಸಣ್ಣ ಬೇರುಗಳು ವಿಧೋಮುಖವಾಗಿ ಹೊರಡುವದರಿಂದ, ಅವುಗಳಿಗೆ ಎಲೆಗಳ ಮೇಲೆ ಬೀಳುವ ನೀರು ದೊರಕುವದು.

ತೊಡಕುಬೇರುಗಳು ಬರತಕ್ಕ ಗಿಡಗಳ ಕಾಂಡಗಳು ಬಹಳ ಎತ್ತರವಾಗಿ ಬೆಳೆದರೆ, ಗಾಳಿಯು ರಭಸದಿಂದ ಬೀಸುವಾಗ ಆ ಸಸ್ಯ

ಗಳು ಕಿತ್ತು ಬೀಳದ ಹಾಗೆ, ಅವುಗಳನ್ನು ಸ್ಥಾನದಲ್ಲಿ ನಿಲ್ಲಿಸಲು ಬೇರ
ಗಳಲ್ಲಿ ಶಕ್ತಿ ಇರುವದಿಲ್ಲ. ಇಂತಹ ಗಿಡಗಳಲ್ಲಿ ಇತರ ಸಹಾಯಗಳ
ಬೇಕಾಗಿರುವವು. ಎತ್ತರವಾಗಿ ಬೆಳದಿರತಕ್ಕ ಒಂದು ಜೋಳದ ಗಿಡ
ಅಡಿಯಭಾಗವನ್ನು ನೋಡಿದರೆ, ಅದರ ಕಾಂಡದ ಅಡಿಯ ಒಂದೆರಡ
ಗಿಣ್ಣುಗಳ ಸುತ್ತಲೂ ಅನೇಕ ಸಣ್ಣ ಬೇರುಗಳು ಹೊರಟು, ಒಂದು ಡೇ
ಯನ್ನು ಸರಿಯಾಗಿ ನಿಲ್ಲಿಸುವದಕ್ಕೆ ಸುತ್ತಲೂ ಕಟ್ಟಿರುವ ಹಗ್ಗಗಳಂತೆ
ಕಾಂಡವನ್ನು ಹಿಡಿದು ಭದ್ರವಾಗಿ ನಿಲ್ಲಿಸುತ್ತವೆ.

(೩) ದಿಂಡುಬೇರು:— ಕೆಲವು ಸಸ್ಯಗಳ ಬೇರುಗಳಲ್ಲಿ ಮೇ
ತಿಳಿಸಿದ ಎರಡು ಕಾರ್ಯಗಳಲ್ಲದೆ, ಮತ್ತೊಂದು ಕೆಲಸವು ನಮ
ಗೋಚರವಾಗುವದು. ಒಂದೊಂದು ಸಸ್ಯದಲ್ಲಿಯೂ ಬೇರಿನ ಗಾತ್ರವ
ಕಾಂಡದ ಗಾತ್ರಕ್ಕೆ ಸರಿಯಾಗಿರುವದೆಂದು ಹಿಂದೆ ಹೇಳಲ್ಪಟ್ಟಿತು. ಆದ
ಕೆಲವು ಗಿಡಗಳಲ್ಲಿ ಬೇರುಗಳು ಬಹಳ ಗಡುತರವಾಗಿ ಬೆಳೆದು ಗೆಡ್ಡೆ
ಳಾಗುವವು. ಉದಾಹರಣೆಗಾಗಿ, ಮೂಲಂಗಿ, ಗಜರಿ, ಗೆಣಸು ಮು
ತಾದವುಗಳನ್ನು ಹೇಳಬಹುದು. ಈ ಗಿಡಗಳಲ್ಲಿ ಬೇರುಗಳು ದಪ್ಪ
ವಾಗಿ ಗೆಡ್ಡೆಗಳಾಗುವದೇಕೆ? ಇವುಗಳಲ್ಲಿ ಕಾಂಡವು ಬಹಳ ಕುಗ್ಗಿ
ಎಲೆಗಳು ಹೆಚ್ಚಾಗಿರುವದರಿಂದ, ಆಹಾರ ಪದಾರ್ಥಗಳು ಬಹ
ಹೆಚ್ಚಾಗಿ ಉತ್ಪತ್ತಿಯಾಗುವವು. ಸಸ್ಯಗಳ ಉಪಯೋಗಕ್ಕೆ ಬೇಕ
ದದ್ದು ಹೋಗುತ್ತ, ಉಳಿದವುಗಳನ್ನು ಈ ಗಿಡಗಳು ತಮ್ಮ ಬೇರು
ಳಲ್ಲಿ ಸಂಗ್ರಹ ಮಾಡಿಕೊಳ್ಳುತ್ತವೆ. ಈ ಕಾರಣದಿಂದಲೆ ಅವುಗ
ಬೇರುಗಳು ದಪ್ಪವಾಗಿ ಗೆಡ್ಡೆಗಳಾಗುವವು. ಮೂಲಂಗಿ ಮತ್ತು ಅದ
ಹಾಗೆ ಇರುವ ಗಿಡಗಳು ದ್ವಿವಾರ್ಷಿಕ ಸಸ್ಯಗಳು. ಮೂಲಂಗಿಯು ಮೊ
ದಲನೇ ವರ್ಷದಲ್ಲಿ ಅದರ ಎಲೆಗಳಿಂದ ತಯಾರಾದ ಆಹಾರದ ಒಂದ
ಭಾಗವನ್ನು ತಾಯಿಬೇರಿನಲ್ಲಿ ಶೇಖರಿಸಿಟ್ಟು, ಮುಂದೆ ಅದು ಪುಷ್ಪಿ
ಕಾಯಿಬಿಡುವದಕ್ಕೆ ಆರಂಭಿಸಿದ ಕೂಡಲೆ, ತಾನು ಸಂಗ್ರಹಿಸಿದ್ದ ಆಹ
ರವನ್ನು ಉಪಯೋಗಿಸಿಕೊಳ್ಳುವದು. ಮೂಲಂಗಿಗೆಡ್ಡೆಯನ್ನು ನಾವ
ಉಪಯೋಗಿಸಿಕೊಳ್ಳಬೇಕಾದರೆ, ಮೊದಲನೆ ವರ್ಷದಲ್ಲಿಯೇ ಅದನ್ನ
ಕೀಳಬೇಕು. ನಾವು ಅದನ್ನು ಹಾಗೆಯೆ ಬಿಟ್ಟರೆ, ಎರಡನೆ ವರ್ಷದಲ್ಲಿ
ಗೆಡ್ಡೆಯು ಟೊಳ್ಳಾಗುವದು.

(೪) **ಅಂಟು ಬೇರುಗಳು:**— ಒಂದು ಗಿಡದ ಬೇರುಗಳು ಕಾಂ
ಡ ಅಡಿಯ ಭಾಗದಲ್ಲಿದ್ದು ಭೂಮಿಯೊಳಗೆ ನುಗ್ಗಿ ಬೆಳೆಯುವವಾಗಿ
ರೂ, ಕೆಲವು ಗಿಡಗಳಲ್ಲಿ ಇವು ನೆಲದೊಳಕ್ಕೆ ಪ್ರವೇಶಿಸದೆ ಹೊರಗ
ುಲ್ಲಿಯೇ ಆಗಲಿ, ಕೆಲವು ಕಾಲ ಭೂಮಿಯ ಹೊರಗೂ ಆ ಮೇಲೆ
ುದೊಳಗೆ ಹೊಕ್ಕೂ ಆಗಲಿ ಬೆಳೆಯುವದುಂಟು. ಹೀಗೆ ಭೂಮಿಯ
ೂರಗೆ ಬೆಳೆಯುವ ಭಾಗಗಳನ್ನು ಬೇರುಗಳೆಂದು ಹೇಗೆ ತಿಳಿಯ
ೀಕು? ಎಲೆಗಳೂ, ಮೊಗ್ಗೆಗಳೂ ಇಲ್ಲದೆ, ಅಧೋಮುಖವಾಗಿ ಬೆಳೆ
ುವದು ಬೇರುಗಳ ಲಕ್ಷಣವೆಂದು ಹಿಂದೆ ತಿಳಿಸಲ್ಪಟ್ಟಿರುತ್ತದೆ. ಕಾಂ
ದ ಅಡಿಯ ಭಾಗದಲ್ಲಲ್ಲದೆ, ಸಸ್ಯದ ಇತರ ಭಾಗಗಳಲ್ಲಿ ಹೊರಡುವ
ೀರುಗಳನ್ನು ಅಂಟು ಬೇರುಗಳೆಂದು ಕರೆಯಬಹುದು. ಆಲದ ಮರದ
ೂಂಬೆಗಳಿಂದ ಈ ವಿಧವಾದ ಬೇರುಗಳು ಬರುವದನ್ನು ನಾವು ಸುಲಭ
ಾಗಿ ನೋಡಬಹುದು. ಇವು ಸ್ವಲ್ಪ ಕಾಲದ ನಂತರ ಮಣ್ಣಿನೊಳಗೆ
ೊಕ್ಕು ಗಡುತರವಾಗಿ ಬೆಳೆಯುವದರಿಂದ, ವಿಸ್ತಾರವಾಗಿ ಹರಡುವ
ಮರದ ಶಾಖೆಗಳಿಗೆ ಆಧಾರವಾಗಿ, ಆ ಮರವು ನೂರಾರು ವರ್ಷಗಳ
ರ್ಯಂತರವೂ ದೃಢವಾಗಿ ಬಾಳುವ ಹಾಗಾಗುತ್ತದೆ. ವೀಳೆಯದೆಲೆಯ
ಬಳ್ಳಿ, ಕರಿಮೆಣಸಿನ ಬಳ್ಳಿ, ಇವುಗಳ ಪರ್ವಗಳಲ್ಲಿ ಹೊರಡುವ ಅಂಟು
ೀರುಗಳ ಸಹಾಯದಿಂದ ಈ ಸಸ್ಯಗಳು ಇತರ ಮರಗಳನ್ನು ಹತ್ತಿ
ಮೇಲಕ್ಕೆ ಬರುತ್ತವೆ. ಗೆಣಸಿನ ಬಳ್ಳಿಯ ಕವಲುಗಳು ನೆಲದ ಮೇಲೆ
ಹಬ್ಬಿ ಬೆಳೆಯುವಾಗ, ಗಿಣ್ಣುಗಳಲ್ಲಿ ಅಂಟು ಬೇರುಗಳು ಹೊರಟು,
ಭೂಮಿಯೊಳಕ್ಕೆ ನುಗ್ಗಿ ಹೋಗುವವು, ಇವುಗಳಲ್ಲಿ ಕೆಲವು ಗೆಡ್ಡೆಗ
ಳಾಗಿ ಬೆಳೆಯುವವು. ಉಸುಬು ಇರತಕ್ಕ ಸ್ಥಳಗಳಲ್ಲಿ ಬೆಳೆಯುವ ಸಸ್ಯ
ಳಲ್ಲಿ ಈ ವಿಧವಾದ ಬೇರುಗಳು ಹೆಚ್ಚಾಗಿ ಬರುವದರಿಂದ, ಅವುಗಳು
ಮ್ಮ ಸ್ಥಾನಗಳಲ್ಲಿರಲು ಸಹಾಯವಾಗುವದು.

ಕೆಲವು ಸಸ್ಯಗಳ ಬೇರುಗಳು ಇತರ ಮರ ಗಿಡಗಳ ಶಾಖೆಗಳನ್ನು
ಪ್ಪಿಕೊಂಡು, ಗಾಳಿಯೂ ಬೆಳಕೂ ತಗುಲುವಂತೆ, ಭೂಮಿಯ ಹೊರಗೆ
ಇದ್ದು ಬೆಳೆಯುವದುಂಟು. ಈ ತೆರವಾದ ಬೇರುಗಳು ಹವೆಯಲ್ಲಿ ಆವಿ
ಯಾಗಿರುವ ನೀರನ್ನು ಗ್ರಹಿಸುವವು. ಇಂತಹ ಸಸ್ಯಗಳನ್ನು ಅಪ್ಪು
ಗಿಡಗಳೆಂದು ಕರೆಯುತ್ತಾರೆ.

(೫) ಪರೋಪಜೀವಿಗಳ ಬೇರುಗಳು:— ಕೆಲವು ಸಸ್ಯಗ ಬೇರುಗಳು ಭೂಮಿಯೊಳಗೆ ಪ್ರವೇಶಿಸಿದೆ, ಇತರ ಗಿಡಗಳ ಕಾಂಡ ಲ್ಲಾಗಲಿ ಬೇರುಗಳಲ್ಲಾಗಲಿ ನುಗ್ಗಿ ಬೆಳೆಯುತ್ತವೆ. ತಮಗೆ ಬೇಕಾ ತೇವ ಮತ್ತು ಇತರ ಪದಾರ್ಥಗಳನ್ನು ಭೂಮಿಯಿಂದ ಸಂಪಾದಿಸು ದಕ್ಕೆ ಬದಲಾಗಿ, ತಾವು ಹೊಕ್ಕಿರುವ ಮರಗಳ ಭಾಗಗಳಿಂದ ಹೀ ಕೊಂಡು ಬದುಕುತ್ತವೆ. ಈ ಜಾತಿಯ ಸಸ್ಯಗಳನ್ನು ಬದನಿಕೆಗಳೆಂ ಕರೆಯುವದು ರೂಢಿಯಾಗಿರುತ್ತದೆ. ಇವು ಇತರ ಗಿಡಗಳು ತಯಾ ಮಾಡಿದ ಆಹಾ ಪದಾರ್ಥಗಳನ್ನು ತೆಗೆದುಕೊಂಡು ಬದುಕುವದರಿಂ ಇವುಗಳನ್ನು ಪರೋಪಜೀವಿಗಳೆಂತಲೂ ಹೇಳುತ್ತೇವೆ. ಬದನಿಕೆಂ ಗಿಡಗಳು ಒಂದು ಮರದ ಶಾಖೆಗಳಲ್ಲಿ ವಿಶೇಷವಾಗಿ ಉಂಟಾದರೆ, ಮರವು ಸ್ವಲ್ಪ ಕಾಲದಲ್ಲಿ ಕೆಟ್ಟು ಹೋಗುವದು. ಅನೇಕ ಮಾವಿ ಮರಗಳ ಕಾಂಡದಲ್ಲಿ ಬದನಿಕೆಗಳು ಬೆಳೆದು ಮರಗಳು ಕೆಟ್ಟು ಹೋ ವದನ್ನು ನಾವು ನೋಡಬಹುದು.

ಬೇರುಗಳು ಬೆಳೆಯುವ ಕ್ರಮ:— ಬೇರುಗಳ ಒಂದು ಮುಖ್ಯ ಸ್ವಭಾವವು ಅಧೋಮುಖವಾಗಿ ಬೆಳೆಯುವದೆಂದು ಹಿಂದೆ ಹೇಳಿ ತ್ತದೆ. ಸಸ್ಯಗಳ ಈ ಲಕ್ಷಣವನ್ನು ಮೊಳೆಯುತ್ತಿರುವ ಬೀಜಗಳ ನೋಡಬಹುದು. ಒಂದು ಬೀಜವನ್ನು ನಾವು ಹೇಗೆ ಭೂಮಿಯ ಟ್ಟಿರೂ ಅದರಲ್ಲಿ ಬೇರಿನ ಅಂಕುರವು ಭೂಮಿಯ ಒಳಭಾಗಕ್ಕೆ ಹೊರ ವದು. ಮೊಳೆಯ ಬೇರುಗಳು ಹೀಗೆ ಅಧೋಮುಖವಾಗಿ ಹೊರಡ ದ್ದರೆ, ಭೂಮಿಯಿಂದ ಅವುಗಳಿಗೆ ನೀರು ದೊರಕುವದಸಾಧ್ಯವು. ಬೇ ಗಳು ಮತ್ತು ಅವುಗಳ ಶಾಖೆಗಳು ಭೂಮಿಯೊಳಗೆ ನೀರನ್ನು ಹುಡ ಕೊಂಡು ಹೋಗುವಾಗ, ಅವುಗಳ ಸೂಕ್ಷ್ಮವಾದ ತುದಿಯ ಭಾಗಗಳ ಕಲ್ಲುಗಳಿಂದ ಅಪಾಯಗಳುಂಟಾಗದಹಾಗೆ ಅವುಗಳಲ್ಲಿ ಒಂದು ರ ಣವು ಏರ್ಪಟ್ಟಿರುತ್ತದೆ. ಬೇರುಗಳ ತುದಿಯಭಾಗಗಳು ಒಂದು ಟ ಯಿಂದ ಮುಚ್ಚಲ್ಪಟ್ಟಿರುವವು. ಆಲದ ಮರಗಳಲ್ಲಿ ಕೊಂಬೆಗಳಿಂ ನೇತಾಡುವ ಬೇರುಗಳಲ್ಲಿಯೂ, ತಾಳೆ ಗಿಡದ ಅಂಟು ಬೇರುಗಳ ಯೂ, ಈ ಒರೆಗಳು ಚನ್ನಾಗಿ ಕಾಣುವವು. ಒಂದು ಬೇರಿನ ಕೊನೆ ಲ್ಲಿರುವ ಈ ಒರೆಯು ತಲೆಯ ಮೇಲಿರಿಸಿದ ಟೊಪ್ಪಿಗೆಯ ಹಾಗೆ ಕಾ

ವದರಿಂದ, ಇದಕ್ಕೆ ಬೇರಿನಟೊಪ್ಪಿಗೆ ಎಂಬ ಹೆಸರನ್ನಿಟ್ಟಿರುತ್ತಾರೆ. ಬೇರು ಭೂಮಿಯಲ್ಲಿ ಬೆಳೆಯುವಾಗ ಕಲ್ಲುಗಳಿಗಾಗಲಿ ಇತರ ಕಠಿಣವಾದ ವಸ್ತು ಗಳಿಗಾಗಲಿ ಸಿಕ್ಕಿದಾಗ, ಈ ಟೋಪಿಯು ಸವೆದು ಹೋಗುವದು. ಬೇರಿನ ಒರೆಯು ಸವಿದು ಹೋದರೆ, ಅಥವಾ ಬಿಟ್ಟು ಹೋದರೆ, ಅದಕ್ಕೆ ಪ್ರತಿಯಾಗಿ ಬೇರಿನ ಕೊನೆಯಿಂದ ಮತ್ತೊಂದು ಒರೆಯು ಬರುವದು.

ಬೇರಿನ ಯಾವ ಭಾಗದಲ್ಲಿ ಬೆಳೆವಣಿಗೆಯು ಹೆಚ್ಚಾಗಿ ನಡೆಯು ವದೆಂಬದನ್ನು ನಿರ್ಧರಮಾಡುವದಕ್ಕೆ ನಾವು ಒಂದು ಪ್ರಯೋಗವನ್ನು ನಡಿಸಬಹುದು. ಒಂದು ಮೊಳಿತ ಅವರೇ ಬೀಜವನ್ನು ಕೈಯಲ್ಲಿ ತೆಗೆದು ಕೊಂಡು ಅದರ ಬೇರಿನ ಭಾಗದಲ್ಲಿ ಸಮಾಂತರಗಳಲ್ಲಿ ಅಡ್ಡವಾಗಿ ಕಪ್ಪು ಗೆರೆಗಳನ್ನು ಹಾಕಿ ಅದನ್ನು ನೀರಿನಿಂದ ತೋಯಿಸಿದ ಕಟ್ಟಿಗೆಯ ಹುಡಿ ಯ ಮೇಲೆ ಅಡ್ಡವಾಗಿಟ್ಟು ಮರುದಿವಸ ನೋಡಿದರೆ, ಬೇರಿನ ಯಾವ ಯಾವ ಭಾಗದಲ್ಲಿ ಎಷ್ಟು ಬೆಳವಣಿಗೆಯು ಸಾಗಿರುವದೆಂದು ಕಂಡು ಬರುವದು. ನಾವು ಮಾಡುವ ನಿರೀಕ್ಷಣೆಯಿಂದ ಬೇರುಗಳ ಅಗ್ರಭಾಗ ಗಳಲ್ಲಿ ಬೆಳೆಯು ಜಾಗ್ರತೆಯಾಗಿ ನಡೆಯುವದೆಂದು ನಮಗೆ ತಿಳಿಯು ವದು.

ಬೇರುಗಳು ನೀರನ್ನು ಹೀರುವ ಕ್ರಮ.—ಒಂದು ಸಸ್ಯದ ಬೇರು ಗಳು ಭೂಮಿಯಿಂದ ತೇವವನ್ನು ಹೇಗೆ ಹೀರಿಕೊಳ್ಳುತ್ತವೆ ಎಂದು ತಿಳಿದು ಕೊಳ್ಳಬೇಕಾದರೆ, ಬೇರುಗಳ ತುದಿಯ ಭಾಗಗಳನ್ನು ಗಮನಿಸಿ ನೋಡ ಬೇಕು. ಮೆತ್ತಗಾದ ಮಣ್ಣಿಳ್ಳ ನೆಲದಲ್ಲಿ ಬೆಳೆಯಿಸಿದ ಒಂದು ಸಾಸಿವೆ ಗಿಡವನ್ನು ಕಿತ್ತು ತೆಗೆದರೆ, ಅದರ ಬೇರಿಗೆ ಮಣ್ಣು ಅಂಟಿಕೊಂಡೆ ಬರುವದು. ಮಣ್ಣೆಲ್ಲಾ ಹೋಗುವಹಾಗೆ ಜಾಗರೂಕತೆಯಿಂದ ಈ ಬೇರನ್ನು ತೊಳೆದರೆ, ಬೇರಿನ ಕೊನೆಯಲ್ಲಿ ಒರೆಯಿಲ್ಲದ ಭಾಗದಲ್ಲಿ ತೆಳು ವಾಗಿಯೂ ಬಿಳುಪಾಗಿಯೂ ಇರುವ ಅನೇಕ ರೋಮಗಳು ಕಾಣುವವು. ಇವುಗಳನ್ನು ಬೇರಿನ ರೋಮಗಳೆಂದು ಕರೆಯುತ್ತಾರೆ. ಇವು ಬಹು ಚಟುವಕೆಟಿಯಿಂದ ಕೆಲಸಮಾಡುತ್ತಿರುತ್ತವೆ. ಈ ರೋಮಗಳು ತೇವವಾದ ಮಣ್ಣಿನ ಕಣಗಳೊಳಗೆ ಪ್ರವೇಶಿಸಿ ಅವುಗಳಿಂದ ನೀರನ್ನು ಹೀರಿಕೊಳ್ಳುತ್ತವೆ. ಹೀಗೆ ಒಂದು ರೋಮದಲ್ಲಿ ಪ್ರವೇಶಿಸುವ ಜಲಾಂ ಶವು ಎಷ್ಟು ಸ್ವಲ್ಪವಾದರೂ ಈ ರೋಮಗಳು ಅಸಂಖ್ಯವಾಗಿ ಇರುವ

ದರಿಂದ ಗಿಡದಲ್ಲಿ ನೀರು ಹೆಚ್ಚಾಗಿ ಸೇರುತ್ತಿರುವದು. ಬೇರುಗಳ ರೋಮಗಳು ಮಣ್ಣಿನಿಂದ ಹೀರಿಕೊಳ್ಳುವ ತೇವದಲ್ಲಿ, ನೀರೊಂದಲ್ಲದೆ ಅನೇಕ ಕಡಿಗಿದ ಪದಾರ್ಥಗಳು ಸೇರಿರುತ್ತವೆ. ಸಸ್ಯಗಳಿಗೆ ಭೂಮಿಯಿಂದ ಬರುವ ಆಹಾರಪದಾರ್ಥಗಳು ಈ ಕ್ರಮದಲ್ಲಿ ದೊರೆಯುತ್ತವೆ. ಈ ಕೆಲಸವು ಬೇರುಗಳ ಕೊನೆಯ ಭಾಗದಲ್ಲಿ ಮಾತ್ರ ನಡೆಯುವದು. ಬೇರುಗಳ ಗಡುತರವಾದ ಭಾಗಗಳಲ್ಲಿ ಈ ವಿಧವಾದ ರೋಮಗಳಿರುವದಿಲ್ಲ; ಅಲ್ಲಿ ಬೇರುಗಳಿಗೆ ಮುಂದವಾದ ತೊಗಟೆಯ ಹೊದಿಕೆಯು ಇರುತ್ತದೆ.

ಬೇರಿನ ಸ್ವಭಾವವನ್ನು ಸಂಗ್ರಹಿಸಿ ಹೇಳಬೇಕಾದರೆ:— ಬೇರು ಸಾಮಾನ್ಯವಾಗಿ ಭೂಮಿಯೊಳಗೆ ಬೆಳೆಯುತ್ತ, ಗಿಡವನ್ನು ಅದರ ಸ್ಥಾನದಲ್ಲಿ ನಿಲ್ಲಿಸುವದು; ಬೇರು ಭೂಮಿಯಿಂದ ತೇವವನ್ನು ಹೀರಿಕೊಳ್ಳುತ್ತದೆ. ಈ ತೇವದಲ್ಲಿ ಸಸ್ಯಕ್ಕೆ ಬೇಕಾದ ಆಹಾರಪದಾರ್ಥಗಳು ಕರಗಿಬರುತ್ತವೆ; ಬೇರುಗಳ ತುದಿಯ ಭಾಗಗಳಲ್ಲಿ ಒಂದು ಮುಸುಕು (ಒರೆ) ಇರುತ್ತದೆ. ಬೇರುಗಳು ಅವುಗಳ ತುದಿಯ ಭಾಗಗಳಲ್ಲಿರುವ ಸಣ್ಣ ಸಣ್ಣ ರೋಮಗಳ ಮೂಲಕ ಭೂಮಿಯಿಂದ ತೇವವನ್ನು ಹೀರುತ್ತವೆ. ಬೇರುಗಳ ಗಡುತರವಾದ ಭಾಗಗಳಲ್ಲಿ ರೋಮಗಳು ಇರುವದಿಲ್ಲ.

ಐದನೇ ಅಧ್ಯಾಯ.

ಕಾಂಡ.

[ಗಿಡಗಳಲ್ಲಿ ಕಾಂಡಗಳ ಸ್ವಭಾವವನ್ನು ತಿಳಿಯಬೇಕಾದರೆ ಸಸ್ಯಗಳು ಬೆಳೆಯುತಕ್ಕ ಸ್ಥಳಗಳಿಗೆ ಹೋಗಿ ಅವುಗಳನ್ನು ನಿರೀಕ್ಷಿಸಬೇಕು. ಕಾಂಡಗಳು ಬಗೆಬಗೆಯಾಗಿರುತ್ತವೆ. ಆವರೆ ಮತ್ತು ಇತರ ತೋಟದ ಸಸ್ಯಗಳ ಕಾಂಡಗಳನ್ನು ವಿಮರ್ಶಿಸಿದ ನಂತರ, ಹಾದಿಗಳ ಪಾರ್ಶ್ವಗಳಲ್ಲಿ ಬೆಳೆಯುವ ಸಾಲುಮರಗಳನ್ನೂ, ತೋಪುಗಳಲ್ಲಿಯೂ ಕಾಡುಗಳಲ್ಲಿಯೂ ಬೆಳೆಯುವ ವೃಕ್ಷಗಳನ್ನೂ ನೋಡಿ, ಕಾಂಡದ ರೂಪಾಂತರಗಳನ್ನೂ, ಅದು ಬೆಳೆಯುವ ಕ್ರಮವನ್ನೂ ತಿಳಿದುಕೊಳ್ಳಬೇಕು.

ಪ್ರಕೃತಿವಿಮರ್ಶೆಯ ಪತ್ರಿಕೆಗಳು.

ನಂ. ೧

ಕೀಟಗಳು: ರೇಶ್ಮೆಯ ಹುಳ.

[ಹುಳಗಳ ಜೀವವಾನವನ್ನು ತಿಳಿಯಲಪೇಕ್ಷೆಯುಳ್ಳವರಿಗೆ ಯಾವದಾದರೂ ಒಂದು ಬಗೆಯ ರೇಶ್ಮೆಯ ಹುಳವನ್ನು ಪೋಷಿಸಿ ಅದರ ಎಲ್ಲ ಅವಸ್ಥೆಗಳನ್ನು ಕ್ರಮವಾಗಿ ನಿರೀಕ್ಷಿಸುವದು ಉತ್ತಮವಾದ ಅಭ್ಯಾಸವು. ರೇಶ್ಮೆಯ ಹುಳದ ವಿಮರ್ಶೆಯನ್ನು ಅದರ ತತ್ತಿಯಿಂದ (ಮೊಟ್ಟೆಯಿಂದ) ಪ್ರಾರಂಭಿಸಬಹುದು. ಇದಲ್ಲದೆ ತೋಟಗಳಲ್ಲಿ ಸಂಚಾರ ಮಾಡುವ ಯಾವದಾದರೂ ಒಂದು ಪತಂಗವು (ಪಾತರಗಿತ್ತಿ) ಗಿಡದ ಎಲೆಗಳ ಮೇಲೆಯಾಗಲಿ, ಇತರ ಅನುಕೂಲವಾದ ಸ್ಥಾನಗಳಲ್ಲಿಯಾಗಲಿ ತತ್ತಿಗಳನ್ನಿಡುವದನ್ನು ನೋಡಬೇಕು. ಈ ತತ್ತಿಗಳಿಂದ ಹೊರಗೆ ಬರುವ ಕೀಟಗಳು ಗಿಡಗಳಲ್ಲಿ ಮಾಡತಕ್ಕ ನಾಶವನ್ನು ನಿರೀಕ್ಷಿಸಿ ನೋಡಬೇಕು. ಅವು ಚನ್ನಾಗಿ ಬೆಳೆದ ನಂತರ ಅವುಗಳ ಆಕಾರ ಅಂಗರಚನೆಗಳನ್ನು ನೋಡಿ ತಿಳಿದು, ಅವುಗಳ ಚಿತ್ರಗಳನ್ನು ತೆಗೆದಿಡಬೇಕು.]

೧. ಪತಂಗ ಅಥವಾ ಪಾತರಗಿತ್ತಿ.

ತೋಟಗಳಲ್ಲಿ ಸಸ್ಯಗಳನ್ನು ಚನ್ನಾಗಿ ಬೆಳೆಸಿ ಅವುಗಳಿಂದ ಸರಿಯಾದ ಫಲಗಳನ್ನು ಪಡೆಯಬೇಕಾದರೆ, ಅವುಗಳ ಬೀಜಗಳನ್ನು ಬಿತ್ತಿ ನೀರನ್ನು ಎರೆದರೆ ಮಾತ್ರ ಸಾಲದು. ತೋಟದ ಭೂಮಿಯಲ್ಲಿ ಗೊಬ್ಬರವನ್ನು ಸೇರಿಸಿ, ಪ್ರತಿನಿತ್ಯವೂ ತಪ್ಪದೆ ನೀರನ್ನು ಹಾಕಿದರೂ, ಅನೇಕ ಗಿಡಗಳು ಸರಿಯಾಗಿ ಬೆಳೆಯದೆ, ಬೀಜಗಳನ್ನು ಹಾಕಿದ ಸ್ವಲ್ಪ ಕಾಲದಲ್ಲಿಯೇ ಕೆಟ್ಟು ಹೋಗುವದನ್ನು ನಾವು ನೋಡುತ್ತೇವೆ. ಹೀಗೆ ಸಸ್ಯಗಳ ಬೆಳವಳಿಕೆಗೆ ಯಾವ ಯಾವ ವಿಘ್ನಗಳಿವೆ ಎಂದು ವಿಚಾರ ಮಾಡಿದರೆ, ತೋಟಗಳಿಗೆ ಆಗಾಗ್ಗೆ ಬರುವ ಕೆಲವು ಪ್ರಾಣಿಗಳು ಇದಕ್ಕೆ ಕಾರಣಗಳೆಂದು ತಿಳಿಯ ಬರುವದು. ತೋಟಗಳ ಪುಷ್ಪಗಳಲ್ಲಿ ದೊರೆಯುವ ಪರಾಗರಂದವನ್ನು ತೆಗೆದುಕೊಳ್ಳುವದಕ್ಕೆ ಬರುವ ಜೇನುಹುಳ

ಮೊದಲಾದವುಗಳಿಂದಲೂ, ಮರಗಿಡಗಳಲ್ಲಿರುವ ಹಣ್ಣುಗಳನ್ನು ತಿನ್ನುವ ದಕ್ಕೆ ಬರುವ ಬಗೆಬಗೆಯಾದ ಪಕ್ಷಿಗಳಿಂದಲೂ ಸಸ್ಯಗಳಿಗೆ ಬಹಳ ಪ್ರಯೋಜನವಾದರೂ, ಹುಳಗಳ (ಕೀಟಗಳ) ವರ್ಗಕ್ಕೆ ಸೇರಿದ ಅನೇಕ ಪ್ರಾಣಿಗಳಿಂದ ತೋಟಗಳಲ್ಲುಂಟಾಗುವ ನಷ್ಟವನ್ನು ಅಷ್ಟುಇಷ್ಟೆಂದು ಹೇಳಲಾಗುವದಿಲ್ಲ. ಎಲೆಗಳಿಗೂ, ಪುಷ್ಪಗಳಿಗೂ, ಕಾಯಿಪಲ್ಯಗಳಿಗೂ ಎಲ್ಲ ಪ್ರಾಣಿಗಳಿಗಿಂತಲೂ ಹುಳಗಳಿಂದಾಗುವ ಕೆಡಕು ಬಹಳ ಹೆಚ್ಚಾಗಿರುವದೆಂದು ತೋಟಗಾರರು ಹೇಳುತ್ತಾರೆ. ಇದೇ ಮೇರೆಗೆ ಹುಳಗಳು ಅನೇಕ ಹೊಲಗಳಲ್ಲಿ ಪ್ರವೇಶಿಸಿ ಪೈರುಗಳನ್ನು ನಾಶ ಮಾಡುವದು ಎಲ್ಲರಿಗೂ ತಿಳಿದಿರುತ್ತದೆ.

ಪ್ರಪಂಚದಲ್ಲಿ ಇತರ ಜಂತುಗಳೆಲ್ಲವೂ ಸೇರಿ ಎಷ್ಟಿರುವವೋ ಕೀಟದ ಜಾತಿಗಳು ಅದಕ್ಕಿಂತಲೂ ಸಂಖ್ಯೆಯಿಂದ ಹೆಚ್ಚು ಇರುತ್ತವೆ. ಇವುಗಳೊಳಗಣ ವಿವಿಧ ಜಾತಿಗಳು ನಾಲ್ಕು ಲಕ್ಷಗಳಿಗೂ ಹೆಚ್ಚಾಗಿಯೇ ಇರುವವು. ಕೀಟವರ್ಗದಲ್ಲಿ ಪಾತರಗಿತ್ತಿ (ಪತಂಗ), ಜೇನುಹುಳ, ಕೋರಿಯ ಹುಳ, ಇರಿವೆ, ಮಿಡತೆ ಮೊದಲಾದವು ಸೇರುತ್ತವೆ. ಇವುಗಳ ಆಕಾರ, ಬದುಕುವ ರೀತಿಗಳಲ್ಲಿ ಪರಸ್ಪರ ವ್ಯತ್ಯಾಸಗಳು ಕಂಡು ಬಂದರೂ, ಇವುಗಳ ಶರೀರದ ಭಾಗಗಳು, ಜೀವನಾನದ ಅವಸ್ಥೆಗಳು ಒಂದೇ ಬಗೆಯಾಗಿರುತ್ತವೆ. ಕೀಟಗಳ ಅಂಗರಚನೆಯನ್ನು ತಿಳಿಯಲು ನಮ್ಮ ತೋಟದಲ್ಲಿ ಸಂಚಾರ ಮಾಡುವ ಯಾವದಾದರೊಂದು ಹುಳವನ್ನು ಹಿಡಿದು ಅದರ ಅವಯವಗಳನ್ನು ಚನ್ನಾಗಿ ಗಮನಿಸಿ ನೋಡಬೇಕು. ಇದಕ್ಕಾಗಿ ವಿಶೇಷ ತೊಂದರೆಪಡಬೇಕಾದದ್ದಿಲ್ಲ. ಸುಮಾರಾದ ಬಿಸಿಲಿರುವ ವೇಳೆಗಳಲ್ಲಿ, ತೋಟದ ಪುಷ್ಪಗಳಲ್ಲಾಗಲಿ, ಎಲೆಗಳಲ್ಲಾಗಲಿ ಸ್ವೇಚ್ಛೆಯಾಗಿ ವಿಹರಿಸುತ್ತ ನಾನಾವಿಧವಾದ ಪ್ರಕಾಶಮಾನವಾದ ಬಣ್ಣಗಳಿಂದೊಪ್ಪುತ್ತಿರುವ ಪತಂಗಗಳನ್ನು (ಪಾತರಗಿತ್ತಿ) ನೋಡದವರು ಯಾರು? ಹಳದಿ, ಕಪ್ಪು, ಕೆಂಪು, ನಾಶೀಪುಡಿಯ ಬಣ್ಣ ಮೊದಲಾದ ಬಣ್ಣಗಳುಳ್ಳ ಪತಂಗಗಳಲ್ಲಿ ಯಾವದಾದರೂ ಒಂದನ್ನು ಕೈಯಿಂದಾಗಲಿ ಬಲೆಯ ಸಹಾಯದಿಂದಾಗಲಿ ಹಿಡಿದು, ಅದರ ಅಂಗಗಳನ್ನು ಪರೀಕ್ಷಿಸಲುಪಕ್ರಮಿಸಬಹುದು. ಅದರ ಪ್ರಕಾಶಮಾನವಾದ ಪಕ್ಷಗಳ ಹೊರಭಾಗಗಳನ್ನು ಕೂಡಿಸಿದರೆ, ಅದರ ಶರೀರದ ಭಾಗಗಳು ಗೋಚ

ರವಾಗುವವು. ಇದರ ಶರೀರದಲ್ಲಿ ಕತ್ತರಿಸಿದಂತೆ ತಲೆ, ಎದೆ, ಹೊಟ್ಟೆ ಎಂಬ ಮೂರು ಪ್ರತ್ಯೇಕ ಭಾಗಗಳಿರುತ್ತವೆ. ಕೀಟಗಳ ಶರೀರದ ಮೇಲೆ ಕೊಂಬಿನಂತಿರುವ ಪದಾರ್ಥದಿಂದ ಮಾಡಲ್ಪಟ್ಟ ಬಿರುಸಾದ ಕವಚವಿರುವದು. ಈ ಕವಚವು, ಕೀಟಗಳಿಗೆ ಅಸ್ಥಿಪಂಜರವಾಗಿರುವದು. ಈ ಕವಚವು ಹಲವು ತುಂಡುಗಳು ಕೂಡಿಸಲ್ಪಟ್ಟು ಆಗಿರುವದು. ಕೀಟಗಳ ದೇಹದ ಮೇಲ್ಭಾಗದಲ್ಲಿಯೂ, ಕೆಳಭಾಗದಲ್ಲಿಯೂ ಬಳೆಯಂತಿರುವ ಕಟ್ಟುಗಳು ಕಾಣುತ್ತವೆ. ಇಂತಹ ಕಟ್ಟುಗಳು ಪಾರ್ಶ್ವಗಳಲ್ಲಿರದೆ, ಅವುಗಳಿಗೆ ಬದಲಾಗಿ ರಬ್ಬರಿನ ಸ್ವಭಾವವುಳ್ಳ ಚರ್ಮವಿದ್ದು, ಮೇಲಿನ ಮತ್ತು ಕೆಳಗಿನ ಕಟ್ಟುಗಳನ್ನು ಸೇರಿಸುತ್ತದೆ. ಈ ವಿಧವಾದ ಶರೀರದ ರಚನೆಯು ಕೀಟಗಳು ಯಥೇಚ್ಛವಾಗಿ ಸಂಚಾರ ಮಾಡುವದಕ್ಕೆ ಅನುಕೂಲವಾಗಿರುತ್ತದೆ.

ಇವುಗಳಲ್ಲಿ ಮೊದಲನೇದಾದ ತಲೆಯನ್ನು ಲಕ್ಷ್ಯವಿಟ್ಟು ನೋಡಿದರೆ, ಅದರಲ್ಲಿ ಎರಡು ಮೀಸೆಗಳು (ಸುಂಡಿಲುಗಳು), (೨) ಕಣ್ಣುಗಳು (೩) ಬಾಯಿ ಎಂಬ ಮೂರು ಉಪಾಂಗಗಳು ಕಾಣುವವು. ಸಾಧಾರಣವಾಗಿ ಕೀಟಗಳೆಲ್ಲಕ್ಕೂ ತಲೆಗೆ ಉಭಯ ಪಾರ್ಶ್ವಗಳಲ್ಲಿಯೂ ಮೀಸೆಯಂತಿರುವ ಎರಡು ಸ್ಪರ್ಶನಗಳಿರುವವು. ಈ ಮೀಸೆಗಳು ಅವುಗಳ ಕಣ್ಣುಗಳ ನಡುವೆ ಬೆಳೆಯುವವು. ಕೀಟವು ಸ್ತಬ್ಧವಾಗಿರುವಾಗ, ಈ ಮೀಸೆಗಳನ್ನು ತನ್ನ ಬೆನ್ನಿನ ಮೇಲೆ ಮಡಿಸಿಟ್ಟುಕೊಂಡು ಅಥವಾ ಪಕ್ಕಗಳಿಗೆ ಬಾಗಿಸಿಕೊಂಡು ಇರುವದು. ಅದು ಚಲನವಾಡುವದಕ್ಕೆ ಉಪಕ್ರಮಿಸಿದಾಗ ಮೀಸೆಗಳನ್ನು ಮುಂದಕ್ಕೆ ನೀಡಿಕೊಳ್ಳುವದು. ಕೆಲವು ಸಮಯಗಳಲ್ಲಿ ಒಂದು ಸ್ಪರ್ಶನವನ್ನು ಮಾತ್ರ ನೀಡಿ ಎರಡನೆಯದನ್ನು ಮಡಿಸಿಟ್ಟುಕೊಳ್ಳುವದುಂಟು. ಈ ಮೀಸೆಗಳ ರಚನೆಯನ್ನು ಸೂಕ್ಷ್ಮದೃಷ್ಟಿಯಿಂದ ನೋಡಿದರೆ ಅದು ಹಲವು ತುಂಡುಗಳಿಂದ ಕೂಡಿ ಆಗಿರುತ್ತದೆ ಎಂದು ತಿಳಿಯಬರುವದು. ಮೀಸೆಗಳ ಉಪಯೋಗದಿಂದ ಅದಕ್ಕೆ ಸ್ಪರ್ಶಜ್ಞಾನವು ದೊರೆತು ಪದಾರ್ಥಗಳ ಸ್ವರೂಪಗಳು ತಿಳಿಯುವವು. ಪದಾರ್ಥಗಳ ವಾಸನೆಯನ್ನು ಹಿಡಿಯುವದಕ್ಕೂ, ಯಾವದಾದರೂ ಒಂದು ಶಬ್ದವಾದರೆ ಅದನ್ನು ಕೇಳುವದಕ್ಕೂ ಇವೇ ಅಂಗಗಳು ಉಪಯೋಗಿಸಲ್ಪಡುತ್ತವೆಂದು ಕೆಲವು ಶಾಸ್ತ್ರಜ್ಞರು ಅ

ದರಿಂದ ಗಿಡದಲ್ಲಿ ನೀರು ಹೆಚ್ಚಾಗಿ ಸೇರುತ್ತಿರುವದು. ಬೇರುಗಳ ರೋಮಗಳು ಮಣ್ಣಿನಿಂದ ಹೀರಿಕೊಳ್ಳುವ ತೇವದಲ್ಲಿ, ನೀರೊಂದಲ್ಲದೆ ಅನೇಕ ಕರಗಿದ ಪದಾರ್ಥಗಳು ಸೇರಿರುತ್ತವೆ. ಸಸ್ಯಗಳಿಗೆ ಭೂಮಿಯಿಂದ ಬರುವ ಆಹಾರಪದಾರ್ಥಗಳು ಈ ರೀತಿಯಲ್ಲಿ ದೊರೆಯುತ್ತವೆ. ಈ ಕೆಲಸವು ಬೇರುಗಳ ಕೊನೆಯ ಭಾಗದಲ್ಲಿ ಮಾತ್ರ ನಡೆಯುವದು. ಬೇರುಗಳ ಗಡುತರವಾದ ಭಾಗಗಳಲ್ಲಿ ಈ ವಿಧವಾದ ರೋಮಗಳಿರುವದಿಲ್ಲ; ಅಲ್ಲಿ ಬೇರುಗಳಿಗೆ ಮುಂದವಾದ ತೊಗಟೆಯ ಹೊದಿಕೆಯು ಇರುತ್ತದೆ.

ಬೇರಿನ ಸ್ವಭಾವವನ್ನು ಸಂಗ್ರಹಿಸಿ ಹೇಳಬೇಕಾದರೆ:— ಬೇರು ಸಾಮಾನ್ಯವಾಗಿ ಭೂಮಿಯೊಳಗೆ ಬೆಳೆಯುತ್ತ, ಗಿಡವನ್ನು ಅದರ ಸ್ಥಾನದಲ್ಲಿ ನಿಲ್ಲಿಸುವದು; ಬೇರು ಭೂಮಿಯಿಂದ ತೇವವನ್ನು ಹೀರಿಕೊಳ್ಳುತ್ತದೆ. ಈ ತೇವದಲ್ಲಿ ಸಸ್ಯಕ್ಕೆ ಬೇಕಾದ ಆಹಾರಪದಾರ್ಥಗಳು ಕರಗಿರುತ್ತವೆ; ಬೇರುಗಳ ತುದಿಯ ಭಾಗಗಳಲ್ಲಿ ಒಂದು ಮುಸುಕು (ಒರೆ) ಇರುತ್ತದೆ. ಬೇರುಗಳು ಅವುಗಳ ತುದಿಯ ಭಾಗಗಳಲ್ಲಿರುವ ಸಣ್ಣ ಸಣ್ಣ ರೋಮಗಳ ಮೂಲಕ ಭೂಮಿಯಿಂದ ತೇವವನ್ನು ಹೀರುತ್ತವೆ. ಬೇರುಗಳ ಗಡುತರವಾದ ಭಾಗಗಳಲ್ಲಿ ರೋಮಗಳು ಇರುವದಿಲ್ಲ.

ಐದನೇ ಅಧ್ಯಾಯ.

ಕಾಂಡ.

[ಗಿಡಗಳಲ್ಲಿ ಕಾಂಡಗಳ ಸ್ವಭಾವವನ್ನು ತಿಳಿಯಬೇಕಾದರೆ ಸಸ್ಯಗಳು ಬೆಳೆಯುತಕ್ಕ ಸ್ಥಳಗಳಿಗೆ ಹೋಗಿ ಅವುಗಳನ್ನು ನಿರೀಕ್ಷಿಸಬೇಕು. ಕಾಂಡಗಳು ಬಗೆಬಗೆಯಾಗಿರುತ್ತವೆ. ಆವರೆ ಮತ್ತು ಇತರ ತೋಟದ ಸಸ್ಯಗಳ ಕಾಂಡಗಳನ್ನು ವಿಮರ್ಶಿಸಿದ ನಂತರ, ಹಾದಿಗಳ ಪಾರ್ಶ್ವಗಳಲ್ಲಿ ಬೆಳೆಯುವ ಸಾಲುಮರಗಳನ್ನೂ, ತೋಪುಗಳಲ್ಲಿಯೂ ಕಾಡುಗಳಲ್ಲಿಯೂ ಬೆಳೆಯುವ ವೃಕ್ಷಗಳನ್ನೂ ನೋಡಿ, ಕಾಂಡದ ರೂಪಾಂತರಗಳನ್ನೂ, ಅದು ಬೆಳೆಯುವ ಕ್ರಮವನ್ನೂ ತಿಳಿದುಕೊಳ್ಳಬೇಕು.

ಪ್ರಕೃತಿವಿಮರ್ಶೆಯ ಪತ್ರಿಕೆಗಳು.

ನಂ. ೧

ಕೀಟಗಳು: ರೇಶ್ಮೆಯ ಹುಳ.

[ಹುಳಗಳ ಜೀವಮಾನವನ್ನು ತಿಳಿಯಲಪೇಕ್ಷೆಯುಳ್ಳವರಿಗೆ ಯಾವದಾದರೂ ಒಂದು ಬಗೆಯ ರೇಶ್ಮೆಯ ಹುಳವನ್ನು ಪೋಷಿಸಿ ಅದರ ಎಲ್ಲ ಅವಸ್ಥೆಗಳನ್ನು ಕ್ರಮವಾಗಿ ನಿರೀಕ್ಷಿಸುವದು ಉತ್ತಮವಾದ ಅಭ್ಯಾಸವು. ರೇಶ್ಮೆಯ ಹುಳದ ವಿಮರ್ಶೆಯನ್ನು ಅದರ ತತ್ತಿಯಿಂದ (ಮೊಟ್ಟೆಯಿಂದ) ಪ್ರಾರಂಭಿಸಬಹುದು. ಇದಲ್ಲದೆ ತೋಟಗಳಲ್ಲಿ ಸಂಚಾರ ಮಾಡುವ ಯಾವದಾದರೂ ಒಂದು ಪತಂಗವು (ಪಾತರಗಿತ್ತಿ) ಗಿಡದ ಎಲೆಗಳ ಮೇಲೆಯಾಗಲಿ, ಇತರ ಅನುಕೂಲವಾದ ಸ್ಥಾನಗಳಲ್ಲಿಯಾಗಲಿ ತತ್ತಿಗಳನ್ನಿಡುವದನ್ನು ನೋಡಬೇಕು. ಈ ತತ್ತಿಗಳಿಂದ ಹೊರಗೆ ಬರುವ ಕೀಟಗಳು ಗಿಡಗಳಲ್ಲಿ ಮಾಡತಕ್ಕ ನಾಶವನ್ನು ನಿರೀಕ್ಷಿಸಿ ನೋಡಬೇಕು. ಅವು ಚನ್ನಾಗಿ ಬೆಳೆದ ನಂತರ ಅವುಗಳ ಆಕಾರ ಅಂಗರಚನೆಗಳನ್ನು ನೋಡಿ ತಿಳಿದು, ಅವುಗಳ ಚಿತ್ರಗಳನ್ನು ತೆಗೆದಿಡಬೇಕು.]

೧. ಪತಂಗ ಅಥವಾ ಪಾತರಗಿತ್ತಿ.

ತೋಟಗಳಲ್ಲಿ ಸಸ್ಯಗಳನ್ನು ಚನ್ನಾಗಿ ಬೆಳೆಸಿ ಅವುಗಳಿಂದ ಸರಿಯಾದ ಫಲಗಳನ್ನು ಪಡೆಯಬೇಕಾದರೆ, ಅವುಗಳ ಬೀಜಗಳನ್ನು ಬಿತ್ತಿ ನೀರನ್ನು ಎರೆದರೆ ಮಾತ್ರ ಸಾಲದು. ತೋಟದ ಭೂಮಿಯಲ್ಲಿ ಗೊಬ್ಬರವನ್ನು ಸೇರಿಸಿ, ಪ್ರತಿನಿತ್ಯವೂ ತಪ್ಪದೆ ನೀರನ್ನು ಹಾಕಿದರೂ, ಅನೇಕ ಗಿಡಗಳು ಸರಿಯಾಗಿ ಬೆಳೆಯದೆ, ಬೀಜಗಳನ್ನು ಹಾಕಿದ ಸ್ವಲ್ಪ ಕಾಲದಲ್ಲಿಯೇ ಕೆಟ್ಟು ಹೋಗುವದನ್ನು ನಾವು ನೋಡುತ್ತೇವೆ. ಹೀಗೆ ಸಸ್ಯಗಳ ಬೆಳವಳಿಕೆಗೆ ಯಾವ ಯಾವ ವಿಘ್ನಗಳಿರುತ್ತವೆ ಎಂದು ವಿಚಾರ ಮಾಡಿದರೆ, ತೋಟಗಳಿಗೆ ಆಗಾಗ್ಗೆ ಬರುವ ಕೆಲವು ಪ್ರಾಣಿಗಳು ಇದಕ್ಕೆ ಕಾರಣಗಳೆಂದು ತಿಳಿಯ ಬರುವದು. ತೋಟಗಳ ಪುಷ್ಪಗಳಲ್ಲಿ ದೊರೆಯುವ ಮಕರಂದವನ್ನು ತೆಗೆದುಕೊಳ್ಳುವದಕ್ಕೆ ಬರುವ ಜೇನುಹುಳ

ಮೊದಲಾದವುಗಳಿಂದಲೂ, ಮರಗಿಡಗಳಲ್ಲಿರುವ ಹಣ್ಣುಗಳನ್ನು ತಿನ್ನುವ ದಕ್ಕೆ ಬರುವ ಬಗೆಬಗೆಯಾದ ಪಕ್ಷಿಗಳಿಂದಲೂ ಸಸ್ಯಗಳಿಗೆ ಬಹಳ ಪ್ರಯೋಜನವಾದರೂ, ಹುಳಗಳ (ಕೀಟಗಳ) ವರ್ಗಕ್ಕೆ ಸೇರಿದ ಅನೇಕ ಪ್ರಾಣಿಗಳಿಂದ ತೋಟಗಳಲ್ಲುಂಟಾಗುವ ನಷ್ಟವನ್ನು ಅಷ್ಟು ಇಷ್ಟೆಂದು ಹೇಳಲಾಗುವದಿಲ್ಲ. ಎಲೆಗಳಿಗೂ, ಪುಷ್ಪಗಳಿಗೂ, ಕಾಯಿಪಲ್ಯಗಳಿಗೂ ಎಲ್ಲ ಪ್ರಾಣಿಗಳಿಗಿಂತಲೂ ಹುಳಗಳಿಂದಾಗುವ ಕೆಡಕು ಬಹಳ ಹೆಚ್ಚಾಗಿರುವದೆಂದು ತೋಟಗಾರರು ಹೇಳುತ್ತಾರೆ. ಇದೇ ಮೇರೆಗೆ ಹುಳಗಳು ಅನೇಕ ಹೊಲಗಳಲ್ಲಿ ಪ್ರವೇಶಿಸಿ ಪೈರುಗಳನ್ನು ನಾಶ ಮಾಡುವದು ಎಲ್ಲರಿಗೂ ತಿಳಿದಿರುತ್ತದೆ.

ಪ್ರಪಂಚದಲ್ಲಿ ಇತರ ಜಂತುಗಳೆಲ್ಲವೂ ಸೇರಿ ಎಷ್ಟಿರುವವೋ ಕೀಟದ ಜಾತಿಗಳು ಅದಕ್ಕಿಂತಲೂ ಸಂಖ್ಯೆಯಿಂದ ಹೆಚ್ಚು ಇರುತ್ತವೆ. ಇವುಗಳೊಳಗಣ ವಿವಿಧ ಜಾತಿಗಳು ನಾಲ್ಕು ಲಕ್ಷಗಳಿಗೂ ಹೆಚ್ಚಾಗಿಯೇ ಇರುವವು. ಕೀಟವರ್ಗದಲ್ಲಿ ಪಾತರಗಿತ್ತಿ (ಪತಂಗ), ಜೇನುಹುಳ, ಕೋರಿಯ ಹುಳ, ಇರಿವೆ, ಮಿಡತೆ ಮೊದಲಾದವು ಸೇರುತ್ತವೆ. ಇವುಗಳ ಆಕಾರ, ಬದುಕುವ ರೀತಿಗಳಲ್ಲಿ ಪರಸ್ಪರ ವ್ಯತ್ಯಾಸಗಳು ಕಂಡು ಬಂದರೂ, ಇವುಗಳ ಶರೀರದ ಭಾಗಗಳು, ಜೀವಮಾನದ ಅವಸ್ಥೆಗಳು ಒಂದೇ ಬಗೆಯಾಗಿರುತ್ತವೆ. ಕೀಟಗಳ ಅಂಗರಚನೆಯನ್ನು ತಿಳಿಯಲು ನಮ್ಮ ತೋಟದಲ್ಲಿ ಸಂಚಾರ ಮಾಡುವ ಯಾವದಾದರೊಂದು ಹುಳವನ್ನು ಹಿಡಿದು ಅದರ ಅವಯವಗಳನ್ನು ಚನ್ನಾಗಿ ಗಮನಿಸಿ ನೋಡಬೇಕು. ಇದಕ್ಕಾಗಿ ವಿಶೇಷ ತೊಂದರೆಪಡಬೇಕಾದದ್ದಿಲ್ಲ. ಸುಮಾರಾದ ಬಿಸಿಲಿರುವ ವೇಳೆಗಳಲ್ಲಿ, ತೋಟದ ಪುಷ್ಪಗಳಲ್ಲಾಗಲಿ, ಎಲೆಗಳಲ್ಲಾಗಲಿ ಸ್ವೇಚ್ಛೆಯಾಗಿ ವಿಹರಿಸುತ್ತ ನಾನಾವಿಧವಾದ ಪ್ರಕಾಶಮಾನವಾದ ಬಣ್ಣಗಳಿಂದೊಪ್ಪುತ್ತಿರುವ ಪತಂಗಗಳನ್ನು (ಪಾತರಗಿತ್ತಿ) ನೋಡದವರು ಯಾರು? ಹಳದಿ, ಕಪ್ಪು, ಕೆಂಪು, ನಾತೀಪುಡಿಯ ಬಣ್ಣ ಮೊದಲಾದ ಬಣ್ಣಗಳುಳ್ಳ ಪತಂಗಗಳಲ್ಲಿ ಯಾವದಾದರೂ ಒಂದನ್ನು ಕೈಯಿಂದಾಗಲಿ ಬಲೆಯ ಸಹಾಯದಿಂದಾಗಲಿ ಹಿಡಿದು, ಅದರ ಅಂಗಗಳನ್ನು ಪರೀಕ್ಷಿಸಲುಪಕ್ರಮಿಸಬಹುದು. ಅದರ ಪ್ರಕಾಶಮಾನವಾದ ಪಕ್ಷಗಳ ಹೊರಭಾಗಗಳನ್ನು ಕೂಡಿಸಿದರೆ, ಅದರ ಶರೀರದ ಭಾಗಗಳು ಗೋಚ

ರವಾಗುವವು. ಇದರ ಶರೀರದಲ್ಲಿ ಕತ್ತರಿಸಿದಂತೆ ತಲೆ, ಎದೆ, ಹೊಟ್ಟೆಗಳೆಂಬ ಮೂರು ಪ್ರತ್ಯೇಕ ಭಾಗಗಳಿರುತ್ತವೆ. ಕೀಟಗಳ ಶರೀರದ ಮೇಲೆ ಕೊಂಬಿನಂತಿರುವ ಪದಾರ್ಥದಿಂದ ಮಾಡಲ್ಪಟ್ಟ ಬಿರುಸಾದ ಕವಚವಿರುವದು. ಈ ಕವಚವು, ಕೀಟಗಳಿಗೆ ಅಸ್ಥಿಪಂಜರವಾಗಿರುವದು. ಈ ಕವಚವು ಹಲವು ತುಂಡುಗಳು ಕೂಡಿಸಲ್ಪಟ್ಟು ಆಗಿರುವದು. ಕೀಟಗಳ ದೇಹದ ಮೇಲ್ಭಾಗದಲ್ಲಿಯೂ, ಕೆಳಭಾಗದಲ್ಲಿಯೂ ಬಳಿಯಂತಿರುವ ಕಟ್ಟುಗಳು ಕಾಣುತ್ತವೆ. ಇಂತಹ ಕಟ್ಟುಗಳು ಪಾರ್ಶ್ವಗಳಲ್ಲಿರದೆ, ಅವುಗಳಿಗೆ ಬದಲಾಗಿ ರಬ್ಬರಿನ ಸ್ವಭಾವವುಳ್ಳ ಚರ್ಮವು ಇದ್ದು, ಮೇಲಿನ ಮತ್ತು ಕೆಳಗಿನ ಕಟ್ಟುಗಳನ್ನು ಸೇರಿಸುತ್ತದೆ. ಈ ವಿಧವಾದ ಶರೀರದ ರಚನೆಯು ಕೀಟಗಳು ಯಥೇಚ್ಛವಾಗಿ ಸಂಚಾರ ಮಾಡುವದಕ್ಕೆ ಅನುಕೂಲವಾಗಿರುತ್ತದೆ.

ಇವುಗಳಲ್ಲಿ ಮೊದಲನೇದಾದ ತಲೆಯನ್ನು ಲಕ್ಷ್ಯವಿಟ್ಟು ನೋಡಿದರೆ, ಅದರಲ್ಲಿ ಎರಡು ಮೊಸೆಗಳು (ಸುಂಡಿಲುಗಳು), (೨) ಕಣ್ಣುಗಳು, (೩) ಬಾಯಿ ಎಂಬ ಮೂರು ಉಪಾಂಗಗಳು ಕಾಣುವವು. ಸಾಧಾರಣವಾಗಿ ಕೀಟಗಳೆಲ್ಲಕ್ಕೂ ತಲೆಗೆ ಉಭಯ ಪಾರ್ಶ್ವಗಳಲ್ಲಿಯೂ ಮೊಸೆಗಳಂತಿರುವ ಎರಡು ಸ್ಪರ್ಶನಗಳಿರುವವು. ಈ ಮೊಸೆಗಳು ಅವುಗಳ ಕಣ್ಣುಗಳ ನಡುವೆ ಬೆಳೆಯುವವು. ಕೀಟವು ಸ್ತಬ್ಧವಾಗಿರುವಾಗ, ಈ ಮೊಸೆಗಳನ್ನು ತನ್ನ ಬೆನ್ನಿನ ಮೇಲೆ ಮಡಿಸಿಟ್ಟುಕೊಂಡು ಅಥವಾ ಪಕ್ಕಗಳಿಗೆ ಬಾಗಿಸಿಕೊಂಡು ಇರುವದು. ಅದು ಚಲನವಾಡುವದಕ್ಕೆ ಉಪಕ್ರಮಿಸಿದಾಗ ಮೊಸೆಗಳನ್ನು ಮುಂದಕ್ಕೆ ನೀಗಿಕೊಳ್ಳುವದು. ಕೆಲವು ಸಮಯಗಳಲ್ಲಿ ಒಂದು ಸ್ಪರ್ಶನವನ್ನು ಮಾತ್ರ ನೀಡಿ ಎರಡನೆಯದನ್ನು ಮಡಿಸಿಟ್ಟುಕೊಳ್ಳುವದುಂಟು. ಈ ಮೊಸೆಗಳ ರಚನೆಯನ್ನು ಸೂಕ್ಷ್ಮದೃಷ್ಟಿಯಿಂದ ನೋಡಿದರೆ ಅದು ಹಲವು ತುಂಡುಗಳಿಂದ ಕೂಡಿ ಆಗಿರುತ್ತದೆ ಎಂದು ತಿಳಿಯಬರುವದು. ಮೊಸೆಗಳ ಉಪಯೋಗದಿಂದ ಅದಕ್ಕೆ ಸ್ಪರ್ಶಜ್ಞಾನವು ದೊರೆತು ಪದಾರ್ಥಗಳ ಸ್ವರೂಪಗಳು ತಿಳಿಯುವವು. ಪದಾರ್ಥಗಳ ವಾಸನೆಯನ್ನು ಹಿಡಿಯುವದಕ್ಕೂ, ಯಾವದಾದರೂ ಒಂದು ಶಬ್ದವಾದರೆ ಅದನ್ನು ಕೇಳುವದಕ್ಕೂ ಇವೇ ಅಂಗಗಳು ಉಪಯೋಗಿಸಲ್ಪಡುತ್ತವೆಂದು ಕೆಲವು ಶಾಸ್ತ್ರಜ್ಞರು ಅಭಿ

ಸಾಯ ಪಡುತ್ತಾರೆ. ಇದಲ್ಲದೆ ಕೀಟಗಳು ತಮ್ಮ ವಿಸೆಗಳ ಮೂಲ ನಾಗಿ ಪರಸ್ಪರ ಸಂಭಾಷಣೆಗಳನ್ನು ನಡಿಸಿ ಸ್ನೇಹವನ್ನು ಬೆಳಿಸುತ್ತವೆ.

ಕೀಟಗಳ ಕಣ್ಣುಗಳು ವಿಚಿತ್ರ ರಚನೆಯುಳ್ಳವು. ನಮಗೆ ತಟ್ಟನೆ ಕಾಣುವ ಎರಡು ಉಬ್ಬು ಕಣ್ಣುಗಳಲ್ಲದೆ, ಅನೇಕ ಸಣ್ಣ ಕಣ್ಣುಗಳಿರು ತ್ತವೆ. ನಾವು ತಲೆಯನ್ನು ತಿರಿಗಿಸಿ ಪಾರ್ಶ್ವಗಳಲ್ಲಿರುವ ಪದಾರ್ಥಗ ಳನ್ನು ನೋಡುವ ಹಾಗೆ, ಅವು ಕಣ್ಣುಗಳನ್ನು ತಿರಿಗಿಸಿ ನೋಡಲಾರವು. ಕಾರಣದಿಂದ ಅವುಗಳಿಗೆ ಹೆಚ್ಚು ಕಣ್ಣುಗಳಿರಬೇಕಾದದ್ದು ಅವಶ್ಯಕವು. ತಲೆಯ ಕೆಳಮಗ್ಗಲಿಗೆ ಅದರ ಬಾಯಿ ಇರುವದು ಕೀಟಗಳ ಬಾಯಿ ರುು ಅವು ತಿನ್ನುವ ಆಹಾರಕ್ಕೆ ತಕ್ಕ ಹಾಗಿರುತ್ತದೆ ಕೆಲವು ಕೀಟಗಳು ಳನಪದಾರ್ಥಗಳನ್ನು ತಿನ್ನುವದರಿಂದ, ಅವುಗಳಿಗೆ ಆಹಾರವನ್ನು ಅಗಿ ುವುದಕ್ಕೆ ಬಲವಾದ ದವಡೆಗಳಿರುತ್ತವೆ ಕೆಲವು ಕೀಟಗಳು, ಅಂದರೆ ೀನುಹುಳ, ನೊಣ, ಮೊದಲಾದವು ಪುಷ್ಪಗಳಲ್ಲಿರುವ ಮಧುವನ್ನು ೀರಿ ಪಾನವಾಡುವದರಿಂದ, ಅವುಗಳ ಬಾಯಿಯು ಆನೆಯ ಸುಂಡಿಲಿ ಂತಿರುವದು. ನಮ್ಮ ಮನೆಗಳಲ್ಲಿ ವಿಶೇಷವಾಗಿ ವ್ಯಾಪಿಸಿರುವ ುಂಗಾಡು (ಸೊಳ್ಳೆಯು) ನಮ್ಮ ಕೈಯ ಮೇಲೆ ಕುಳಿತು ರಕ್ತವನ್ನು ೀರಿಕೊಳ್ಳುವದನ್ನು ನಾವು ತಿಳಿಯಬಹುದು.

ಹುಳಗಳ ಶರೀರದ ಎರಡನೇ ಭಾಗವು ಎದೆಯು. ಇದರ ಮೇಲ್ಭಾ ದಲ್ಲಿ ರೆಕ್ಕೆಗಳೂ ಕೆಳಭಾಗದಲ್ಲಿ ಕಾಲುಗಳು ಇರುತ್ತವೆ. ಕೀಟಗಳಿಗೆ ಾವಾನ್ಯವಾಗಿ ಎರಡೆರಡು ಜತೆಯ ರೆಕ್ಕೆಗಳಿರುತ್ತವೆ. ಕೆಲವಕ್ಕೆ ಂದೇ ಜತೆಯ ರೆಕ್ಕೆಗಳಿರುತ್ತವೆ. ಪತಂಗದ ರೆಕ್ಕೆಗಳ ಮೇಲೆ ಮನೆ ಳ ಮೇಲೆ ಹೊದ್ದಿಸುವ ಪಂಚುಗಳಂತೆ ಅಮರಿಸಲ್ಪಟ್ಟಿರುವ ಪೊರೆ ಳು ಅನೇಕವಾಗಿರುತ್ತವೆ. ಇವುಗಳನ್ನು ಮುಟ್ಟಿದರೆ ಅವು ಹಿಟ್ಟಿನಂ ದ್ದು ಕೈಗೆ ಹತ್ತಿಕೊಳ್ಳುವವು. ಇವುಗಳಲ್ಲಿ ನಾನಾವಿಧವಾದ ಬಣ್ಣ ಳೂ ಆಕೃತಿಗಳೂ ಇರುತ್ತವೆ. ಎಲ್ಲ ಕೀಟಗಳಲ್ಲಿಯೂ ಕೆಳಮಗ್ಗ ಲ್ಲಿ ಎರಡೆರಡು ಕಾಲುಗಳ ಮೂರು ಜೋಡುಗಳಿರುವವು. ಒಂದೊಂದು ಾಲಿನಲ್ಲಿಯೂ ನಮ್ಮ ಕಾಲಿನಲ್ಲಿ ತೊಡೆ, ಮೊಳಕಾಲು, ಪಾದಗಳಿ ುವ ಹಾಗೆ ಮೂರು ಭಾಗಗಳಿರುತ್ತವೆ. ಹಿಂಗಾಲುಗಳು ಮುಂಗಾ ುಗಳಿಗಿಂತ ದೊಡ್ಡವಾಗಿಯೂ ಬಲವಾಗಿಯೂ ಇರುತ್ತವೆ.

ಪಾತರಗಿತ್ತಿಯು ಶರೀರದ ಮೂರನೆ ಭಾಗವಾದ ಹೊಟ್ಟೆಯು ಎಲ್ಲಕ್ಕೂ ದೊಡ್ಡದಾಗಿರುತ್ತದೆ. ಇದರಲ್ಲಿ ಕೀಟದ ಶ್ವಾಸೋಚ್ಛ್ವಾಸ, ಆಹಾರದ ಜೀರ್ಣ, ಮಲವಿಸರ್ಜನೆ, ಇವುಗಳಿಗೆ ಬೇಕಾದ ಅವಯವಗಳಿರುತ್ತವೆ. ಕೀಟಗಳು ನಮ್ಮ ಹಾಗೆ ಬಾಯಿಯಿಂದ ಶ್ವಾಸೋಚ್ಛ್ವಾಸಗಳನ್ನು ನಡೆಸದೆ, ತಮ್ಮ ಶರೀರದ ಪಾರ್ಶ್ವಗಳಲ್ಲಿರುವ ರಂಧ್ರಗಳಿಂದ ಉಸುರಾಡಿಸುತ್ತವೆ.

ಇದೇ ಕ್ರಮದಲ್ಲಿ ಕೀಟಗಳ ಇತರ ಜಾತಿಗಳ ಪ್ರಾಣಿಗಳನ್ನು ಪರೀಕ್ಷಿಸಿ ನೋಡಿದರೆ, ಎಲ್ಲ ಕೀಟಗಳಿಗೂ ಸಾಮಾನ್ಯವಾಗಿರುವ ಕೆಲವು ಲಕ್ಷಣಗಳು ಗೋಚರವಾಗುವವು. ಇವುಗಳನ್ನು ಸಂಕ್ಷೇಪವಾಗಿ ಹೇಳಬೇಕಾದರೆ:— ಕೀಟಗಳ ದೇಹವು ಮೂರು ಭಾಗಗಳುಳ್ಳದ್ದಾಗಿರುತ್ತದೆ; ಅವುಗಳಿಗೆ ಆರು ಕಾಲುಗಳು ಇರುತ್ತವೆ; ಅವುಗಳ ಶರೀರದಲ್ಲಿ ವಲಯಗಳಂತೆ ಇರುವ ಅನೇಕ ತುಂಡುಗಳಿರುತ್ತವೆ ದೇಹದ ಮಧ್ಯಭಾಗವಾದ ಎದೆಯಲ್ಲಿ ಕಾಲುಗಳು, ರೆಕ್ಕೆಗಳು ಬೆಳೆದಿರುತ್ತವೆ; ಸಾಮಾನ್ಯವಾಗಿ ಕೀಟಗಳಿಗೆ ನಾಲ್ಕು ರೆಕ್ಕೆಗಳಿರುತ್ತವೆ ನೊಣ ಮೊದಲಾದವುಗಳಿಗೆ ಎರಡು ರೆಕ್ಕೆಗಳು ಮಾತ್ರ ಇರುವವು. ಕೀಟಗಳು ಬಾಯಿಯಿಂದ ಶ್ವಾಸೋಚ್ಛ್ವಾಸವನ್ನು ನಡಿಸುವದಿಲ್ಲ.

(೨). ಪಾತರಗಿತ್ತಿಯು ತತ್ತಿಯನ್ನು ಹಾಕುವದು.

ನಾವು ಇಲ್ಲಿಯವರಿಗೂ ವಿವರಿಸಿದ ಪತಂಗಗಳು ನಮ್ಮ ತೋಟಗಳಲ್ಲಿ ಒಂದು ಗಿಡದಿಂದ ಮತ್ತೊಂದು ಗಿಡಕ್ಕೆ ಸ್ವೇಚ್ಛೆಯಾಗಿ ಹಾರಾಡುತ್ತ ತಮಗೆ ಬೇಕಾದ ಆಹಾರವನ್ನು ಸಂಪಾದಿಸಿಕೊಳ್ಳುತ್ತವೆ. ಕೆಲವು ಸಸ್ಯಗಳ ಪುಷ್ಪಗಳಿಂದಲೂ, ಕೆಲವು ಎಲೆಗಳಿಂದಲೂ, ಕೆಲವು ಕಾಂಡಗಳಿಂದಲೂ ತಮ್ಮ ಆಹಾರವಸ್ತುಗಳನ್ನು ತೆಗೆದುಕೊಳ್ಳುತ್ತವೆ. ಮತ್ತೆ ಕೆಲವು ಸಸ್ಯಗಳಿಂದ ಯಾವ ಪದಾರ್ಥಗಳನ್ನು ಪಡೆಯದೆ ಇದ್ದರೂ, ಗಿಡಗಳಲ್ಲಿ ಹಾರಾಡಿ ಎಲ್ಲಾದರೂ ಒಂದು ಭಾಗದಲ್ಲಿ ಸ್ವಲ್ಪಕಾಲ ಇದ್ದು ಹೊರಟು ಹೋಗುತ್ತವೆ. ಕೆಲವು ವೇಳೆಗಳಲ್ಲಿ ಪತಂಗಗಳು ಗಿಡದ ಭಾಗಗಳಲ್ಲಿ ಹಾರಾಡಿ ಹೋದನಂತರ, ಅವು ಕುಳಿತಿದ್ದ ಸ್ಥಾನಗಳನ್ನು ಪರೀಕ್ಷಿಸಿ ನೋಡಿದರೆ ಅನೇಕ ತತ್ತಿಗಳಿರುವದನ್ನು ನಾವು ನೋಡಬಹುದು. ತತ್ತಿಗಳನ್ನು ಗಿಡಗಳ ಭಾಗಗಳಲ್ಲೆಲ್ಲಾದರೂ ಇಟ್ಟ ಮೇಲೆ, ಪತಂಗಗಳು ಅವುಗಳನ್ನು ಲಕ್ಷಿಸುವದೇ ಇಲ್ಲ. ತತ್ತಿಗಳನ್ನು ಹಾಕಿದ ಸ್ವಲ್ಪ ಕಾಲ

ದಲ್ಲಿಯೆ ಅವು ಸತ್ತು ಹೋಗುವದರಿಂದ, ತತ್ತಿಗಳಿಂದ ಹೊರಬೀಳುವ ತಮ್ಮ ಮರಿಗಳನ್ನು ಅವು ನೋಡುವದೆ ಇಲ್ಲ. ಮೃಗಪಕ್ಷಿಗಳಲ್ಲಿರು ಕ್ರಮವುಇದರಿಂದ ಎಷ್ಟು ವ್ಯತ್ಯಾಸವಾಗಿರುವದು? ಮೃಗಗಳು, ಪಕ್ಷಿಗಳು ತಮ್ಮ ಮರಿಗಳನ್ನು ಭದ್ರವಾದ ಸ್ಥಳಗಳಲ್ಲಿಟ್ಟು ಅವುಗಳಿಗೆ ಬೇಕಾದ ಆಹಾರಗಳನ್ನು ಎಷ್ಟು ದೂರವಾದರೂ ಹೋಗಿ ಸಂಪಾದಿಸುತ್ತವೆ. ತಮ್ಮ ಮರಿಗಳನ್ನು ಶತ್ರುಗಳ ಬಾಧೆಗಳಿಂದ ಕಾಪಾಡುವ ಕೆಲಸದಲ್ಲಿ ತಮ್ಮ ಪ್ರಾಣಗಳನ್ನಾದರೂ ಕಳಿದುಕೊಳ್ಳುವದಕ್ಕೆ ಹಿಂದೆಗೆಯುವದಿಲ್ಲ. ಕೀಟಗಳು ಹೀಗೆ ತಮ್ಮ ಮರಿಗಳನ್ನು ಪೋಷಿಸಲು ಸಮರ್ಥರಾಗದೆ ಇರುವದರಿಂದ, ತಮ್ಮ ತತ್ತಿಗಳಿಂದ ಹೊರಟುಬರುವ ಮರಿಗಳಿಗೆ ಅವಶ್ಯಕವಾದ ಆಹಾರವು ಎಲ್ಲಿ ಹೆಚ್ಚಾಗಿ ದೊರೆಯುವದೋ, ಅಂತಹ ಸ್ಥಳಗಳಲ್ಲಿಯೆ ತತ್ತಿಗಳನ್ನಿಡುವಷ್ಟು ಜ್ಞಾನವನ್ನು ಮಾತ್ರ ಪರಮ ಕರುಣಾಶಾಲಿಯಾದ ಸೃಷ್ಟಿಕರ್ತನು ಈ ಪ್ರಾಣಿಗಳಿಗೆ ಅನುಗ್ರಹಿಸಿರುವನು. ಆದುದರಿಂದ ಕೀಟಗಳು ಬೇರು, ಕಾಂಡ, ಎಲೆ, ಕಾಯಿ, ಬೀಜ ಮೊದಲಾದವುಗಳಲ್ಲಿ ತಮ್ಮ ತತ್ತಿಗಳನ್ನಿಡುವವು. ಈ ತತ್ತಿಗಳಿಂದ ಐದರಿಂದ ಇಪ್ಪತ್ತು ದಿವಸಗಳೊಳಗಾಗಿ ಮರಿಗಳು ಬರುವವು. ಕೆಲವು ಹುಳಗಳ ಮರಿಗಳು ತತ್ತಿಗಳಿಂದ ಬರುವದಕ್ಕೆ ಎಷ್ಟೊ ತಿಂಗಳು ಬೇಕಾಗುತ್ತವೆ. ಮೇಲೆ ಹೇಳಿದಂಶಗಳು ಕೀಟದ ಮೊದಲನೆ ಅವಸ್ಥೆಗೆ (ಅಂಡರೂಪ) ಸೇರಿದವು.

(೩) ಕೀಟದ ಎರಡನೆ ಅವಸ್ಥೆ — ಕ್ರಿಮಿರೂಪ.

ಕೀಟಗಳ ಮರಿಗಳು ತತ್ತಿಯಿಂದ ಹೊರಬೀಳುವಾಗ ಒಂದು ಆಶ್ಚರ್ಯಕರವಾದ ಅಂಶವನ್ನು ನಿರೀಕ್ಷಿಸಬಹುದು. ನಮ್ಮ ನೆರೆಹೊರೆಗಳಲ್ಲಿ ಬದಕುವ ಪ್ರಾಣಿಗಳಿಂದ ಹುಟ್ಟುವ ಮರಿಗಳು ಅವುಗಳ ತಾಯಿ ತಂದೆಗಳ ಹಾಗೆ ಇರುವದನ್ನು ನಾವು ನೋಡಿರುತ್ತೇವೆ. ಎಮ್ಮೆಯು ಕರುವು ಎಮ್ಮೆಯಂತೆಯೂ, ನಾಯಿಯ ಮರಿಯು ನಾಯಿಯಂತೆಯೂ ಇರುತ್ತವೆ. ಹಾಗೆಯೆ ತತ್ತಿಗಳಿಂದ ಹುಟ್ಟುವ ಪ್ರಾಣಿಗಳಲ್ಲಿ ಕೋಳಿಯ ಮರಿಯು ಕೋಳಿಯಂತೆಯೂ, ಪಾರಿವಾಳದ ಮರಿಯು ಪಾರಿವಾಳದಂತೆಯೂ ಇರುವವು. ಪಾತರಗಿತ್ತಿಯ ತತ್ತಿಗಳು ಒಡೆದಾಗ ಬರುವ ಮರಿಗಳು ಎಷ್ಟು ಮಾತ್ರವು ಅವನ್ನು ಹೋಲುವದಿಲ್ಲ. ಪತಂಗದ ತತ್ತಿಯಿಂದ

ಒಂದು ಸಣ್ಣ ಕ್ರಿಮಿಯು ಬರುವದನ್ನು ನೋಡಿದಾಗ ಯಾರಿಗೆ ಆಶ್ಚರ್ಯವಾಗುವದಿಲ್ಲ? ಅಂದವಾದ ಗಮನಗಳಿಂದ ಸ್ವೇಚ್ಛೆಯಾಗಿ ಗಿಡಗಳಲ್ಲಿ ಹಾರಾಡುತ್ತಿರುವ ಮತ್ತು ನಾನಾವಿಧವಾದ ಬಣ್ಣಗಳಿಂದೊಪ್ಪುವ ಸೌಂದರ್ಯಮೂರ್ತಿಯಾದ ಪಾತರಗಿತ್ತಿಯೆಲ್ಲಿ! ನಿರ್ಜೀವ ವಸ್ತುಗಳ ಹಾಗೆ ಸ್ತಬ್ಧವಾಗಿದ್ದು, ಆಕಾರ ವರ್ಣಗಳಿಂದಲೂ ಆಹ್ಲಾದ ಪಡಿಸದೆ ಇರುವ ಕ್ರಿಮಿಯೆಲ್ಲಿ!

ತತ್ತಿಯಿಂದ ಕ್ರಿಮಿಗಳು ಬಂದ ಒಡನೆಯೆ ಆಹಾರವನ್ನು ಹುಡುಕುವದಕ್ಕೆ ಪ್ರಾರಂಭಿಸುವವು. ಆದುದರಿಂದ ಪಾತರಗಿತ್ತಿಯು ಆಹಾರವು ದೊರಕುವ ಸ್ಥಳಗಳಲ್ಲಿಯೇ ತತ್ತಿಗಳನ್ನಿಡುವದು. ಅವುಗಳಿಗೆ ಆಹಾರದ ಅತುರವು ಎಷ್ಟು ಮಟ್ಟಿಗೆ ಇರುವದೆಂದರೆ, ಕೆಲವು ಕ್ರಿಮಿಗಳು ಬೇರೆ ಆಹಾರವು ದೊರೆಯದಿದ್ದರೆ, ತತ್ತಿಗಳ ಚಿಪ್ಪುಗಳನ್ನು ತಿನ್ನುವದಕ್ಕೆ ಆರಂಭಿಸುವವು. ಗಿಡಗಳಲ್ಲಿ ಹುಟ್ಟುವ ಕ್ರಿಮಿಗಳು ಗಿಡಗಳ ಆಯಾ ಭಾಗಗಳಲ್ಲಿ ಪ್ರಸರಿಸಿ ತಮ್ಮ ಹಸಿವನ್ನು ತೀರಿಸಿಕೊಳ್ಳುತ್ತವೆ. ಹುಳಗಳ ಆಕಾರ ಮಾನದಿಂದ ನೋಡಿದರೆ ಅವು ಎಲ್ಲ ಪ್ರಾಣಿಗಳಲ್ಲೂ ಹೆಚ್ಚಾಗಿ ತಿನ್ನುತ್ತವೆ ಎಂದು ಕಂಡು ಬರುವದು. ಕ್ರಿಮಿಗಳು ಹತ್ತಿದ ಯಾವದೊಂದು ಗಿಡದಲ್ಲಿ ಆಯಾ ಭಾಗಗಳು ನಾಶಹೊಂದುವದು ಈ ಕಾರಣದಿಂದಲೇ. ಇವು ಹುಟ್ಟುವಾಗ ಬಹಳ ಚಿಕ್ಕವಾಗಿರುವದರಿಂದ ಅವುಗಳ ಅಂಗರಚನೆಯನ್ನು ನಿರೀಕ್ಷಿಸುವದು ಕಷ್ಟವಾಗುವದು. ಇವು ಸ್ವಲ್ಪ ಕಾಲದಲ್ಲಿಯೇ ಮೊದಲಿದ್ದ ಪ್ರಮಾಣಕ್ಕೆ ಎಳೆಂಟರಷ್ಟು ದೊಡ್ಡವಾಗುವವು. ಚನ್ನಾಗಿ ಬೆಳೆದ ಮೇಲೆ ಅವುಗಳನ್ನು ಸುಲಭವಾಗಿ ಪರೀಕ್ಷಿಸಬಹುದು. ಈ ಹುಳಗಳು ಹೆಚ್ಚು ಹೆಚ್ಚು ಆಹಾರವನ್ನು ತಿಂದು ಬೆಳೆಯುತ್ತ ಬರುವಾಗ, ಅವುಗಳ ಮೈಮೇಲಿನ ತೊಗಲು ಬಿರುಸಾಗಿರುವದರಿಂದ ಅದು ಬೆಳೆಯುವ ಶರೀರಕ್ಕೆ ಸಾಲದೆ ಹೋಗುವದು. ಈ ಸ್ಥಿತಿಯು ಬಂದಾಗ ಕ್ರಿಮಿಯು ಹೊದಿಕೆಯು ಬಿರುಕು ಬಿಟ್ಟು, ಕ್ರಿಮಿಯು ಹೊಸ ಚರ್ಮದೊಡನೆ ಹೊರಗೆ ಬರುವದು. ಹೀಗೆ ಕ್ರಿಮಿಯು ತೊಗಲು ಬಿಟ್ಟಾಗ ಅದು ಪರೆಬಿಟ್ಟಿತೆಂದು ಹೇಳುತ್ತವೆ. ಇದೇ ಕ್ರಮದಲ್ಲಿ ಹಾವು ಮೊದಲಾದ ಪ್ರಾಣಿಗಳು ಪರೆಬಿಡುವದನ್ನು ನೋಡಿರುತ್ತೇವೆ. ಪರೆಬಿಟ್ಟ ಕ್ರಿಮಿಯು ಆಹಾರವನ್ನು ವಿಶೇಷಾತುರದಿಂದ ತಿಂದು, ಪುನಃ ಪರೆ

ಬಿಡುವದು. ಈ ಪ್ರಕಾರ ಇವು ಪೂರ್ತಿಯಾಗಿ ಬೆಳೆಯುವದರೊಳಗಾಗಿ ಎರಡರಿಂದ ಏಳು ಸಾರೆ ಪರೆಗಳನ್ನು ಬಿಡುತ್ತವೆ. ಕ್ರಿಮಿಯು ಕಡೆಯ ಸಾರೆ ಪರೆಯನ್ನು ಬಿಡುವಾಗ ಅದರ ಪೂರ್ಣವಾದ ಪ್ರಮಾಣವನ್ನು ಹೊಂದುತ್ತದೆ. ನಾವು ಚನ್ನಾಗಿ ಬೆಳೆದ ಒಂದು ಕ್ರಿಮಿಯನ್ನು ಕೈಯಲ್ಲಿ ಹಿಡಿದು ನೋಡಿದರೆ, ಅದರ ಶರೀರವು ಹನ್ನೆರಡು ವಲಯಗಳಿಂದ ಕೂಡಿದ್ದಾಗಿರುವದೆಂದು ಕಂಡುಬರುವದು. ಅದರ ಒಂದು ತುದಿಗೆ ತಲೆಯು, ಮತ್ತೊಂದು ತುದಿಗೆ ಮಲವಿಸರ್ಜನೆಯಅಂಗವು ಇರುವವು. ಅದರ ಮೈಮೇಲೆ ಮಾಂಸಮಯವಾದ ಬೆನ್ನಹುರಿಯು, ಅದರ ಮೇಲೆ ರೋಮಗಳು ಇರುವವು. ಅದರ ಕೆಳಭಾಗದಲ್ಲಿ, ಮೊದಲಿನ ಆರು ಸಂಧಿಗಳಲ್ಲಿಯೂ ಕಡೆಯ ನಾಲ್ಕು ಸಂಧಿಗಳಲ್ಲಿಯೂ ಪ್ರತಿಯೊಂದರ ಕೆಳಗೆ ಎರಡು ಕಾಲುಗಳಿರುವವು. ಮೊದಲಿನ ಎರಡು ಸಂಧಿಗಳ ಕೆಳಗೆ ಬರುವ ಕಾಲುಗಳಿಗೂ, ಕಡೆಯ ಸಂಧಿಗಳಲ್ಲಿ ಬರುವ ಕಾಲುಗಳಿಗೂ ವ್ಯತ್ಯಾಸವಿರುವದು. ಕ್ರಿಮಿಗಳು ಪೂರ್ಣವಾಗಿ ಬೆಳೆದಿರುವಾಗ ಅವುಗಳ ಬೆನ್ನುಹುರಿಯ ಮೇಲೆ ಬಡಿದರೆ ಒಂದು ವಿಶೇಷ ಶಬ್ದವು ಬರುವದು.

ಕೀಟಗಳು ಈ ಎರಡನೆಯವಸ್ಥೆಯಲ್ಲಿರುವಾಗ ಯಾವಾಗಲೂ ತಿಂಡಿಯನ್ನು ತಿನ್ನುತ್ತಿರುವವು. ನಮ್ಮ ತೋಟದ ಗಿಡಗಳಲ್ಲಿಯೂ, ಹೊಲಗಳ ಪೈರುಗಳಲ್ಲಿಯೂ ಆಗುವ ನಾಶವು ಈ ಕ್ರಿಮಿಗಳಿಂದಲೇ ಉಂಟಾಗುತ್ತದೆ. ಹೀಗೆ ಚನ್ನಾಗಿ ಆಹಾರವನ್ನು ತಿಂದು ತಮ್ಮ ಶರೀರದಲ್ಲಿ ಹೆಚ್ಚಾಗಿ ಮಾಂಸವನ್ನು ಸೇರಿಸಿದ ಮೇಲೆ ಅವು ಆಹಾರ ತಿನ್ನುವದನ್ನು ಬಿಟ್ಟು ನಿದ್ರಾವಸ್ಥೆಯನ್ನು ಹೊಂದುತ್ತವೆ.

(೪) ಕೀಟನ ಮೂರನೆಯವಸ್ಥೆ–ಕೋಶರೂಪ.

ವಿಶೇಷ ಕೊಳುಬಾಕತನದಿಂದ ತಿನ್ನುತ್ತಿದ್ದ ಕ್ರಿಮಿಯು, ಈ ಅವಸ್ಥೆಗೆ ಬರುವಾಗ ಆಹಾರ ತಿನ್ನುವದನ್ನು ಪೂರ್ಣವಾಗಿ ನಿಲ್ಲಿಸುವದು ಒಂದು ಪರಮಾಶ್ಚರ್ಯಕರವಾದ ಸಂಗತಿ. ತನ್ನ ಅಪರಿಮಿತ ಹಸಿವನ್ನು ತೀರಿಸಿಕೊಂಡನಂತರ, ಗಿಡದಲ್ಲಿ ಸ್ವಲ್ಪ ಮರೆಯಾದ ಭಾಗವನ್ನು ಹುಡಿಕಿ, ಅಲ್ಲಿ ಸರಿಯಾದ ಆಧಾರವು ಸಿಕ್ಕುವ ಸ್ಥಳದಲ್ಲಿ ರೇಶ್ಮೆಯಂತಿರುವ ದಾರಗಳಿಂದ ತನ್ನನ್ನು ನಿಲ್ಲಿಸಿ, ಬೇಗನೆ ಕೋಶರೂಪಕ್ಕೆ ಬರುವದು.

ಗುರುವರ್ಯ ರಾವಸಾಹೇಬ ಎಡಿಟರ ಶಾಲಾಪತ್ರಿಕ ಧಾರವಾಡ ಇವರ ಸನ್ನಿಧಿಗೆ:—

ಕಳೆದ ಸಂಚಿಕೆಯಲ್ಲಿ ಮಿ. ದಂಡಾಪೂರವರು ಕೊಟ್ಟ ಪ್ರಶ್ನೆಯ ಉತ್ತರವನ್ನು ಯಥಾಮತಿಯಾಗಿ ಬರೆಯಲುಯತ್ನಿಸುವೆನು.

ಕೆಲವು ಪೂರ್ಣಾಂಕಗಳನ್ನು ಚೌರಸಾಕೃತಿಯಲ್ಲಿ ಬರೆಯಬೇಕು. ಆಗ ಆ ಚೌರಸಿನ ಪ್ರತಿಯೊಂದು ಸಾಲಿನ, ಪ್ರತಿಯೊಂದು ಕರ್ಣದ ಬೇರೀಜು ಅಪ್ಪಾಪ್ಪೇ ಆಗುತ್ತಿದ್ದರೆ ಅಂಥ ಚೌರಸಗಳಿಗೆ ಮಾಟದ ಚೌರಸಗಳೆಂದು ಹೆಸರು. ಇದರಲ್ಲಿ ಸಂಖ್ಯೆಗಳನ್ನು ಅನೇಕ ಸಂಕೇತಗಳನ್ನನುಸರಿಸಿ ಬರೆದ ಹಾಗೆ, ಅನೇಕ ಪ್ರಕಾರಗಳಾಗುವವು. ಮಿ. ದಂಡಾಪೂರವರು ಕೊಟ್ಟ ಲೆಖ್ಖವು ಮಾಟಡ ಚೌರಸದ ಉದಾಹರಣೆಯಾಗಿದೆ.

ಮಾಟದ ಚೌರಸಗಳ ಲೆಕ್ಕಗಳನ್ನು ಬಿಡಿಸಲು ಅನೇಕ ರೀತಿಗಳುಂಟು. ಅವುಗಳಲ್ಲಿ ಸುಲಭವಾದದ್ದೊಂದನ್ನು ಇಲ್ಲಿ ಬರೆಯುವೆನು.

ಮಾಟದ ಚೌರಸದೊಳಗಿನ ಸಂಖ್ಯೆಗಳು ಶ್ರೇಢಿಯ ನಿಯಮವನ್ನನುಸರಿಸಿರುವವು. ಅಂದರೆ ಮಾಟದ ಚೌರಸದೊಳಗಿನ ಸಂಖ್ಯೆಗಳು ಕೆಲವೊಂದು ಶ್ರೇಢಿಯ ಪದಗಳಾಗಿರುವವು. ಶ್ರೇಢಿಯೊಳಗಿನ ಒಂದು ಸಂಖ್ಯೆ ಮತ್ತು ಅದರ ಮುಂದಿನ ಸಂಖ್ಯೆ ಇವುಗಳ ಅಂತರಕ್ಕೆ ಚಯ ಅಥವಾ ಉತ್ತರವೆಂದು ಹೆಸರು.

ಮಾಟದ ಪ್ರತಿಯೊಂದು ಸಾಲಿನ ಅಥವಾ ಪ್ರತಿಯೊಂದು ಕರ್ಣದ ಬೇರೀಜು ಅಪ್ಪಾಪ್ಪೇಯಾಗಿದ್ದರೂ, ಚಯವನ್ನು ಬೇರೆ ಬೇರೆಯಾಗಿ ಹಿಡಿದಂತೆ ಮಾಟದ ಚೌರಸದೊಳಗಿನ ಸಂಖ್ಯೆಗಳು ಭಿನ್ನವಾಗುವವು. ಪ್ರಕೃತದಲ್ಲಿ ಮಾಟದ ಬೇರೀಜು ೫೦೦ ಇರುವದು. ಲೆಕ್ಕದ ಅನುಕೂಲತೆಗಾಗಿ ಚಯವು ೧೦೦ ಎಂದು ಕಲ್ಪಿಸಲ್ಪಟ್ಟಿದೆ.

೧೬ ಮನೆಗಳುಳ್ಳ ಮಾಟದ ಚೌರಸವಿದ್ದುದರಿಂದಲೂ, ಮಾಟದ ಬೇರೀಜು ೫೦೦ ಇರುವದರಿಂದಲೂ, ಇಡೀ ಮಾಟದ ಚೌರಸ ಬೇರೀಜು

೨೦೦ ವಾಗುವದು. ಅಂದರೆ ಮೂಟದ ಚೌರಸದಲ್ಲಿ ಉಪಯೋಗಿಸಿದ ಎಲ್ಲ ಶ್ರೇಢಿ ಪದಗಳ ಬೇರೀಜು (ಸರ್ವಧನ) ೨೦೦೦ ವಾಯಿತು. ಆದ್ದರಿಂದ ಸಂಖ್ಯೆಗಳ ಸರಾಸರಿ $\frac{\text{ಸರ್ವಧನ}}{\text{ಗಚ್ಛ}}$ ಯು $\frac{೨೦೦೦}{೧೬}$ ಆಯಿತು. ಇದಕ್ಕೆ ೬ರಿಂದ ಗುಣಿಸಲು ಆದ್ಯಂತ ಪದಗಳ ಬೇರೀಜು ಬರುವದು. ಅಂದರೆ ೭೫೦ ಈ ಸಂಖ್ಯೆಯು ನಾವು ಉಪಯೋಗಿದ ಶ್ರೇಢಿಯ ಆದ್ಯಂತ ಪದಗಳ ಬೇರೀಜಾಯಿತು.

ಪದಗಳ ಸಂಖ್ಯೆಗೆ ಗಚ್ಛವೆಂದು ಹೆಸರು. ಪ್ರಕೃತದಲ್ಲಿ ೧೬ ಗಚ್ಛ ವಿರುವದು.

∴ ಆದ್ಯಂತ ಪದಗಳ ಅಂತರ = ಚಯ × ಏಕೋನಗಚ್ಛ
= ೧೦ × ೧೫
= ೧೫೦

ಆದ್ಯಂತ ಪದಗಳ ಬೇರೀಜು ೭೫೦ ಇರುವದರಿಂದ, ಆದಿಪದವು ೬೦, ಅಂತ್ಯಪದವು ೭೦೦ ಆಯಿತು. ಚಯವು ೧೦ ಇರುವದರಿಂದ ನಾವು ಉಪಯೋಗಿಸಿದ ಶ್ರೇಢಿಯು—

೬೦ ೭೦ ೮೦ ೯೦ ೧೦೦ .... ೭೦೦ ಆಯಿತು.

ಇವುಗಳನ್ನು ಕ್ರಮವಾಗಿ ಒತ್ತಟ್ಟಿಗೆ ತೆಗೆದುಕೊಂಡು ಮುಂದೆ ಹೇಳುವ ಕ್ರಮದಂತೆ ಚೌರಸಿನ ಮನೆಯಲ್ಲಿ ಸಂಖ್ಯೆಗಳನ್ನು ತುಂಬುತ್ತ ಹೋದರೆ ಇಚ್ಛಿತ ಚೌರಸವು ಪೂರ್ಣವಾಗುವದು.

೬೦ ೭೦ ೮೦ ೯೦ ೧೦೦ ೧೧೦ ೧೨೦ ೧೩೦ ೧೪೦ ೧೫೦ ೧೬೦ ೧೭೦ ೧೮೦ ೧೯೦ ೨೦೦ ಇವು ಹದಿನಾರು ಸಂಖ್ಯೆಗಳಾದವು.

ಬಲಕ್ಕೆ ಬರೆದಂತೆ ೧೬ ಮನೆಗಳುಳ್ಳ ಒಂದು ಚೌರಸವನ್ನು ರಚಿಸಬೇಕು. ಅದರಲ್ಲಿ ಸಂಖ್ಯಾನುಕ್ರಮದಂತೆ ಮನೆಗಳನ್ನು ತುಂಬಿಸಬೇಕು.

೧	೨	೩	೪
೫	೬	೭	೮
೯	೧೦	೧೧	೧೨
೧೩	೧೪	೧೫	೧೬

ಒಂದನೆಯ ಮನೆಯಲ್ಲಿ ಶ್ರೇಢಿಯ ಮೊದಲಿನ ಸಂಖ್ಯೆಯನ್ನು, ೨ನೆಯ ಮನೆಯಲ್ಲಿ ಶ್ರೇಢಿಯ ೧೫ನೆಯ ಸಂಖ್ಯೆಯನ್ನು, ೩ನೆಯ ಮನೆಯಲ್ಲಿ ೧೪ನೆಯ ಸಂಖ್ಯೆಯನ್ನು, ೪ನೆಯ ಮನೆಯಲ್ಲಿ ೪ನೆಯ ಸಂಖ್ಯೆಯನ್ನು ಬರೆ.

೫ನೆಯ ಮನೆಯಲ್ಲಿ ೧೩ನೆಯ ಸಂಖ್ಯೆಯನ್ನು, ೬ನೆಯ ಸಂಖ್ಯೆಯನ್ನು, ೭ನೆಯ ಮನೆಯಲ್ಲಿ ೭ನೆಯ ಸಂಖ್ಯೆಯನ್ನು, ೮ನೆಯ ಮನೆಯಲ್ಲಿ ೯ನೆಯ ಸಂಖ್ಯೆಯನ್ನು ಬರೆ.

೫೦	೧೫೦	೧೪೦	೪೦
೧೬೦	೧೦೦	೧೧೦	೧೩೦
೧೨೦	೧೪೦	೧೫೦	೯೦
೧೭೦	೭೦	೬೦	೨೦೦

೯ನೆಯ ಮನೆಯಲ್ಲಿ ೮ನೆಯ ಸಂಖ್ಯೆಯನ್ನು, ೧೦ನೇ ಮನೆಯಲ್ಲಿ ೧೦ನೆಯ ಸಂಖ್ಯೆಯನ್ನು, ೧೧ನೆಯ ಮನೆಯಲ್ಲಿ ೧೧ನೇ ಸಂಖ್ಯೆಯನ್ನು, ೧೨ನೆಯ ಮನೆಯಲ್ಲಿ ೫ನೇ ಸಂಖ್ಯೆಯನ್ನು ಬರೆ.

೧೩ನೇ ಮನೆಯಲ್ಲಿ ೧೩ನೇ ಸಂಖ್ಯೆಯನ್ನು, ೧೪ನೆಯ ಮನೆಯಲ್ಲಿ ೩ನೇ ಸಂಖ್ಯೆಯನ್ನು, ೧೫ನೆಯ ಮನೆಯಲ್ಲಿ ೨ನೆಯ ಸಂಖ್ಯೆಯನ್ನು, ೧೬ನೆಯ ಮನೆಯಲ್ಲಿ ೧೬ನೆಯ ಸಂಖ್ಯೆಯನ್ನು ಬರೆ. ಅಂದರೆ ಇಚ್ಛಿತವಾಟದ ಚೌರಸಾಗುವದು.

ಅಥವಾ,

೧೪|೬|೭|೧೦|೧೧|೧೩|೧೬ನೆಯ ಮನೆಗಳಲ್ಲಿ ಶ್ರೇಢಿಯ ಅಷ್ಟನೇ ಸ್ಥಾನದ ಸಂಖ್ಯೆಗಳನ್ನು ಬರೆ.

೨|೩|೪|೫ನೇ ಮನೆಗಳಲ್ಲಿ ಅನುಕ್ರಮವಾಗಿ ೧೫|೧೪|೯|೧೦ನೇ ಸ್ಥಾನದ ಸಂಖ್ಯೆಗಳನ್ನು, ೧೫|೧೪|೯|೧೦ನೆಯ ಮನೆಗಳಲ್ಲಿ ಶ್ರೇಢಿಯ ೨|೩|೪|೫ನೇ ಸ್ಥಾನದ ಸಂಖ್ಯೆಗಳನ್ನು ಬರೆ.

ಇಲ್ಲಿ ವಿಷಮ ಸಂಖ್ಯಾಕವಾದ ಚಯವನ್ನು ಕಲ್ಪಿಸಿದರೆ ಶ್ರೇಢಿಯ ಪದಗಳು ಅಪೂರ್ಣ ಬರುವವೆಂಬದು ಸ್ಪಷ್ಟವದೆ. ಹ್ಯಾಗಂದರೆ ಆದ್ಯಂತ ಪದಗಳ ಬೇರೀಜು ೨೫೦ ಇದ್ದು, ಗಚ್ಛವು ೧೬ ಇರುವದು; ಇಲ್ಲಿ ಚಯವನ್ನು ೫ ಎಂದು ಕಲ್ಪಿಸಿದರೆ ಶ್ರೇಢಿಯ ಪದಗಳು, ೮೭, ೯೨ ಬರುವವು. ಇವುಗಳಿಂದ ವಾಟದ ಚೌರಸವಾಗದು. ಕಾರಣ, ಇಲ್ಲಿ ವಿಷಮ ಚಯವನ್ನು ಹಿಡಿಯಕೂಡದು.

ಭಿನ್ನ ಚಯದ ಶ್ರೇಢಿಯಿಂದ ಇನ್ನು ಎರಡು ಮೂಟದ ಚೌರಸಳನ್ನು ರಚಿಸಿ ಈ ವಿಷಯವನ್ನು ಮುಗಿಸಿರುವೆನು:—

ಇಷ್ಟ ಚಯವು ೪ ಆಗುವುದು.

೯೫	೧೪೧	೧೪೭	೧೦೭
೧೩೯	೧೧೫	೧೧೯	೧೨೭
೧೨೩	೧೩೧	೧೩೫	೧೧೧
೧೪೩	೧೦೩	೯೯	೧೫೫

ಇಷ್ಟ ಚಯವು ೧೨ ಆಗುವುದು.

೩೫	೨೦೩	೧೯೧	೭೧
೧೬೭	೯೫	೧೦೭	೧೩೧
೧೧೯	೧೪೩	೧೫೫	೪೩
೧೭೯	೫೯	೪೭	೨೧೫

ಇಂಥ ಲೆಕ್ಕಗಳನ್ನು ಬಿಡಿಸಲು ಇನ್ನು ಅನೇಕ ರೀತಿಗಳಿವೆ. ಅವುಗಳಲ್ಲೊಂದನ್ನು ಮಾತ್ರ ಇಲ್ಲಿ ಬರೆದಿದ್ದೇನೆ.

ಅಸಿ. ಮಾಸ್ತರ ರೋಣ
ತಾ॥೧೩-೨-೧೯೧೬ } ತಮ್ಮ ಕೃಪಾಪಾತ್ರನಾದೋರ್ವ ಶಿಷ್ಯ
ಶಂಕರಶಾಸ್ತ್ರಿ ನರೇಗಲ್

ಈ ಪ್ರಶ್ನದ ಉತ್ತರಗಳನ್ನು ಕಳುಹಿದ ಕೆಲವರ ಹೆಸರುಗಳನ್ನು ಕಳೆದ ಸಂಚಿಕೆಯಲ್ಲಿ ಪ್ರಸಿದ್ಧಮಾಡಿದ್ದೇವೆ. ಅವರ ಹೊರತು ಶೇಷೋ ಹಣಮಂತ ಕುಲಕರ್ಣಿ, ಶ್ರೀನಿವಾಸ ವೆಂಕಟೇಶ ಆಲಗೂರ, ಭಿಮಾಜೀ ತಿರಕಂಭಟ್ಟ ಜೋಶಿ, ಆಮಿನಅಲ್ಲೀಸಾಬ ಟಪಾಲ (ಟ್ರೇ. ಕಾ. ವಿದ್ಯಾರ್ಥಿ), ಗುರುನಾಥ ರಾಮಚಂದ್ರ ಕುಲಕರ್ಣಿ, ಪಾಸಾಚಾರ್ಯ ಅನಂತಾಚಾರ್ಯ ಹೆರಕಲ್ ಎಂಬವರೂ ಈ ಪ್ರಶ್ನದ ಉತ್ತರಗಳನ್ನು ಕಳುಹಿದ್ದಾರೆ,

ಎ. ಶಾ. ಪ.

ಶಾಲೆಯ ವಿದ್ಯಾರ್ಥಿಗಳಿಗೆ ಬೇಕಾಗುವ ಪುಸ್ತಕಗಳು, ಲೇಖನಸಾಧನಗಳು ಮುಂತಾದವುಗಳಳ್ಳು ಪೂರೈಸುವದಕ್ಕಾಗಿ ಕೆಲವು ಶಾಲೆಗಳಲ್ಲಿ ಪರಸ್ಪರ ಸಹಾಯಕ ಸಂಘಗಳು ಇತ್ತಲಾಗಿ ಸ್ಥಾಪಿಸಲ್ಪಟ್ಟಿರುತ್ತವಷ್ಟೆ. ಈ ಸಂಘಗಳಿಗೆ ಉಪಯೋಗಬೀಳುವಂಥ ಕೆಲವು ಸುಲಭವಾದ ಮಾದರಿಯ ನಿಯಮಗಳನ್ನು "ಕೋಆಪರೆಟಿವ್ ಕ್ರೆಡಿಟ್ ಸೊಸಾ

ಯಟಗಳ" ರೆಜಿಸ್ಟ್ರಾರರವರು ಒಳಗಡೆಯಲ್ಲಿ ಸೂಚಿಸಿರುವರು. ಅವುಗಳನ್ನು ಬೇಕಾದ ಶಾಲೆಯ ಪರಸ್ಪರ ಸಹಾಯಕ ಸಂಘಗಳು ಅಂಗೀಕರಿಸಬಹುದು. ಆ ನಿಯಮಗಳನ್ನು ಇದರಡಿಯಲ್ಲಿ ಕೊಟ್ಟಿದ್ದೇವೆ:—

ಕಾಗದ, ದೌತಿ, ಲೇಖನಿ ಮುಂತಾದ ಲೇಖನಸಾಧನಗಳನ್ನು ಪೂರೈಸುವ ಶಾಲೆಯ ವಿದ್ಯಾರ್ಥಿಗಳ ಸಂಘದ ನಿಯಮಗಳು:—

೧. ಶಾಲೆಯ ಪುಸ್ತಕಗಳನ್ನೂ, ಲೇಖನದ ಸಾಧನಗಳನ್ನೂ ಕೊಂಡು, ಅವುಗಳನ್ನು ಸಂಘದ ಸಭಿಕರಾದ ಶಾಲೆಯ ವಿದ್ಯಾರ್ಥಿಗಳಿಗೆ ಮಾರುವದೇ ಈ ಸಂಘದ ಉದ್ದೇಶವಾಗಿರುತ್ತದೆ.

೨. ಸಂಘದ ಬಂಡವಲದ ಹಣವು ಕೆಳಗೆ ಹೇಳಿದ ಯಾವದೊಂದು ಬಗೆಯಿಂದ ಕೂಡಿಸಲ್ಪಡತಕ್ಕದ್ದು:—

(ಅ). ಸಂಘದ ಸಭಿಕರಾಗಬೇಕಾದರೆ ಕೊಡಬೇಕಾಗುವ ಫೀ.

(ಬ). ಸಾಲೆಗೆಸರಿಯಾಗಿ ಬರುವ ವಿದ್ಯಾರ್ಥಿಗಳು ತಮ್ಮ ಶಕ್ತ್ಯನುಸಾರವಾಗಿ ಮೂರು ತಿಂಗಳಿಗೊಮ್ಮೆ ಇಡುವ ತೇವಿನ ಹಣ.

(ಕ). ಕಾಣಿಕೆಗಳು.

೩. ಸಾಲೆಗೆ ಸರಿಯಾಗಿ ಬರುವ ಯಾವನೊಬ್ಬ ವಿದ್ಯಾರ್ಥಿಯು, ಒಂದು ಆಣೆ ಪ್ರವೇಶ ಫೀಯನ್ನು ಕೊಟ್ಟು, ಈ ಸಂಘದ ಸಭಿಕನಾಗಬಹುದು.

೪. ಸಾಲೆಯನ್ನು ಬಿಟ್ಟ ವಿದ್ಯಾರ್ಥಿಯು ಈ ಸಂಘದ ಸಭಿಕನಾಗಿರಲಾರನು.

೫. ಸಂಘದ ಸಭೆಯಲ್ಲಿ ಹಾಜರ ಇದ್ದ ಸಭಿಕರಲ್ಲಿ ಬಹುಮತದಿಂದ ಆರಿಸಲ್ಪಟ್ಟ ಸಭಿಕನು ಸಂಘದ ಸೆಕ್ರೆಟರಿಯಾಗಿ ಸಂಘದ ಕೆಲಸಗಳನ್ನು ಮೂರು ತಿಂಗಳುಗಳ ವರೆಗೆ ನಡಿಸತಕ್ಕದ್ದು. ಮುಂದೆ ಸಹ ಬಹುಮತಗಳು ದೊರೆದರೆ ಅವನೇ ಸೆಕ್ರೆಟರಿಯಾಗಬಹುದು. ಸಂಘದ ಪ್ರತಿಯೊಬ್ಬ ಸಭಿಕನಿಗೆ ಒಂದೇ ಮತ ಕೊಡುವ ಅಧಿಕಾರವಿರುವದು.

೬. ಸಂಘದ ಸೆಕ್ರೆಟರಿಯು ಸಾಲೆಯ ಹೆಡ್‌ಮಾಸ್ತರರ ಮೇಲ್ವಿಚಾ

ರಣೆಗೆ ಅಧೀನವಾಗಿ ಅವರ ಅನುಮತಿಯಿಂದ ಸಂಘದ ಕೆಲಸಗಳನ್ನು ನಡಿಸತಕ್ಕದ್ದು.

೭. ಸೆಕ್ರೆಟರಿಯ ಕರ್ತವ್ಯಗಳು ಕೆಳಗೆ ಬರೆದ ಪ್ರಕಾರ ಇರುತ್ತವೆ:-

(೧) ಶಾಲೆಯ ಹೆಡ್‌ಮಾಸ್ತರರ ಅನುಮತಿಯ ಪ್ರಕಾರ ಸಂಘಕ್ಕೆ ಬೇಕಾದ ಪುಸ್ತಕಗಳನ್ನೂ, ಪಾಟ ಮುಂತಾದ ಬರಹದ ಸಾಧನಗಳನ್ನೂ ಚನ್ನಾಗಿ ಚವಕಶಿ ಮಾಡಿ ಆದಷ್ಟು ಕಡಿಮೆ ಕಿಮ್ಮತ್ತಿಗೆ ವೇಳೆ ವೇಳೆಗೆ ಕೊಳ್ಳುವದು.

(೨) ಹೆಡ್‌ಮಾಸ್ತರರು ಒಪ್ಪಿಗೆ ಕೊಟ್ಟ ನಮೂನೆಯ ಮೇರೆಗೆ ಸಂಘದ ಖರೀದಿ ವಿಕ್ರಿಗಳ ಲೆಕ್ಕಪತ್ರಗಳನ್ನು ತಪ್ಪದೆ ಸರಿಯಾಗಿ ಇಡುವದು.

(೩) ಸಂಘದ ಪುಸ್ತಕಗಳನ್ನೂ, ಬರಹದ ಸಾಧನಗಳನ್ನೂ ಚನ್ನಾಗಿ ಇಡುವದಕ್ಕೆ ಜವಾಬದಾರನಾಗಿರುವದು.

(೪) ಹೆಡ್‌ಮಾಸ್ತರರ ಅನುಮತಿಯಿಂದ ಸಂಘದ ಸಂಬಂಧದಿಂದ ಅವಶ್ಯವಾಗಿ ಮಾಡತಕ್ಕ ಖರ್ಚನ್ನು ಮಾಡುವದು, ಮತ್ತು ಸಂಘದಿಂದ ಮೂರತಕ್ಕ ಯಾವತ್ತು ಸಾಮಾನುಗಳ ಮೂರ ತಕ್ಕ ಬೆಲೆಯನ್ನು ಗೊತ್ತು ಮಾಡುವದು.

(೫) ಹೆಡ್‌ಮಾಸ್ತರರು ಹೇಳಿದಾಗ ಸಂಘದ ಸಭೆಯನ್ನು ಕರೆಯುವದು.

೮. ಸಂಘದ ಪುಸ್ತಕಗಳನ್ನೂ, ಉಳಿದ ಬೇರೆ ಸಾಮಾನುಗಳನ್ನೂ ಹೆಡ್‌ಮಾಸ್ತರರು ಶಾಲೆಯ ಕಟ್ಟಡದಲ್ಲಿ ನೇಮಿಸಿಕೊಟ್ಟ ಸ್ಥಳದಲ್ಲಿಯೇ ಇಡತಕ್ಕದ್ದು.

೯. ಶಾಲೆಯ ಹೆಡ್‌ಮಾಸ್ತರರೇ ಸಂಘದ ಟ್ರೆಸ್ಟುರರ (ಖಜೀನದಾರ)ರಾಗಿರತಕ್ಕದ್ದು. ಆದರೆ, ಸಂಘದ ಹಣದಲ್ಲಿ ಹತ್ತು ರೂಪಾಯಿಗಳಿಗಿಂತ ಹೆಚ್ಚು ಹಣವು ಅವರ ಹತ್ತರ ಎಂದೂ ಇರಕೂಡದು. ಐದು ರೂಪಾಯಿಗಿಂತ ಹೆಚ್ಚಾದ ಹಣವನ್ನು ಪೋಸ್ಟ ಆಫೀಸಿನ ಸೇವ್ಹಿಂಗ್ಸ ಬ್ಯಾಂಕಿನಲ್ಲಾಗಲಿ, ಆ ಊರಿನ ಬೇರೆ ಯಾವನೊಬ್ಬ ಪ್ರಸಿದ್ಧ ಸಾವುಕಾರನ ಬಳಿಯಲ್ಲಾಗಲಿ ಬಡ್ಡಿಗೆ ಹಚ್ಚತಕ್ಕದ್ದು.

೧೦. ಈ ಸಂಘದಲ್ಲಿ ರೋಖ ವ್ಯಾಪಾರವನ್ನೇ ಮಾಡಬೇಕಲ್ಲದೆ, ಉದ್ಧರಿಯನ್ನಿಡಬಾರದು. ಆದರೆ ಸಂಘದ ಪ್ರತಿಯೊಬ್ಬ ಸಭಿಕನಿಗೆ ಅವನ ಮೂರು ತಿಂಗಳ ತೇವಿನ ಹಣವನ್ನು ಮಾತದಪ್ಪು ಕಿಮ್ಮತ್ತಿನ ಮಾಲನ್ನು ಮಾಲಿನ ಬೆಲೆಯನ್ನು ಪ್ರತ್ಯೇಕವಾಗಿ ಕೊಡದೆ ಮಾರಲಕ್ಕೆ ತೆಗೆದುಕೊಳ್ಳುವ ಹಕ್ಕು ಇರುತ್ತದೆ.

೧೧. ಸಂಘದ ವಾರ್ಷಿಕ ಸಾಮಾನ್ಯ ಸಭೆಯು ಪ್ರತಿವರ್ಷ ಮಾರ್ಚ ತಿಂಗಳಲ್ಲಿ ಕೂಡುವದು. ಆದರಲ್ಲಿ ಕೆಳಗೆ ಕಾಣಿಸಿದ ಕೆಲಸಗಳು ನಡೆಯುವವು: —

(ಅ). ಕಳೆದ ವರ್ಷದಲ್ಲಿ ನಡೆದ ಕೆಲಸದ ರಿಪೋರ್ಟನ್ನು ಮುಂಜೂರಿಯ ಬಗ್ಗೆ ಸಭೆಯು ಮುಂದಿಡುವದು.

(ಬ). ವರ್ಷದಲ್ಲಿ ನಡೆದ ಒಟ್ಟು ಖರೀದಿ, ಮಾರಾಟ ಮತ್ತು ಅದರಿಂದಾದ ಲಾಭ-ನಷ್ಟಗಳ ಸಂಬಂಧದ ಗೋಷವಾರ ಪತ್ರಿಕೆಯನ್ನು ಸಭೆಯ ಮುಂದೆ ಮುಂಜೂರಿಯ ಬಗ್ಗೆ ಇಡುವದು; ಹಾಗು ಅದಕ್ಕೆ ಸಭೆಯ ಮುಂಜೂರಿಯು ದೊರೆತ ಮೇಲೆ ಸದರೀ ಗೋಷವಾರ ಪತ್ರಿಕೆಯ ಮತ್ತು ರಿಪೋರ್ಟನ ನಕಲುಗಳನ್ನು ಜಿಲ್ಲೆಯ ಡೆಪ್ಯುಟಿ ಎಜ್ಯುಕೇಶನಲ್ ಇನ್‌ಸ್ಪೆಕ್ಟರ ಸಾಹೇಬರ ಕಡೆಗೆ ಕಳಿಸುವದು.

೧೨. ವರ್ಷದಲ್ಲಿ ಸಂಘಕ್ಕೆ ಆದ ಲಾಭದಲ್ಲಿ ೫ ಭಾಗವನ್ನು ಸಂಘದ ಮುಖ್ಯ ಫಂಡಕ್ಕೆ, ಅಂದರೆ "ಕಾದಿಟ್ಟ" ಫಂಡಕ್ಕೆ ಜಮೆ ಮಾಡಿ ಉಳಿದ ಣವನ್ನು ಸಂಘದ ಸಭಿಕರಲ್ಲಿ ಅವರು ಮಾಡಿದ ಒಟ್ಟು ಖರೀದಿಯ ಕಮುಗಳ ಪ್ರಮಾಣದಿಂದ ಹಂಚತಕ್ಕದ್ದು.

೧೩. ಶಾಲೆಯ ಹೆಡ್‌ಮಾಸ್ತರರೇ ಸಂಘದ ಆಡಿಟರರು ಅಂದರೆ, ಕ್ಕಪತ್ರಗಳನ್ನು ತಪಾಸ ಮಾಡುವವರಾಗಿರತಕ್ಕದ್ದು; ಹಾಗು ಸಂಘದ ುವತ್ತು ಲೆಕ್ಕ ಪತ್ರಗಳನ್ನೂ, ಪುಸ್ತಕಗಳನ್ನೂ, ಬೇಕಾದ ಸರಕಾರೀ ಧಿಕಾರಸ್ಥರಾಗಲಿ, ಸಂಘದ ಸಭಿಕರ ಪಾಲಕರಾಗಲಿ ಬೇಕಾದಾಗ ೂಡಲಿಕ್ಕೆ ಅಡ್ಡಿ ಇರಬಾರದು.

೧೪. ಸಂಘದ ವ್ಯವಹಾರದ ಕೆಲಸವು ಯಾವಾಗಲೂ ಶಾಲೆಯ ಕೆಲಸ ುಗಿದ ಬಳಿಕವೇ ನಡೆಯತಕ್ಕದ್ದು.

ವಿದ್ಯಾಭ್ಯಾಸ ಇಲಾಖೆಯ ನೋಟೀಸು.

ಸರಕಾರದವರು ಪ್ರಾಥಮಿಕ ಶಾಲೆಗಳ ಬಗ್ಗೆ ಮುಂಜೂರು ಮಾಡಿದ ಪುಸ್ತಕಗಳು ಹಾಗೂ ಕಾರ್ಯಾದಿಯು ಎಲ್ಲರ ತಿಳುವಳಿಕೆಯ ಬಗ್ಗೆ ಪ್ರಸಿದ್ಧ ಮಾಡಲ್ಪಟ್ಟಿರುತ್ತದೆ.

ಅ. ನ.	ಪುಸ್ತಕದ ಹೆಸರು.	ಪುಸ್ತಕದ ಭಾಷೆ	ಯಾತರಬಗ್ಗೆ ಮುಂಜೂರು ಮಾಡಿರುತ್ತಾರೆ.	ಕ್ರಯ ರೂ. ಆ. ಪೈ.			ಶರಾ
೧	ಶಮ್ಸು ಉಲ್ ಉಲ್ಮಾ ಮೌಲವಿ ನಾಝೀರ ಅಹಮ್ಮದ ಎಲ್. ಎಲ್. ಡಿ ವಿಲ್ಲಿ : — "ಕುರಾನ್"	ಉರ್ದು	ಉರ್ದು ಪ್ರಾಥಮಿಕ ಮತ್ತು ಸೆಕಂಡರಿ ಶಾಲೆಗಳ ಉಪಾಯಬ್ರಿಗಳ ಬಗ್ಗೆ ಪಾಗೂ ಇನಾಮುಗಳ ಬಗ್ಗೆ.	೩	...	...	

ಡಿರೆಕ್ಟರ ಆಫ್ ಪಬ್ಲಿಕ್ ಇನ್ಸ್ಟ್ರಕ್ಷನರವರ ಆಫೀಸು. ಪುಣೆ.
ತಾ|| ೧೦-೬-೧೯೧೬

P. LORY,
ಅಪ್ಪಿಂಗ ಡೆಪ್ಯೂಟಿ ಡಾಯರೆಕ್ಟರ ಆಫ್ ಪಬ್ಲಿಕ್ ಇನ್ಸ್ಟ್ರಕ್ಷನ್.

ಪತ್ರಿಗಳ ಸಾರಾಂಶವು.

ರಾಮದುರ್ಗ ಸಂಸ್ಥಾನದ ಸುರಕೋಡ ಊರ ಗೌಡಕುಲಕರ್ಣಿಯರೂ ಶಾಲೆಯ ಪಂಚರೂ ಇತರ ಕೆಲವರು ಸದ್ಗೃಹಸ್ಥರೂ ಒಳ್ಳೇ ವಿದ್ಯಾಭಿಮಾನಿಗಳಾಗಿದ್ದು, ಮೇಲಿಂದ ಮೇಲೆ ಶಾಲೆಗೆ ಬಂದು ಅದರ ಸ್ಥಿತಿಗತಿಗಳನ್ನು ತಿಳಿದುಕೊಂಡು ತಕ್ಕ ಪ್ರೋತ್ಸಾಹನ ಕೊಡುತ್ತಿರುವದಲ್ಲದೆ ವಿದ್ಯಾರ್ಥಿಗಳನ್ನು ಪರೀಕ್ಷಿಸಿ ಅವರಿಗೆ ತಕ್ಕ ಉತ್ತೇಜನವು ದೊರೆಯುವಂತೆ ಇನಾಮುಗಳನ್ನೂ ಬೆಂಡುಬತ್ತಾಸುಗಳನ್ನೂ ಹಂಚುತ್ತಿರುವರೆಂತಲೂ ಇದೇ ರೀತಿಯಾಗಿ ತಾ|| ೨೧ - ೧೦ - ೧೯೧೫ ನೇ ದಿವಸ ಶಾಲೆಯಲ್ಲಿ ಸಭೆಗೂಡಿಸಿದ ಕಾಲಕ್ಕೆ ಸಾಲೆಯಲ್ಲಿ ವಿದ್ಯಾರ್ಥಿಗಳ ಸಂಖ್ಯೆಯು ೪೦ ಕ್ಕಿಂತ ಹೆಚ್ಚಾದ್ದರಿಂದ ಇಬ್ಬರೇ ಶಿಕ್ಷಕರಿಂದ ಕೆಲಸವು ಸರಿಯಾಗಿ ಸಾಗದಂತಾಗಿರುವದರಿಂದ ಇನ್ನೊಬ್ಬ ಅಸಿಸ್ಟಂಟನನ್ನು ಕೊಡುವ ಬಗ್ಗೆ ಸಂಸ್ಥಾನದ ಡೆ|| ಎ|| ಇ|| ರವರ ಕಡೆಗೆ ಅರ್ಜಿಯನ್ನು ಮಾಡಬೇಕು. ಹಾಗೂ ಸರಕಾರದ ಸಹಾಯವು ದೊರೆಯುವ ವರೆಗೆ ತಾವೇ ಒಬ್ಬ ಪ್ಯೂಪಿಲ್ ಟೀಚರನ ಪಗಾರವನ್ನು ಕೊಡುವೆವು, ಎಂದು ಅವರು ಒಪ್ಪಿಕೊಂಡಿರುವರೆಂತಲೂ ಆ ಶಾಲೆಯ ಹೆಡಮಾಸ್ತರರು ಬರೆಯುತ್ತಾರೆ.

ಸಿದ್ಧನಾಥ ವಾಚನ ಮಂದಿರ.
ಶಾಶ್ವತಾಸ್ಪೂರ್ತ್ಯುತ್ಸಾಹ ಧಾರಣ.

ಸಂಪುಟ ೫೨ | ಎಪ್ರೆಲ ೧೯೨೬. | ಸಂಚಿಕೆ ೪.

ಜಗತ್ತಿನಲ್ಲಿ ಸೂರ್ಯ-ಕಿರಣಗಳ ಉಪಯೋಗ.

(ಬರೆದು ಬಂದದ್ದು)

ಸೂರ್ಯನು ನಾವಿರುವ ಪೃಥ್ವಿಗೆ ಉಷ್ಣತೆ-ಪ್ರಕಾಶಗಳನ್ನು ಕೊಡುವದರಿಂದಲೇ ಉದ್ಭಿಜ್ಜವರ್ಗ, ಪ್ರಾಣಿವರ್ಗ ಮೊದಲಾದವುಗಳ ವಾಸ್ತವ್ಯವಾಗಿರುತ್ತದೆಂಬದು ನಿಜವಷ್ಟೆ? ಆದರೆ ಇಷ್ಟಕ್ಕೇ ತೀರಲಿಲ್ಲ; ಅವನೇ ಪೃಥ್ವಿಯೊಳಗಿನ ಎಷ್ಟೋ ಕಾರ್ಯಗಳನ್ನು, ಬಹುಪಃ ಎಲ್ಲ ಕಾರ್ಯಗಳನ್ನು ಮಾಡುತ್ತಾನೆಂಬದು, ನಿಜವಾಗಿ ವಿಚಾರಣೀಯವಾದ ಸಂಗತಿಯಾಗಿದೆ. ಸ್ವಪ್ನ ಶಾಸ್ತ್ರವನ್ನರಿಯದ ಜನರಿಗೆ ಈ ಮಾತಿನ ಗೂಢವೇ ಗೊತ್ತಿರುವದಿಲ್ಲ.

ಉಗೆಬಂಡಿಯು ಉಗೆಯ ಶಕ್ತಿಯಿಂದ ಎಳೆಯಲ್ಪಡುತ್ತದೆಂದು ನಮ್ಮೆಲ್ಲರಿಗೆ ಗೊತ್ತಿದ್ದರೂ ಅದು ನಿಜವಾಗಿ ಸೂರ್ಯನಿಂದಲೇ ಎಳೆಯಲ್ಪಡುತ್ತದೆ. ಎಂಜಿನದಲ್ಲಿ ಕಲ್ಲಿದ್ದಲಿಯನ್ನು ಸುಟ್ಟು, ಉಗೆಯನ್ನು ಹುಟ್ಟಿಸುತ್ತಾರೆ; ಆ ಉಗೆಯು ಬಂಡಿಯನ್ನು ಎಳೆದೊಯ್ಯುತ್ತದೆ. ಆದರೆ, ಆ ಉಗೆಯಲ್ಲಿ ಬಂಡಿಯನ್ನು ಎಳದೊಯ್ಯುವಂಥ ಅದ್ಭುತ ಸಾಮರ್ಥ್ಯ ನೆಲ್ಲಿಂದ ಬಂತು? ಲಕ್ಷಾವಧಿ ವರ್ಷಗಳ ಪೂರ್ವದಲ್ಲಿ ಸೂರ್ಯನು ತನ್ನ ಉಷ್ಣತೆಯನ್ನು ಕಲ್ಲಿದ್ದಲಿಗಳಲ್ಲಿ ಇಟ್ಟಿದ್ದಾನೆ. ಆ ಕಲ್ಲಿದ್ದಲಿಗಳಲ್ಲಿ ಅಡಕವಾಗಿದ್ದ ಭವಿಷ್ಯತ್ಕಾರ್ಯ ನಿರ್ವಾಹಕ ಸೂರ್ಯಶಕ್ತಿಯೇ ಉಗೆಯಲ್ಲಿ ಬಂದದರಿಂದ, ಅದು ಉಗೆಬಂಡಿಯನ್ನೆಳೆಯುವ ಅದ್ಭುತ ಕಾರ್ಯವನ್ನು ಮಾಡುತ್ತದೆ. ಇದರಂತೆಯೇ ಜಗತ್ತಿನೊಳಗಿನ ಎಲ್ಲ ಕಾರಖಾನೆಗಳೂ ಸೂರ್ಯಶಕ್ತಿಯಿಂದಲೇ ನಡೆಯುತ್ತವೆಂಬದು, ವಿಚಾರಿಸಿದರೆ ತಿಳಿಯಬಹುದಾಗಿದೆ.

ಸೂರ್ಯನ ಉಷ್ಣತೆಯ ಮೂಲಕವಾಗಿ ಎತ್ತರವಾದ ಪರ್ವತಗಳ ಮೇಲಿನ ಹಿಮವು ಕರಗಿ ಸಿಂಧು, ಗಂಗಾ, ಯಮುನಾ ಇತ್ಯಾದಿ

ನದಿಗಳು ಪ್ರವಹಿಸುತ್ತಲಿರುವವು. ಹವೆಯ ಥರಕ್ಕೆ ಸೂರ್ಯೋಷ್ಣತೆಯು ಹೆಚ್ಚು ಕಡಿಮೆ ದೊರೆಯಲಾಗಿ ಗಾಳಿಗಳುಂಟಾಗುತ್ತವೆ; ಆ ಗಾಳಿಗಳಿಂದ ನಮಗೆ ಅನುಕೂಲ, ಪ್ರತಿಕೂಲ ಕಾರ್ಯಗಳೆಷ್ಟೋ ಜರಗುವವು. ಪವನಚಕ್ಕಿ-ಜಾನಚಕ್ಕಿಗಳ ಗತಿಗೆ ಮೂಲ ಕಾರಣವು ಸೂರ್ಯನೇ! ಎಷ್ಟೋ ಗಣಿತಜ್ಞರು ಪೃಥ್ವಿಯೊಳಗಿನ ಕಲ್ಲಿದ್ದಲೆಯೆಲ್ಲ ಕೆಲವು ವರ್ಷಗಳಲ್ಲಿ ತೀರಿ, ಕಾರಖಾನೆಗಳೆಲ್ಲ ಬಂದಾಗುವ ಸಂಭವವು ಬರಬಹುದೆಂದು ತರ್ಕಿಸುತ್ತಾರೆ, ಆದರೆ ಭೀತಿಜನಕವಾದ ಈ ತರ್ಕವು ನಿರಾಧಾರವಾದದ್ದು. ಕಲ್ಲಿದ್ದಲಿಯು ತೀರಿದರೆ, ಗಾಳಿಯಿಂದ ಇಲ್ಲವೆ ನದಿಯ ಪ್ರವಾಹದಿಂದ, ಇಲ್ಲವೆ ಸೂರ್ಯಕಿರಣಗಳನ್ನು ಒಟ್ಟುಗೂಡಿಸುವದರಿಂದ ಬೇಕಾದಂತಹ ಕಾರ್ಯಗಳನ್ನು ಮಾಡಿಕೊಳ್ಳಬಹುದು. ಸೂರ್ಯದೇವನ ಆರಾಧನೆಯನ್ನು ಮಾಡುವವನಿಗೆ ಯಾವದಕ್ಕೂ ಕಡಿಮೆ ಬೀಳುವಂತಿಲ್ಲ, ಮಾತ್ರ ಆರಾಧನೆಯನ್ನು ಮಂತ್ರತಂತ್ರಗಳಿಂದ ಮಾಡದೆ ಶಾಸ್ತ್ರೀಯ ಜ್ಞಾನದಿಂದ ಮಾಡಲಿಕ್ಕೆ ಬೇಕು.

ಲೇನ್ಸವನ್ನು ಬಿಸಿಲಿನಲ್ಲಿ ಹಿಡಿದು, ಅದರ ಕೆಳಗೆ ಕಟ್ಟಿಗೆಯನ್ನಾಗಲಿ, ಕಾಗದವನ್ನಾಗಲಿ ಹಿಡಿದರೆ, ಅವು ಸುಡುವದನ್ನು ಐದಾರು ಇಯತ್ತೆಗಳನ್ನು ಕಲಿತ ಎಲ್ಲರೂ ಬಲ್ಲರು. ಇದರ ಮೇಲಿಂದ ಹೀಗೆ ಕಲ್ಪಿಸಬಹುದು:—ಬಹು ದೊಡ್ಡದೊಂದು ಲೇನ್ಸವನ್ನು ತಯಾರಿಸಿ ಎಷ್ಟೋ ಚೌರಸಯಾರ್ಡ ಕ್ಷೇತ್ರದ ಮೇಲೆ ಬಿದ್ದ ಸೂರ್ಯಕಿರಣಗಳನ್ನು ಕೇಂದ್ರೀಕರಿಸಿ, ಆ ಕೇಂದ್ರಸ್ಥಾನದಲ್ಲಿ ನೀರಿನ ಸಮೂಹವನ್ನು ತಂದಿರಿಸಿದರೆ, ಅದು ಉಗೆಯಾಗಿ ಆ ಉಗೆಯ ಮೂಲಕ ಬೇಕಾದಂಥ ಯಂತ್ರಗಳು ನಡೆಯಬಹುದು. ಈ ತರದ ಪ್ರಯೋಗವು, ಎಡಹ ಮೂರು ವರ್ಷಗಳ ಪೂರ್ವದಲ್ಲಾದ ಅಲಹಾಬಾದದ ಪ್ರದರ್ಶನದಲ್ಲಿ ತೋರಿಸಲ್ಪಟ್ಟಿತು.

ಬೇಸಿಗೆಯ ಕಾಲದಲ್ಲಿ ಪ್ರಖರವಾದ ಸೂರ್ಯಕಿರಣಗಳಲ್ಲಿ ಎಷ್ಟು ಶಕ್ತಿ ಇರುತ್ತದೆಂಬದು ಬಹು ಜನರಿಗೆ ಗೊತ್ತಿರುವದಿಲ್ಲ. ಆ ಶಕ್ತಿಯನ್ನು ನಮ್ಮ ಶರೀರದಲ್ಲಿ ಯೋಜಿಸಲಿಕ್ಕೆ ಬರುತ್ತಿದ್ದರೆ, ನಾವು ಉಗಿಬಂಡಿಯನ್ನು ಸುಲಭವಾಗಿ ಎಳೆಯುತ್ತಿದ್ದೆವು; ದೊಡ್ಡ ದೊಡ್ಡ ಹಡಗುಗಳನ್ನು ಬಟ್ಟೆನಿಂದ ಜಾಡುತ್ತಿದ್ದೆವು.

ಸೂರ್ಯಕಿರಣಗಳ ಶಕ್ತಿಯನ್ನು ಉಪಯೋಗ ಮಾಡಿಕೊಳ್ಳ ಬೇಕೆಂದು ಅನೇಕ ಶತಮಾನಗಳಿಂದ ಶೋಧಕರು ಪ್ರಯತ್ನ ನಡಿಸಿ ದ್ದಾರೆ. ಏರಿಕ್‌ಸನನೆಂಬವನೊಬ್ಬ ಶೋಧಕನು 'ಬಾಯಲರ' ದ ಮೇಲೆ ಸೂರ್ಯ ಕಿರಣಗಳನ್ನು ಏಕೀಕರಿಸಿ ಆದರ ಉಪಯೋಗವನ್ನು ಮಾಡಿಕೊಂಡಿದ್ದನು. ಮುಂದೆ ಈ ಶೋಧದಲ್ಲಿ ಅನೇಕ ಸುಧಾರಣೆ ಗಳಾಗುತ್ತ ಅಮೇರಿಕದಲ್ಲಿ ಈಗ ಸೂರ್ಯಕಿರಣಗಳಿಂದ ಎಷ್ಟೋ ಕಾರ್ಯಗಳು ಆಗಹತ್ತಿವೆ. ಆರಿಝೋನಾದಲ್ಲಿ ಒಬ್ಬ ಶಾಸ್ತ್ರಜ್ಞನು ದೊಡ್ಡ ದೊಡ್ಡ ೧೬೦೦ ಲೆನ್ಸಗಳನ್ನು ತಯಾರಿಸಿ, ಅವುಗಳನ್ನು ವರ್ತು ಲಾಕಾರವಾದ ರೂಳುಗಳಲ್ಲಿ, ಅವುಗಳ ಮುಖವು ಯಾವಾಗಲೂ ಸೂರ್ಯನ ಕಡೆಗೇ ಆಗುವಂತೆ ವ್ಯವಸ್ಥೆಮಾಡಿ ಕೂಡ್ರಿಸಿದ್ದಾನೆ. ಪ್ರತಿ ಒಂದು ಲೆನ್ಸದಿಂದ ೧೦-೧೫ ಅಂಶ ಉಷ್ಣತೆಯು ಸಿದ್ಧವಾಗುತ್ತದೆ. ಆದ್ದರಿಂದ ಎಲ್ಲ ಲೆನ್ಸಗಳಿಂದ ಕೂಡಿ ೧೬೦೦೦-೨೪೦೦೦ ಅಂಶ ಉಷ್ಣ ತೆಯು ಹೊರಡುತ್ತದೆ. ಈ ಉಷ್ಣತೆಯು ಒಟ್ಟು ಗೂಡಿದರೆ, ಸ್ವಲ್ಪ ವೇಳೆಯಲ್ಲಿ ಕಬ್ಬಿಣವು ಕರಗಿ ಬಿಸಿಯಾದ ಮೇಣದಂತೆ ಆಗುವದು.

ಕಾಲಿಫೋರ್ನಿಯಾದಲ್ಲಿ ಬೇರೆ ಬೇರೆ ಪ್ರಕಾರದ ಸೂರ್ಯಕಿರಣ ಯಂತ್ರಗಳು ರಚಿಸಲ್ಪಟ್ಟಿರುತ್ತವೆ. ಆ ಯಂತ್ರಗಳಲ್ಲಿ ೨' ಉದ್ದ ೩" ಅಗ ಲುಳ್ಳ ಸುಮಾರು ೧೫೦೦ ಲೆನ್ಸಗಳನ್ನು ಕೂಡ್ರಿಸಿರುತ್ತಾರೆ. ಹಗಲೆಲ್ಲ ಆ ಯಂತ್ರಗಳು ತಿರುಗುವಂತೆ ವ್ಯವಸ್ಥೆ ಮಾಡಲ್ಪಟ್ಟಿರುವದರಿಂದ, ಮಧ್ಯಾ ಹ್ನದ ಸೂರ್ಯಕಿರಣಗಳು ಲೆನ್ಸಗಳ ಮೇಲೆ ಬೀಳುತ್ತವೆ. ಲೆನ್ಸಗಳ ಕೇಂದ್ರಸ್ಥಾನದಲ್ಲಿ ೧೩ ಫೂಟು ೬ ಇಂಚು ಉದ್ದವಾದ ಒಂದು ಬಾಯ ಲರ ಇರುವದು. ಅದಕ್ಕೆ ಹೊರಗಿನಿಂದ ಉಷ್ಣತೆಯನ್ನು ಶೋಷಿಸಿಕೊ ಳ್ಳುವದಕ್ಕಾಗಿ ಕರೇಬಣ್ಣವು ಹಚ್ಚಿಸಲ್ಪಟ್ಟಿರುತ್ತವೆ. ಆ ಬಾಯಲರದಲ್ಲಿ ೧೦೦ ಗ್ಯಾಲನ್ ನೀರು ಇರುತ್ತವೆ. ಆ ನೀರು ಉಷ್ಣತೆಯ ಮೂಲಕ ಉಗಿ ಯಾದ ಕೂಡಲೆ, ಆ ಉಗಿಯು ನಳಗಳ ಮಾರ್ಗವಾಗಿ ಎಂಜಿನದಲ್ಲಿ ಸೇರುವಂತೆಯೂ, ಕಡಿ ಕಡಿಮೆಯಾದ ಹಾಗೆ ಬೇರೆಕಡೆಯಿಂದ ಬಾಯ ಲರದಲ್ಲಿ ನೀರು ಬಂದು ಬೀಳುವಂತೆಯೂ ವ್ಯವಸ್ಥೆ ಮಾಡಲ್ಪಟ್ಟಿರುತ್ತದೆ. ಈ ಯಂತ್ರದಿಂದ ಬಹಳ ಉಪಯೋಗವಾಗುತ್ತದೆ; ಮತ್ತು ಉಪಯೋ ಗದ ಮಾನದಿಂದ ವೆಚ್ಚವಾದರೂ ತೀರ ಸ್ವಲ್ಪ ತಗಲುತ್ತದೆ. ನಮ್ಮ ದೇಶ

ದಲ್ಲಿ ಬಿಸಿಲು ಪ್ರಖರವಾಗಿರುವದರಿಂದ ಇಂಥ ಬೇಕಾದಷ್ಟು ಯಂತ್ರ
ಗಳನ್ನು ತಯಾರಿಸಲಿಕ್ಕೆ ಬರುವಂತಿದೆ. ಈ ಯಂತ್ರಗಳ ಸಹಾಯ
ದಿಂದ ಸ್ವಲ್ಪ ಕ್ಷೇತ್ರದಲ್ಲಿ ಬೀಳುವ ಸೂರ್ಯಕಿರಣಗಳನ್ನು ಒಟ್ಟುಗೂ
ಡಿಸಿ, ಒಂದು ತಾಸಿನಲ್ಲಿ ಆಳವಾದ ಬಾವಿಯೊಳಗಿಂದ ೧೦೦೦೦ ಗ್ಯಾಲನ್
ನೀರನ್ನು ಮೇಲೆ ತೆಗೆಯಲಿಕ್ಕೆ ಬರುವದು. ಮರುಭೂಮಿಗಳಲ್ಲಿ, ಈ
ಯಂತ್ರದಿಂದ ಬಹಳ ಉಪಯೋಗವಾಗುವದು. ಬಹಳ ಕೆಳಗಿದ್ದ
ನೀರನ್ನು ಈ ಯಂತ್ರದ ಸಹಾಯದಿಂದ ಮೇಲೆ ತಂದು, ಆ ಭೂವಿ
ಯನ್ನು ಸಾಧಿಸಿದಷ್ಟು ಮಟ್ಟಿಗೆ ಫಲವತ್ತಾಗಿ ಮಾಡಬಹುದು.

ಇಂಗ್ಲಂಡದಂಥ ಎಷ್ಟೋ ದೇಶಗಳಲ್ಲಿ ಕಾರಖಾನೆಗಳು ನಡೆಯ
ಲಿಕ್ಕೆ ಕಲ್ಲಿದ್ದಲಿಯ ಸಹಾಯವಾಯಿತು. ಈಗ ನಾವು ಆಧುನಿಕ ಶಾ
ಸ್ತ್ರೀಯ ಶೋಧದ ಸಹಾಯವನ್ನು ತೆಗೆದುಕೊಂಡರೆ, ಸೂರ್ಯನಾರಾ
ಯಣನು ಭೂಮಿಯೊಳಗಿನ ನೀರನ್ನು ಮೇಲೆ ತಂದುಕೊಡುವನು, ಬೇ
ಬಾತದ ಭೂಮಿಯಲ್ಲಿ ಬೆಳೆಯನ್ನು ಕೊಡುವನು. ಅವನ ಸಹಾಯದಿಂದ
ಉಸುಕಿನ ಪ್ರದೇಶಗಳಲ್ಲಿ ಸಹ ಕಾರಖಾನೆಗಳನ್ನು ಹಾಕಬಹುದು.
ಯಾವ ಸೂರ್ಯನು ಉಷ್ಣಕಟಿಬಂಧದಲ್ಲಿ ಜನರನ್ನು ತಪಿಸುವನೋ
ಅದೇ ಸೂರ್ಯನು, ಶಾಸ್ತ್ರೀಯ ರೀತಿಯಿಂದ ಅವನನ್ನು ಪೂಜಿಸಿದ
ಬೇಕಾದ ಸಹಾಯವನ್ನು ಮಾಡಿ ಸುಖಸಂಪತ್ತುಗಳನ್ನು ಹೆಚ್ಚಿಸುವನು.

ಅಶೋಕನ ಚರಿತ್ರೆ.

[ಮುರಾತೀ ಕನ್ಯಾಶಿಕ್ಷಕಿಯಿಂದ ಕೆಸ್ಸಡಿಸಲ್ಪಟ್ಟದ್ದು.]

ಸಾಂಪ್ರತಕ್ಕೆ ಗಂಗಾತೀರದಲ್ಲಿರುವ ಬಹಾರ ಪ್ರಾಂತಕ್ಕೆ ಸುಮಾರ
೨೨೦೦ ವರ್ಷಗಳ ಹಿಂದೆ ಮಗಧದೇಶವೆಂಬ ಹೆಸರಿದ್ದು, ಪಾಟಲೀ
ಪುತ್ರವು ಆದರ ರಾಜಧಾನಿಯಾಗಿತ್ತು. ಈ ನಗರವು ಸದ್ಯಕ್ಕೆ ಅಸ್ತಿತ್ವದ
ಲ್ಲಿಲ್ಲದಿದ್ದರೂ ಈಗಿನ ಪಾಟಣಾ ಪಟ್ಟಣದ ಸಮೀಪದಲ್ಲಿಯೇ ಇತ್ತೆಂದು
ಗೊತ್ತಾಗಿದೆ. ಮೌರ್ಯರೆಂಬ ಭಾಗ್ಯಶಾಲಿಗಳಾದ ಅರಸರು ಈ ರಾಜ್ಯ
ವನ್ನು ಆಳುತಿದ್ದರು. ಈ ವಂಶದ ಮೂಲ ಪುರುಷನಾದ ಚಂದ್ರಗು

ಸ್ತನೆಂಬ ರಾಜನು ಸ್ವಪರಾಕ್ರಮದಿಂದ ಈ ರಾಜ್ಯವನ್ನು ಸಂಪಾದಿಸಿ
ನು. ಈ ವಂಶದವರ ರಾಜ್ಯವು ಅಸಾಮದಿಂದ ಇರಾಣದವರೆಗೂ,
ಕಾಶ್ಮೀರದಿಂದ ತೆಲಂಗಣದವರೆಗೂ, ಹಬ್ಬಿಗೊಂಡಿತ್ತು. ಇಷ್ಟು ವಿಸ್ತಾ
ವಾದ ರಾಜ್ಯವನ್ನು ಹಿಂದೂ-ಮುಸಲ್ಮಾನರೊಳಗಿನ ಯಾವ ರಾಜನೂ
ಏಕಛತ್ರದಿಂದ ಆಳಲಿಲ್ಲ. ಈ ಚಂದ್ರಗುಪ್ತನಿಗೆ ಬಿಂದುಸಾರನೆಂಬ ಒಬ್ಬ
ಮಗನಿದ್ದನು. ಆ ಬಿಂದುಸಾರನ ಮಗನೇ ಅಶೋಕನು. ಇವನು ತನ್ನ
ತಂದೆಯ ತರುವಾಯ ಕ್ರಿ. ಶ. ಪೂರ್ವದಲ್ಲಿ ೨೭೦ ನೆಯ ವರ್ಷ ರಾಜ್ಯಾ
ಭಿಷಿಕ್ತನಾದನು. ಅಶೋಕನಂಥ ವೈಭವಶಾಲಿಯೂ ಪರಾಕ್ರಮಿಯೂ
ಆದ ರಾಜನು ಹಿಂದೂ-ಮುಸಲ್ಮಾನರಲ್ಲಿ ಯಾವನೂ ಆಗಲಿಲ್ಲ. ಆದರೆ ಈ
ಅಶೋಕನ ಕೀರ್ತಿಯು ಅಜರಾಮರವಾಗಲಿಕ್ಕೆ ಇವನ ವೈಭವವೂ,
ಶೌರ್ಯವೂ ಕಾರಣವಾಗಿರದೆ, ಅವನಲ್ಲಿರುವ ಪುತ್ರವತ್ಸಲ ಪ್ರಜಾವಾತ್ಸಲ್ಯ.
ಪ್ರಜಾಕಲ್ಯಾಣಕ್ಕಾಗಿ ಅಹರ್ನಿಶವಾಗಿ ಮಾಡುವ ಪರಿಶ್ರಮ, ಭೂತ
ದಯೆ, ಸಾಧುವೃತ್ತಿ, ವಿನಯ ಮೊದಲಾದ ಅಲೌಕಿಕವಾದ ಗುಣಗಳಿಂ
ದಲೇ ಇವನು ಕೀರ್ತಿಶೇಷನಾಗಿದ್ದಾನೆ.

ಇವನ ರಾಜಧಾನಿಯಾದ ಪಾಟಲಿಪುತ್ರವು ಗಂಗಾ ಮತ್ತು ಹಿರ
ಣ್ಯವತೀನದಿಗಳ ಸಂಗಮಸ್ಥಾನದಲ್ಲಿ ಕಟ್ಟಲ್ಪಟ್ಟಿತು. ಈ ನಗರವು ೧೦
ಮೈಲು ಉದ್ದವಾಗಿಯು, ೨ ಮೈಲು ಅಗಲವಾಗಿಯೂ ಇತ್ತು. ಪಟ್ಟ
ಣದ ಸುತ್ತಲು ವಿಸ್ತಾರವಾದ ಅವಾರ ಗೋಡೆ ಇದ್ದು, ಅದರಾಚೆಗೆ
೨೦ ಮೂಳು ಅಗಲವಾಗಿಯೂ, ೪೫ ಮೂಳು ತಗ್ಗಾಗಿಯೂ ಉಳ್ಳ ಕಂದ
ಕವಿತ್ತು. ಕೋಟೆಗೆ ೫೭೦ ಬುರುಜುಗಳಿದ್ದು ಪ್ರತಿ ಒಂದರ ಮೇಲೆ
ಎಷ್ಟೋರೀ ಜನರ ಕಾವಲು ಇಡಲ್ಪಟ್ಟಿತ್ತು. ಈ ಪಟ್ಟಣದಲ್ಲಿ ವ್ಯಾಪಾ
ರವು ಚನ್ನಾಗಿ ನಡೆಯುತ್ತಿತ್ತು. ಪಟ್ಟಣದ ವ್ಯವಸ್ಥೆಗಾಗಿ ೩೦ ಜನರ
ಮಂದು ಸಭೆಯು ಇತ್ತು. ಅವರು ಬಹುಮಟ್ಟಿಗೆ ಸಾಂಪ್ರತಕಾಲದ
ಮ್ಯುನಿಸಿಪಾಲ್ಟಿಯವರಂತೆಯೇ ತಮ್ಮ ನಗರದ ವ್ಯವಸ್ಥೆಯನ್ನು ನೋಡು
ತ್ತಿದ್ದರು.

ಅಶೋಕನ ಬಾಲ್ಯದ ಇತಿಹಾಸವು ಉಪಲಬ್ಧವಿಲ್ಲ. ಇವನ
ಶಿಕ್ಷಣಕ್ರಮ ಕಾಲಕ್ರಮಾನುಸಾರವಾದ ಇತಿಹಾಸವನ್ನಾದರೂ ಯಾರೂ
ಬರೆದು ಇಟ್ಟಿಲ್ಲ. ಆದರೆ ಬೇರೆ ಬೇರೆ ಸ್ಥಳಗಳಲ್ಲಿ ಬಂಡೆಗಳ ಮೇಲೂ

ಶಿಲಾಸ್ತಂಭಗಳ ಮೇಲೂ ಕೊರೆದಂಥ ಇವನ ಆದೇಶಗಳಿಂದಲೂ ನಾಣ್ಯಗಳಿಂದಲೂ, ಸಿಲೋನದೊಳಗಿನ ಬುದ್ಧಜನರ ಗ್ರಂಥಗಳಿಂದಲೂ ಇವನ ಚರಿತ್ರವು ತುಸುಮಟ್ಟಿಗೆ ಗೊತ್ತಾಗುತ್ತದೆ.

ಆ ಕಾಲಕ್ಕೆ ಹಿಂದುಸ್ತಾನದಲ್ಲಿ ಮಗಧದೇಶದ ತರುವಾಯ ಕಲಿಂಗ ದೇಶವು ಖ್ಯಾತಿಯನ್ನು ಹೊಂದಿತ್ತು. ಮದ್ರಾಸ ಇಲಾಖೆಯೊಳಗಿನ ಉತ್ತರಸರಕಾರದ ಸುತ್ತುಮುತ್ತಲಿನ ಪ್ರಾಂತಗಳಿಗೆ ಕೂಡಿ ಆಗ ಕಲಿಂಗವೆಂಬ ಹೆಸರಿತ್ತು. ಅಶೋಕನು ತನ್ನ ಆಳಿಕೆಯ ೯ನೆಯ ವರ್ಷ ಕಲಿಂಗ ದೇಶವನ್ನು ಅಭಿಯೋಗಿಸಿದನು. ಕಲಿಂಗ ರಾಜ್ಯವೊಂದು ಕೈವಶವಾದರೆ ಇಡೀ ಭರತಖಂಡವು ಸ್ವಾಧೀನವಾದಂತಾಗಿ ಶತ್ರುರಾಜರ ಭಯವಿಲ್ಲದಂತಾಗುವದೆಂಬ ಹೇತುವಿನಿಂದ ಅವನು ದಂಡೆತ್ತಿ ಹೋದನು. ಕಲಿಂಗದ ರಾಜನಿಗೂ ಇವನಿಗೂ ಘನಘೋರವಾದ ಸಂಗ್ರಾಮವಾಗಿ ವಿಜಯಶ್ರೀಯು ಅಶೋಕನ ಕೊರಳಿಗೆ ಮಾಲೆಯನ್ನು ಹಾಕಿದಳು. ಆ ಯುದ್ಧದಿಂದಾದ ವಿತ್ತಹಾನಿಯನ್ನೂ, ಪ್ರಾಣಹಾನಿಯನ್ನೂ ಅವಲೋಕಿಸಿ, ಕೋಮಲಹೃದಯನಾದ ಅಶೋಕನ ಅಂತಃಕರಣವು ಧಸ್ಸೆಂದಿತು. ಅಂದಿನಿಂದಲೇ ಅವನ ವೃತ್ತಿಯಲ್ಲಿಯೂ, ರಾಜ್ಯಪದ್ಧತಿಯಲ್ಲಿಯೂ ಬಹಳ ಹೆಚ್ಚುಕಡಿಮೆಯಾಯಿತು. ಈ ಕಾಲದಿಂದಲೇ ಅವನು "ಪ್ರಿಯದರ್ಶಿ," ಅಂದರೆ ದೇವಪ್ರಿಯ ಅಥವಾ ಕೋಮಲಾಂತಃಕರಣಿಯೆಂಬ ನಾಮವನ್ನು ಧಾರಣ ಮಾಡಿದನು. ಮುಂದೆ ಪ್ರತಿಯೊಂದು ಶಿಲಾಲೇಖದಲ್ಲಿಯೂ ಅವನು ತನ್ನ ಹೆಸರನ್ನು "ಪ್ರಿಯದರ್ಶಿ" ಎಂದೇ ಉಲ್ಲೇಖಿಸಿದ್ದಾನೆ. ಈ ಸಂಗತಿಯನ್ನು ಅವನು ಒಂದು ಶಿಲಾಲೇಖದಲ್ಲಿ ವ್ಯಕ್ತಪಡಿಸಿದ್ದು ಹೇಗಂದರೆ: —

'ಪ್ರಿಯದರ್ಶಿ ಮಹಾರಾಜನು ತನ್ನ ಆಳ್ವಿಕೆಯ ೯ನೆಯ ವರ್ಷ ಕಲಿಂಗದೇಶದ ಮೇಲೆ ದಾಳಿಮಾಡಿ ಅದನ್ನು ಪಾದಾಕ್ರಾಂತ ಮಾಡಿದನು. ಈ ಯುದ್ಧದಲ್ಲಿ ಒಂದು ಲಕ್ಷಕ್ಕಿಂತ ಹೆಚ್ಚು ಜನರು ಮರಣ ಹೊಂದಿದ್ದಲ್ಲದೆ ಸುಮಾರು ಒಂದೂವರೆ ಲಕ್ಷ ಜನರು ಸೆರೆ ಹಿಡಿಯಲ್ಪಟ್ಟರು. ಮತ್ತು ಇದರಿಂದ ಅಯುದ್ಧ್ಯಮಾನರಾದ ಎಷ್ಟೋ ಜನರು ಅನೇಕ ಯಾತನೆಗಳನ್ನನುಭವಿಸಿ ಮರಣವನ್ನು ಹೊಂದಿದರು. ಇದರಿಂದ

ಮಹಾರಾಜನಿಗೆ ಬಹಳ ಪಶ್ಚಾತ್ತಾಪವಾಗಿರುವ ಕಾರಣ, ಅವನು ಇನ್ನು ಮುಂದೆ ಭೂತದಯೆಯ ನಿಯಮವನ್ನು ಪಾಲಿಸುವ ಹಾಗು, ಅದೇ ಧರ್ಮವನ್ನು ರಾಜ್ಯದಲ್ಲಿ ಪಸರಿಸುವ ನಿಶ್ಚಯವನ್ನು ಮಾಡಿದ್ದಾನೆ. ಯುದ್ಧದಿಂದ ಅಪರಿಮಿತವಾದ ಹಾನಿಯು ಮಾಡಲ್ಪಡುತ್ತದೆ. ಪ್ರತ್ಯಕ್ಷ ಯುದ್ಧದಲ್ಲಿ ತೊಡಗಿದವರಲ್ಲಿ ಎಷ್ಟೋ ಜನರು ಕೊಲ್ಲಲ್ಪಡುವದೂ, ಸೆರೆ ಹಿಡಿಯಲ್ಪಡುವದೂ ಅಲ್ಲದೆ, ಯಾವ ಗೊಂದಲದಲ್ಲಿಯೂ ಇಲ್ಲದ ನಿರಪರಾಧಿ ಜನರು ಸಹ ಎಷ್ಟೋ ಸಂಕಟಗಳಿಗಾಗಿ ಪ್ರಾಣವನ್ನು ಕಳೆದುಕೊಳ್ಳಬೇಕಾಗುತ್ತದೆ. ಇದರಂತೆ ಸದ್ಧರ್ಮಾನುಯಾಯಿಗಳೂ, ಗುರುಜನರ ಆಜ್ಞಾನುವರ್ತಿಗಳೂ, ಸೇವಕ ಜನರ ಮೇಲೆ ಪ್ರೇಮ ಮಾಡುವವರೂ, ಸಮಾನಸ್ಕಂಧರಂತೆ ವರ್ತಿಸುವ ಗೃಹಸ್ಥಾಶ್ರಮಿಗಳೂ, ಸಂಸಾರವನ್ನು ಪರಿತ್ಯಜಿಸಿ ಪರಮಾರ್ಥವನ್ನು ಚಿಂತಿಸುವವರೂ ಇವರೇ ಮೊದಲಾದ ಯಾವತ್ತು ಜನರಿಗೂ ಯುದ್ಧದಿಂದ ಬಹಳೇ ಬಾಧೆಯುಂಟಾಗುತ್ತದೆ. ಎಷ್ಟೋ ಜನರು ಕೊಲ್ಲಲ್ಪಡುವರು; ಎಷ್ಟೋ ಜನರು ಹಲವು ತರದ ಯಾತನೆಗಳನ್ನನುಭೋಗಿಸುವರು; ಎಷ್ಟೋ ಜನರು ವ್ಯಂಗರಾಗುವರು; ಎಷ್ಟೋ ಜನರು ಪ್ರಿಯ ಜನರ ವಿಯೋಗದಿಂದ ಬಳಲುವರು. ಈ ಪ್ರಕಾರದ ಸ್ಥಿತಿಯನ್ನು ಕಣ್ಣಾರೆ ಕಂಡು ರಾಜನಿಗೆ ಅತ್ಯಂತ ವ್ಯಸನವಾಗಿದೆ. ಮಹಾರಾಜನಾದ ಪ್ರಿಯದರ್ಶಿಯು ಮತವೇನಂದರೆ: — ಎರಡನೆಯವರು ನಮಗೆ ಕಪ್ಪವನ್ನುಂಟು ಮಾಡಲು, ಅವರಿಗೆ ಶಾಸನ ಮಾಡುವ ಮೊದಲು, ಶಕ್ಯವಿದ್ದಷ್ಟು ಅದನ್ನು ಸಹಿಸಿಕೊಳ್ಳಬೇಕು. ಮಹಾರಾಜನ ರಾಜ್ಯದ ಸರಹದ್ದಿನ ಮೇಲಿನ ಗುಡ್ಡಗಾಡು ಜನರ ಮೇಲೆ ಸಾಗಿಹೋಗಿ ಅವರನ್ನು ನಾಶ ಮಾಡಬೇಕೆಂದು ಎಷ್ಟೋ ಅಧಿಕಾರಿಗಳು ಆಪ್ತಾಲೋಚನೆಯನ್ನು ಹೇಳಿದರು. ಆದರೆ ಇದು ಅವನಿಗೆ ಸನ್ಮತವಾಗಲಿಲ್ಲ. ಅವನು ಆ ಗುಡ್ಡುಗಾಡ ಜನರಿಗೆ ತಿಲಮಾತ್ರವಾದರೂ ತ್ರಾಸಕೊಡಲಾರದೆಂದು ತನ್ನ ಅಧಿಕಾರಿಗಳಿಗೆ ಕಟ್ಟಪ್ಪಣೆಯನ್ನು ವಿಧಿಸಿದ್ದನು. ಪಶುಪಕ್ಷಿಗಳೇ ಮೊದಲಾಗಿ ತನ್ನ ರಾಜ್ಯದೊಳಗಿನ ಯಾವತ್ತು ಪ್ರಾಣಿಗಳು ಶಾಂತತೆಯಿಂದ ಇರಬೇಕೆಂದು ಅವನಿಗೆ ಉತ್ಕಟವಾದ ಇಚ್ಛೆಯಿದೆ. ಆತ್ಮಸಂಯಮನವೇ ಸರ್ವಶ್ರೇಷ್ಠವಾದ ನಿಯಮವೆಂದು ಮಹಾರಾಜನ ಮತವುಂಟು."

ಈ ಶಿಲಾಲೇಖದ ಮೇಲಿಂದ ನೆರೆಹೊರೆಯ ರಾಜರೊಡನೆ ನಿಷ್ಕಾರಣವಾಗಿ ಹೋರಾಡದೆ, ತನ್ನ ಪ್ರಜೆಗಳ ಕಲ್ಯಾಣಕ್ಕಾಗಿ ಅವಿಶ್ರಾಂತ ಶ್ರಮ ಮಾಡಬೇಕೆಂಬ ಆತನ ಮನೋನಿಶ್ಚಯವು ವ್ಯಕ್ತವಾಗುತ್ತದೆ ಇದರಂತೆ ಅಶೋಕನು ತನ್ನ ಶೇಷಾಯುಷ್ಯವನ್ನೆಲ್ಲ ಪ್ರಜಾಸುಖಕ್ಕಾಗಿ ಪ್ರಯತ್ನ ಪಡುವದರಲ್ಲಿಯೂ, ಅವರಲ್ಲಿ ನೀತಿಮಾರ್ಗವನ್ನು ಪ್ರಸಾರ ಮಾಡುವದರಲ್ಲಿಯೂ ವೆಚ್ಚ ಮಾಡಿದನು. ಮುಂದೆ ಎರಡು ವರ್ಷಗಳ ನಂತರ ಅಶೋಕನು ಬೌದ್ಧಧರ್ಮವನ್ನು ಅಂಗೀಕರಿಸಿದನು. ಆತ್ಮ ಸಂಯಮನ, ಸದಾಚಾರ, ಪರೋಪಕಾರ ಇವು ಬುದ್ಧಧರ್ಮದ ಮುಖ್ಯ ತತ್ವಗಳಾಗಿವೆ. ಗುರುಗಳ ಆಜ್ಞೆಯನ್ನು ಪಾಲಿಸುವದೂ, ಅವರನ್ನು ಸನ್ಮಾನಿಸುವದೂ, ಸಮಾನರೊಡನೆ ಪ್ರೇಮದಿಂದ ನಡೆಯುವದೂ, ಸೇವಕರ ಮೇಲೂ, ದೀನರೂ ಅನಾಥರೂ ಆದ ಜನರ ಮೇಲೂ, ದಯಾದೃಷ್ಟಿಯನ್ನು ಇಡುವದೂ ಮತ್ತು ಪಶುಪಕ್ಷಿಗಳ ಮೇಲೂ ಪ್ರೀತಿಯನ್ನು ಮಾಡುವದೂ. ಈ ಧರ್ಮದ ನಿಯಮಗಳಾಗಿರುತ್ತವೆ. ಐಹಿಕಸುಖಾಭಿಲಾಷೆಯಿಂದ ಕರ್ತವ್ಯಪರಾಙ್ಮುಖರಾಗಬಾರದೆಂಬದು ಈ ಧರ್ಮದ ಮುಖ್ಯ ಆದೇಶವಾಗಿದೆ. ಈ ನೀತಿತತ್ವಗಳನ್ನು ತನ್ನ ಪ್ರಜೆಗಳಲ್ಲಿ ನೆಲೆಗೊಳಿಸುವದಕ್ಕಾಗಿ ಅಶೋಕನು ಅಹರ್ನಿಶ ಪ್ರಯತ್ನಮಾಡಿದನು.

ತನ್ನ ಪ್ರಜೆಗಳ ಸುಖಕ್ಕಾಗಿ ಅಶೋಕನು ದೊಡ್ಡದೊಡ್ಡ ಮಾರ್ಗಗಳನ್ನು ಮಾಡಿಸಿ, ಅವುಗಳ ಎರಡೂ ಬದಿಗಳಲ್ಲಿ ಫಲವೃಕ್ಷಗಳನ್ನು ಹಚ್ಚಿಸಿದನು. ಅಲ್ಲಲ್ಲಿ ಕೆರೆಗಳನ್ನೂ, ಬಾವಿಗಳನ್ನೂ ಕಟ್ಟಿಸಿ ದಾರಿಕಾರರಿಗೆ ಕುಡಿಯುವ ನೀರಿನ ಅನುಕೂಲತೆಯನ್ನು ಮಾಡಿಕೊಟ್ಟನು. ಪ್ರಜೆಗಳ ಸಲುವಾಗಿಯೂ, ಪಶುಗಳ ಸಲುವಾಗಿಯೂ ಔಷಧಾಲಯಗಳನ್ನು ನಿರ್ಮಿಸಿದನು. ಇಷ್ಟೇ ಅಲ್ಲ; ಈ ದಯಾಳುವಾದ ರಾಜನು ನೆರೆಹೊರೆಯ ತನ್ನ ಮಿತ್ರರಾದ ರಾಜರ ರಾಜ್ಯದಲ್ಲಿ ಸ್ವಂತ ಖರ್ಚಿನಿಂದ ಔಷಧಾಲಯಗಳನ್ನು ಇಡಿಸಿ ರೋಗಿಪ್ರಜೆಗಳ ಔಷಧಯೋಜನೆಯ ವ್ಯವಸ್ಥೆಯನ್ನು ಮಾಡಿಸಿದನು. ಜನರು ಸದಾಚಾರಸಂಪನ್ನರಾಗಿ ಅವರು ಇಹಪರಗಳಲ್ಲಿ ಸೌಖ್ಯವನ್ನನುಭವಿಸಲೆಂಬ ಹೇತುವಿನಿಂದ ತಿಬೇಟ, ಬ್ರಹ್ಮದೇಶ, ಸಿಲೋನ ಮೊದಲಾದ ದೂರದೂರ ದೇಶಗಳಿಗೆ ಇವನು ತನ್ನ ಉಪದೇಶಕರನ್ನು ಕಳಿಸಿಕೊಟ್ಟನು.

(ಮುಂಬಿ ಇದೇ ಸಂಚಿಕೆಯ ೪ನೆಯ ಪುಟವನ್ನು ನೋಡಿರಿ)

(ಮಾರ್ಚ ತಿಂಗಳಿಂದ ಮುಂದೆಸಾಗಿದ್ದು)

ಹಲವು ವೇಳೆಗಳಲ್ಲಿ ಗಿಡಗಳ ಎಲೆಗಳಲ್ಲಿಯೂ, ದಂಟಿನ ಬಿಲಗ ಳಲ್ಲಿಯೂ ಗೂಡು (ಕೋಶ) ಕಟ್ಟಿಕೊಂಡಿರುತ್ತದೆ. ಗಿಡಗಳಲ್ಲಿ ಬೆಳ್ಳಗಿನ ಬಣ್ಣದವೂ, ಹಳದಿ ಬಣ್ಣದವೂ, ಆದ ರೇಶ್ಮೆಯಂತಿರುವ ತಂತುಗಳಿಂದ ಕಟ್ಟಿ ರುವ ಸಣ್ಣ ಗೂಡುಗಳನ್ನು ನಾವು ನೋಡಬಹುದು. ಇವೆಲ್ಲ ಕೀಟಗಳ ಕೋಶರೂಪಗಳೇ. ಸಾಧಾರಣವಾಗಿ ಈ ಕೋಶಗಳು ಬಣ್ಣದಲ್ಲಿ ಸಸ್ಯ ಗಳ ಆಯಾ ಭಾಗಗಳ ಹಾಗೆ ಇರುವವು. ಇದರಿಂದ ಅವುಗಳಿಗೆ ಇತರ ಪ್ರಾಣಿಗಳಿಂದ ಅಪಾಯಗಳುಂಟಾಗುವ ಸಂಭವವು ಕಡಿಮೆಯಾಗುವ ದು. ಕೋಶರೂಪದಲ್ಲಿರುವಾಗ ಕೀಟವು ಕೇವಲ ಜಡಪದಾರ್ಥದಂತೆ ಇರುವದು. ಅದಕ್ಕೆ ವಿಶೇಷವಾದ ಆಕಾರವೂ ಅಂಗರಚನೆಯೂ ಇರು ವದಿಲ್ಲ. ಅದು ಸ್ವಲ್ಪವೂ ಅಲುಗಾಡುವದೂ ಇಲ್ಲ; ಯಾವ ಆಹಾರವನ್ನೂ ಅಪೇಕ್ಷಿಸುವದಿಲ್ಲ. ಆದುದರಿಂದ ಕೀಟವು ಈ ಅವಸ್ಥೆಯಲ್ಲಿರುವಾಗ ಜೀವದುಕಿರುವದೋ ಇಲ್ಲವೋ ಎಂಬ ಸಂಶಯವು ಹುಟ್ಟಬಹುದು.

ಕೆಲವು ಕೀಟಗಳು ಈ ಸ್ಥಿತಿಯಲ್ಲಿ ಹತ್ತು ಹದಿನೈದು ದಿವಸಗ ಳವರಿಗೂ ಕೆಲವು ಅನೇಕ ತಿಂಗಳವರಿಗೂ ಇರುತ್ತವೆ. ಕೀಟಗಳು ಕೋ ಶರೂಪದಲ್ಲಿರುವ ಕಾಲವು ಆಯಾ ಪ್ರದೇಶದ ಹವೆಯ ಶೀತೋಷ್ಣಮಾ ನಗಳನ್ನು ಅನುಸರಿಸಿರುತ್ತದೆ. ಶೀತಕಾಲದಲ್ಲಿ ಕೋಶರೂಪದಿಂದ ಮುಂದಿನ ರೂಪಕ್ಕೆ ಬರುವದಕ್ಕೆ ಹೆಚ್ಚು ದಿನಗಳು ಬೇಕು. ಕೀಟವು ಈ ಸ್ಥಿತಿಯಲ್ಲಿರುವಾಗ ಅದರ ರಚನೆಯನ್ನು ತಿಳಿಯಬೇಕೆಂಬ ಕುತೂ ಹಲವುಳ್ಳವರು ಒಂದು ಹುಳದ ಕೋಶವನ್ನು ಸ್ವಲ್ಪ ತೆರೆದು ನೋಡಬ ಹುದು. ಕೀಟಕ್ಕೆ ಮೊದಲಿದ್ದ ಅಂಗರಚನೆಯು ವ್ಯತ್ಯಾಸವಾಗುತ್ತ ಬರು ತ್ತದು ಗೋಚರವಾಗುವದು. ಪೂರ್ವದಲ್ಲಿದ್ದ ಅವಯವಗಳಲ್ಲಿ ಕೆಲವು ಕರೋಗಿ, ಕಾಲುಗಳು, ರೆಕ್ಕೆಗಳು ಬೆಳೆಯಲು ಆರಂಭವಾಗುವದನ್ನು ನೋ ಡಬಹುದು. ಕೀಟಕ್ಕೆ ಎಲ್ಲ ಅಂಗಗಳು ಪೂರ್ಣವಾಗಿ ಬಂದನಂತರ ಅದು ಗೂಡನ್ನು ಕತ್ತರಿಸಿಕೊಂಡು ಹೊರಕ್ಕೆ ಬರುವದು. ಮೊದಲಿದ್ದ ಕ್ರಿಮಿಯ ರೂಪವು ಹೋಗಿ, ಅದು ಸುಂದರವಾದ ಪಾತರಗಿತ್ತಿಯಾಗಿ ಹಾರಾ ಡುವದಕ್ಕೆ ಉಪಕ್ರಮಿಸುವದು. ಕೀಟವು ಕೋಶರೂಪವನ್ನು ಬಿಟ್ಟು

ಪತಂಗವಾಗುವದನ್ನು ಒಂದು ಬಗೆ ಪರೆ ಬಿಡುವ ಕ್ರಮವೆಂದು ಎಣಿಸ ಬಹುದು. ಹಿಂದೆ ಅದು ಕ್ರಿಮಿಯ ರೂಪದಲ್ಲಿದ್ದಾಗ ಐದು ಅಥವಾ ಆರು ಸಾರೆ ಪರೆಯನ್ನು ಬಿಟ್ಟಿರಬಹುದು. ಅದು ಒಂದೊಂದು ಸಾರೆ ಪರೆ ಬಿಡುವಾಗಲೂ, ಅದರ ಶರೀರದ ಹಳೆಯ ಕವಚವು ಹೋಗಿ ಹೊಸಕ ವಚವು ಬರುವದೆಂದು ಹೇಳಿರುತ್ತದೆ. ಪರೆಬಿಡುವ ಕಾಲದಲ್ಲಿ ಒಂದೆ ರಡು ದಿನಗಳು ಕ್ರಿಮಿಯು ಆಹಾರ ತಿನ್ನುವದನ್ನು ಬಿಡುವದು. ಕೋಶ ದಿಂದ ಪತಂಗಬರುವಾಗಲೂ ಇದೇ ಲಕ್ಷಣಗಳನ್ನು ನೋಡುತ್ತೇವೆ.

ಸೃಷ್ಟಿಯಲ್ಲಿ ಕೀಟಗಳಲ್ಲದೆ ಬೇರೆ ಯಾವ ಪ್ರಾಣಿಗಳ ಜೀವ ಮಾನದಲ್ಲಿಯೂ, ಈ ವಿಧವಾದ ಪೂರ್ಣವಾದ ಬದಲಾವಣೆಯು ಕಾಣುವದಿಲ್ಲ. ಇದನ್ನು ಕ್ರಮವಾಗಿ ನಿರೀಕ್ಷಿಸದೆ ಇರುವ ಸಾಮಾನ್ಯ ಜನರಿಗೆ ಕ್ರಿಮಿಯರೂಪವೂ, ಪತಂಗರೂಪವೂ ಒಂದೇ ಪ್ರಾಣಿಯ ಅವ ಸ್ಥೆಗಳೇ ಹೊರತು ಬೇರೆ ಬೇರೆ ಪ್ರಾಣಿಗಳಲ್ಲವೆಂದು ತಿಳಿಯುವದು ಕಠಿ ನವಾಗುವದು.

(೫). ಕೀಟದ ನಾಲ್ಕನೆ ಅವಸ್ಥೆ — ಪತಂಗರೂಪ.

ಕೋಶವನ್ನು ಭೇದಿಸಿಕೊಂಡು ಬಂದ ಪಾತರಗಿತ್ತಿಯು ಕೆಲವು ನಿಮಿಷಗಳಲ್ಲಿ ತನ್ನ ಪ್ರಕಾಶಮಾನವಾದ ರೆಕ್ಕೆಗಳನ್ನು ಬಿಸಲಿಗೆ ಹರಡಿ ಕೊಂಡು, ಸ್ವಲ್ಪಕಾಲದಲ್ಲಿಯೇ ಸ್ವೇಚ್ಛೆಯಾಗಿ ಹಾರಾಡುವದಕ್ಕೆ ಪ್ರಾರಂ ಭಿಸುವದು. ಪೂರ್ಣಾವಸ್ಥೆಯಲ್ಲಿ ಕೀಟಗಳು ವಿಶೇಷವಾಗಿ ತಿನ್ನುವ ದಿಲ್ಲ. ಕೆಲವು ಪತಂಗಗಳು ಯಾವ ಆಹಾರವನ್ನು ಅಪೇಕ್ಷಿಸುವದಿಲ್ಲ. ಹುಳಗಳು ಆಹಾರ ತೆಗೆದುಕೊಳ್ಳುವ ಕ್ರಮವನ್ನು ಲಕ್ಷಿಸಿದರೆ ಅವುಗ ಳಲ್ಲಿ ನಾವು ಎರಡು ವರ್ಗಗಳನ್ನು ಮಾಡಬಹುದು: — (೧). ತಮ್ಮ ಆಹಾರವನ್ನು ಬಾಯಿಂದ ಹರಿದು ಅಗಿದು ತಿನ್ನುವಹುಳಗಳದು ಒಂದು ವರ್ಗವು. (೨) ಸಸ್ಯಗಳಲ್ಲಿ ತೂತು ಕೊರೆದು ಅವುಗಳೊಳ ಗಿನ ರಸವನ್ನು ಹೀರಿಕೊಳ್ಳುವ ಹುಳಗಳ ವರ್ಗವು ಎರಡನೇದು. ಪತಂ ಗಗಳು ಮೇಲೆ ಹೇಳಿದ ಮೊದಲನೆ ಜಾತಿಗೆ ಸೇರುತ್ತವೆ. ನೊಣ,ಸೊಳ್ಳೆ (ಗುಂಗಾಡು), ತಗಣಿ, ಇವು ತಮ್ಮ ಆಹಾರವನ್ನು ಹೀರಿಕೊಳ್ಳು ತ್ತವೆ. ಸೊಳ್ಳೆ ಮತ್ತು ತಗಣಿ ನಮ್ಮ ಶರೀರದಿಂದ ರಕ್ತವನ್ನು ಹೀರಿ ಕೊಳ್ಳುವದನ್ನು ನಾವು ನೋಡಬಹುದು. ಯಾವದಾದರೂ ಒಂದು

ಹುಳವು ನನ್ನ ಮೈಮೇಲೆ ಕೂತರೆ, ಅದನ್ನು ಕೊಲ್ಲುವದಕ್ಕೆ ಮುಂಚೆ ಅದು ಏನು ಮಾಡುತ್ತದೆಂಬುವದನ್ನು ಲಕ್ಷ್ಯವಿಟ್ಟು ನೋಡಬೇಕು. ತನುಗೆ ಆಹಾರ ಬೇಕಾಗಿರಲಿ, ಬೇಡಾಗಿರಲಿ, ಅವು ಒಂದು ಕಡೆಯಲ್ಲಿ ರದೆ, ಒಂದು ಪುಷ್ಪದಿಂದ ಮತ್ತೊಂದು ಪುಷ್ಪಕ್ಕೂ ಅಥವಾ ಒಂದು ಗಿಡದ ಎಲೆ, ಕಾಂಡ ಬೇರುಗಳಿಂದ ಮತ್ತೊಂದು ಗಿಡದ ಭಾಗಗಳಿಗೂ ಹಾರಾಡುತ್ತಿರುವವು. ಹೀಗೆ ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಹಾರಾಡುತ್ತಿರುವದು ಅವುಗಳ ಕೆಲಸವಾದರೂ, ಅವುಗಳ ಮುಖ್ಯ ಉದ್ದೇಶವು ಗಂಡು ಹೆಣ್ಣು ಹುಳಗಳ ಪರಸ್ಪರ ಸಮಾಗಮವು. ಒಂದು ಜಾತಿಯ ಹೆಣ್ಣು ಪತಂಗವನ್ನು ಒಂದು ತಂತಿಯ ಪಂಜರದಲ್ಲಿ ಹಿಡಿದಿಟ್ಟರೆ ಅದರ ಸಲುವಾಗಿ ಅದೇ ಜಾತಿಯ ಗಂಡು ಪತಂಗಗಳು ಬಹು ದೂರದಿಂದ ಬರುತ್ತವೆ. ರೇಶ್ಮೆಯ ಹುಳವನ್ನು ಸಾಕುವ ಸ್ಥಳಗಳಲ್ಲಿ ಕೋಶಗಳಿಂದ ಪತಂಗಗಳು ಬಂದ ಕೂಡಲೆ, ಹೆಣ್ಣು ಪತಂಗಗಳನ್ನು ಆರಿಸಿ ತೆಗೆದಿಟ್ಟುಕೊಂಡು ಗಂಡು ಹುಳಗಳನ್ನು ಹಾರಬಿಡುವರು.

ಒಂದು ಗಂಡು ಪತಂಗವು ಹೆಣ್ಣು ಪತಂಗವನ್ನು ಹುಡುಕಿಕೊಂಡು ಹಾರಾಡುತ್ತ, ಒಂದು ಹೆಣ್ಣು ಹುಳವನ್ನು ಕಂಡ ಒಡನೆ ಅದರೊಡನೆ ಮೈತ್ರಿಯನ್ನು ಬೆಳೆಸುವದು. ಅನಂತರ ಇವೆರಡೂ ಸ್ವಲ್ಪ ಕಾಲ ಸ್ವೇಚ್ಛೆಯಾಗಿ ವಿಹಾರ ಮಾಡುವವು. ಸ್ವಲ್ಪ ಕಾಲದಲ್ಲಿ ಹೆಣ್ಣು ಹುಳವು ತತ್ತಿಗಳನ್ನು ಹಾಕುವದು. ತಾನು ಹಾಕುವ ತತ್ತಿಗಳನ್ನು ಗಿಡಗಳ ಸರಿಯಾದ ಭಾಗಗಳಲ್ಲಿಟ್ಟು ಸತ್ತು ಹೋಗುವದು. ಗಂಡು ಪತಂಗವೂ ಕಾಗ್ರತೆಯಾಗಿಯೇ ಸಾಯುವದು. ಅಂದರೆ, ಪತಂಗಗಳು ಸಾಧಾರಣವಾಗಿ ಕೋಶದಿಂದ ಬಂದ ಮೂರು ನಾಲ್ಕು ದಿವಸಗಳೊಳಗಾಗಿ ತಮ್ಮ ಕಾರ್ಯಗಳನ್ನು ನೆರವೇರಿಸಿ ತಮ್ಮ ಜೀವನವನ್ನು ಪೂರೈಸುವವು.

ಒಂದು ಪಾತರಗಿತ್ತಿಯು ಹಾಕುವ ತತ್ತಿಗಳಿಂದ ಪುನಃ ಪಾತರಗಿತ್ತಿಗಳು ಬರುವ ಕಾಲದೊಳಗೆ ನಾಲ್ಕು ಅವಸ್ಥೆಗಳು ಇರುತ್ತವೆ. ಯಾವೊಂದು ಅವಸ್ಥೆಗೂ ಅವು ರೂಪಭೇದವನ್ನು ಹೊಂದುವದನ್ನು ನಾವು ನೋಡುತ್ತೇವೆ. ಈ ರೂಪಗಳನ್ನು ಕ್ರಮವಾಗಿ ಹೇಳಬೇಕಾದರೆ:—(೧) ಅಂಡರೂಪ, (೨) ಕ್ರಿಮಿಯರೂಪ, (೩) ಕೋಶರೂಪ, (೪) ಪತಂಗ (ಪಾತರಗಿತ್ತಿಯ) ರೂಪ. ಈ ನಾಲ್ಕು ಅವಸ್ಥೆಗಳಲ್ಲಿ ಎರಡನೆ

ಪತಂಗವಾಗುವದನ್ನು ಒಂದು ಬಗೆ ಪರೆ ಬಿಡುವ ಕ್ರಮವೆಂದು ಎಣಿಸ ಬಹುದು. ಹಿಂದೆ ಅದು ಕ್ರಿಮಿಯ ರೂಪದಲ್ಲಿದ್ದಾಗ ಐದು ಅಥವಾ ಆರು ಸಾರೆ ಪರೆಯನ್ನು ಬಿಟ್ಟಿರಬಹುದು. ಅದು ಒಂದೊಂದು ಸಾರೆ ಪರೆ ಬಿಡುವಾಗಲೂ, ಅದರ ಶರೀರದ ಹಳೆಯ ಕವಚವು ಹೋಗಿ ಹೊಸಕ ವಚವು ಬರುವದೆಂದು ಹೇಳಿರುತ್ತದೆ. ಪರೆಬಿಡುವ ಕಾಲದಲ್ಲಿ ಒಂದೆ ರಡು ದಿನಗಳು ಕ್ರಿಮಿಯು ಆಹಾರ ತಿನ್ನುವದನ್ನು ಬಿಡುವದು. ಕೋಶ ದಿಂದ ಪತಂಗಬರುವಾಗಲೂ ಇದೇ ಲಕ್ಷಣಗಳನ್ನು ನೋಡುತ್ತೇವೆ.

ಸೃಷ್ಟಿಯಲ್ಲಿ ಕೀಟಗಳಲ್ಲದೆ ಬೇರೆ ಯಾವ ಪ್ರಾಣಿಗಳ ಜೀವ ಮಾನದಲ್ಲಿಯೂ, ಈ ವಿಧವಾದ ಪೂರ್ಣವಾದ ಬದಲಾವಣೆಯು ಕಾಣುವದಿಲ್ಲ. ಇದನ್ನು ಕ್ರಮವಾಗಿ ನಿರೀಕ್ಷಿಸದೆ ಇರುವ ಸಾಮಾನ್ಯ ಜನರಿಗೆ ಕ್ರಿಮಿಯರೂಪವೂ, ಪತಂಗರೂಪವೂ ಒಂದೇ ಪ್ರಾಣಿಯ ಅವ ಸ್ಥೆಗಳೇ ಹೊರತು ಬೇರೆ ಬೇರೆ ಪ್ರಾಣಿಗಳಲ್ಲವೆಂದು ತಿಳಿಯುವದು ಕಠಿ ನವಾಗುವದು.

(೫). ಕೀಟದ ನಾಲ್ಕನೆ ಅವಸ್ಥೆ — ಪತಂಗರೂಪ.

ಕೋಶವನ್ನು ಭೇದಿಸಿಕೊಂಡು ಬಂದ ಪ್ರಾತರಗಿತ್ತಿಯು ಕೆಲವು ನಿಮಿಷಗಳಲ್ಲಿ ತನ್ನ ಪ್ರಕಾಶಮಾನವಾದ ರೆಕ್ಕೆಗಳನ್ನು ಬಿಸಲಿಗೆ ಹರಡಿ ಕೊಂಡು, ಸ್ವಲ್ಪಕಾಲದಲ್ಲಿಯೇ ಸ್ವೇಚ್ಛೆಯಾಗಿ ಹಾರಾಡುವದಕ್ಕೆ ಪ್ರಾರಂ ಭಿಸುವದು. ಪೂರ್ಣಾವಸ್ಥೆಯಲ್ಲಿ ಕೀಟಗಳು ವಿಶೇಷವಾಗಿ ತಿನ್ನುವ ದಿಲ್ಲ. ಕೆಲವು ಪತಂಗಗಳು ಯಾವ ಆಹಾರವನ್ನು ಅಪೇಕ್ಷಿಸುವದಿಲ್ಲ. ಹುಳಗಳು ಆಹಾರ ತೆಗೆದುಕೊಳ್ಳುವ ಕ್ರಮವನ್ನು ಲಕ್ಷಿಸಿದರೆ ಅವುಗ ಳಲ್ಲಿ ನಾವು ಎರಡು ವರ್ಗಗಳನ್ನು ಮಾಡಬಹುದು: — (೧). ತಮ್ಮ ಆಹಾರವನ್ನು ಬಾಯಿಂದ ಹರಿದು ಅಗಿದು ತಿನ್ನುವಹುಳಗಳದು ಒಂದು ವರ್ಗವು. (೨) ಸಸ್ಯಗಳಲ್ಲಿ ತೂತು ಕೊರೆದು ಅವುಗಳೊಳ ಗಿನ ರಸವನ್ನು ಹೀರಿಕೊಳ್ಳುವ ಹುಳಗಳ ವರ್ಗವು ಎರಡನೇದು. ಪತಂ ಗಗಳು ಮೇಲೆ ಹೇಳಿದ ಮೊದಲನೆ ಜಾತಿಗೆ ಸೇರುತ್ತವೆ. ನೊಣ,ಸೊಳ್ಳೆ (ಗುಂಗಾಡು), ತಗಣಿ, ಇವು ತಮ್ಮ ಆಹಾರವನ್ನು ಹೀರಿಕೊಳ್ಳು ತ್ತವೆ. ಸೊಳ್ಳೆ ಮತ್ತು ತಗಣಿ ನಮ್ಮ ಶರೀರದಿಂದ ರಕ್ತವನ್ನು ಹೀರಿ ಕೊಳ್ಳುವದನ್ನು ನಾವು ನೋಡಬಹುದು. ಯಾವದಾದರೂ ಒಂದು

ಹುಳವು ನಮ್ಮ ಮೈಮೇಲೆ ಕೂತರೆ, ಅದನ್ನು ಕೊಲ್ಲುವದಕ್ಕ ಮುಂಚ
ಅದು ಏನು ಮಾಡುತ್ತದೆಂಬುವದನ್ನು ಲಕ್ಷ್ಯವಿಟ್ಟು ನೋಡಬೇಕು.
ಶನುಗೆ ಆಹಾರ ಬೇಕಾಗಿರಲಿ, ಬೇಡವಾಗಿರಲಿ, ಅವು ಒಂದು ಕಡೆಯಲ್ಲಿ
ದೆ, ಒಂದು ಪುಷ್ಪದಿಂದ ಮತ್ತೊಂದು ಪುಷ್ಪಕ್ಕೂ ಅಥವಾ ಒಂದು
ಡದ ಎಲೆ, ಕಾಂಡ ಬೇರುಗಳಿಂದ ಮತ್ತೊಂದು ಗಿಡದ ಭಾಗಗಳಿಗೂ
ಸಂಚಾರಾಡುತ್ತಿರುವವು. ಹೀಗೆ ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ
ಸಂಚಾರಾಡುತ್ತಿರುವದು ಅವುಗಳ ಕೆಲಸವಾದರೂ, ಅವುಗಳ ಮುಖ್ಯೋ
ದ್ದೇಶವು ಗಂಡು ಹೆಣ್ಣು ಹುಳಗಳ ಪರಸ್ಪರ ಸಮಾಗಮವು. ಒಂದು
ಜಾತಿಯ ಹೆಣ್ಣು ಪತಂಗವನ್ನು ಒಂದು ತಂತಿಯ ಪಂಜರದಲ್ಲಿ ಹಿಡಿದಿ
ಟ್ಟರೆ ಅದರ ಸಲುವಾಗಿ ಅದೇ ಜಾತಿಯ ಗಂಡು ಪತಂಗಗಳು ಬಹು
ದೂರದಿಂದ ಬರುತ್ತವೆ. ರೇಶ್ಮೆಯ ಹುಳವನ್ನು ಸಾಕುವ ಸ್ಥಳಗಳಲ್ಲಿ
ಕೋಶಗಳಿಂದ ಪತಂಗಗಳು ಬಂದ ಕೂಡಲೆ, ಹೆಣ್ಣು ಪತಂಗಗಳನ್ನು
ಕರಿಸಿ ತೆಗೆದಿಟ್ಟುಕೊಂಡು ಗಂಡು ಹುಳಗಳನ್ನು ಹಾರಬಿಡುವರು.

ಒಂದು ಗಂಡು ಪತಂಗವು ಹೆಣ್ಣು ಪತಂಗವನ್ನು ಹುಡುಕಿಕೊಂಡು
ಸಂಚಾರಾಡುತ್ತ, ಒಂದು ಹೆಣ್ಣು ಹುಳವನ್ನು ಕಂಡ ಒಡನೆ ಅದರೊಡನೆ
ಸ್ನೇಹವನ್ನು ಬೆಳೆಸುವದು. ಅನಂತರ ಇವೆರಡೂ ಸ್ವಲ್ಪ ಕಾಲ ಸ್ನೇಚ್ಛೆ
ಯಾಗಿ ವಿಹಾರ ಮಾಡುವವು. ಸ್ವಲ್ಪ ಕಾಲದಲ್ಲಿ ಹೆಣ್ಣು ಹುಳವು ತತ್ತಿ
ಗಳನ್ನು ಹಾಕುವದು. ತಾನು ಹಾಕುವ ತತ್ತಿಗಳನ್ನು ಗಿಡಗಳ ಸರಿ
ಯಾದ ಭಾಗಗಳಲ್ಲಿಟ್ಟು ಸತ್ತು ಹೋಗುವದು. ಗಂಡು ಪತಂಗವೂ
ಹಾಗ್ರತೆಯಾಗಿಯೇ ಸಾಯುವದು. ಅಂದರೆ, ಪತಂಗಗಳು ಸಾಧಾರಣ
ವಾಗಿ ಕೋಶದಿಂದ ಬಂದ ಮೂರು ನಾಲ್ಕು ದಿವಸಗಳೊಳಗಾಗಿ ತಮ್ಮ
ಕಾರ್ಯಗಳನ್ನು ನೆರವೇರಿಸಿ ತಮ್ಮ ಜೀವವಾನವನ್ನು ಪೂರೈಸುವವು.

ಒಂದು ಪಾತರಗಿತ್ತಿಯು ಹಾಕುವ ತತ್ತಿಗಳಿಂದ ಪುನಃ ಪಾತ
ರಗಿತ್ತಿಗಳು ಬರುವ ಕಾಲದೊಳಗೆ ನಾಲ್ಕು ಅವಸ್ಥೆಗಳು ಇರುತ್ತವೆ.
ಒಂದೊಂದು ಅವಸ್ಥೆಗೂ ಅವು ರೂಪಭೇದವನ್ನು ಹೊಂದುವದನ್ನು
ನಾವು ನೋಡುತ್ತೇವೆ. ಈ ರೂಪಗಳನ್ನು ಕ್ರಮವಾಗಿ ಹೇಳಬೇಕಾ
ದರೆ:—(೧) ಅಂಡರೂಪ, (೨) ಕ್ರಿಮಿಯರೂಪ, (೩) ಕೋಶರೂಪ, (೪)
ಪತಂಗ (ಪಾತರಗಿತ್ತಿಯ) ರೂಪ. ಈ ನಾಲ್ಕು ಅವಸ್ಥೆಗಳಲ್ಲಿ ಎರಡನೆ

ಮತ್ತು ನಾಲ್ಕನೆ ಅವಸ್ಥೆಗಳು ವಿಶೇಷವಾಗಿ ಲಕ್ಷ್ಯಕ್ಕೆ ಬರುವವು. ಈ ಅವಸ್ಥೆಗಳಲ್ಲಿ ಅಂದರೆ ಕ್ರಿಮಿಯರೂಪದಲ್ಲೂ, ಪತಂಗರೂಪದಲ್ಲೂ ಇರುವಾಗ ಅವುಗಳಿಗನುಗುಣವಾದ ಜೀವನವ್ಯಾಪಾರಗಳನ್ನು ವಿಶೇಷವಾಗಿ ನಡಿಸುತ್ತ ಚಟುವಟಿಕೆಯುಳ್ಳದ್ದಾಗಿ ಕಾಣುವದು. ಉಳಿದ ಎರಡು ಅವಸ್ಥೆಗಳಲ್ಲಿ, ಅಂದರೆ ಅಂಡರೂಪದಲ್ಲೂ, ಕೋಶರೂಪದಲ್ಲೂ ಇರುವಾಗ, ಅದರ ಯಾವ ವ್ಯಾಪಾರಗಳೂ ಗೋಚರಕ್ಕೆ ಬರುವದಿಲ್ಲ ಆದುದರಿಂದ ಇದರ ಎರಡನೆ ಮತ್ತು ನಾಲ್ಕನೆ ಅವಸ್ಥೆಗಳನ್ನು ಕೀಟದ ಜಾಗ್ರದವಸ್ಥೆಗಳೆಂದು ತಿಳಿಯಬಹುದು

ಈ ಪ್ರಪಂಚದಲ್ಲಿರತಕ್ಕ ಒಂದೊಂದು ಪ್ರಾಣಿಗೂ ಅದರ ಶತ್ರುಗಳ ಬಾಧೆಗಳಿಂದ ತಪ್ಪಿಸಿಕೊಳ್ಳುವದಕ್ಕೆ ಯಾವದಾದರೂ ಸಾಧನಗಳು ಇದ್ದೇ ಇರುವವು. ಹಾಗೆ ಯಾವ ರಕ್ಷಣೋಪಾಯಗಳೂ ಇರದಿದ್ದರೆ, ಆ ಪ್ರಾಣಿಜಾತಿಯು ಭೂಮಿಯ ಮೇಲೆ ಉಳಿಯುತ್ತಿರಲಿಲ್ಲ. ಕೀಟಗಳಿಗೆ ಅವು ವಿಶೇಷವಾಗಿ ಚಟುವಟಿಕೆಯನ್ನು ತೋರುವ ಕ್ರಿಮಿಯವಸ್ಥೆಯಲ್ಲಿಯೂ ಪತಂಗಾವಸ್ಥೆಯಲ್ಲಿಯೂ, ಇತರ ಪ್ರಾಣಿಗಳಿಂದ ರಕ್ಷಿಸಿಕೊಳ್ಳುವದಕ್ಕೆ ಯಾವ ಅನುಕೂಲಗಳಿರುತ್ತವೆ ಎಂದು ಕೇಳಬಹುದು. ಕೀಟವು ಕ್ರಿಮಿಯಾಗಿರುವಾಗ ಅದರ ಶರೀರದ ಬಣ್ಣವು ಅದರ ಸುತ್ತು ಮುತ್ತಲೂ ಇರುವ ಪದಾರ್ಥಗಳಿಗೆ ತಕ್ಕ ಹಾಗಿರುವದು. ಅದು ಎಲೆಗಳ ಮೇಲಿದ್ದರೆ ಹಸುರಾಗಿಯೂ, ಕಾಂಡದಲ್ಲಿದ್ದರೆ ಆ ಭಾಗದ ಬಣ್ಣವನ್ನುಳ್ಳದ್ದಾಗಿಯೂ ಇರುವದರಿಂದ, ಪಕ್ಷಿ ಮೊದಲಾದ ಶತ್ರುಗಳಿಗೆ ಸುಲಭವಾಗಿ ಕಾಣಿಸುವದಿಲ್ಲ. ಅದರ ಹತ್ತಿರ ಯಾರಾದರೂ ಬಂದು ಅದನ್ನು ತೊಂದರೆಪಡಿಸಿದರೆ, ಅದು ತಲೆಬಾಲಗಳನ್ನು ಸೇರಿಸಿ ಮುದುಡಿಕೊಂಡು ವರ್ತುಲಾಕಾರಕ್ಕೆ ಬಂದು, ತನ್ನ ಬೆನ್ನನ್ನು ಮಾತ್ರ ಹೊರಗೆ ಬಿಟ್ಟುಕೊಂಡಿರುವದು. ಕೆಲವು ವೇಳೆಗಳಲ್ಲಿ ತಾನು ಇರುವ ಸ್ಥಳದಿಂದ ಸರಿದು ಎಲೆಗಳಲ್ಲಿ ಮರೆಯಾಗಿ ಹೋಗುವದುಂಟು. ಪತಂಗದ ಗವನವು ಅದರ ರಕ್ಷಣೆಗೆ ಒಂದು ಸಾಧನವಾಗಿರುತ್ತದೆ. ಇದಲ್ಲದೆ ಅದರ ಪ್ರಕಾಶಮಾನವಾದ ರೆಕ್ಕೆಗಳಲ್ಲಿ ವಿವಿಧಾಕೃತಿಗಳಿರುತ್ತವೆ. ಪಕ್ಷಿಗಳು ದೂರದಿಂದ ನೋಡುವಾಗ ಅವುಗಳ ದೃಷ್ಟಿಯು ವಿಶೇಷವಾಗಿ ರೆಕ್ಕೆಗಳಲ್ಲಿರುವದು. ಆದುದರಿಂದ ಪತಂಗವನ್ನು ಹಿಡಿಯುವ ಪ್ರಯತ್ನದಲಿ

ಅದರ ಒಂದು ರೆಕ್ಕೆಯ ತುಂಡನ್ನು ಮುಟ್ಟುವವು. ಹೀಗೆ ಪತಂಗದ ಶರೀರವು ತಪ್ಪಿಸಿಕೊಳ್ಳುವದಕ್ಕೆ ಅವಕಾಶವಾಗುವದು.

ನಾವು ಪಾತರಗಿತ್ತಿಯ ಜೀವಮಾನದಲ್ಲಿ ನಿರೀಕ್ಷಿಸಿದ ಹಾಗೆ, ಜೇನುಹುಳ, ನೊಣ, ಇರುವೆ ಮೊದಲಾದವುಗಳಲ್ಲಿ ಮೇಲೆ ಹೇಳಿದವ ಸ್ಥೆಗಳನ್ನು ನಿರೀಕ್ಷಿಸಬಹುದು. ಇವುಗಳಲ್ಲಿ ಒಂದಕ್ಕೊಂದಕ್ಕೆ ಅಲ್ಪ ಸ್ವಲ್ಪ ವ್ಯತ್ಯಾಸಗಳು ಕಂಡುಬಂದರೂ ಸಾಮಾನ್ಯವಾಗಿ ಇವುಗಳ ಜೀವ ಮಾನ ಕ್ರಮವು ಒಂದೇ ರೀತಿಯಲ್ಲಿರುವದು. ಆದುದರಿಂದ ಇವೆಲ್ಲ ವನ್ನು ಕೀಟಗಳೆಂದು ಕರೆಯುತ್ತಾರೆ.

(೬). ಕೀಟಗಳಿಗೂ ಮನುಷ್ಯರಿಗೂ ಇರುವ ಸಂಬಂಧ.

ಈ ಪ್ರಪಂಚದಲ್ಲಿ ಮೃಗ, ಪಕ್ಷಿ, ಮತ್ಸ್ಯ, ಇವುಗಳನ್ನು ಬಿಟ್ಟು, ಉಳಿದಿರುವ ಪ್ರಾಣಿಗಳಲ್ಲಿ ಕೀಟಗಳು ಬಹು ಮುಖ್ಯವಾದವು. ನಾವು ಸುತ್ತಲೂ ಎತ್ತನೋಡಿದರೂ, ಯಾವದಾದರೂ ಒಂದು ಜಾಗೆಯ ಹುಳ ಗಳು ನಮಗೆ ಗೋಚರವಾಗುತ್ತಿರುವವು. ಮನೆಗಳಲ್ಲಿಯೂ, ಬೈದಾನ ಗಳಲ್ಲಿಯೂ, ಹಾಗೆಯೆ ಹೊಲಗಳಲ್ಲಿಯೂ, ಕಾಡುಗಳಲ್ಲಿಯೂ, ಎಲ್ಲೆ ಲ್ಲಿಯೂ ಇವು ಹರಡಿಕೊಂಡು ಅಸಂಖ್ಯವಾಗಿ ಹೆಚ್ಚಾಗಿರುವದರಿಂದ, ಮನುಷ್ಯರ ಜೀವನ ವ್ಯಾಪಾರಗಳಿಗೆ ವಿಶೇಷವಾಗಿ ಸಂಬಂಧಿಸಿರು ತ್ತವೆ. ಹುಳಗಳಲ್ಲಿ ಮನುಷ್ಯನಿಗೆ ಹಾನಿಕರವೆಂತಲೂ, ಹಿತಕರವೆಂ ತಲೂ ಎರಡು ವರ್ಗಗಳನ್ನು ಮಾಡಬಹುದು.

ಹಾನಿಕರವಾದವುಗಳಲ್ಲಿ ಕೆಲವು ಹೊಲಗಳಲ್ಲಿಯೂ ತೋಟಗಳಲ್ಲಿ ಯೂ ಬೆಳೆಯುವ ಸಸ್ಯಗಳನ್ನು ನಾಶಮಾಡುವದರಿಂದಲೂ. ಕೆಲವು ಮನೆ ಗಳಲ್ಲಿ ಸಾಕುವ ಪ್ರಾಣಿಗಳಿಗೆ ಬಾಧೆಗಳನ್ನುಂಟುಮಾಡುವದರಿಂದಲೂ, ಕೆಲವು ಮನುಷ್ಯರಿಗೆ ರೋಗಗಳನ್ನು ತರುವದರಿಂದಲೂ, ಕೆಲವು ಜನರು ಶೇಖರಿಸಿಡುವ ಧಾನ್ಯಾದಿಗಳನ್ನು, ಹಾಗೆಯೆ ಅಡಿಗೆಯ ಪದಾ ರ್ಥಗಳನ್ನು ಕೆಡಿಸುವದರಿಂದಲೂ, ವಿಶೇಷ ನಷ್ಟವನ್ನುಂಟುಮಾಡುತ್ತವೆ. ಕೀಟಗಳಿಂದ ರೈತರಿಗೆ ಆಗುವ ನಷ್ಟವು ಎಷ್ಟರ ಮಟ್ಟಿಗೆ ಇರುವ ದೆಂದರೆ, ರೈತರು ಹೊಲಗಳಲ್ಲಿ ಬೆಳೆಸುವ ಸಸ್ಯಗಳಿಂದ ಬರುವ ಫಲ ದಲ್ಲಿ ಸರಾಸರಿ ಅರ್ಧ ಭಾಗವು ಹುಳಗಳ ಪಾಲಿಗೆ ಸೇರುವದೆಂದು ಹೇಳ

ಹುದು. ಅನೇಕ ವೇಳೆಗಳಲ್ಲಿ ಇದಕ್ಕೂ ಹೆಚ್ಚಾಗಿಯೆ ಇದ್ದು, ದೇ
ಕಪ್ಪದಿಂದ ಪೈರನ್ನು ಬೆಳೆಸಿದ ರೈತರಿಗೆ ಅಲ್ಪಾಂಶವು ಕೂಡ ಸಿಕ್ಕ
ಹೋಗುವದುಂಟು. ಜನರು ಪ್ರತಿನಿತ್ಯವು ಉಪಯೋಗಿಸುವ ಆಹಾ
ವಸ್ತುಗಳನ್ನು ಇವುಗಳ ಬಾಧೆಗಳಿಂದ ರಕ್ಷಿಸಿಕೊಳ್ಳುವದಕ್ಕೆ ಅನೇ
ಸಾಹಸಗಳನ್ನು ನಡಿಸಬೇಕಾಗಿದೆ. ಹಾಗೂ ಒಂದೊಂದು ಸಾರೆ ಮ
ಷ್ಯನ ಉಪಾಯಗಳು ನಿಷ್ಪ್ರಯೋಜನವಾಗುತ್ತವೆ. ಸೊಳ್ಳೆ, ನೊ
ಇವು ಮನುಷ್ಯರಿಗೆ ಅನೇಕ ರೋಗಗಳಿಗೆ ಕಾರಣಗಳಾಗಿರುತ್ತ
ಇಂಡಿಯಾ ದೇಶದಲ್ಲಿ ಎಲ್ಲ ರೋಗಗಳಿಗಿಂತಲೂ, ಚಳಿಜ್ವರ (ಮೇ
ರಿಯಾ) ದಿಂದ ಹೆಚ್ಚು ಜನರು ಸಾಯುತ್ತಾರೆ. ಈ ಚಳಿಜ್ವರಕ್ಕೆ ಒಂ
ಬಗೆಯ ಸೊಳ್ಳೆಯು (ಗುಂಗಾಡು) ಕಾರಣವಾಗಿರುತ್ತದೆಂದು ವೈದ್ಯ
ಸ್ತ್ರಜ್ಞರು ಶೋಧಿಸಿಸುತ್ತಾರೆ. ಇವುಗಳಿಂದ ಉಪದ್ರವವಾಗದೆ ಇ
ಬೇಕಾದರೆ, ಜನರು ತಮ್ಮ ಮನೆಯ ಸುತ್ತುಮುತ್ತಲಿರುವ ಸ್ಥಳಗಳ
ಕೆಟ್ಟ ನೀರು ನಿಲ್ಲುವದಕ್ಕೆ ಆಸ್ಪದ ಕೊಡಬಾರದು. ಯಾಕಂದರೆ, ಈ
ಹುಳಗಳು ಹೊಲಸಾದ ನೀರಿನಲ್ಲಿ ತಮ್ಮ ತತ್ತಿಗಳನ್ನಿಡುತ್ತವೆ.

ಹಿತಕರವಾದ ಹುಳಗಳಲ್ಲಿ, ಕೆಲವು ಮನುಷ್ಯನಿಗೆ ಬಹಳ ಉ
ಯೋಗಕರವಾದ ವಸ್ತುಗಳನ್ನು ಉಂಟುಮಾಡುತ್ತವೆ. ಕೆಲವು ಸಸ್ಯಗಳ
ಬಿಡುವ ಪುಷ್ಪಗಳು ಫಲಗಳಾಗುವದಕ್ಕೆ ಸಹಾಯವಾಗಿರುತ್ತವೆ. ಕೆಲ
ಅಲ್ಲಲ್ಲಿ ಬೀಳುವ ಹೊಲಸನ್ನು ತಿಂದು ಭೂಪ್ರದೇಶಗಳನ್ನು ಶುದ್ಧಿ ಮ
ಡುತ್ತವೆ, ಕೆಲವು ಭೂಮಿಯಲ್ಲಿ ಉಪಯೋಗಕ್ಕೆ ಬಾರದೆ ಇರು
ಪದಾರ್ಥಗಳನ್ನು ಸಸ್ಯಗಳಿಗೆ ಪ್ರಯೋಜನವಾಗುವ ಆಹಾರ ರೂಪಕ
ತರುತ್ತವೆ. ಕೀಟಗಳಿಂದ ಸಸ್ಯಗಳಿಗಾಗುವ ಉಪಕಾರವೇನಂದ
ಪುಷ್ಪಗಳಲ್ಲಿ ಗರ್ಭಧಾರಣಕ್ಕೆ ಸಹಾಯದೊರೆತು, ತೋಟಗಳಲ್ಲಿಯು
ವನಗಳಲ್ಲಿಯೂ, ಸುಂದರವಾದ ಮತ್ತು ಸುವಾಸನೆಯುಳ್ಳ ಪುಷ್ಪಗಳು
ಅತಿಶಯವಾದ ಹಣ್ಣುಗಳು ಬರಲು ಅವಕಾಶವಾಗುವದು. ಮನುಷ್ಯ
ರಿಗೆ ಉಪಯೋಗವಾಗುವ ವಸ್ತುಗಳನ್ನುಂಟುಮಾಡುವ ಹುಳಗಳಲ್ಲಿ ಜೇ
ನುಹುಳ, ರೇಶ್ಮೆಯಹುಳ ಇವು ಮುಖ್ಯವಾದವುಗಳೆಂದು ಹೇಳಬಹುದು
ಕೃತ್ರಿಮ ರೀತಿಯಲ್ಲಿ ತಯಾರಾದ ಯಾವ ವಿಧವಾದ ಜೇನು ತುಪ್ಪವೂ
ದುಂಬಿಗಳು ಗೂಡುಗಳಲ್ಲಿ ಶೇಖರಿಸುವ ಮಧುವಿಗೆ ಈಡಾಗಲಾರದು

ಹಾಗೆಯೆ ರೇಶ್ಮೆಯ ಬಟ್ಟೆಯಲ್ಲಿರುವ ಗುಣಗಳು ಅದರಂತೆ ಕಾಣುವ ಬಟ್ಟೆಗಳಲ್ಲಿರುವದಿಲ್ಲ.

ಮನುಷ್ಯರಿಗೆ ಹಿತಕರವಾದ ಹುಳಗಳಿರುವದನ್ನು ಅನೇಕರು ಅರಿಯರು. ಯಾವದೊಂದು ಹುಳವನ್ನು ಕಂಡಕೂಡಲೆ ಅದನ್ನು ಕೊಲ್ಲುವದಕ್ಕೆ ಯತ್ನಿಸುವರು. ನಮ್ಮ ದೃಷ್ಟಿಗೆ ಬೀಳುವ ಹುಳವು ನಮಗೆ ಹಿತಕರವಾದದ್ದೆ ಅಥವಾ ಹಾನಿಕರವಾದದ್ದೆ ಎಂಬ ಅಂಶವನ್ನು ನಿರ್ಧರಿಸಿ, ಅದು ಹಾನಿಕರವಾದದ್ದಾದರೆ ಅದನ್ನು ನಾಶ ಮಾಡಬೇಕು. ಹಿತಕರವಾದವುಗಳನ್ನು ಕೊಲ್ಲುವದರಿಂದ, ಅವುಗಳಿಂದುಂಟಾಗುವ ಪ್ರಯೋಜನವು ತಪ್ಪಿ ಹೋಗುವದು.

ರೇಶ್ಮೆಯ ಹುಳ.

ಎಲ್ಲ ಕೀಟಗಳಲ್ಲಿಯೂ ರೇಶ್ಮೆಯ ಹುಳವು ಮನುಷ್ಯನಿಗೆ ವಿಶೇಷ ಲಾಭಕರವಾದದ್ದಾಗಿರುತ್ತದೆ. ಹವೆಯು ತಿತೋಷ್ಣ ಮಾನಗಳು ಅನುಕೂಲವಾಗಿರತಕ್ಕ ಅನೇಕ ದೇಶಗಳಲ್ಲಿ ಜನರು ಈ ಹುಳವನ್ನು ವಿಶೇಷವಾಗಿ ಪೋಷಿಸಿ ಅದರಿಂದ ರೇಶ್ಮೆಯ ತಂತುಗಳನ್ನು ತೆಗೆಯುತ್ತಾರೆ. ಸುಧಾರಿಸಿದ ಜನಾಂಗಗಳಲ್ಲಿ ರೇಶ್ಮೆಯು ಅನೇಕ ವಿಧವಾದ ಕೈಗಾರಿಕೆಗಳಿಗೆ ಆಧಾರವಾಗಿದ್ದು, ಬಹು ಜನರ ಜೀವನಕ್ಕೆ ಮಾರ್ಗವಾಗಿರುತ್ತದೆ.

ಈ ಹುಳುವಿಗೆ ಚೀನಾದೇಶವು ಮಾತೃಸ್ಥಾನವಾಗಿರುವದು. ಆ ದೇಶದಲ್ಲಿ ಈ ಕಸಬನ್ನು ೪೦೦೦ ವರ್ಷಗಳಿಂದಲೂ ನಡಿಸುತ್ತಿದ್ದರೂ, ಬಹಳ ಕಾಲದವರಿಗೂ ಅನ್ಯ ದೇಶದ ಜನರಿಗೆ ಇದರ ಲಕ್ಷಣವು ತಿಳಿಯದ ಹಾಗೆ ಗೋಪ್ಯವಾಗಿಟ್ಟುಕೊಂಡಿದ್ದರು. ಈ ಗುಟ್ಟು ಹೊರಗೆ ಬಂದ ಕ್ರಮದ ವಿಷಯದಲ್ಲಿ ಒಂದು ಇತಿಹಾಸವಿಶೇಷವಿರುತ್ತದೆ. ಪರ್ಷಿಯಾದೇಶದ ಇಬ್ಬರು ಸನ್ಯಾಸಿಗಳು ಚೀನಾದೇಶವನ್ನು ಸುತ್ತಿನೋಡಿ, ಅಲ್ಲಿಂದ ರೇಶ್ಮೆಯ ಹುಳದ ತತ್ತಿಗಳನ್ನು ತಮ್ಮ ದೇಶಕ್ಕೆ ತೆಗೆದುಕೊಂಡು ಹೋಗಬೇಕೆಂದು ಯಾವ ಉಪಾಯಗಳನ್ನು ಹುಡುಕಿದರೂ, ಚೀನಾ ದೇಶದ ಜನರನ್ನು ತಪ್ಪಿಸಲು ಸಾಧ್ಯವಾಗಲಿಲ್ಲ. ಕಡೆಗೆ ತಮ್ಮ ಕೈಯಲ್ಲಿದ್ದ ದಂಡಗಳ ಬಿಲಗಳಲ್ಲಿ ರೇಶ್ಮೆಯ ಹುಳದ ತತ್ತಿಗ

ಳನ್ನು ತುಂಬಿಕೊಂಡು ಅವುಗಳನ್ನು ಹೊರಗೆ ಸಾಗಿಸಿದರೆಂಬ ಕ
ಯೊಂದು ಇರುತ್ತದೆ. ಹೀಗೆ ಏಷಿಯಾಖಂಡದ ರಾಷ್ಟ್ರಗಳಿಗೂ, ಯು
ರೋಪಖಂಡಕ್ಕೂ ರೇಶ್ಮೆಯ ಹುಳವು ಹರಡಿಕೊಂಡಿತು.

ರೇಶ್ಮೆಯ ಹುಳಗಳಲ್ಲಿ ಅನೇಕ ಜಾತಿಗಳಿರುತ್ತವೆ. ಬಹುಕ
ಲದಿಂದಲೂ ಪ್ರಸಿದ್ಧವಾಗಿರುವ ಕೋರಿಯ ಗಿಡದ (ಹಿಪ್ಪನೇರಳೆ
Mulberry) ಎಲೆಗಳನ್ನು ತಿಂದು ಬದುಕುವ ರೇಶ್ಮೆಯ ಹುಳವು ಒಂದ
ಜಾತಿಯ ಹುಳ. ಈ ಹುಳವನ್ನೇ ಚೀನಾದೇಶದವರು ವಿಶೇಷವಾ
ಸಾಕುತ್ತಿರುವರು. ಇದರಿಂದ ಬರುವ ರೇಶ್ಮೆಯೇ ಉತ್ತಮವಾದದ್ದು
ಔಡಲ ಗಿಡದ (ಹರಳು) ಎಲೆಗಳನ್ನು ತಿನ್ನುವ ಹುಳಗಳದು ಮತ್ತೊಂದ
ಜಾತಿಯು. ಈ ಎರಡು ಜಾತಿಗಳಲ್ಲಿ ಮೊದಲನೇದನ್ನು ಪೋಷಿಸು
ದಕ್ಕೆ ಹೆಚ್ಚು ಶ್ರಮಬೇಕಾಗುವದು. ಇದಲ್ಲದೆ ಕೋರಿಯ ಗಿಡವು ಔ
ಲಗಿಡದ ಹಾಗೆ ಎಲ್ಲೆಲ್ಲಿಯೂ ಸಿಕ್ಕುವದಿಲ್ಲ. ಆದುದರಿಂದ ರೇಶ್ಮೆಯ
ಹುಳದ ಜೀವವಾನವನ್ನು ನಿರೀಕ್ಷಿಸಬೇಕೆಂಬ ಇಚ್ಛೆಯುಳ್ಳವರು ಔ
ಲಗಿಡದ ರೇಶ್ಮೆಯ ಹುಳವನ್ನು ಪೋಷಿಸಿ ಅದರ ಅವಸ್ಥಾಭೇದಗಳನ್ನ
ತಿಳಿಯಬಹುದು.

ಈ ಕೀಟದ ಆಯುಷ್ಯಕ್ರಮವನ್ನು ನಿರೀಕ್ಷಿಸುವವರು ಎಲ್ಲಿಂದ
ಪ್ರಾರಂಭಿಸಬೇಕು? ಸಜೀವಿಗಳ ಆಯುಷ್ಯ ಮತ್ತು ಉತ್ಪತ್ತಿ ಕ್ರಮ
ಗಳು ಚಕ್ರಗತಿಯಾಗಿರುವದರಿಂದ ನಾವು ಎಲ್ಲಿಂದ ಪ್ರಾರಂಭಿಸಿದರೂ
ಪುನಃ ಅದೇ ಅವಸ್ಥೆಗೆ ಬರುವದರಿಂದ, ಈ ವಿಷಯದಲ್ಲಿ ಯಾವ ಹೆಚ್ಚು
ಕಡಿಮೆಗಳು ಕಾಣುವದಿಲ್ಲ. ಇದರಲ್ಲಿ ಒಂದು ಕ್ರಮವಿರಬೇಕೆಂದ
ಅಪೇಕ್ಷಿಸಿದರೆ ತತ್ತಿಯಿಂದ ಪ್ರಾರಂಭಿಸಬಹುದು. ರೇಶ್ಮೆಯ ಹುಳದ
ತತ್ತಿಗಳು ಪ್ರಮಾಣದಲ್ಲಿ ಸಾಸಿವೆ ಕಾಳಿನಷ್ಟು ಇದ್ದು, ಚಪ್ಪಟೆಯಾ
ಗಿಯೂ, ಬಿಳಿ ಬಣ್ಣವುಳ್ಳದ್ದಾಗಿಯೂ, ಅಂಡಾಕೃತಿಯಾಗಿಯೂ ಇರು
ತ್ತವೆ. ತತ್ತಿಗಳ ಮೇಲೆ ಅಂಟಾಗಿರುವ ಒಂದು ಪದಾರ್ಥವು ಸವರಿದ
ಹಾಗಿರುವದರಿಂದ, ಅವುಗಳನ್ನು ಎಲ್ಲಿಟ್ಟರೆ, ಅಲ್ಲಿ ಚನ್ನಾಗಿ ಅಂಟಿಕೊ
ಳ್ಳುವವು. ರೇಶ್ಮೆಯ ಹುಳವು ಸುಮಾರು ೫೦ ದಿನಗಳಿಂದ ೬೦ ದಿನಗಳವರೆಗೆ
ತತ್ತಿಗಳನ್ನಿಡುವುದು. ಈ ತತ್ತಿಗಳು ಗುಂಪುಗುಂಪಾಗಿರುವವು.

ನೈತಿಕ ಶಿಕ್ಷಣ.

(ಕಳೆದ ಫೆಬ್ರುವರಿಯಲ್ಲಿ ಹುಬ್ಬಳ್ಳಿಯಲ್ಲಾದ ಶಿಕ್ಷಕಸಮ್ಮೇಲನದಲ್ಲಿ
ರಾ. ವೆ. ಗೋ. ಡೋಣಿಸಾಲ ಇವರು ಓದಿದ್ದು.)

ಇಂದಿಗೆ ಸುಮಾರು ಇಪ್ಪತ್ತೈದು ನೂರು ವರ್ಷಗಳ ಪೂರ್ವದಲ್ಲಿ ಗ್ರೀಕ ಸತ್ಪುರುಷನಾದ ಮೇಗ್ಯಾಸ್ಥೆನೀಸನೆಂಬವನು ಈ ನಮ್ಮ ಭರತ ಖಂಡದ ಬಗ್ಗೆ ಕೆಲವು ಸಂಗತಿಗಳನ್ನು ಬರೆದಿರುವನು. ಅವುಗಳಲ್ಲಿ ಕೆಲವು, "ನಮ್ಮ ಪೂರ್ವಜರು ಪರವೂರಿಗೆ ಹೋಗಬೇಕಾದರೆ, ತಮ್ಮ ಮನೆಯ ಕದಗಳಿಗೆ ಬೀಗಗಳನ್ನು ಹಾಕುತ್ತಿದ್ದಿಲ್ಲ. ಕೊಟ್ಟ ವಚನವನ್ನು ಜೀವ ಹೋಗುವ ಪ್ರಸಂಗ ಒದಗಿದರೂ ತಪ್ಪಿಸುತ್ತಿದ್ದಿಲ್ಲ; ಕೊಡ ಕೊಳ್ಳುವದಕ್ಕೆ ಕಾಗದಪತ್ರಗಳನ್ನು ಅಥವಾ ಈಗಿನಂತೆ ನ್ಯಾಯ ನಿರ್ಣಾಯಕ ಸಭೆಗಳನ್ನು ಉಪಯೋಗಿಸಿಕೊಳ್ಳುತ್ತಿದ್ದಿಲ್ಲ" ಎಂದು ನಮ್ಮ ದೇಶದ ನೀತಿವಂತಿಕೆಯ ಮಹತಿಯನ್ನು ಹೇಳುತ್ತವೆ. ಇಂಥ ನೀತಿವಂತರ ವಂಶದವರಾದ ನಮಗೆ ಈ ಗ್ರೀಕಲೇಖಕನ ಲೇಖವನ್ನು ಓದಿದರೆ, ನಾಚಿಕೆ ಬರುತ್ತದೆ. ಕ್ಷುಲ್ಲಕವಾದ ವಿಷಯಸುಖಗಳಿಗಾಗಿ ದುಷ್ಕಾರ್ಯವನ್ನು ಮಾಡಲಿಕ್ಕೆ ಹವಣಿಸುವ ನಮ್ಮ ಮನಸ್ಸನ್ನು ಬಿಗಿ ಹಿಡಿಯುವಷ್ಟು ದಾಢ್ಯವು ನಮ್ಮಲ್ಲಿ ಈಗ ಉಳಿದಿರುವದಿಲ್ಲ. ಪರರ ಒಡವೆಗಳೆಂದರೆ ಬಾಯಿಗೆ ನೀರೊಡೆಯುತ್ತದೆ; ಕಣ್ಣು ಎವೆಯಿಕ್ಕದೆ ದುಷ್ಟವಾಸನೆಯಿಂದ ಅವನ್ನು ನೋಡುತ್ತವೆ. ಕೈಕಾಲುಗಳು ಅವನ್ನು ಅಪಹರಿಸಲಿಕ್ಕೆ ಮುಂದುವರಿಯುತ್ತವೆ. ಈ ಪ್ರಕಾರವಾಗಿ ನಮ್ಮ ಸಮಾಜದ ಸುಸ್ಥಿತಿಗೆ ಮೂಲವಾದ ನೈತಿಕ ಬಂಧನವು ಸರಿದು ಸಡಿಲಾಗಿ ಕಳಚಿ ಹೋಗಿರುವದರಿಂದ ಮನೆಮನೆಗಳಲ್ಲಿ, ಊರುಊರುಗಳಲ್ಲಿ, ದೇಶದೇಶಗಳಲ್ಲಿ ಅಪ್ಪಕ್ಕಿಪ್ಪಕ್ಕೇ ವಿಚಾರವಿಲ್ಲದೆ ಕಲಹಗಳು ನಡೆದವೆ. ಈ ಸ್ಥಿತಿಯು ಹೀಗೆಯೇ ಹೆಚ್ಚುತ್ತ ಹೋದರೆ, ನಮ್ಮ ನಾಗರಿಕತೆಯೆಲ್ಲ ಅಳಿದು ಹೋಗಿ, ಮತ್ತೆ ನಮ್ಮ ಪೂರ್ವದ ವನಚರ ಸ್ಥಿತಿಯನ್ನು ಖಂಡಿತವಾಗಿ ಹೊಂದುವೆವು

ಹಾಗಾದರೆ ಬಹಳ ಕಾಲದಿಂದ ನಮ್ಮಲ್ಲಿ ನೆಲೆಯೂರಿದ ಈ ಅನೀತಿಯು ಹೇಗೆ ನಿರ್ಮೂಲನವಾಗಬೇಕು? ಅದಕ್ಕೆ ಏನಾದರೂ ಉಪಾ

ಯಗಳಿರುವವೋ ಹೇಗೆ? ಎಂಬ ವಿಚಾರಗಳು ನೀತಿವಂತರ ಮನಸ್ಸಿನಲ್ಲಿ ಹುಟ್ಟುವದು ಸ್ವಾಭಾವಿಕವು. ಅಂಥ ಮಹಾತ್ಮರು ಜಗತ್ತಿನ ಅನೀತಿಯೆಂಬ ದುಷ್ಪ್ರವಾಹವು ನಿರ್ಮೂಲವಾಗುವದಕ್ಕೆ ಉತ್ತಮವಾದ ಶಿಕ್ಷಣವೇ ಹದನಾದ ಕೊಡಲೆಯಾಗಿದೆಯೆಂದು ಹೇಳುತ್ತಾರೆ. ಇದು ನಿಜವು.

ಹಸುಮಕ್ಕಳು ಯಾವದೊಂದು ಮಾತನ್ನು ಇಲ್ಲವೆ ಸಂಗತಿಯನ್ನು ಮನೆಯವರನ್ನು ನೋಡಿ ಕಲಿತುಕೊಳ್ಳುತ್ತವೆ. ಮನೆಯವರು ವ್ಯಸನಿಗಳೂ, ದುಷ್ಪರೂ ಇದ್ದರೆ, ಆ ಕೂಸುಗಳಾದರೂ ಹಾಗೆಯೇ ದುರ್ವ್ಯಸನಿಗಳೂ, ದುಷ್ಪರೂ ಆಗುತ್ತವೆ. ಒಂದು ವೇಳೆ ಮನೆಯವರು ಸದಾಚಾರಿಗಳು ಇದ್ದಪ್ಪಾದರೆ ಅವಾದರೂ ಸದಾಚಾರಿಗಳು ಆಗುತ್ತವೆಂದು ಬೇರೆ ಹೇಳುವ ಕಾರಣವಿಲ್ಲ.

ಅದರಂತೆ ನೆರೆಹೊರೆಯ ಜನರ ಆಚಾರವಿಚಾರಗಳನ್ನಾದರೂ ಹಸುಮಕ್ಕಳ ಸ್ಥಿತಿಯು ಅವಲಂಬಿಸಿರುತ್ತದೆ. ತಾನು ವ್ಯವಹರಿಸುವ ಸಮಾಜದ ಆಚಾರಗಳು ಒಳ್ಳೆಯವಾಗಿದ್ದರೆ, ಆ ಮಕ್ಕಳಾದರೂ ಅವನ್ನೇ ಅನುಕರಿಸಿ, ಅವೂ ಒಳ್ಳೆಯವಾಗುವವು. ಅದರಂತೆ ತಾನು ಓದುವ ಶಾಲೆಯ ಮನೆಯ ಗುರುಗಳ ಆಚಾರವಿಚಾರಗಳನ್ನಾದರೂ ಆ ಕೂಸುಗಳು ಅನುಕರಿಸುವವು. ಆದ್ದರಿಂದ ಮಕ್ಕಳು ನೀತಿವಂತರಾಗಬೇಕಾದರೆ ಅವು ವ್ಯವಹರಿಸುವ ಜನರ ನೀತಿಯನ್ನು ಬಹ್ವಂಶವಾಗಿ ಅವಲಂಬಿಸಿರುತ್ತವೆ.

ಹುಡುಗರು ವ್ಯವಹರಿಸುವ ಜನವು ಅನೀತಿಯುಳ್ಳದ್ದಾಗಿದ್ದರೂ ದೇಶದಲ್ಲಿ ಸತ್ಯಶಾಲಿಗಳಾದ ಎಷ್ಟೋ ಜನರು ಬಹುತರವಾಗಿ ಪ್ರತಿಯೊಂದು ಸಮಾಜದಲ್ಲಿ ಮಾದರಿಗಾಗಿ ಇರುತ್ತಾರೆ. ಪ್ರಪಂಚಸಾಗರದಲ್ಲಿ ದುಷ್ಟವಾದ ಮನೋವಿಕಾರಗಳೆಂಬ ತೆರೆಗಳ ಹೊಡತಕ್ಕೆ ಮುಳುಗಿ ಹೋಗುತ್ತಿರುವ ಈ ಸಮಾಜವೆಂಬ ದುರ್ಬಲ ನೌಕೆಯನ್ನು ಆ ಮಹಾತ್ಮರು ಕಣ್ಣಲ್ಲಿ ಕಣ್ಣಿಟ್ಟು ಜೀವದ ಪರಿವೆಯಿಲ್ಲದೆ ವ್ಯವಸ್ಥಿತವಾಗಿ ದಂಡೆಗೆ ಮುಟ್ಟಿಸುವದಕ್ಕೆ ಟೊಂಕಾ ಕಟ್ಟಿರುವರು; ಹಾಗು ಬಹುಕಾಲದಿಂದ ಜೀರ್ಣವಾದ ಈ ನೌಕೆಯ ಛಿದ್ರಗಳನ್ನು ಮುಚ್ಚುತ್ತಾ, ನಿರುಪಯುಕ್ತವಾದ ಭಾಗವನ್ನು ಕಿತ್ತು ತೆಗೆದು, ಅಲ್ಲಿ ಹೊಸ ತುಣುಕನು, ಜೋಡಿಸುತ್ತಾ ಅದರ

ಭದ್ರತೆಯನ್ನು ಹೆಚ್ಚಿಸುತ್ತಿರುವರು. ಅಂದಬಳಿಕ ನಾವು ಅಂಜುವ ಕಾರಣವಿಲ್ಲ. ಇಂದಿಲ್ಲ ನಾಳೆಯಾದರೂ ನಾವು ನಮ್ಮ ಮೊದಲಿನ ಮೆಟ್ಟಿನ್ನು ಹೊಂದುವೆವು.

ಆದರಿಷ್ಟೇ ನಾವೆಲ್ಲರು ಆ ಮಹಾತ್ಮರು ತೋರಿಸಿಕೊಡುವ ಮಾರ್ಗದಂತೆ ಆಚರಿಸಬೇಕು; ಅವರು ಹೇಳುವ ಮಾತನ್ನು ಕೇಳಬೇಕು; ನಮ್ಮ ಸಲುವಾಗಿ ಜೀವಾಕೊಡುವ ಅವರ ಸಂರಕ್ಷಣೆಯನ್ನು ನಾವು ನಮ್ಮ ಜೀವಾಕೊಟ್ಟು ಮಾಡಬೇಕು. ಅಂದರೆ ಮಾತ್ರ, ನಾವು ನಿಜವಾದ ಏಳ್ಗೆಯನ್ನು ಪಡೆಯುವೆವು. ಆ ಮಹಾತ್ಮರು ಯಾರೆಂದರೆ, ದಯಾಳು ಸರಕಾರವು, ಮಾರ್ಗದರ್ಶಕರಾದ ಸಮಾಜದ ಮುಖಂಡರು.

ದಯಾಳು ಸರಕಾರವು ನಮ್ಮ ಪ್ರಾಚೀನ ನೀತಿಯ ಮಹತ್ವವನ್ನು ತಿಳಿದವರಾದ್ದರಿಂದ ನಮ್ಮಲ್ಲಿಯ ಅನೀತಿಯನ್ನು ಹೋಗಲಾಡಿಸುವದಕ್ಕೆ ಅಲ್ಲಲ್ಲಿ ಉತ್ತಮವಾದ ಶಿಕ್ಷಣಸಂಸ್ಥೆಗಳನ್ನು ಸ್ಥಾಪಿಸಿರುವರು. ಆ ಸಂಸ್ಥೆಗಳ ಶಿಕ್ಷಣವು ಎಲ್ಲರಿಗೂ ದೊರೆಯುವಂತೆ ಎಲ್ಲ ಅನುಕೂಲತೆಗಳನ್ನು ಮಾಡಿಕೊಟ್ಟಿರುವರು; ಐದಾರುನೂರು ಜನಸಂಖ್ಯೆಯುಳ್ಳ ಸಣ್ಣ ಹಳ್ಳಿಯಲ್ಲಾದರೂ ಶಾಲೆಯನ್ನು ಸ್ಥಾಪಿಸಿ, ಅಲ್ಲಿಯ ಚಿಕ್ಕ ಮಕ್ಕಳಿಗೆ ಉತ್ತಮವಾದ ಶಿಕ್ಷಣವು ದೊರೆಯುವಂತೆ ಯತ್ನಿಸುತ್ತಿರುವರು. ನಾವೆಲ್ಲರು ಆ ಸಂಸ್ಥೆಗಳೊಳಗಿನ ಶಿಕ್ಷಣಕಾರ್ಯವನ್ನು ವಹಿಸಿಕೊಂಡವರು. ನಮ್ಮೆಲ್ಲರ ಮುಖಾಂತರವಾಗಿಯೇ ಯಾವತ್ತು ಸಂತತಿಯು ನೀತಿಯನ್ನು ಸಂಪಾದಿಸಬೇಕಾಗಿದೆ. ಇಂಥಾ ಪುಣ್ಯತವಾದ ಕಾರ್ಯವನ್ನು ಕೈಕೊಂಡದ್ದರಿಂದ ನಾವು ಧನ್ಯರೆಂತ ತಿಳಿಯಬೇಕು. ರಾಷ್ಟ್ರದ ಸ್ಥಿತಿಯನ್ನೇ ಬದಲಿಸಿ, ಅದಕ್ಕೆ ಮನೋಹರವಾದ ರೂಪವನ್ನು ಕೊಡುವ ಕೈಗಾರಿಕೆಯ ಕೆಲಸವನ್ನು ಕೈಕೊಂಡಿರುವೆವೆಂಬದನ್ನು ಲಕ್ಷ್ಯದಲ್ಲಿ ಇಡಬೇಕು. ಕೇವಲ ಹೊಟ್ಟೆಗಾಗಿ ಇದನ್ನು ವಹಿಸಿರುವೆವೆಂದು ತಿಳಿಯಕೂಡದು. ಪ್ರಾಚೀನ ಕಾಲದ ಗುರುತ್ವವನ್ನು ನೆನಪಿಗೆ ತಂದುಕೊಳ್ಳಬೇಕು; ಹಸುಮಕ್ಕಳ ಕೋಮಲವಾದ ಮನಸ್ಸನ್ನು ತಿದ್ದುವಂಥ ಜವಾಬ್ದಾರಿಯು ನಮ್ಮ ಮೇಲಿರುತ್ತದೆಂಬದನ್ನು ನಾವು ನೆನಸಿಡಬೇಕು; ನಾನು ನನ್ನೊಬ್ಬನ ಪೈ ಉಳಿಸಿಕೊಳ್ಳುವ ಸುಖಕ್ಕೆ ಬಿದ್ದರೆ,

ಎಷ್ಟು ಕೂಸುಗಳು ನೀತಿಭ್ರಷ್ಟವಾಗುತ್ತವೆಂಬದನ್ನು ಲಕ್ಷ್ಯದಲ್ಲಿ ಇಡಬೇಕು; ಅದರಿಂದ ಒದಗುವ ಮಹಾ ಪಾತಕಕ್ಕೆ ಪ್ರಾಯಶ್ಚಿತ್ತವೇ ಇಲ್ಲೆಂಬದನ್ನು ನೆನಪಿಡಬೇಕು. ಇವರು ತಮ್ಮ ಮಕ್ಕಳನ್ನು ತಿದ್ದುವರೆಂಬ ನಂಬಿಗೆಯಿಂದ ಜನರು ತಮ್ಮ ಮಕ್ಕಳನ್ನು ನಮ್ಮ ವಶಕ್ಕೆ ಕೊಟ್ಟಿರುವರಷ್ಟೆ? ಹೀಗಿರಲು, ನಾವು ಅವರಿಗೆ ಮೊದಲು ನಿಮ್ಮ ಮಕ್ಕಳನ್ನು ತಿದ್ದುತ್ತೇವೆಂದು ವಚನಕೊಟ್ಟು, ಹಿಂದುಗಡೆ ಹೀಗೆ ವಿಶ್ವಾಸಘಾತ ಮಾಡಿದರೆ, ಅದಕ್ಕೆ ಲೋಕವು ಮೆಚ್ಚದು. ಆದ್ದರಿಂದ ಹಸುಮಕ್ಕಳ ಶಿಕ್ಷಣಕಾರ್ಯವನ್ನು ವಹಿಸಿಕೊಂಡ ನಾವು ಕೇವಲ ನೀತಿವಂತಿಕೆಯ ಪುತ್ಥಳಿಯಾಗಿದ್ದರೆ ಮಾತ್ರ ನಾವು ವಹಿಸಿಕೊಂಡ ಕಾರ್ಯದ ಸಾರ್ಥಕತೆಯಾಗುವದು.

ಈಗಿನ ಪ್ರಾಥಮಿಕ ಶಾಲೆಗಳಲ್ಲಿ ಬಹುತರ ವಿದ್ಯಾರ್ಥಿಗಳ ಅಭ್ಯಾಸದ ಕಡೆಗೇ ವಿಶೇಷವಾಗಿ ಲಕ್ಷವು ಪೂರೈಸಲ್ಪಡುತ್ತದೆ. ಹುಡುಗರು ಹೇಗಾದರೇನು? ಸ್ಟ್ಯಾಂಡರ್ಡ ಪತ್ರಿಕೆಯೊಳಗೆ ನಿಯಾಮಕವಾದ ಇತಿಹಾಸ, ಗಣಿತ, ಭೂಗೋಲದ ಕೆಲವು ಸಂಗತಿಗಳನ್ನು ಹಸುಮಕ್ಕಳ ತಲೆಯೆಂಬ ಚೀಲದೊಳಗೆ ತುಂಬಿಬಿಟ್ಟರಾಯಿತು, ಎಂದು ವಿದ್ಯಾರ್ಥಿಗಳ ಶೀಲವನ್ನು ದುರ್ಲಕ್ಷಿಸಿ, ರಾಷ್ಟ್ರದ ಪ್ರಗತಿಗೆ ಪ್ರತಿಬಂಧಕತೆಯು ಉಂಟುಮಾಡಲ್ಪಡುತ್ತದೆ. ಹೀಗಾದ್ದರಿಂದ ದಯಾಳು ಸರಕಾರವು, ರಾಷ್ಟ್ರದ ನಿಜವಾದ ಸತ್ಪತ್ತಿ ಕೇವಲ ಇತಿಹಾಸ, ವ್ಯಾಕರಣ ಮುಂತಾದ ಕೆಲವು ವಿಷಯಗಳನ್ನು ತಿಳಿಸಿಕೊಡುವದರಲ್ಲಿರದೆ, ಬಾಲಕರ ಶೀಲವನ್ನು ಅವಲಂಬಿಸಿರುತ್ತದೆಂಬದನ್ನು ಮನಗಂಡು, ಪ್ರಾಥಮಿಕ ಶಾಲೆಗಳೊಳಗಿನ ಸ್ಟ್ಯಾಂಡರ್ಡ ಪತ್ರಿಕೆಗಳಲ್ಲಿ "ಹುಡುಗರ ಶೀಲವನ್ನು ತಿದ್ದುವದು" ಎಂಬ ವಿಷಯವನ್ನು ಸೇರಿಸಿರುವರು. ಆದರೆ ಇಷ್ಟರಿಂದಲೆ ಸರಕಾರದ ನಿಜವಾದ ಕೋರಿಕೆಯು ಕೈಗೂಡುವದೆಂದು ತಿಳಿಯಕೂಡದು. ಆ ಕೋರಿಕೆಯು ಈಡೇರುವದು ನಮ್ಮೆಲ್ಲರನ್ನು ಅವಲಂಬಿಸಿರುವದು. ನಾವು ಭೂಗೋಲ, ಇತಿಹಾಸ ಮೊದಲಾದ ವಿಷಯಗಳನ್ನು ಪರೀಕ್ಷಕರು ಪರೀಕ್ಷಿಸುತ್ತಾರೆಂದು ಹುಡುಗರಿಗೆ ಕಲಿಸುವಂತೆ ಈ ವಿಷಯದ ಕೆಲವು ಪಾಠಗಳನ್ನಾದರೂ ಹುಡುಗರಿಗೆ ಕಲಿಸಿದರೆ

ಆದರಿಂದ ಪ್ರಯೋಜನವಾಗದು. ಬರೇ ಹತ್ತೆಂಟು ನೀತಿಯ ಪಾಠಗಳನ್ನು ಹೇಳಿ ಅದರ ಅರ್ಥವನ್ನು ತಿಳಿಸಿ, ತಿಳಿಸಿದ್ದನ್ನು ಪುನರಾವರ್ತಿಸಿ ಪ್ರಯೋಜನವಾಗುತ್ತಿದ್ದರೆ, ನಮ್ಮ ದೇಶವಿಷ್ಟೇ ಏಕೆ? ಇಡೀ ಜಗತ್ತು ವರ್ಷಗಟ್ಟಲೆ ವರ್ಷಗಳಲ್ಲಿ ಕೇವಲ ನೀತಿಮಯವಾಗಬಹುದೆನ್ನಲಿಕ್ಕೆ ಸಂದೇಹವಿಲ್ಲ. ನೀತಿವಂತಿಕೆಯು ಪರಂಪರೆಯಿಂದ ಆಚರಿಸುತ್ತ ಬರುವ ಸದಾಚಾರಗಳ ಚಟವಾಗಿರುವದು. ಆ ಪರಂಪರೆಯು ಹಳೆಯದಿದ್ದಂತೆ ನೀತಿವಂತಿಕೆಯು ಹೆಚ್ಚು ಉಜ್ವಲಸ್ವರೂಪದ್ದಿರುವದು. ಆದ್ದರಿಂದ ನಾವೆಲ್ಲರು ಈ ಕೆಲಸವನ್ನು ಎಷ್ಟು ದಕ್ಷತೆಯಿಂದ ಎಷ್ಟು ಆಸ್ಥೆಯಿಂದ ಮಾಡಬೇಕೆಂಬದನ್ನು ನಾನೇನು ಹೇಳಲಿ! ಸತ್ವಶಾಲಿಗಳಾದ ಹರಿಶ್ಚಂದ್ರ, ಧರ್ಮ, ಭೀಷ್ಮ ಮೊದಲಾದವರಂಥ ಪ್ರಜೆಗಳನ್ನು ಸಮಾಜದಲ್ಲಿ ಅಲ್ಲಲ್ಲಿ ಕಾಣುವಂತೆ ಮಾಡುವದೇ ನಮ್ಮ ಕರ್ತವ್ಯವಾಗಿರುತ್ತದೆಂಬದನ್ನು ತಿಳಿದು ನಾವು ವರ್ತಿಸಬೇಕು.

ಹುಡುಗರ ಭಾವೀ ಕಾರ್ಯಕ್ಷಮತೆಯ ಪೂರ್ವ ಸಿದ್ಧತೆಯ ಯಾವತ್ತು ಕಾಲವು ಬಹುತರವಾಗಿ ಶಾಲೆಯಲ್ಲಿಯೇ ಕಳೆದು ಹೋಗುವದು. ಇದು ಒಳ್ಳೇ ಮಹತ್ವದ ಕಾಲವು. ಹುಡುಗರ ಮನಸ್ಸೆಂಬ ಕ್ಷೇತ್ರವನ್ನು ಸರಿಯಾಗಿ ಹದಗೊಳಿಸುವ ಸಮಯವು ಇದೇ. ಈ ಸುಸಮಯವು ಮುಂದೆ ಅವರ ಇಡೀ ಆಯುರ್ಮರ್ಯಾದೆಯಲ್ಲಿ ದೊರೆಯುವಾರದು. ಈ ಕಾಲವನ್ನೇ ಪ್ರಾಚೀನ ಆರ್ಯರು ಬ್ರಹ್ಮಚರ್ಯಾಶ್ರಮಕ್ಕೆ ತಕ್ಕದ್ದೆಂದು ತಿಳಿದು, ಅದನ್ನು ಒಳ್ಳೇ ರೀತಿಯಿಂದ ಉಪಯೋಗಿಸುವ ಚಟವನ್ನು ತಮ್ಮ ಶಿಷ್ಯರಿಗೆ ಕಲಿಸುತ್ತಿದ್ದರು. ಇಂಥ ಅತ್ಯಪರೂಪವಾಗಿ ಒದಗುವ ಮಕ್ಕಳ ಕಾಲವನ್ನು ಸರಿಯಾಗಿ ಕೆಲಸಕ್ಕೆ ಉಪಯೋಗಿಸುವಂತೆ ಶಿಕ್ಷಕರು ಯತ್ನಿಸಬೇಕು.

ಶಾಲೆಯನ್ನು ಅರಿಯದ ಬಾಲಕರು ಹೊಸದಾಗಿ ಶಾಲೆಗೆ ಬಂದರೆ, ಅದು ಅವರಿಗೆ ಭಯವನ್ನೂ, ಸೋಜಿಗವನ್ನೂ ಉಂಟು ಮಾಡುವದು ಆಶ್ಚರ್ಯವಲ್ಲ. ಓದುತ್ತಿರುವ ಹುಡುಗರೂ, ಅಲ್ಲಿ ನಡೆದಿರುವ ವ್ಯವಹಾರವೂ, ಸಕಲಸಾಹಿತ್ಯಗಳೂ ಬಾಲಕರಿಗೆ ಹೊಸದಾಗಿ ತೋರಿ, ನಾವು ಎಲ್ಲಿಯೋ ಒಂದು ಪ್ರದೇಶಕ್ಕೆ ಬಂದಿರುವೆವೆಂಬ ಭಾವನೆಯು ಅವರಲ್ಲಿ ಹುಟ್ಟುವದು. ಇಂಥ ಪ್ರಸಕ್ತಿಯಲ್ಲಿ ಶಿಕ್ಷಕನು ಯಾವನಾದರೊಬ್ಬ

ಹುಡುಗನನ್ನು ದಂಡಿಸುತ್ತಿದ್ದರೆ, ಇಲ್ಲವೆ ಗಂಟುಮೋರೆ ಹಾಕಿ, ಅಪರಾಧಿಯಾದ ಯಾವನೊಬ್ಬ ಹುಡುಗನನ್ನು ಬೈಯುತ್ತಿದ್ದರೆ, ಆ ಹೊಸದಾಗಿ ಸಾಲೆಗೆ ಬಂದ ಹುಡುಗರು ಇದನ್ನೆಲ್ಲ ಕಂಡು, ಅಂಜಿ, ತಿರುಗಿ ಸಾಲೆಯ ಮೆಟ್ಟಿನ್ನು ಸಹ ಏರಲಿಕ್ಕೆ ಅನುಮಾನಿಸುವರು. ಒಂದು ವೇಳೆ ಮನೆಯವರು ಜುಲುಮೆಯಿಂದ ಅವರನ್ನು ಶಾಲೆಗೆ ಹಾಕಿದರೆ, ಅವರು ಹೊಟ್ಟೆ ಬೇನೆಯನ್ನು ಹಚ್ಚಿಕೊಳ್ಳುವರು. ಕಡೆಗೆ ಮನೆಯವರು ಆ ಹುಡುಗರ ಸ್ಥಿತಿಯನ್ನು ನೋಡಿ ಅವರನ್ನು ಸಾಲೇ ಬಿಡಿಸುವರು. ಹೀಗಾಗಿ ನಮ್ಮ ವೀರಾಟೋಪಕ್ಕೆ ಒಮ್ಮೆ ಬೆದರಿ ನಿಂತ ಹುಡುಗರು ನಮಗೆ ಈಲಾಗದೆ, ಇಡೀ ತಮ್ಮ ಆಯುಷ್ಯದ ಹಾನಿಯನ್ನೇ ಮಾಡಿಕೊಳ್ಳುವರು. ಇದೆಲ್ಲಕ್ಕೂ ಶಿಕ್ಷಕನೇ ಕಾರಣನೆಂದು ಹೇಳಬಹುದು. ಆದ್ದರಿಂದ ವಿದ್ಯಾರ್ಥಿಗಳ ಆರಂಭಕಾಲವನ್ನು ಶಿಕ್ಷಕರು ತಮ್ಮ ಸ್ವಾಭಾವಿಕವಾದ ವತ್ಸಲತೆಯಿಂದಲೇ ಕಳೆಯಬೇಕು. ಆ ಹುಡುಗರಿಗೆ ನಾವು ಮನೆಯಲ್ಲಿಯೇ ಇರುತ್ತೇವೆಂಬ ಭಾವನೆಯುಂಟಾದರೆ ಮಾತ್ರ ಶಿಕ್ಷಕರು ಕಲಿಸಿದ ವಿಷಯವನ್ನು ಆಸ್ಥೆಯಿಂದ ಕಲಿತುಕೊಳ್ಳುವರು. ಒಮ್ಮೆ ಶಿಕ್ಷಕರ ಮೇಲೆ ಅವರ ನಂಬಿಗೆ ಹುಟ್ಟಿತೆಂದರೆ, ಅವರು ತಮ್ಮ ತಾಯಿ ತಂದೆಗಳಿಗಿಂತ ಹೆಚ್ಚು ವಿಶ್ವಾಸವನ್ನು ಅವರಲ್ಲಿ ಇಡುವರು. ಇದೇ ಶಿಕ್ಷಣಕ್ರಮದೊಳಗಿನ ಮೊದಲನೇ ಮೆಟ್ಟು.

ಆಮೇಲೆ ಹುಡುಗರನ್ನು ತಿದ್ದುವದು ಎರಡನೇ ಮೆಟ್ಟು. ಸಾಲೆಗೆ ಹುಡುಗರು ನಸುಕಿನಲ್ಲಿ ಬರುವಂತೆಯೂ, ಬರುವಾಗ ದೇವರಿಗೂ, ತಂದೆತಾಯಿಗಳಿಗೂ ನಮಸ್ಕಾರವನ್ನು ಮಾಡಿ ಬರುವಂತೆಯೂ, ಜಳಜಳವಾದ ಬಟ್ಟೆಗಳನ್ನು ಧರಿಸಿಕೊಂಡು ಬರುವಂತೆಯೂ ಕೊಟ್ಟ ಪಾಠವನ್ನು ಚನ್ನಾಗಿ ಕಲಿತುಕೊಂಡು ಬರುವಂತೆಯೂ ಕ್ರಮಕ್ರಮವಾಗಿ ಅವರಿಗೆ ಅಪ್ಪಣೆಗಳನ್ನು ಮಾಡುತ್ತ ಹೋಗಬೇಕು. ಹಾಗು ಬೇರೆ ಹುಡುಗರಾದರು ಹಾಗೆ ನಡೆಯುತ್ತಿರುವದನ್ನು ಅವರಿಗೆ ತೋರಿಸಿ ಕೊಡಬೇಕು. ಕೆಲವು ಮೈಗಳ್ಳ ಹುಡುಗರಿಗೆ ಆರಂಭದಲ್ಲಿ ಇದು ಜಡವೆನಿಸಬಹುದು. ಅವರು ಒಂದೊಂದು ದಿನ ಸಾಲೆಗೆ ತಡವಾಗಿ ಬರಬಹುದು; ಅಥವಾ ಹೊಲಸು ಬಟ್ಟೆಗಳನ್ನು ಹಾಕಿಕೊಂಡು ಸಾಲೆಗೆ ಬರಬಹುದು; ಅಥವಾ ಕೊಟ್ಟ ಪಾಠವನ್ನು ಕಲಿಯದೆ ಬರಬಹುದು; ಅದ

ರೂ ಶಿಕ್ಷಕನು ಅವರ ಈ ಅಪರಾಧಕ್ಕೆ ಅವರನ್ನು ದಂಡಿಸಕೂಡದು. ಜಿಲ್ಲವೆ ಜಬರಿಸ ಕೂಡದು. ಅಪ್ಪಾ, ಅಣ್ಣಾ ಎಂಬ ಸವಿಮಾತುಗಳಿಂದ ಅವರಿಗೆ ಇನ್ನು ಮೇಲೆ ಹೀಗೆ ಮಾಡಬೇಡರಿ, ಎಂದು ಹೇಳಿ, ಒಂದೆ ರಡು ಸಾರೆ ಅವರು ಮೋರೆ ತೊಳೆಯದೆ ಹಾಗೇ ಬಂದಿದ್ದರೆ; ಶಿಕ್ಷಕನು ತಾನು ಸ್ವತಃ ಅವರ ಮೋರೆಯನ್ನು ತೊಳೆಯಬೇಕು. ಇದೇ ತಪ್ಪ ನ್ನು ಅವರು ಮತ್ತೆ ಮಾಡಿದಲ್ಲಿ ಅವರನ್ನು ತಿರುಗಿ ಮನೆಗೆ ಕಳುಹಿಸಿ ಮೋರೆ ತೊಳೆದುಕೊಂಡು ಬರಲಿಕ್ಕೂ ಒಗೆದ ಬಟ್ಟೆಗಳನ್ನು ಧರಿಸಿಕೊಂಡು ಬರಲಿಕ್ಕೂ ಹೇಳಬೇಕು. ಇದೇ ಮೇರೆಗೆ ತಿಂಗಳೊಪ್ಪತ್ತು ಆ ಹುಡು ಗರಿಗೆ ಗಂಟು ಬಿದ್ದರೆ, ಅವರು ತಮ್ಮ ವೈಗಳ್ಳತನವನ್ನು ತಾವಾಗಿಯೇ ಬಿಟ್ಟು ಬಿಡುವರು. ಈ ಪ್ರಕಾರವಾಗಿ ಆರಂಭದಲ್ಲಿ ಹುಡುಗರನ್ನು ನಡಿಸಿಕೊಂಡರೆ, ಅವರಲ್ಲಿ ನೆಲೆಗೊಳಿಸಬೇಕಾದ ನೀತಿಯೆಂಬ ಸಸಿ ಯನ್ನು ಅನಾಯಾಸವಾಗಿ ನೆಲೆಗೊಳಿಸಿದಂತಾಗುವದು. ಗುರುಗಳು ತಾವು ಕೊಡುವ ಅಪ್ಪಣೆಗಳಂತೆ ವಿದ್ಯಾರ್ಥಿಗಳನ್ನು ಬಿಡದೆ ನಡಿಸಿಕೊ ಳ್ಳುವಷ್ಟು ಸ್ವತಃ ಚಟುವಟಿಕೆಯವರಾದರೆ, ಆ ಹುಡುಗರಲ್ಲಿ ನಿಯ ಮಿತತನ, ಓರಣ, ವಿಧೇಯತೆ ಮೊದಲಾದ ಸದ್ಗುಣಗಳು ತಾವಾಗಿಯೇ ಮನೆಮಾಡುವವು.

ಹುಡುಗರು ಸ್ವಭಾವತಃ ಚಂಚಲರಾಗಿರುವರು. ಅವರಿಗೆ ಜಗತ್ತಿ ನೊಳಗಿನ ಎಷ್ಟೋ ಸಂಗತಿಗಳು ಹೊಸದಾಗಿ ತೋರಿ ಅವನ್ನು ಅರಿತು ಕೊಳ್ಳುವ ಲವಲವಿಕೆಯು ಅವರಲ್ಲಿ ಸಹಜವಾಗಿ ಹುಟ್ಟುವದು. ಶಿಕ್ಷ ಕರು ವಿದ್ಯಾರ್ಥಿಗಳ ಈ ಸ್ವಾಭಾವಿಕ ಗುಣಗಳನ್ನು ಅನುಲಕ್ಷಿಸಿ ಅವ ರಿಗೆ ವಿಷಯವನ್ನು ಕಲಿಸಬೇಕು. ಬೇರೆ ಬೇರೆ ವಸ್ತುಗಳನ್ನು ಅವರಿಗೆ ತೋರಿಸಿ, ಅವುಗಳ ಗುಣಧರ್ಮಗಳನ್ನು ಸ್ಥೂಲವಾನದಿಂದ ಹೇಳಿಕೊ ಡಬೇಕು. ಅದರಿಂದ ಅವರಿಗೆ ಆನಂದವಾಗಿ ಶಾಲೆಯಲ್ಲಿ ಯಾವತರದ ಅವ್ಯವಸ್ಥೆಯೂ ಉಂಟಾಗಲಾರದು.

ಶಾಲೆಯಲ್ಲಿ ಹುಡುಗರು ಅನೀತಿವಂತರಾಗುವದಕ್ಕೆ ಶಿಕ್ಷಕರಲ್ಲಿ ಕಂಡು ಬರುವ ದೋಷಗಳು ಯಾವವೆಂದರೆ:—

(೧). ವಿದ್ಯಾರ್ಥಿಗಳಿಗೆ ಯೋಗ್ಯತೆ ಮೀರಿ ವಿಷಯವನ್ನು ಕಲಿತು ಕೊಂಡು ಬರಲಿಕ್ಕೆ ಹೇಳುವದು.

(೨). ಕಲಿಸತಕ್ಕ ವಿಷಯವನ್ನು ವಿದ್ಯಾರ್ಥಿಗಳಿಗೆ ಮನೋಹರವಾಗಿಯೂ ಸುಲಭವಾಗಿಯೂ ತಿಳಿಸದೆ ಇರುವದು.

(೩). ಹುಡುಗರ ತಪ್ಪನ್ನು ಉಪೇಕ್ಷಿಸುವದು.

(೪). ಪಕ್ಷಪಾತವನ್ನು ತೋರಿಸುವದು.

ಮೇಲೆ ಬರೆದ ಶಿಕ್ಷಕರ ದೋಷಗಳಿಂದ ವಿದ್ಯಾರ್ಥಿಗಳಲ್ಲಿ ಕ್ರಮವಾಗಿ ಮೈಗಳ್ಳತನ, ಕಳವು, ಅವಿಧೇಯತೆ, ಸಭ್ಯರಾದ ಹುಡುಗರೊಡನೆಯೂ ಬೇರೆ ಹುಡುಗರೊಡನೆಯೂ ಮೇಲಿಂದ ಮೇಲೆ ಕಲಹ ಮಾಡೋಣವು, ಅಸೂಯತೆ ಸ್ವಾರ್ಥ ಪರಾಯಣತೆಯು ಇವೇ ಮೊದಲಾದ ದುರ್ಗುಣ ಪರಂಪರೆಗಳು ಸೇರುವವು. ಆದ್ದರಿಂದ ಶಿಕ್ಷಕರು ಒಳ್ಳೇ ಎಚ್ಚರದಿಂದ ಕೆಲಸಮಾಡಬೇಕು. ವಿದ್ಯಾರ್ಥಿಗಳ ಗುಣಾವಗುಣಗಳನ್ನು ಪರೀಕ್ಷಿಸಿ, ಅವರ ದುಷ್ಪ್ರತನಕ್ಕೆ ಅವಸರ ದೊರೆಯದಂತೆ ತಕ್ಕಷ್ಟು ಕೆಲಸವನ್ನು ಕೊಡಬೇಕು. ನೀತಿಯ ಕೆಲವು ಸಾಮಾನ್ಯ ನಿಯಮಗಳನ್ನು ಗೊತ್ತುಪಡಿಸಿ ಅದರಂತೆ ಯಾವತ್ತೂರು ವರ್ತಿಸುವಂತೆ ನಿರ್ಬಂಧವನ್ನು ಮಾಡಬೇಕು. ಕ್ರಮಿಕ ಪುಸ್ತಕಗಳೊಳಗಿನ ಸಾಮಾನ್ಯ ಜ್ಞಾನದ ಪಾಠಗಳನ್ನು ಓದಿಸುವಾಗ ಕೆಲವು ನೀತಿಯ ಪಾಠಗಳನ್ನು ಹೆಚ್ಚಾಗಿ ವಿವರಿಸಿ, ತಕ್ಕ ದೃಷ್ಟಾಂತವನ್ನು ಕೊಟ್ಟು ಸದ್ವರ್ತನದ ಫಲವು ಅವರ ಮನಸ್ಸಿನಲ್ಲಿ ಒಳ್ಳೇ ಬಿಂಬಿಸುವಂತೆಯೂ ದುಷ್ಟ ಕಾರ್ಯವನ್ನು ಎಂದೂ ಮಾಡಬಾರದೆಂಬ ಬುದ್ಧಿಯು ಉತ್ಪನ್ನವಾಗುವಂತೆಯೂ ಶಿಕ್ಷಕರು ಮಾಡಬೇಕು. ಬಾಲಕರ ವರ್ಗಕ್ಕೂ ೧ ನೇ ಇಯತ್ತೆಯ ವರ್ಗಕ್ಕೂ ಪ್ರತ್ಯೇಕವಾಗಿ ನೀತಿಯ ಕಥೆಗಳನ್ನು ಹೇಳಬೇಕೆಂದು ನಿಯಮವದೆಯಷ್ಟೆ? ಆದಕ್ಕನುಸರಿಸಿ ಹುಡುಗರಿಗೆ ಯೋಗ್ಯವಾದ ಕಥೆಗಳನ್ನು ಆರಿಸಿ ಹಾವಭಾವಗಳಿಂದ ಕಥೆಯಲ್ಲಿ ಪ್ರತಿಪಾದ್ಯವಾದ ನೀತಿಯ ಮಾತನ್ನು ಚನ್ನಾಗಿ ಬಿಂಬಿಸಿ ಹೇಳಬೇಕು. ಮೇಲಿನ ಇಯತ್ತೆಯು ಹುಡುಗರಿಗೆ ಇತಿಹಾಸವನ್ನು ಕಲಿಸಬೇಕಾಗುವದಷ್ಟೇ? ಇದರ ಉಪಯೋಗವು ವಿದ್ಯಾರ್ಥಿಗಳಲ್ಲಿ ನೀತಿಯನ್ನು ನೆಲೆಗೊಳಿಸಲಿಕ್ಕೆ ಒಳ್ಳೇ ಅನುಕೂಲವಾಗುವದು. ಪೃಥ್ವೀರಾಜನ ಇತಿಹಾಸವನ್ನು ಹೇಳುವಾಗ ಜಯಚಂದನಿಗೂ ಪೃಥ್ವೀರಾಜನಿಗೂ ಮೊದಲು ಇದ್ದ ಪ್ರೀತಿಯನ್ನು ವರ್ಣಿಸಬೇಕು. ಅನಂತರ ರಾಜ್ಯದಾಶೆಗಾಗಿ ಮುಂದೆ ಅವರಲ್ಲಿ ಆದ ವಿತು

ಪತ್ರವ್ಯವಹಾರ.

ಬಾದಾಮಿಯಲ್ಲಿ ಆಪ ಶಿಕ್ಷಕರ ಸಮ್ಮೇಲನವು.

ಮಾರ್ಚ ತಿಂಗಳ ೬೦-೬೩ನೇ ತಾರೀಖುಗಳ ದಿವಸ ಬಾದಾಮಿಯ ಕನ್ನಡ ಶಾಲೆಯಲ್ಲಿ ಶಿಕ್ಷಕರ ಸಮ್ಮೇಲನವು ನೆರೆಸಲ್ಪಟ್ಟಿತ್ತು. ಈ ಸಮ್ಮೇಲನಕ್ಕೆ ಬಾದಾಮಿ, ಬಾಗಲಕೋಟ ತಾಲೂಕಗಳ ಮಾಸ್ತರರು ಸುಮಾರು ೧೦೦ ರ ವರೆಗೆ ಬಂದಿದ್ದರು. ೬೦ನೇ ತಾರೀಖಿನ ದಿವಸ ಮುಂಜಾನೆ ೪ ಗಂಟೆಗೆ ಸಮ್ಮೇಲನದ ಕೆಲಸವು ರಾವಸಾಹೇಬ ಎಚ್. ಕೇ. ಗೋಖಲೆ ೧ನೇ ಅಸಿ. ಡೆಪ್ಯುಟಿ ಎಜ್ಯುಕೇಶನಲ್ ಇನ್‌ಸ್ಪೆಕ್ಟರ ನಿಚಾಪುರ ಇವರ ಅಧ್ಯಕ್ಷತೆಯ ಕೆಳಗೆ ಪ್ರಾರಂಭವಾಗಿ, ಮೊದಲೇ ಸರಕ್ಯೂಲರದ ಮೂಲಕ ಗೊತ್ತಾದ ಕಾರ್ಯಕ್ರಮದಂತೆ ನಡೆಯಿತು:-

ಮುಂಜಾನೆ, (೧) ಮಿ. ಪೈ. ವಾ. ಮುರಾತೆ, (೨) ಮಿ. ಶಿ. ಸಾ. ಸಂಗವು, (೩) ಮಿ. ಕೃ. ರ ಕೆತೂರ, (೪) ಮಿ. ಅ. ಗೋ. ಫಣಸಲ ಕರ, (೫) ಮಿ. ಗು. ಭೀ. ಕುಂಚೂರ, (೬) ಮಿ. ಗೋಗಿ, (೭) ಮಿಸೆಸ್ ಗಿರಿಜಾಬಾಯಿ ಸಿಂದೆ, ಇವರು ಶಿಕ್ಷಣವಿಷಯವಾದ ನಿಬಂಧಗಳನ್ನು ಓದಿದರು. ನಿಬಂಧಗಳೆಲ್ಲ ಬಹುತರ ಚನ್ನಾಗಿ ಬರೆಯಲ್ಪಟ್ಟಿದ್ದವು. ಮಿ. ಕುಂಚೂರ ಮಾಸ್ತರರು ತಾವು ಕೆಲಸ ಮಾಡಿದ ಅನುಭವದಿಂದ ಸಹಾನುಭೂತಿಯನ್ನು ಹೇಗೆ ಸಂಪಾದಿಸಿದೆವೆಂಬದನ್ನು ಬಹು ಮನೋಹರವಾಗಿ ಪ್ರಕಟಮಾಡಿದರು. ಅವರ ನಿಬಂಧದಿಂದ ಶಿಕ್ಷಕರಲ್ಲಿ ಒಂದು ಪ್ರಕಾರದ ಉತ್ಸಾಹವು ಕಂಡುಬಂತು. ಈ ಪ್ರಕಾರ ನಿಬಂಧವಾಚನವೂ, ಅದರ ಮೇಲೆ ವಾದವಿವಾದವೂ ೬೦ ಗಂಟೆಯ ವರೆಗೆ ಸಾಗಿ, ಅಧ್ಯಕ್ಷರ ಸಮಾರೋಪವಾದ ಮೇಲೆ ಮುಂಜಾನೆಯ ಕೆಲಸವು ಮುಗಿಯಿತು. ಮಧ್ಯಾಹ್ನದ ೩ ಗಂಟೆಗೆ ವಿಷಯಗಳು ಕಲಿಸಲ್ಪಟ್ಟವು. ಅವುಗಳ ವಿವರ:-

ಕಲಿಸಿದವರು.	ವಿಷಯ.
೧. ಮಿ. ವಾ. ಭೀ. ಕುಲಕರ್ಣಿ.	ಗಾಯನ (ಸಪ್ತಸ್ವರಗಳು.)
೨. ಮಿ. ಹ. ರಾ. ಸಂಗವು.	ಬಣ್ಣಗಳು.
೩. ಮಿ. ನಾ. ನ. ಕುಲಕರ್ಣಿ.	"ಣ" ಅಕ್ಷರ.

ವಿಷಯಗಳನ್ನೆಲ್ಲ ಆಯಾ ಶಿಕ್ಷಕರು ಮೊದಲೇ ತಯಾರ ಮಾಡಿ ಕೊಂಡು ಬಂದಿದ್ದು ಉತ್ತಮವಾಗಿ ಕಲಿಸಿದರು. ಅಧ್ಯಕ್ಷರು ಕಲಿಸಿದ ವಿಷಯದ ಸಮಾರೋಪವನ್ನು ಮಾಡಿದ ನಂತರ, ಆ ದಿವಸದ ಕೆಲಸವು ೫ ಗಂಟೆಗೆ ಮುಗ್ಗಿಯಿತು.

ಮರು ದಿವಸ ಮುಂಜಾನೆ ೮ ಗಂಟೆಗೆ "ಹಳ್ಳಿಯ ಹಾಗು ಶಾಲೆಯ ಆರೋಗ್ಯತೆಯನ್ನು ಕಾಯ್ದುಕೊಳ್ಳಲಿಕ್ಕೆ ಶಿಕ್ಷಕರು ಮಾಡತಕ್ಕ ಉಪಾಯಗಳು" ಎಂಬ ವಿಷಯದ ಬಗ್ಗೆ ಮಿ. ಸೇ. ಗು. ಡಂಬಳ, ಮಿ. ಬಾ. ನ. ಪಾಟೀಲ, ಮಿ. ಮ. ಭೀ. ಕಡಿವಾಲ ಇವರು ನಿಬಂಧಗಳನ್ನು ಓದಿದರು. ನಿಬಂಧಗಳು ಬಹುತರ ಶಿಕ್ಷಕರ ಅನುಭವದ ಸಂಗತಿಗಳೇ ಆಗಿದ್ದವೆಂದು ಹೇಳಿದರೆ ತಪ್ಪಾಗಲಾರದು. ಅವರ ನಿಬಂಧಗಳಿಂದ ಜನರ ಮನಸಿನ ಮೇಲೆ ವಿಶೇಷ ಪರಿಣಾಮವಾಯಿತು.

ಬಾಗಲಕೋಟೆಯ ಕನ್ನಡ ಶಾಲೆಯ ಮಾಸ್ತರರಾದ ಮಿ. ಕುಂಚೂರ ಇವರು ತಾವು ಹಾಂಸಭಾವಿಯಲ್ಲಿದ್ದಾಗ್ಗೆ ಮೈಲೀ ತೆಗೆಸಿಕೊಳ್ಳಲಿಕ್ಕೆ ಜನರಿಗೆ ಹೇಗೆ ಉತ್ತೇಜನ ಕೊಟ್ಟೆವೆಂಬದನ್ನು ಸರಸಾಗಿ ಹೇಳಿದರು. ಈ ಪ್ರಕಾರ ಹಿಂದಿನ ದಿವಸದಂತೆ ನಿಬಂಧವಾಚನವೂ ಅದರ ಮೇಲಿನ ವಾದವಿವಾದವೂ ೧೦ ಗಂಟೆಯ ವರೆಗೆ ಸಾಗಿ ಅಧ್ಯಕ್ಷರ ಸಮಾರೋಪದಿಂದ ಮುಗಿಯುವಷ್ಟರಲ್ಲಿ, ರಾವಸಾಹೇಬ ಎಸ್. ಎಸ್. ಗಾಳಿ ಮಾಮಲೇದಾರ ತಾಲೂಕ ಬಾದಾಮಿ ಇವರು ಬಂದರು; ಮತ್ತು "ಡಿಸ್ಟ್ರಿಕ್ಟ ಸ್ಯಾನಿಟರಿ ಅಸೋಸಿಏಶನ್" ದ ಮೆಂಬರರಾಗುವದರಿಂದ ಹಳ್ಳಿಯ ಆರೋಗ್ಯತೆಯನ್ನು ಕಾಯ್ದುಕೊಳ್ಳಲಿಕ್ಕೆ ಮಾಸ್ತರ ಜನರಿಗೆ ಎಷ್ಟರ ಮಟ್ಟಿಗೆ ಅನುಕೂಲವಾಗುತ್ತದೆಂಬದನ್ನು ಹೇಳಿದರು. ಈ ಪ್ರಕಾರ ಮೆಂಬರರಾಗಲಿಕ್ಕೆ ಮಾಸ್ತರ ಜನರಿಗೆ ಯಾವ ಪ್ರಕಾರದ ಅಡ್ಡಿ ಇಲ್ಲೆಂದು ಸರಕಾರಿ ತರಾವ ಬುದದ್ದನ್ನು ಓದಿ ಹೇಳಿದರು. ಆ ಮೇಲೆ ಮೆಹಬಾರ್ನ ಮಾಮಲೇದಾರ ಸಾಹೇಬರನ್ನೊಡಗೊಂಡು ಇಲ್ಲಿಯ ಮೇಣಬಸ್ತಿಗೆ ಹೋಗಿ ಎಲ್ಲರ ಫೋಟೋಗಳು ತೆಗೆಯಲ್ಪಟ್ಟವು.

ಮಧ್ಯಾಹ್ನದ ೩ ಗಂಟೆಗೆ ಮಿ. ಅ ಬಾ. ಜೋಸಿ ಅಸಿ|| ಬಾಗಲಕೋಟ ಇವರು ನೈತಿಕ ಪಾಠಗಳನ್ನು ಹೇಗೆ ಕಲಿಸಬೇಕೆಂಬ ಬಗ್ಗೆ ಇಂಗ್ಲಿಷ ಪುಸ್ತಕದ ಆಧಾರದಿಂದ ಬರೆದು ತಂದ ವಿಷಯವನ್ನು ಓದಿ

ಹೇಳಿದರು. ಆ ಮೇಲೆ ನೈತಿಕ ಪಾಠಗಳು ಕಲಿಸಲ್ಪಟ್ಟವು. ಕಲಿಸಿದ ಶಿಕ್ಷಕರೆಲ್ಲರೂ ಒಳ್ಳೇ ಆಸ್ಥೆಯಿಂದ ಟಿಪ್ಪಣಿಗಳನ್ನೂ, ಕಥೆಗೆ ಅನುಕೂಲವಾದ ಚಿತ್ರಗಳನ್ನೂ ತೆಗೆದುಕೊಂಡು ಬಂದಿದ್ದರು ಆದ್ದರಿಂದ ಎಲ್ಲರ ಕಲಿಸುವಿಕೆಯು ಒಳ್ಳೇ ಪರಿಣಾಮಕರವಾಯಿತೆನ್ನಲಿಕ್ಕೆ ಏನೂ ಅಡ್ಡಿ ಇಲ್ಲ.

	ಕಲಿಸಿದ ಶಿಕ್ಷಕರು.	ವಿಷಯ
(೧)	ಮಿ. ಅ. ಗೋ. ಫಣಸಲಕರ.	ಪ್ರಾಮಾಣಿಕತನ.
(೨)	ಮಿ. ಫಾ. ಪಾ. ಚಾಟೆ.	ಸುಳ್ಳು ಹೇಳಬಾರದು.
(೩)	ಮಿ. ಗೋ. ಗು. ಕಾಖಂಡಕಿ.	ಬಡಿದಾಡಬಾರದು.

ಇಷ್ಟಾದ ಮೇಲೆ ೫ ಗಂಟೆಗೆ ಸಮ್ಮೇಲನವು ಮುಗಿಯಿತು. ಸಾಯಂಕಾಲದ ೭ ಗಂಟೆಗೆ ಮಿ. ಕುಂಚೂರ ಮಾಸ್ತರರು ಸಂಭಾಜಿಯ ಚರಿತ್ರೆಯನ್ನು ಕೀರ್ತನರೂಪದಿಂದ ಸರಸವಾಗಿ ಹೇಳಿದರು. ಆ ಮೇಲೆ ನಂದಿಕೇಶ್ವರ ಮಾಸ್ತರರಾದ ಮಿ. ಥಿಟೆ ಇವರು ಗಾಯನವನ್ನು ಮಾಡಿದ ಮೇಲೆ ಬಾದಾಮಿಯಲ್ಲಿಯ ವೇ. ವೆಂಕಣಭಟ್ಟರ ಸರಸವಾದ ಗಾಯನವೂ, ವೇ. ಶೇಷಾಚಾರ್ಯರ ವಾದನವೂ ಆದವು ಆ ಮೇಲೆ ಪ್ರತಿ ವರ್ಷ ಈ ಸಮ್ಮೇಲನವು ೩ ದಿವಸಗಳ ವರೆಗೆ ನಡೆಯುವ ಬಗ್ಗೆ, ಮತ್ತು ಹೋಳೀ ಹುಣ್ಣಿಮೆಯ ಸೂಟಿಯಲ್ಲಿ ನೆರೆಯದೆ ಬೇರೆ ದಿವಸಗಳಲ್ಲಿ ನೆರೆಯುವ ಬಗ್ಗೆ ಕೆಲ ಮಾಸ್ತರರು ಸೂಚಿಸಿದ ತರುವಾಯ ಮಿ. ಮರಾಠೆ ಕಟಗೇರಿ ಮಾಸ್ತರ ಇವರು ಈ ಪ್ರಕಾರ ಭಾಷಣ ಮಾಡಿದರು:—"ಬಾಗಲಕೋಟೆಯಲ್ಲಿ ಈ ಸಮ್ಮೇಲನವು ನೆರೆಸತಕ್ಕದ್ದೆಂದು ಮೊದಲು ಗೊತ್ತಾಗಿತ್ತು. ಆದರೆ ಅಲ್ಲಿ ಪ್ಲೇಗರಾಜನ ಹಾವಳಿಯು ವಿಶೇಷವಾದ ಮೂಲಕ ಬಾದಾಮಿಯಲಿ ನೆರೆಸತಕ್ಕದೆಂದು ೬೧೦ ದಿವಸಗಳ ಪೂರ್ವದಲ್ಲಿ ಮಾತ್ರ ಗೊತ್ತಾಯಿತು. ಆಗ ಇಲ್ಲಿಯ ಮಾಸ್ತರರಾದ ಮಿ. ಪಾಟೀಲ ಇವರು ಅಶ್ರಾಂತ ಶ್ರಮತಕ್ಕೊಂಡು ಸಮ್ಮೇಲನದ ಪೂರ್ವ ತಯಾರಿಯನ್ನು ಉತ್ಕೃಷ್ಟ ರೀತಿಯಿಂದ ಮಾಡಿದ್ದನು ನೀವೆಲ್ಲರೂ ನೋಡುತ್ತಿರುವಿರಿ. ಮತ್ತು ಈ ಎಲ್ಲ ತಯಾರಿಗೆ ರಾವ ಸಾಹೇಬ ಗೋಖಲೆ ಸಾಹೇಬರು ಮೂಲ ಪ್ರವರ್ತಕರಾದ್ದರಿಂದ ಈ ಸುಯೋಗವನ್ನು ತಂದು ಕೊಟ್ಟದ್ದಕ್ಕಾಗಿಯೂ, ಸಮ್ಮೇಲನವು ಸರಿ

ಯಾಗಿ ನಡೆಯುವಂತೆ ಆಗಾಗ್ಗೆ ಯೋಗ್ಯ ಸೂಚನೆಗಳನ್ನು ಮಾಡಿದ್ದಕ್ಕಾಗಿಯೂ ನಾವೆಲ್ಲರೂ ಅವರ ಆಭಾರವನ್ನು ಮನಃಪೂರ್ವಕವಾಗಿ ಮನ್ನಿಸತಕ್ಕದ್ದು; ಮತ್ತು ಮಿ. ಕುಂಜೂರ ಮಾಸ್ತರರು ಸಮ್ಮೇಲನಕ್ಕೆ ಬಂದು ಪ್ರತಿಯೊಂದು ಸಂಗತಿಯಲ್ಲಿ ತಮ್ಮ ಅನುಭವವನ್ನು ಹೇಳಿದ್ದರಿಂದ ಕೆಲಸಕ್ಕೆ ಒಳ್ಳೇ ಉತ್ಸಾಹ ಬರುತ್ತಿತ್ತು. ಕಾರಣ, ಅವರ ಮತ್ತು ಸಮ್ಮೇಲನದ ತಯಾರಿಯನ್ನು ಸ್ವಲ್ಪೇ ದಿವಸಗಳಲ್ಲಿ ಮಾಡಿದ ಮಿ. ಪಾಟೀಲ ಇವರ ಆಭಾರವನ್ನಾದರೂ ನಾವು ಮನ್ನಿಸತಕ್ಕದ್ದು." ಇಷ್ಟಾದ ಮೇಲೆ ಅಧ್ಯಕ್ಷರು ಸಮ್ಮೇಲನದಿಂದಾಗುವ ಲಾಭಗಳನ್ನು ಸ್ವಲ್ಪ ದರಲ್ಲಿ ಮಾರ್ಮಿಕತನದಿಂದ ಹೇಳಿದರು. ಆ ಮೇಲೆ ರಾಷ್ಟ್ರಗೀತನನ್ನು ಅಂದಮೇಲೆ ಮಹಾರಾಜ ಪಂಚಮ ಜಾರ್ಜರಿಗೂ, ಮೇರಿ ಮಹಾರಾಣಿಯವರಿಗೂ ಜಯವಾಗಲೆಂದು ತ್ರಿವಾರ ಘೋಷ ಮಾಡಿದ ಮೇಲೆ ಹಾರ ತುರಾಯಿ ತಾಂಬೂಲಾದಿಗಳಿಂದ ಬಂದ ಜನರನ್ನು ಸತ್ಕರಿಸಿದ ಬಳಿಕ, ರಾತ್ರಿ ೧೦ ಗಂಟೆಗೆ ಸಮ್ಮೇಲನದ ಕಾರ್ಯವು ಸಂಪೂರ್ಣವಾಗಿ ಮುಗಿಯಿತು.

ಇನ್ನು, ಸಮ್ಮೇಲನದ ಒನೇ ಭಾಗವಾದ ಪ್ರದರ್ಶನವಾದರೂ ಉತ್ತಮರೀತಿಯಿಂದ ಮಾಡಲ್ಪಟ್ಟಿತ್ತೆಂದು ಹೇಳಲಿಕ್ಕೆ ಅಡ್ಡಿ ಇಲ್ಲ. ಈ ಪ್ರದರ್ಶನದಲ್ಲಿ ಬಾದಾಮಿಯ ಮಾಡೆಲ್, ತಾಲೂಕಿನ ಮಾಡೆಲ್, ಹಿಂದುಸ್ತಾನದ ಮಾಡೆಲ್, ಬೇರೆ ಬೇರೆ ತರದ ಹಿಂದುಸ್ತಾನದ ನಕಾಶೆಗಳು, ಹುಡುಗರ ಕೈಕೆಲಸಗಳು, ನೀರಿನ ಪಂಪು, ಪವನಚಕ್ಕಿ, ಪಾನಚಕ್ಕಿ, ಹೈಡ್ರೋಜನದ ಪ್ರಯೋಗದ ಸಾಮಾನಗಳು, ಡ್ರಾಯಿಂಗ ನಮೂನೆಗಳು, ಗೋಕಾವಿಯ ಬಣ್ಣದ ಸಾಮಾನಗಳು ಇವೇ ಮೊದಲಾದವುಗಳು ಇಡಲ್ಪಟ್ಟಿದ್ದವು. ಇವೆಲ್ಲ ಬಹುಶಃ ಬಾದಾಮಿ, ಕಟಗೇರಿ, ಬಾಗಲಕೋಟೆಯ ಕನ್ನಡ ವ ಮರಾಠಿಶಾಲೆ, ಕಲಾದಗಿಯ ಕಂಟಿನ್ಯುಯೇಶನ್ ಕ್ಲಾಸಗಳಿಂದ ಬಂದಿದ್ದವು. ಈ ಎಲ್ಲ ಪ್ರದರ್ಶನವನ್ನು ನೋಡಿದ ಮೇಲೆ ಇವುಗಳಲ್ಲಿ ಸಾಧ್ಯವಾದವುಗಳನ್ನು ಪ್ರತಿಯೊಬ್ಬ ತಿಕ್ಷ್ಣಕರು ಮಾಡಬೇಕೆಂದು ಅಧ್ಯಕ್ಷರು ಸೂಚಿಸಿದರು.

ಸಾರಾಂಶವೇನಂದರೆ, ಈ ಸಮ್ಮೇಲನವು ಈ ಎರಡು ತಾಲೂಕ ಗಳಲ್ಲಿ ಅಶ್ರುತವೂ ಅಪೂರ್ವವೂ ಆಗಿತ್ತೆಂದು ಹೇಳಲಿಕ್ಕೆ ಅಡ್ಡಿ ಇಲ್ಲ.

ಂದ ಯಾವತ್ತು ಜನರ ಊಟ ಉಡಿಗೆಗಳು ಸರಿಯಾಗಿ ಆಗುವಂತೆ ಳ್ಳಿಯ ಮಾಸ್ತರರು ಮೊದಲೇ ಸುವ್ಯವಸ್ಥೆಯನ್ನು ಇಟ್ಟಿದ್ದರು. ಆದ ಂದ ಸಮ್ಮೇಲನದ ಯಾವತ್ತೂ ಕಾರ್ಯವು ಯಥಾಸಾಂಗವಾಗಿ ಜರು ಗಿತು.

ಓರ್ವಪ್ರೇಕ್ಷಕ.

ಮೆ|| ಕನ್ನಡ ಶಾಲಾಪತ್ರಕರ್ತರ ಸನ್ನಿಧಿಗೆ:—

ಮೋಟೇಬೆನ್ನೂರ ಶಾಲಾ ಹೆಡ್ಡಮಾಸ್ತರರ ವಿನಂತಿ. ಕೆಳಗೆ ಬರೆದ ಸಂಗತಿಯನ್ನು ತಮ್ಮ ಅಂದವಾದ ಶಾಲಾಪತ್ರಿಕೆಯಲ್ಲಿ ಮುದ್ರಿಸುವ ಮೆ|| ಆಗಬೇಕೆಂದು ಪ್ರಾರ್ಥಿಸುವೆನು:—

ತಾರೀಖು ೧೯-೬-೧೯೧೬ನೇ ದಿವಸ ಮುಂಜಾನೆ ಮು. ರಾ. ರಾ. ಹಾವೇರಿಯ ಗ್ರಾಮಸ್ಥರೂ, ಅಲ್ಲಿಯ ಮು. ಪಾ. ಮೆಂಬರ ಮು. ರಾ. ರಾ. ಮಲ್ಲಪ್ಪಾ ಶಿದ್ದಪ್ಪಾ ಚೂರಿ ಇವರೂ ಅಕಸ್ಮಾತ್ ನಮ್ಮ ಶಾಲೆಗೆ ಬಂದು ಯಾವತ್ತೂ ಕೆಲಸಗಳನ್ನು ಮನಮುಟ್ಟಿ ನೋಡಿ ವ್ಹಿ. ಬುಕ್ಕಿನಲ್ಲಿ ಉತ್ತಮ ಶರಾ ಬರೆದಿರುವರು. ಇದರಲ್ಲಿ ಸದ್ಯಕ್ಕೆ ಹಾವೇರಿಯ ಪಾಟೀ ಲಕಿ ಮಾಡುವವರೂ, ನಮ್ಮಲ್ಲಿಯ ಸ್ಕೂಲ ಕವಿಾಟಿದಾರರೂ ಆದ ಮು. ರಾ. ರಾ. ಬಸಪ್ಪಾ ಬನಪ್ಪಾ ಸಂಕಣ್ಣನವರ ಇವರು ಈಗ ನಮ್ಮಲ್ಲಿರುವ ತಾಲೀಮು ಮುಲಕಂಬವು ಹಳೆಯದಾಗಿ ತಾಲೀಮು ಮಾಡಲಿಕ್ಕೆ ಅಯೋ ಗ್ಯವಾದದ್ದನ್ನು ಕಂಡು ಹೊಸ ಕಂಬವನ್ನು ತರಿಸಿಕೊಳ್ಳುವದಕ್ಕಾಗಿ ೧೦ ರೂ. ಗಳನ್ನು ಉಚಿತವಾಗಿ ಕೊಟ್ಟರು. ಇದಲ್ಲದೆ ಇವರು ಈ ಮೊದಲು ನಮ್ಮ ಶಾಲೆಗೆ ೩೦-೬-೦ ಕಿವ್ಮತ್ತಿನ ಒಂದು ಹಾರ್ಮೋನಿಯ ಮವನ್ನು ಉಚಿತವಾಗಿ ಕೊಟ್ಟಿದ್ದಲ್ಲದೆ, ಕಾಲಕಾಲಕ್ಕೆ ಶಾಲೆಯ ಉಪಕ ರಣಗಳ ಉಪಯೋಗಕ್ಕಾಗಿಯೂ, ಇನಾಮು ವಗೈರೆ ಕೊಡುವದಕ್ಕಾ ಗಿಯೂ ಸರಾಸರಿ ೭೮ ರೂ. ಗಳನ್ನು ರೋಖು ಕೊಟ್ಟಿರುವರು. ಇವರು ನಮ್ಮ ಶಾಲೆಯ ಕವಿಾಟಿದಾರರಾದ ೩ ವರ್ಷಗಳಲ್ಲಿ ೭೦ ರೂ. ಗಳ ಕಾಣಿಕೆಯನ್ನು ವಿದ್ಯಾಭಿವೃದ್ಧಿಯ ಕೆಲಸಕ್ಕೆ ಕೊಟ್ಟದ್ದಕ್ಕಾಗಿ ನಾನು ಈ ಮಹನೀಯರ ಉಪಕಾರವನ್ನು ಮರೆಯಲಾರೆನು. ಇವರಂತೆ ಉಳಿದ

ವರಾದರೂ ವಿದ್ಯಾಭಿವೃದ್ಧಿಯ ಕಾರ್ಯಕ್ಕೆ ತುಂಬಾ ಸಹಾಯ ಮಾಡ
ವರೆಂದು ನಂಬಿರುವೆನು. ವಿಸ್ತಾರಕ್ಕೆ ಕ್ಷಮೆ ಇರಲಿ.

ಮು. ಮೋಟೇಬೆನ್ನೂರ
ತಾ|| ರಾಣೇಬೆನ್ನೂರ
ತಾ||೧-೭-೧೯೧೬ ನೇ ಇಸವಿ.

ಗ. ರಾ. ಐರಣಿ
ಹೆ. ಪೂ. ಕ. ಗ. ಹು ಶಾಲಾ
ಮೋಟೇಬೆನ್ನೂರ.

ಪತ್ರಗಳ ಸಾರಾಂಶವು.

ಕರ್ಜಗಿ ತಾಲೂಕ ಹಂದಿಗನೂರ ಶಾಲೆಯನ್ನು ತಾರೀಖು ೨೦-೯-೧೯೧೬ನೇ ದಿವಸ "ಶ್ರೀಮಂತ ಬೊಡ್ಡ ಮುರಿಗೆಪ್ಪನವರು, ಬಿ. ವೇಸಾಯಿ ಸಂಸ್ಥಾನ ಹಂದಿಗನೂರ" ಇವರು ನೋಡಲಿಕ್ಕೆ ಬಂದಾಗ ಶಾಲೆಯ ಉಪಯೋಗಕ್ಕಾಗಿ ೫ ರೂಪಾಯಿಗಳನ್ನು ಕೊಟ್ಟರೆಂತಲೂ ಈ ಮೊದಲು ಇವರ ತಮ್ಮಂದಿರಾದ ಸಣ್ಣ ಮುರಿಗೆಪ್ಪನವರೂ ಊರೊಳಗಿನ ಕೆಲವರು ಸಭ್ಯಗೃಹಸ್ಥರೂ ಕೂಡಿ ೧೩ ರು. ಬೆಲೆ ಬಾಳುವ ಒಂದು ಗಡಿಯಾರವನ್ನು ಶಾಲೆಯ ಉಪಯೋಗಕ್ಕಾಗಿ ಕೊಂಡು ಕೊಟ್ಟಿರುವರೆಂತಲೂ ಆ ಶಾಲೆಯ ಮಾಸ್ತರರು ಬರೆಯುತ್ತಾರೆ.

ರೋಣ ತಾಲೂಕ ಹೊಳೆ ಮಣ್ಣೂರ ಶಾಲೆಯ ತೀಕ್ಷ್ಣಕರಾದ ಅ. ಆ. ಮುಂಟಗಣಿಕರ ಇವರು ರವಿವಾರಕ್ಕೊಮ್ಮೆ ನೈತಿಕ ತೀಕ್ಷ್ಣಣದ ಮೇಲೆ ಬೇರೆ ಬೇರೆ ಪಾಠಗಳನ್ನು ರಚಿಸಿ ಉಪದೇಶ ಮಾಡುತ್ತಿರುವರು. ಒಗಡೆಯಲ್ಲಿ ಪರಸ್ಪರ "ಸಹಾಯಕಾರಕಪದ್ಧತಿ" ಎಂಬ ವಿಷಯವನ್ನು ಕುರಿತು ಅವರು ಹೇಳಿದ ಉಪದೇಶವು ಒಳ್ಳೇ ಪರಿಣಾಮಕಾರಕವಾದ್ದರಿಂದ ಅದರ ಸ್ಮಾರಕಾರ್ಥವಾಗಿ ವಿದ್ಯಾರ್ಥಿಗಳೆಲ್ಲರೂ ಕೂಡಿ ತಮ್ಮ ಕೈಲಾದ ಮಟ್ಟಿಗೆ ವಂತಿಗೆಯನ್ನು ಕೊಟ್ಟು ಒಟ್ಟು ೧೦ ರೂ. ಮಾಡಿ ಅದರಿಂದ ಒಂದು ಜಾಂಗುಟೆಯನ್ನು ಶಾಲೆಯ ಉಪಯೋಗಕ್ಕಾಗಿ ತಂದರು. ಸ್ಥಳಾನನುಕೂಲಮೂಲಕ ಮೂರು ಕಡೆಗೆ ಹಾಕಲ್ಪಡುತ್ತಿದ್ದ ಆ ಶಾಲೆಯ ವ್ಯವಸ್ಥೆಯನ್ನು ಕಾಯ್ದುಕೊಳ್ಳುವದಕ್ಕೆ ಅನುಕೂಲವಾಯಿತು. ಅದರಿಂದ ಅವರ ಗುರುಗಳಾದ ಮುಂಟಗಣಿಕರವರು ಆನಂದಭರಿತರಾಗಿ "ದೇವರು ನಿಮಗೆ ಮುಂದೆ ಇದೇ ರೀತಿಯಲ್ಲಿ

ಕಾರ್ಯ ಮಾಡುವ ಬುದ್ಧಿಯನ್ನು ಕೊಡಲೆಂದು ಆಶೀರ್ವದಿಸಿದರು. ಎಂದು ಆ ಶಾಲೆಯ ವಿದ್ಯಾರ್ಥಿಗಳು ಬರೆಯುತ್ತಾರೆ.

ಮುದ್ದೇಬಿಹಾಳ ಶಾಲೆಯ ವಿದ್ಯಾರ್ಥಿಗಳಲ್ಲಿ ಕೆಲವರು ಒಂದು ವಾಚನಾಲಯವನ್ನು ಸ್ಥಾಪಿಸಬೇಕೆಂದು ಬಯಿಸಿ, ತಮ್ಮ ಪಾಲಕರ ಅನುಮತಿಯನ್ನು ಪಡೆದು ಕೆಲಕೆಲವು ವಾಚನಯೋಗ್ಯವಾದ ಪುಸ್ತಕಗಳನ್ನು ತಂದು ಆರಂಭಕ್ಕೆ ಸುಮಾರು ೬೫ ಪುಸ್ತಕಗಳುಳ್ಳ ಗ್ರಂಥಾಲಯವನ್ನು ತಾ॥೭ಂನೇ ಜೂನ ಸನ್ ೧೯೧೫ನೇ ದಿವಸ ಪ್ರಾರಂಭಿಸಿದರು.

ಆ ಶಾಲೆಯ ಅಸಿಸ್ಟಂಟ ಮಾಸ್ತರರಾದ ಮಿ. ಕೋರಬು ಇವರು ಆ ವಾಚನಾಲಯದ ಪ್ರೆಸಿಡೆಂಟರಾದರು. ಮುಂದೆ ಕ್ರಮಕ್ರಮವಾಗಿ ಆ ವಾಚನಾಲಯವು ಬೆಳೆಯುತ್ತ ಹೋಗಿ, ತಾ॥೧೦ನೇ ಸಪ್ಟಂಬರ ದಿವಸ ಅದರಲ್ಲಿ ೭೪ ಪುಸ್ತಕಗಳು, ಮುಂದೆ ತುಸು ದಿವಸಗಳಲ್ಲಿಯೇ ತುಸು ಕಡಿಮೆ ನೂರು ಪುಸ್ತಕಗಳು ಕೂಡಿರುವವಲ್ಲದೆ ಈಗ ಆರೇಳು ಮಾಸಿಕ ಪುಸ್ತಕಗಳೂ ಆ ವಾಚನಾಲಯಕ್ಕೆ ಬರುವವು. ರಾ॥ ರಾ॥ ಅಣ್ಣಾರಾವ ವಕೀಲ, ಮೆ॥ ಸಬ್‌ಜಜ್ಜ ಬ್ಯೆಂದೂರಕರ, ಮೆ॥ ಡೆ॥ ಎ॥ ಇನಸ್ಪೆಕ್ಟರ ಕುಲಕರ್ಣಿ, ಮೊದಲಾದವರು ಆ ವಾಚನಾಲಯವನ್ನು ನೋಡಿ ಸದಭಿಪ್ರಾಯಗಳನ್ನು ಪ್ರಕಟಿಸಿ ಅದಕ್ಕೆ ಸರಕಾರದಿಂದ ಆಶ್ರಯ ದೊರೆಯುತಕ್ಕದ್ದೆಂಬ ವಿಚಾರವನ್ನು ವ್ಯಕ್ತಪಡಿಸಿರುವರು. ರವಿವಾರಕ್ಕೊಮ್ಮೆ ಒಂದು ವಾರ ಮುದ್ದತಿನಿಂದ ಪುಸ್ತಕಗಳು ವಿದ್ಯಾರ್ಥಿಗಳಿಗೆ ದೊರೆಯುವವು. ಕೆಲವರು ವಿದ್ಯಾರ್ಥಿಗಳು ಓದಿದ್ದರ ಸಾರಾಂಶವನ್ನು ಬರೆದಿಡುವರು. ಪ್ರೆಸಿಡೆಂಟರು ವಿದ್ಯಾರ್ಥಿಗಳಲ್ಲಿ ಸಂಘಶಕ್ತಿಯು ಹೆಚ್ಚಾಗುವಂತೆ ಮ್ಯಾನೇಜಿಂಗ ಕಮಿಟಿ ಮುಂತಾದವುಗಳನ್ನು ಏರ್ಪಡಿಸಿ, ಎಲ್ಲ ಕೆಲಸಗಳನ್ನು ವಿದ್ಯಾರ್ಥಿಗಳಿಂದಲೇ ಮಾಡಿಸುವರು. ಧಾರ್ಮಿಕರೆಂದು ಪ್ರಸಿದ್ಧರಿರುವ ಪದಮಣ್ಣಾ ಹೂಲಿ ಎಂಬವರು ಗ್ರಂಥಸಂಗ್ರಹಾಲಯದ ಹಣದ ಜವಾಬುದಾರಿಯನ್ನು ವಹಿಸಿರುವರು. ನಿಂ ಶೆಲ್ಲಿಕೇರಿ ಎಂಬವರು ಗ್ರಂಥಾಲಯದ ಹೆಸರಿನ ಒಂದು ತಿಕ್ಕೆಯನ್ನು ತರಿಸಿಕೊಟ್ಟಿರುವರು. ಇತ್ಯಾದಿಯಾಗಿ ಆ ಗ್ರಂಥಾಲಯಕ್ಕೆ ಸೇರಿದ ಒಬ್ಬ ವಿದ್ಯಾರ್ಥಿಯು ಬರೆದಿರುತ್ತಾನೆ.

ಅಶೋಕನ ಚರಿತ್ರೆ.

[ಇದೇ ಸಂಚಿಕೆಯ ೮ ನೆಯ ಪುಟದಿಂದ ಮುಂದೆ ಸಾಗಿದ್ದು.]

ಅಶೋಕನ ಎರಡನೆಯ ವಿಶೇಷ ಸದ್ಗುಣವು ಯಾವದೆಂದರೆ:— ಅವನು ಧರ್ಮ ವಿಷಯದಲ್ಲಿ ತನ್ನ ಜನರಿಗೆ ಕೊಟ್ಟ ಸ್ವಾತಂತ್ರ್ಯವು. ಒಂದು ಶಿಲಾಲೇಖದಲ್ಲಿ ಅವನು ಆಜ್ಞಾಪಿಸಿದ್ದೇನಂದರೆ, "ಪರಧರ್ಮವನ್ನು ನಿಂದಿಸುವದು ಸರಿಯಾದದ್ದಲ್ಲ; ಮನುಷ್ಯನ ಉನ್ನತಿಯನ್ನುಂಟು ಮಾಡುವದು ಎಲ್ಲ ಧರ್ಮಗಳ ಹೇತುವಾಗಿರುವದರಿಂದ ನನ್ನ ಧರ್ಮವೇ ಶ್ರೇಷ್ಠ, ಉಳಿದವು ಕನಿಷ್ಠವಾದವುಗಳು ಎಂಬದರಲ್ಲಿ ಅರ್ಥವೇನಿದೆ?" ಅಶೋಕನ ಅಂತಃಕರಣವು ಬಹಳ ಕೋಮಲವಾಗಿತ್ತು. ಪಶುಪಕ್ಷಿ ಮೊದಲಾದ ಯಾವತ್ತು ಪ್ರಾಣಿಗಳಲ್ಲಿ ಅವನು ಅತ್ಯಂತ ದಯೆಯುಳ್ಳವನಾಗಿದ್ದನು. ಆ ಕಾಲದಲ್ಲಿ ಯಜ್ಞದಲ್ಲಿ ಪಶುಗಳನ್ನು ಬಲಿಕೊಡುವ ಸಾಂಪ್ರದಾಯವಿತ್ತು. ಅದನ್ನು ನಿಲ್ಲಿಸುವದಕ್ಕಾಗಿ ಅಶೋಕನು ಮಾಡಿದ ಪ್ರಯತ್ನವು ಎಷ್ಟೋ ಮಟ್ಟಿಗೆ ಸಫಲವಾಯಿತು. ಅಶೋಕನ ಆಳಿಕೆಯ ಮೊದಲಿನ ೮ ವರ್ಷಗಳವರೆಗೆ ರಾಜನ ಪಾಕಶಾಲೆಗೆ ಎಷ್ಟೋ ಜಿಗರೆಗಳೂ, ಪಕ್ಷಿಗಳೂ ಬೇಕಾಗುತ್ತಿದ್ದವು. ೯ ನೆಯ ವರ್ಷ ರಾಜನು ಈ ಪದ್ಧತಿಯನ್ನು ನಿಲ್ಲಿಸಿ ಎರಡಕ್ಕಿಂತ ಹೆಚ್ಚು ಜಿಗರೆಗಳನ್ನು ಕೊಲ್ಲಬಾರದೆಂದು ವಿಧಿಸಿದನು. ಮುಂದೆ ಐದು ವರ್ಷಗಳನಂತರ ಈ ಪದ್ಧತಿಯನ್ನು ಪೂರ್ಣವಾಗಿ ನಿಲ್ಲಿಸಿದನು. ಮತ್ತು ಶಾಖಾಹಾರೀ ಮನುಷ್ಯನಾದನು. ಅಶೋಕನ ಪೂರ್ವದಲ್ಲಿ ಮೌರ್ಯ ರಾಜರು ಪ್ರತಿವರ್ಷ ಮೃಗಯಾವಿಹಾರಕ್ಕೆ ಒಳ್ಳೇ ಉತ್ಸವದಿಂದ ಹೊರಟು ಸಾವಿರಾರು ಮೃಗಗಳನ್ನೂ, ಎಷ್ಟೋ ಪಶುಪಕ್ಷಿಗಳನ್ನೂ ಕೊಂದು ಪಟ್ಟಣಕ್ಕೆ ತೆಗೆದುಕೊಂಡು ಬರುತ್ತಿದ್ದರು. ಆದರೆ ನಿಷ್ಕಾರಣವಾಗಿ ಪಶುಪಕ್ಷಿಗಳು ಕೊಲ್ಲಲ್ಪಡಬಾರದೆಂದು ಅಶೋಕನು ಈ ಪದ್ಧತಿಯನ್ನು ಮುರಿದು ಅದರ ಬದಲಾಗಿ ಪ್ರಜೆಗಳ ಸ್ಥಿತಿಯು ಹೇಗದೆ? ಅವರಿಗೆ ಯಾವಯಾವ ಸಂಕಟಗಳು ಇರುತ್ತವೆ? ಅವು ಇಲ್ಲದಂತೆ ಮಾಡಬೇಕಾದರೆ ಯಾವ ಉಪಾಯಗಳನ್ನು ಮಾಡಬೇಕು? ಇವೇ ಮೊದಲಾದ ಸಂಗತಿಗಳನ್ನು ತಿಳಕೊಳ್ಳುವದಕ್ಕಾಗಿ ಪ್ರತಿವರ್ಷ ತನ್ನ ರಾಜ್ಯದಲ್ಲಿ ಸಂಚರಿಸುವ ಕ್ರಮವನ್ನು ಪ್ರಾರಂಭಿಸಿದನು.

ಶಾಲಾ ಪತ್ರಿಕೆ, ಮೊದಲನೆಯ

ಶಾಲಾಪತ್ರಿಕೆ

ಸಂಪುಟ ೫೨ | ಮೇ ೧೯೧೬. | ಸಂಚಿಕೆ ೫.

ನೆಗಳೂರ ಕನ್ನಡ ಗಂಡು ಹುಡುಗರ ಶಾಲೆಯ ಪ್ರವೇಶಸಮಾರಂಭವು.

——[೦೦]——

[ಬರೆದು ಬಂದದ್ದು.]

ಈ ಹೊತ್ತಿನ ದಿವಸ ಈ ಹೊಸ ಶಾಲೆಯ ಬಾಗಿಲು ತೆರೆಯುವ ಸಮಾರಂಭವು ಈ ಭಾಗದ ಡಿ. ಡಿ. ಕಲೇಕ್ಟರರಾದ ಮೇ. ಡಿ. ಆರ್, ಮೊಬೆಡಜಿ ಎಮ್. ಏ. ಇವರ ಹಸ್ತದಿಂದ ಜರಗಿಸುವದರಲ್ಲಿ ಬಂತು. ಈ ಇವಾತು ಹೊಸ ತಾಲೂಕ ಕಚೇರಿಯು ನಮೂನೆಯಂತೆ ಇದ್ದು ಇದಕ್ಕೆ ಸರಕಾರದವರಿಂದ ೧೫೦೦೦ ರೂಪಾಯಿ ಖರ್ಚು ಮಾಡಲ್ಪಟ್ಟಿರುವದು. ಈ ವಿಷಯವಾಗಿ ಸರಕಾರದವರ ಅಭಿನಂದನವನ್ನು ಎಷ್ಟು ಮಾಡಿದರೂ ಕಡಿಮೆಯೇ ಇರುತ್ತದೆ.

ಈ ಸಮಾರಂಭಕ್ಕೆ ಸುತ್ತಲಿನ ಎಲ್ಲ ಜೊಡ್ಡ ಊರುಗಳ ಪ್ರಮುಖರೂ ಹಾವೇರಿ, ಕರ್ಜಗಿ, ಅಗಡಿಗಳಲ್ಲಿರುವ ಪ್ರಮುಖ ಜನರೂ ಬಂದಿದ್ದರು. ಅಜಮಾಸು ೪೦೦ ಮಂದಿ ಇತ್ತು. ಊರ ಜನರು ಈ ಸಭೆಗೆ ಎಲ್ಲ ರೀತಿಯಿಂದ ಮದ್ದತ ಮಾಡಿದ್ದರೂ ಆಶವಡೆ ಮೊದಲೇ ಬಂದು ಮುಕ್ಕಾಮಮಾಡಿ ಅವಿಶ್ರಾಂತ ಶ್ರಮ ತೆಗೆದುಕೊಂಡಂಥ ಮೆ. ಎಚ್. ಜಿ. ದೇಶಪಾಂಡೆ ಬಿ. ಎ. ಅಸಿ. ಡೆ. ಏ. ಇ. ಜಿ. ಧಾರವಾಡ ಇವರ ಪರಿಶ್ರಮವು ಒಡೆದು ಕಾಣುವಂತೆ ಇತ್ತು.

ಈ ಸಮಾರಂಭದ ಕಾಲದಲ್ಲಿ ಮೆ. ಸಾ. ಬ. ರವರು ಮಾಡಿದ ಭಾಷಣವು ಬಹಳೇ ಉಪದೇಶಪರವಾಗಿದ್ದದರಿಂದ ಅದನ್ನು ಅವರ ಪರವಾನಗಿಯನ್ನು ತೆಗೆದುಕೊಂಡು ತಮ್ಮ ಆಂದವಾದ ಮಾಸಿಕಪುಸ್ತಕದಲ್ಲಿ ಛಾಪಿಸಲಿಕ್ಕೆ ಕಳುಹಿಸಿಸುವೆನು. ಅದಕ್ಕೆ ಸ್ಥಳ ಕೊಡುವಿರೆಂದು ಪೂರ್ಣ ನಂಬಿದ್ದೇನೆ.

ಮೇ. ನಾ. ಬ. ರವರ ಭಾಷಣವು.

"ಸಭ್ಯಗೃಹಸ್ಥರೇ,

೧. ಈ ಶಾಲೆಯು ಉತ್ಪತ್ತಿ, ಅಭಿವೃದ್ಧಿ ಮತ್ತು ಮನೋರಂಜಕವಾದ ಇತಿಹಾಸದ ರಿಪೋರ್ಟನ್ನು ಈಗ ಮಿ. ದೇಶಪಾಂಡೆ ಇವರಿಂದ ಕೇಳಿದೆವು.

೨. ಕಳೆದ ಅರ್ಧ ಶತಕದಲ್ಲಿ ಈ ಶಾಲೆಯು ಹುಡುಗರ ಹಾಜರಿಯು ೩೦-೪೦ರಿಂದ ೧೭೬ ರವರೆಗೆ, ಅಂದರೆ ೧ಕ್ಕೆ ೪ ಪಟ್ಟಿನಿಂದ ಬೆಳೆದದೆ.

೩. ಇದೇ ಅವಧಿಯಲ್ಲಿ ಜನ ಸಂಖ್ಯೆಯಾದರೂ ೧೦೦ಕ್ಕೆ ೨೦೦ ರಂತೆ, ಅಂದರೆ ಮೊದಲಿನ ದುಪ್ಪಟ್ಟು ಬೆಳೆದಿರುತ್ತದೆ.

೪. ಶಾಲೆಗೆ ಹೋಗಲಿಕ್ಕೆ ಲಾಯಕ್ಕು ಇರುವ ೨೩೭ ಹುಡುಗರಲ್ಲಿ ಈ ಕನ್ನಡ ಶಾಲೆಗೆ ೧೭೦ ಹುಡುಗರು ಹೋಗುತ್ತಾರೆ.

೫. ತಮ್ಮ ಮಕ್ಕಳಿಗೆ ವಿದ್ಯೆಕಲಿಸುವ ಉತ್ಸಾಹದಿಂದಲೇ ಈ ಊರಲ್ಲಿ ಸ್ವತಂತ್ರ ಗೆರ್ಲ ಹಾಗೂ ಉರ್ದು ಸ್ಕೂಲುಗಳು ಸ್ಥಾಪಿಸಲ್ಪಟ್ಟಿವೆ. ಆ ಶಾಲೆಗಳಲ್ಲಿಯು ಹಾಜರಿಯು ಕ್ರಮವಾಗಿ ೩೭-೩೦ ಇರುವದು.

೬. ಇದರ ಮೇಲಿಂದ ಶಾಲೆಗೆ ಹೋಗಲಿಕ್ಕೆ ಲಾಯಕ್ಕು ಇರುವ ಎಲ್ಲ ಹುಡುಗರು ಒಂದು ಅಥವಾ ಮತ್ತೊಂದು ಶಾಲೆಯಲ್ಲಿ ಕಲಿಯುತ್ತಿರುವದಾಗಿ ತಿಳಿಯುತ್ತದೆ.

೭. ಇದು ಈ ಗ್ರಾಮದ ಭಾವೀ ಸ್ಥಿತಿಯ ಸುಚಿಹ್ನವಾಗಿರುತ್ತದೆ. ವಿದ್ಯೆ ಕಲಿಯಬೇಕೆಂಬ ಜನತ ಈಗಿನ ಮನೋವೃತ್ತಿಯು ಇನ್ನೊಂದು ತಲಾಂತರದವರೆಗೆ ಅಬಾಧಿತವಾಗಿ ನಿಂತರೆ, ದೇಶದಲ್ಲಿ ಎಂದೂ ಕೇಳದ, ಮನಸ್ಸಿನಲ್ಲಿ ಸಹಾ ಎಂದೂ ಬಾರದ ಸಂಗತಿ, ಅಂದರೆ ಓದು ಬರಹ ಅರಿಯದ ಮನುಷ್ಯನು ಒಬ್ಬನೂ ಇರದೆ ಇರುವ ಗ್ರಾಮದ ಉದಾಹರಣೆಯು ಈ ಗ್ರಾಮವಾಗುವದು.

೮. ಈ ತರದ ಉದಾಹರಣೆಯು ಎರಡನೇ ಯಾವದೇ ಗ್ರಾಮಕ್ಕಾದರೂ ಅನುಕರಣೀಯವಾಗುವದು.

೯. ಈ ದೇಶದ ಜನರಿಗೆ ತಟ್ಟುವ ಕೇಡುಗಳಲ್ಲಿ ಎಷ್ಟೋ ಕೇಡುಗಳ ಕಾರಣವು ಮೂರು ಸಂಗತಿಗಳ ನಿಬಿಡ ಅಜ್ಞಾನವೇ ಆಗಿರುವದು. ಅವು ಯಾವವೆಂದರೆ— (೧) ಓದೋಣ (೨) ಬರೆಯೋಣ (೩) ಲೆಕ್ಕಮಾಡೋಣ. ನನ್ನ ಅಲ್ಪಮತಿಯ ಪ್ರಕಾರ ಜನರಿಗೆ ಈ ಮೂರು ಸಂಗತಿಗಳ ಜ್ಞಾನಮಾಡಿಕೊಟ್ಟರೆ ಜಗತ್ತಿನ ಜನಾಂಗಗಳ ದೃಷ್ಟಿಯಲ್ಲಿ ಈ ದೇಶದ ಮಹತ್ವವು ಹೆಚ್ಚಾಗುವದು; ಮತ್ತು ಅದರಿಂದಲೇ ಅದಕ್ಕೆ ಯೋಗ್ಯ ಸ್ಥಳವು, ಅಂದರೆ ಮಾನವು ದೊರೆಯಹತ್ತುವದು.

೧೦. ಹುಡುಗರಿಗೆ, ಮತ್ತೂ ವಿಶೇಷವಾಗಿ ಹುಡುಗೆಯರಿಗೆ ವಿದ್ಯೆ ಕಲಿಸಬೇಕೆಂಬ ನಿಜವಾದ ಇಚ್ಛೆಯು ಮುಂದೆ ಸಿಗಬೇಕೆಂದು ಅಪೇಕ್ಷಿಸಬಹುದಾದ ಎಲ್ಲ ಸುಖಶಾಂತಿಗಳ ದ್ವಾರದ ಕೀಲಿಕೈಯಾಗಿರುವದು.

೧೧. ಕಾರಣ, ಈ ಹೊತ್ತಿನ ದಿವಸ ಈ ಶಾಲೆಯನ್ನು ತೆರೆಯುವ ಆನಂದದಾಯಕವಾದ ಕೆಲಸವನ್ನು ಮಾಡಲಿಕ್ಕೆ ನನ್ನನ್ನು ಕರೆದದ್ದು ಸುದೈವವೆಂದು ತಿಳಿಯುತ್ತೇನೆ.

೧೨. ಇದು ಪ್ರಾಯಮರಿ, ಎಂದರೆ ವಿದ್ಯೆಯ ಮೂಲತತ್ವಗಳನ್ನು ಕಲಿಸುವ ಶಾಲೆಯಿದ್ದು ದೊಡ್ಡ ಶಹರಗಳಲ್ಲಿ ಅಥವಾ ಪಟ್ಟಣಗಳಲ್ಲಿ ಇರುವ ಶಾಲೆಗಳಂತೆ ಸೆಕಂಡರಿ ಅಥವಾ ಹಾಯರ್, ಅಂದರೆ ಉಚ್ಚ ತರವಾದ ವಿದ್ಯೆಯು ಇಲ್ಲಿ ಕಲಿಸಲ್ಪಡುವದಿಲ್ಲ. ಆದರೆ ಸರ್ವಸಾಧಾರಣವಾದ ಎಲ್ಲ ಜನರಿಗೆ ಕೊಡತಕ್ಕ ಶಿಕ್ಷಣಕ್ಕೆ ಇದು ಪ್ರತ್ಯಕ್ಷವಾಗಿ ಸಂಬಂಧಿಸಿರುವದು.

೧೩. ಪ್ರತಿಯೊಬ್ಬನಿಗೆ ಉಚ್ಚತರದ ಶಿಕ್ಷಣ ಕೊಡುವದು ಸಂಭವನೀಯವಿರುವದಿಲ್ಲ. ಆದರೆ ನಾನು ಈ ಮೊದಲೇ ಹೇಳಿದ ಮೂರು ಸಂಗತಿಗಳ ಬಗ್ಗೆ ಶಿಕ್ಷಣಕೊಡುವದು ಶಕ್ಯವಿದ್ದು ನೀವು ಆ ಶಿಕ್ಷಣ ಕೊಡಲಿಕ್ಕೆ ಬೇಕು, ಮತ್ತು ಈ ಶಾಲೆಯಂಥ ಪೂರ್ಣ ಪ್ರಾಯಮರಿ ಶಾಲೆಯಲ್ಲಿ ಸಿಗುವಷ್ಟು ವಿದ್ಯೆಯ ಮೂಲತತ್ವಗಳನ್ನು ಕಲಿಯಲಿಚ್ಛಿಸುವವರಿಗೆ ಕಲಿಸಲಿಕ್ಕೇ ಬೇಕು.

೧೪. ಹುಡುಗರ ಮುಂದಿನ ಸೌಖ್ಯದ ಅಸ್ತಿವಾರವು ಇಂಥ ರೂ

ಳಿದರೆ ನೀವೆಲ್ಲರೂ ಅದಕ್ಕೆ ಒಪ್ಪುವಿರೆಂದು ನಾನು ನಿಶ್ಚಯವಾಗಿ ತಿ
ಯುತ್ತೇನೆ.

೧೫. ಈ ಸಮಾರಂಭವು ಜನರ ಮನಸ್ಸಿನಲ್ಲಿ ಪರಿಣಾಮಕ
ವಾಗಿ ಬಿಂಬಿಸುವಪ್ಪು ಮಹತ್ವವುಳ್ಳದ್ದಾಗಿರುವದೆಂದು ನಾನು ಬಹ
ಸಂತೋಷದಿಂದ ತಿಳಿಯುತ್ತೇನೆ. ಮುಖಂಡರಾದ ರಾ. ಸಾ. ಜೋ
ಳೇಕರ, ಅಪ್ಪಾಸಾಹೇಬ ಬಹದ್ದೂರ ದೇಸಾಯಿ, ಶಾಳಾಖಾತೆಯ ಇ
ನ್ಸ್ಪೆಕ್ಟರರು, ಮಲ್ಲರಡ್ಡಿ, ನಿಂಗನಗೌಡಾ ಇವರು ಈ ದಿವಸ ಇಷ್ಟು ದೆ
ಡ್ಡ ಸಮಾಜವನ್ನು ಕೂಡಿಸಿ, ಈ ಸಮಾರಂಭಕ್ಕೆ ಕೊಡತಕ್ಕ ಯೋಗ್ಯ
ವಾದ ಮಹತ್ವವನ್ನು ಕೊಟ್ಟಿದ್ದರಲ್ಲಿ ಅವರು ತಮ್ಮ ಸಾರಾಸಾರ ಬು
ದ್ಧಿಯನ್ನು ಬಹು ಯೋಗ್ಯವಾಗಿ ಉಪಯೋಗಿಸಿದರೆಂದು ನಾನು ತಿ
ಯುತ್ತೇನೆ. ಇದು ಇಂಥ ಹಳ್ಳಿವಾಡ ಪ್ರದೇಶದಲ್ಲಿ ಚಿರಸ್ಮರಣೀಯ
ವಾದ ಸಂಗತಿಯಾಗಿದೆ.

೧೬. ರಿಪೋರ್ಟಿನಲ್ಲಿ ನಮೂದಾದಂತೆ ಡೆಪ್ಯೂಟಿ ಏಜ್ಯುಕೇಶ
ಲ್ ಇನಸ್ಪೆಕ್ಟರರೂ, ಶಾಳಾ ಹೆಡ್ ಮಾಸ್ತರರೂ, ನಿರಪೇಕ್ಷ ಬುದ್ಧಿಯಿಂ
ಮಾಡಿದ ಪ್ರಯತ್ನಗಳ ಹೊರ್ತು ಈ ಉತ್ತಮವಾದ ಪರಿಣಾಮಗಳು
ಆಗಿಲ್ಲವೆಂದು ನಾನು ನಿಶ್ಚಯವಾಗಿ ತಿಳಿಯುತ್ತೇನೆ.

ಈ ರಿಪೋರ್ಟಿನಲ್ಲಿ ನಾಮಾಂಕಿತ ರಾ. ಬಾ. ರೊದ್ದ ಇವರ ಹೆ
ರು ಇದ್ದದ್ದು ನೋಡಿ ನನಗೆ ವಿಶೇಷ ಆನಂದವಾಗುತ್ತದೆ. ಯಾಕಂ
ರೆ, ಅವರು ಯಾವಾಗಲೂ ಈ ಶಿಕ್ಷಣದ ಕೆಲಸದಲ್ಲಿ, ತಮ್ಮ ತೀಕ್ಷ್ಣವಾ
ದ ಆಸಕ್ತಿಯನ್ನು ತೋರಿಸಿರುತ್ತಾರೆ; ಅವರು ಈ ದಿವಸ ಶಾಲೆಯನ್ನು
ತೆರೆಯುವ ಸಮಾರಂಭವನ್ನು ನೋಡಿದ್ದರೆ ನನಗೆ ಬಹಳೇ ಆನಂದವ
ಗುತ್ತಿತ್ತು. ಈಗ ಗ್ರಾಮದ ಸಾಂಪತ್ತಿಕ ಸ್ಥಿತಿಯಲ್ಲಿ ಹ್ಯಾಗೆ ಹೆಜ್ಜೆ
ಕಡಿಮೆಯಾಗುತ್ತದೆಂಬದನ್ನು ಹೇಳುವೆನು.

(೧) ವಿದ್ಯೆ ಕಲಿಸುವದರ ಕೊನೆಯ ಉದ್ದೇಶವು, ವಿದ್ಯೆ ಕಲಿ
ವರು ತಮ್ಮ ವ್ಯಾಪಾರ, ಉದ್ಯೋಗ, ಧಂದೆಗಳ ಕಡೆಗೆ ದುರ್ಲಕ್ಷ ಮಾ
ಡಿ, ಎರಡನೆಯವರ ಕುಂದುಗಳನ್ನು ಹುಡುಕಿ, ಅವರಿಗಿಂತಲೂ ತಾವು
ಶ್ರೇಷ್ಠರೆಂದು ತೋರಿಸುವದರ ಸಲುವಾಗಿ, ಜನರಲ್ಲಿ ಜಗಳ ಮತ್ತು ಪ
ವಾದಗಳನ್ನು ಹುಟ್ಟಿಸುವದಾಗಿರುತ್ತದೋ ? ಅಥವಾ ಅವರ ವಿಚಾ

ಶಕ್ತಿಯನ್ನು ಬೆಳಿಸಿ ಪ್ರತಿ ದಿವಸ ಅವರ ಸುತ್ತುಮುತ್ತು ಮತ್ತು ಅವರ ಇರುವಿಕೆಗೆ ಸಂಬಂಧಿಸಿರುವ ಸಂಗತಿಗಳ ಬಗ್ಗೆವಿಚಾರ ಮಾಡುವದಕ್ಕೆ ಅವರು ಶಕ್ತನಾಗಬೇಕೆಂದು ಇರುವದೋ ? ನೀವೇ ವಿಚಾರ ಮಾಡಿರಿ.

(೨) ಈ ಊರಲ್ಲಿ ಪಠವಡಿಗಳು ಮತ್ತು ಜಗಳವಿದ್ದು ಉತ್ತಮವಾದ ಕೆಲಸಗಳ ಕಡೆಗೆ ದುರ್ಲಕ್ಷ್ಯವಾಗುತ್ತದೆಂದು ಮೇಲಿಂದ ಮೇಲೆ ಕೇಳುತ್ತೇನೆ. ಪರಂತು ರಿಪೋರ್ಟಿನಲ್ಲಿರುವ ಅಂಕೆಗಳ ಮೇಲಿಂದಲೂ, ಈಗ ನಡೆದಿರುವ ಕೆಲಸಗಳ ಮೇಲಿಂದಲೂ ನೋಡುತ್ತಿರಲಿಕ್ಕೆ ಪ್ರಗತಿಗೆ ವಿರುದ್ಧವಾಗಿ ಹೋಗತಕ್ಕ ಚಿಹ್ನಗಳು ನನಗೆ ಕಾಣುವದಿಲ್ಲ.

(೩) ಪಠವಡಿಗಳೆಂದರೆ ಅಲ್ಲಲ್ಲಿ ಇರುವ ಸ್ವಲ್ಪ ಅಸಂತುಷ್ಟ ಜನರ ತಂಟೆಗಳಿರಬಹುದು. ಅಷ್ಟಕ್ಕೆ ಇಡೀ ಗ್ರಾಮವು ತುಂಟತನವುಳ್ಳದ್ದಾಗಿದೆ ಎಂದರೆ, ಸರಕಾರದ ಮದ್ದತಿನಿಂದ ಈ ಹೊತ್ತಿನ, ದಿವಸ ನಾವು ತೆರೆಯುವ ಉತ್ತಮವಾದ ಶಾಲೆಯ ಇಮಾರತನ್ನು ದೊರಕಿಸಿದ ಈ ಗ್ರಾಮದ ಶಾಂತವಾದ ಹಾಗೂ ಕಾಯಿದೇಶೀರವಾಗಿ ನಡೆಯುವ ಬಹುತೇಕ ಜನರಿಗೆ ಅಪಮಾನ ಮಾಡಿದಂತೆ ಆಗುತ್ತದೆ.

(೪) ಹೀಗೆ ಇದ್ದರೂ, ಈ ಗ್ರಾಮದ ಕೆಲವು ನಿವಾಸಿಗಳಲ್ಲಿ ವೈಮನಸ್ಯವಿರುವದೆಂಬ ಸಂಗತಿಯನ್ನು ನಾಕಬೂಲ ಮಾಡಲಿಕ್ಕೆ ಬರುವಂತೆಯಿಲ್ಲ. ಯಾಕಂದರೆ, ಈ ವೈಮನಸ್ಯದಿಂದ ವಿದ್ಯೆಯ ಹೊರತು ಉಳಿದ ಯಾವತ್ತೂ ಸಂಗತಿಗಳ ಪ್ರಗತಿಗೆ ಪ್ರತಿಬಂಧವಾಗಿರುತ್ತದೆ. ಕೋಆಪರೇಟಿವ್ಹ ಸೊಸಾಯಿಟಿ ಇಲ್ಲ; ಸ್ಯಾನಿಟರಿ ಬೋರ್ಡ ಹಾಗೂ ಲಾಯಬ್ರರಿ ಇಲ್ಲ. ಉಗಿರಂಟೆ ಮೊದಲಾದವುಗಳಿಂದ ತೀವ್ರ ಸಿಗತಕ್ಕಂಥ ಲಾಭಗಳನ್ನು ಮಾಡಿಕೊಂಡಿಲ್ಲ.

(೫) ಆದ ಕಾರಣ, ಪಠವಡಿಗಳನ್ನು ಹುಟ್ಟಿಸಿ ಆನಂದ ಪಡತಕ್ಕ ಜನರಿಗೂ ಅವರ ಮುಖಾಂತರವಾಗಿ ಜೀರೆ ಜನರಿಗೂ ಉದ್ವೇತಿಸಿ ಹೇಳುವದೇನಂದರೆ, ನೀವೆಲ್ಲರೂ ಈ ಹೊತ್ತಿನಂಥ ಮಂಗಲಕರವಾದ ಸುಮುಹೂರ್ತದ ಲಾಭ ತೆಗೆದುಕೊಂಡು ನಿಮ್ಮಲ್ಲಿರುವ ಮತಭೇಧಗಳನ್ನು ಬಣಗಳನ್ನೂ ಹೋಗಲಾಡಿಸುವದಕ್ಕೆ ಪ್ರಯತ್ನ ಮಾಡಬೇಕು; ಮತ್ತು ನೀವು ಹಿಂದಾದದ್ದನ್ನೆಲ್ಲ ಮರೆತು ನಿಮ್ಮ ಹುಡುಗರು ಶಾಲೆಯಲ್ಲಿ ಪರಸ್ಪರ ಪ್ರೇಮದಿಂದ ಇರುವಂತೆ, ನೀವಾದರೂ ಪರಸ್ಪರ ಪ್ರೇಮ

ದಿಂದ ಇರಬೇಕು. ಉದಾರವಾದ ಹಾಗು ವಿಶಾಲವಾದ ದೃಷ್ಟಿಯಿಂದ ನೋಡಿದರೆ, ನಿಮಗೆ ನಿಮ್ಮ ನ್ಯಾಯಗಳು ತೀರ ಕ್ಷುಲ್ಲಕವಾದ ಸಂಗತಿಗಳ ಬಗ್ಗೆ ಅವೆಯೆಂದು ತಿಳಿಯುವದಿಲ್ಲವೇ! ಇರಲಿ. ಇದಕ್ಕೆ ಇಷ್ಟು ಹೆಚ್ಚು ಮಹತ್ವಕೊಡುವ ಕಾರಣವಿಲ್ಲ.

ನಾನು ನನ್ನ ಭಾಷಣವನ್ನು ಮುಗಿಸುವದರೊಳಗೆ ಒಂದೇ ಮಾತನ್ನು ಹೇಳಬೇಕೆಂದು ಮಾಡಿರುತ್ತೇನೆ. ಈ ಗ್ರಾಮದ ಮಾನದಿಂದ ನೋಡಿದರೆ ಈ ಶಾಲೆಗೆ ನಾನು "ಅತಮನೆ" ಎಂದು ಅನ್ನುತ್ತೇನೆ. ಇದರ ಉಪಯೋಗವನ್ನು ಮಾತ್ರ ನೀವು ಯೋಗ್ಯ ರೀತಿಯಿಂದ ಮಾಡಿಕೊಳ್ಳಬೇಕೆಂದು ಅಪೇಕ್ಷೆಯದೆ. ಆದ್ದರಿಂದ ನೀವು "ಇನಾಕ್ಯುಲೇಶನ್" ದ ಪೂರ್ಣ ಲಾಭವನ್ನುಮಾಡಿಕೊಳ್ಳಬೇಕೆಂದು ನನ್ನ ಹೇಳಿಕೆಯದೆ. ಈ ದೇಶದ ಜನರ ಹಿತದ ಸಲುವಾಗಿ ನಮ್ಮ ದಯಾಳು ಇಂಗ್ಲಿಷ ಸರಕಾರದವರು ದಿನಾಲು ಒಂದಿಲ್ಲೊಂದು ಉಪಾಯವನ್ನು ಯೋಚಿಸುತ್ತ ನಡೆದಿರುವರು. ಅದರಲ್ಲಿ ಇನಾಕ್ಯುಲೇಶನ್‌ವು ಒಂದಾಗಿರುವದು.

(೧) ಊರಲ್ಲಿ ಪ್ಲೇಗ ಆದಾಗ್ಗೆ ಊರುಬಿಟ್ಟು ಹೊರಗೆ ಹೋಗುವ ಉಪಾಯವು ಇರಲಿಕ್ಕೆ ಇನಾಕ್ಯುಲೇಶನ್ ಯಾಕೆ ಮಾಡಿಸಿಕೊಳ್ಳಬೇಕೆಂದು ಕೆಲವರು ಕೇಳಬಹುದು. ಅದಕ್ಕೆ ಉತ್ತರವೇನಂದರೆ, ಊರುಬಿಡುವದು ನಿಜವಾದ ಉಪಾಯವಲ್ಲ. ಯಾಕಂದರೆ ಹೊರಗಿರುವ ಗುಡಿಸಲುಗಳಲ್ಲಿ ಸಹ ಪ್ಲೇಗ ಹಬ್ಬುವದು ನಜರಿಗೆ ಬರುತ್ತದೆ. ಇದಲ್ಲದೆ, ಊರುಬಿಟ್ಟು ಹೋಗುವದರಿಂದ ಶಾಲೆಯ ಮೇಲೆ ಕೆಟ್ಟ ಪರಿಣಾಮಗಳು ಆಗುವವು. ತಂದೆತಾಯಿಗಳು ಪ್ಲೇಗ ತಪ್ಪಿಸಿಕೊಳ್ಳಲಿಕ್ಕೆ ಊರುಬಿಟ್ಟು ಎರಡನೇ ಕಡೆಗೆ ಹೋದರೆ, ಹುಡುಗರು ಶಾಲೆಗೆ ಬರುವದಕ್ಕೆ ಮಾರ್ಗ ಉಳಿಯುವದಿಲ್ಲ. ೩,೪ ತಿಂಗಳುಗಳವರೆಗೆ ಶಾಲೆಯಲ್ಲಿ ಖಾಲಿ ಇರುವ ಖೋಲಿಗಳೂ ಖಾಲೀ ಇರುವ ಬೇಂಚ-ಖುರ್ಚಿಗಳೂ ದೃಷ್ಟಿಗೆ ಬೀಳುವವು. ಇದರಿಂದ ಚಿಕ್ಕ ಹುಡುಗರ ಮೇಲೆ ಆಗುವ ಕೆಡಕು ಪರಿಣಾಮಗಳನ್ನು ನಾನು ಹೇಳುವದಕ್ಕಿಂತ ನೀವೇ ವಿಚಾರಮಾಡಿ ನೋಡುವದು ಒಳ್ಳೆದು.

(೬) ಇನಾಕ್ಯುಲೇಶನ್ ಮಾಡಿಸಿಕೊಳ್ಳುವದರಿಂದ ಎಲ್ಲರೂ ತಮ್ಮ ನಿತ್ಯದ ಕೆಲಸಗಳನ್ನು ಮಾಡುವದಕ್ಕೆ ಅನುಕೂಲವಾಗುವದು, ಮತ್ತು ಊರಲ್ಲಿ ಪ್ಲೇಗು ಇಲ್ಲದಾಗ ಹುಡುಗರನ್ನು ಕಳಿಸುವಂತೆ ನಿರ್ಭಯದಿಂದ ಹುಡುಗರನ್ನು ಕಳಿಸಬಹುದು.

(೭) ಸಭ್ಯಗೃಹಸ್ಥರೇ, ಪ್ರಾಯಮುರೀ, ಅಂದರೆ ಈ ಮೂಲ ಶಿಕ್ಷಣವು ಮುಂದಿನ ಹಾಯಸ್ಕೂಲಿನ, ಸೇಕಂಡರೀ ಸ್ಕೂಲಿನ, ಕಾಲೇಜದ, ಒಕ್ಕಲತನದ, ವ್ಯಾಪಾರದ, ಔದ್ಯೋಗಿಕ ಶಿಕ್ಷಣದ ಪಾಯವಾಗಿರುತ್ತದೆ. ಆದ್ದರಿಂದ ಪ್ರತಿವರ್ಷ ಪ್ಲೇಗದಿಂದ ಶಿಕ್ಷಣಕ್ಕೆ ಬಡಿಯುವ ದಕ್ಕೆಯನ್ನು ಬಂದು ಮಾಡುವದೂ, ಶಕ್ಯವಿದ್ದಲ್ಲಿ ಈ ದಕ್ಕೆಯನ್ನು ತಗಲದಂತೆ ಮಾಡಿ ಈ ಪಾಯವನ್ನು ಘಟ್ಟಿ ಮಾಡುವದೂ ಅತ್ಯಾವಶ್ಯವಾದ ಕರ್ತವ್ಯವಾಗಿರುತ್ತದೆ.

(೮) ಇನ್ನು ನಮಗೆ ಸರಕಾರೀ ಹಣಾ ದೊರಕಿಸಿ ಕೊಟ್ಟಿಂಥ ಶಾಳಾಖಾತೆಯ ಅಧಿಕಾರಸ್ಥರ, ಹಾಗೂ ಈ ಸುಂದರವಾದ ಇಮಾರತನ್ನು ಮಾಡಿಕೊಟ್ಟ ಪಬ್ಲಿಕವರ್ಕ್ಸ ಖಾತೆಯ ಅಧಿಕಾರಸ್ಥರ ಅಭಾರವನ್ನಿಸುವದು ಉಳಿದಿದ್ದು ಅದನ್ನು ತಮ್ಮೆಲ್ಲರ ಅನುಮತಿಯಿಂದ ಮಾಡುತ್ತೇನೆ.

(೯) ಈ ಇಮಾರತಿಗೆ ೧೩೦೦೦ ರೂಪಾಯಿಗಳು ಖರ್ಚಾಗಿರುತ್ತದೆ. ಮತ್ತೂ ಈ ತಾಲೂಕೆಯ ಯಾವ ಗ್ರಾಮದಲ್ಲಿಯೂ ಈ ತರದ ಪ್ರಾಯಮರಿ ಶಾಲೆಯೂ ಇಲ್ಲವೆಂದು ಸ್ಪಷ್ಟವಾಗಿ ಹೇಳುತ್ತೇನೆ. ಈ ಪ್ರದೇಶದಲ್ಲಿ ಇಂಥಾ ಶಾಲೆಯನ್ನು ದೊರಕಿಸುವ ಮಾನವು ನಿಮಗೆ ಮೊದಲು ಸಿಕ್ಕಬಗ್ಗೆ ನಾನು ನಿಮ್ಮನ್ನು ಅಭಿನಂದಿಸುತ್ತೇನೆ. ಈಗ ನಾನು ಈ ಶಾಲೆಯು ಈಹೊತ್ತಿನಿಂದ ತೆರೆಯಿತೆಂದು ಹೇಳುತ್ತೇನೆ.

ಜಗದ್ವ್ಯಾಪಕವಾದ ಭಯಂಕರ ಯುದ್ಧ ನಡೆದಿದ್ದರೂ ನಿಮಗೆ ಉತ್ತಮ ತರದ ಬೆಳೆಗಳು ಬಂದಿವೆ. ಅದರಿಂದ ನಿಮಗೆ ಸುಖಶಾಂತಿಗಳು ದೊರೆಯಲೆಂದು ಆಶಿಸುತ್ತೇನೆ. ಮತ್ತು ಈ ಯುದ್ಧದಲ್ಲಿ ನವ ಬ್ರಿಟಿಶ್ ರಾಜರಿಗೆ ಪೂರ್ಣ ಜಯ ಸಿಕ್ಕು ಇದು ಬೇಗ ಮುಗಿಯಲೆಂದು ದೇವರನ್ನು ಪ್ರಾರ್ಥಿಸುತ್ತೇನೆ. ಮತ್ತು ಅದರಲ್ಲಿ ನೀವಾದರೂ ನನ ಸಂಗಡಿಗರಾಗಿರುವಿರೆಂದು ನನಗೆ ನಂಬಿಗೆ ಇದೆ."

ಇಷ್ಟಾದನಂತರ ಬಕ್ಷೀಸು, ಮಿಠಾಯಿಗಳನ್ನು ಹಂಚಿದರು, ಹಾಗೂ ಹಾರ ತುರಾಯಿ ಅತ್ತರ ಗುಲಾಬ ಮೊದಲಾದವುಗಳು ಕೊಡುವದರಲ್ಲಿ ಬಂದವು.

ಕೊನೆಗೆ ಹುಡುಗರು ರಾಷ್ಟ್ರಗೀತವನ್ನು ಅಂದರು. ಆ ಮೇಲೆ ಬಾದಶಹರ ಜಯಜಯಕಾರದಬಗ್ಗೆ ತ್ರಿವಾರ ಜಯಘೋಷವಾಗಿ ಸಭೆಯು ವಿಸರ್ಜನವಾಯಿತು.

S. G. HARALAPUR,

ಬಿಜಾಪುರ ಜಿಲ್ಹೆಯ ಬಾಗೇವಾಡಿ ತಾಲೂಕಿನಲ್ಲಿ ಕೂಡಿದ ಸಮ್ಮೇಲನ.

ಈ ಭಾಗದ ಅ. ಡೆಪ್ಯೂಟಿ ಇನ್ಸಪೆಕ್ಟರರಾದ ಮಿ ಜಿ. ಹ್ಹೀ. ಕೊಪ್ಪರ ಇವರು ರಾ. ಸಾ. ಆರ್, ಎಮ್. ಮಹಿಸಿ ಡೆಪ್ಯೂಟಿ ಎ. ಇನ್ಸ ಪೆಕ್ಟರ ಇವರ ಅಪ್ಪಣೆಯಂತೆ ಮೊದಲೇ ಬಂದು ಮಾಡಿದ್ದರು.

ಪ್ರಭುಲೀಲೆ ಅತ್ಯಗಾಢ! ಬಾಗೇವಾಡಿಯಲ್ಲಿ ಇದೇ ವೇಳೆಗೆ ಪ್ಲೇಗ ಆದಕಾರಣ ಅಲ್ಲಿ ನೆರೆಸುವದು ಸಾಧ್ಯವಲ್ಲದ್ದರಿಂದ ಇದೇ ತಾಲೂಕ ಮುತ್ತಗಿಯಲ್ಲಿ ಕೂಡಿಸಬೇಕೆಂದು ಅಪ್ಪಣೆಯಾಗಿ ವ್ಯವಸ್ಥೆ ಮಾಡಲ್ಪಟ್ಟಿತು.

ಮುತ್ತಗಿ ಗ್ರಾಮದ ತಾಲಾ ಇಪ್ಪತ್ತಾರು ಸಣ್ಣದಿದ್ದದರಿಂದ ಶಾಲೆಯ ಕಂಪೌಂಡದಲ್ಲಿ ಅಲೂರ ಸಭ್ಯಗೃಹಸ್ಥರ ನೆರವಿನಿಂದ ಅಲ್ಲಿಯ ಮಾಸ್ತರ ಮಿ. ಗಣೇಶಪಂತ ಗೋಡಬೋಲೆಯವರು ಉತ್ತಮವಾದ ಮಂಟಪವನ್ನು ಕಟ್ಟಿಸಿ ತಳಿರು, ತೋರಣ, ಪತಾಕೆಗಳಿಂದಲೂ, ಅಂದವಾದ ಸುಂದರ ಅಕ್ಷರಗಳಿಂದಲೂ ಚಂದಗೊಳಿಸಿದ್ದರು.

ಸಮ್ಮೇಲನದ ಕಾರ್ಯದರ್ಶಿಗಳಾದ ಮ. ರಾ. ರಾ. ಮಧ್ವ ವೆಂಕಟೇಶ ಯಳವತ್ತಿ ಹೆ. ಮಾ. ಬಾಗೆವಾಡಿ ಇವರು ಸಭೆಗೆ ಬಂದ ಶಿಕ್ಷಕರ ಹಾಗೂ ಸಭ್ಯಗೃಹಸ್ಥರ ಸ್ವಾಗತವನ್ನು ಮಾಡಿ ಸಮ್ಮೇಲನದ ಉದ್ದೇಶವನ್ನು ಹೇಳಿದರು. ಮತ್ತು ಮುತ್ತಗಿ ಗ್ರಾಮದ ಜನರ ಶಿಕ್ಷಣ ಲಾಲಸೆಯನ್ನು ಬಣ್ಣಿಸಿ ಇಂಥ ಸುಮತಿಯನ್ನು ಪ್ರೇರಿಸಿದ ಆ ಗ್ರಾಮದ ಅಧಿದೈವತವಾದ ಶ್ರೀಲಕ್ಷ್ಮೀನೃಸಿಂಹ ದೇವರನ್ನು ಅಭಿವಂದಿಸಿದರು.

(ಮುಂದೆ ಇದೇ ಸಂಚಿಕೆಯ ೨೯ ನೆಯ ಪುಟದಲ್ಲಿ ನೋಡಿರಿ.)

ಪ್ರಕೃತಿವಿಮರ್ಶೆ.

(ಮೂರ್ತ ತಿಂಗಳಿಂದ ಮುಂದೆ ನಾಗಿದ್ದು.)

ಸೂಚನೆ:— ವಿವಿಧ ಕಾಂಡಗಳನ್ನು ವಿಮರ್ಶಿಸುವಾಗ ಈ ಪ್ರಕಾರ ಪಾಠಗಳನ್ನು ನಡಿಸಬಹುದು: — (೧) ಮೊದಲು ತೋಟಗಳಲ್ಲಿಯೂ, ವನಗಳಲ್ಲಿಯೂ ಸ್ವಂತ ಬಲದಿಂದ ಎತ್ತರಕ್ಕೆ ಬೆಳೆದು ಬರುವ ಗಿಡಗಳ ಕಾಂಡಗಳ ಲಕ್ಷಣಗಳನ್ನೂ, ಅವುಗಳ ಒಳಭೇದಗಳನ್ನೂ ನಿರೀಕ್ಷಿಸಬೇಕು. (೨) ಅನಂತರ ಎತ್ತರವಾಗಿ ಬೆಳೆದು ಬರದೆ, ಭೂಮಿಯ ಮೇಲೆ ಹರಡತಕ್ಕ ಅಥವಾ ಯಾವದಾದರೂ ಆಶ್ರಯಗಳ ಸಹಾಯದಿಂದ ಮೇಲಕ್ಕೆ ಬೆಳೆದು ಬರುವ ಬಳ್ಳಿಗಳನ್ನು ಲಕ್ಷಿಸಬೇಕು. ಇವೆರಡು ಪಂಗಡಗಳಿಗೆ ಇರುವ ವ್ಯತ್ಯಾಸಗಳನ್ನು ತಿಳಿಯಲು ಅವರು ನೋಡುವ ಮರ ಗಿಡಗಳ ಚಿತ್ರಗಳನ್ನು ಬರೆಯಬೇಕು. (೩) ಭೂಮಿಯ ಮೇಲ್ಭಾಗದಲ್ಲಿರುವ ಕಾಂಡಗಳ ರೂಪಾಂತರಗಳನ್ನು ನಿರೀಕ್ಷಿಸಿದ ನಂತರ ಭೂಮಿಯೊಳಗೆ ಬೆಳೆಯುವ ಕಾಂಡಗಳನ್ನು ಪರೀಕ್ಷಿಸಬೇಕು. ಬಟಾಟೆ, ಈರುಳ್ಳಿ, ಅರಶಿನ, ಮೊದಲಾದ ಗುಪ್ತಕಾಂಡಗಳನ್ನು ಚನ್ನಾಗಿ ನೋಡಿ ಅವುಗಳ ಲಕ್ಷಣಗಳನ್ನು ಸೂಚಿಸುವ ಹಾಗೆ ಅವುಗಳ ಚಿತ್ರಗಳನ್ನು ತೆಗೆಯಬೇಕು.

ಅಂದರೆ, ಕಾಂಡದ ವಿಷಯವಾದ ಪಾಠಗಳನ್ನು ಕಲಿಸುವಾಗ, ಮೂರು ನಾಲ್ಕು ವೇಳೆಗಳಲ್ಲಿ ಅಥವಾ ಅದಕ್ಕೂ ಹೆಚ್ಚಾಗಿ, ಶಾಲೆಯಿಂದ ಹೊರಗೆ ಮರಗಿಡಗಳ ಬಳಿಯಲ್ಲಿ ವಿದ್ಯಾರ್ಥಿಗಳನ್ನು ಕರೆದುಕೊಂಡು ಹೋಗಿ, ಕಾಂಡದ ಸ್ವಭಾವಗಳನ್ನು ಅವರು ನಿರೀಕ್ಷಿಸುವ ಹಾಗೆ ಮಾಡಬೇಕು. ಅವರು ಕಾಂಡಗಳ ಲಕ್ಷಣಗಳನ್ನು ಪ್ರತ್ಯಕ್ಷವಾಗಿ ನೋಡಿ ತಿಳಿದ ನಂತರ, ಅವ್ರಗಳ ಸಂಬಂಧವಾದ ವಿಶೇಷ ವಿಷಯಗಳನ್ನು ಶಾಲೆಯಲ್ಲಿ ವಿಚಾರ ಮಾಡಬಹುದು.

ಸಸ್ಯಗಳಲ್ಲಿ ಹವೆ, ಬೆಳಕು, ಇವು ಚನ್ನಾಗಿ ತಗಲುವಂತೆ ಊರ್ಧ್ವಮುಖವಾಗಿ ಬೆಳೆದು ಬರುವ ಭಾಗವು ಕಾಂಡವೆನಿಸುವದೆಂದು ಹಿಂದೆ ಹೇಳಲ್ಪಟ್ಟಿತು. ಅವರೆ, ಕಡಲೆ, ಮೊದಲಾದ ಬೀಜಗಳನ್ನು ನೀರಿನಲ್ಲಿ ಸ್ವಲ್ಪಕಾಲ ನೆನಸಿಟ್ಟರೆ, ಅವುಗಳಿಂದ ಮೊಳೆ ಹೊರಡುವದಷ್ಟೆ. ಒಂದು ಬೀಜದಿಂದ ಹೊರಡುವ ಮೊಳೆಯು ಆ ಸಸ್ಯದ ಬೇರಾಗಿ, ಬೀ

ಇಷ್ಟಾದನಂತರ ಬಕ್ಷೀಸು, ಮಿಠಾಯಿಗಳನ್ನು ಹಂಚಿದರು, ಹಾಗೂ ಹಾರ ತುರಾಯಿ ಅತ್ತರ ಗುಲಾಬ ಮೊದಲಾದವುಗಳು ಕೊಡುವದರಲ್ಲಿ ಬಂದವು.

ಕೊನೆಗೆ ಹುಡುಗರು ರಾಷ್ಟ್ರಗೀತವನ್ನು ಅಂದರು. ಆ ಮೇಲೆ ಬಾದಶಹರ ಜಯಜಯಕಾರದಬಗ್ಗೆ ತ್ರಿವಾರ ಜಯಘೋಷವಾಗಿ ಸಭೆಯು ವಿಸರ್ಜನವಾಯಿತು.

S. G. HARALAPUR,

ಬಿಜಾಪುರ ಜಿಲ್ಲೆಯ ಬಾಗೇವಾಡಿ ತಾಲೂಕಿನಲ್ಲಿ ಕೂಡಿದ ಸಮ್ಮೇಲನ.

ಈ ಭಾಗದ ಅ. ಡೆಪ್ಯೂಟಿ ಇನ್ಸಪೆಕ್ಟರರಾದ ಮಿ ಜಿ. ಹ್ವೀ. ಕೊಪ್ಪರ ಇವರು ರಾ. ಸಾ. ಆರ್, ಎಮ್. ಮಹಿಸಿ ಡೆಪ್ಯೂಟಿ ಎ. ಇನ್ಸ ಪೆಕ್ಟರ ಇವರ ಅಪ್ಪಣೆಯಂತೆ ಮೊದಲೇ ಬಂದು ಮಾಡಿದ್ದರು.

ಪ್ರಭುಲೀಲೆ ಅತ್ಯಗಾಧ! ಬಾಗೇವಾಡಿಯಲ್ಲಿ ಇದೇ ವೇಳೆಗೆ ಪ್ಲೇಗ ಆದಕಾರಣ ಅಲ್ಲಿ ನೆರೆಸುವದು ಸಾಧ್ಯವಲ್ಲದ್ದರಿಂದ ಇದೇ ತಾಲೂಕ ಮುತ್ತಗಿಯಲ್ಲಿ ಕೂಡಿಸಬೇಕೆಂದು ಅಪ್ಪಣೆಯಾಗಿ ವ್ಯವಸ್ಥೆ ಮಾಡಲ್ಪಟ್ಟಿತು.

ಮುತ್ತಗಿ ಗ್ರಾಮದ ಕಾಲಾ ಇವಾರತು ಸಣ್ಣದಿದ್ದದರಿಂದ ಶಾಲೆಯ ಕಂಪೌಂಡದಲ್ಲಿ ಆಲೂರ ಸಭ್ಯಗೃಹಸ್ಥರ ನೆರವಿನಿಂದ ಅಲ್ಲಿಯ ಮಾಸ್ತರ ಮಿ. ಗಣೇಶಪಂತ ಗೋಡಬೋಲೆಯವರು ಉತ್ತಮವಾದ ಮಂಟಪವನ್ನು ಕಟ್ಟಿಸಿ ತಳಿರು, ತೋರಣ, ಪತಾಕೆಗಳಿಂದಲೂ, ಅಂದವಾದ ಸುಂದರ ಅಕ್ಷರಗಳಿಂದಲೂ ಚಂದಗೊಳಿಸಿದ್ದರು.

ಸಮ್ಮೇಲನದ ಕಾರ್ಯದರ್ಶಿಗಳಾದ ಮು. ರಾ. ರಾ. ಮಧ್ವ ವೆಂಕಟೇಶ ಯಳವತ್ತಿ ಹೆ. ಮಾ. ಬಾಗೆವಾಡಿ ಇವರು ಸಭೆಗೆ ಬಂದ ಶಿಕ್ಷಕರ ಹಾಗೂ ಸಭ್ಯಗೃಹಸ್ಥರ ಸ್ವಾಗತವನ್ನು ಮಾಡಿ ಸಮ್ಮೇಲನದ ಉದ್ದೇಶವನ್ನು ಹೇಳಿದರು. ಮತ್ತು ಮುತ್ತಗಿ ಗ್ರಾಮದ ಜನರ ತಿಕ್ಷಣ ಲಾಲಸೆಯನ್ನು ಬಣ್ಣಿಸಿ ಇಂಥ ಸುಮತಿಯನ್ನು ಪ್ರೇರಿಸಿದ ಆ ಗ್ರಾಮದ ಅಧಿದೈವತವಾದ ಶ್ರೀಲಕ್ಷ್ಮೀನೃಸಿಂಹ ದೇವರನ್ನು ಅಭಿವಂದಿಸಿದರು.

(ಮುಂದೆ ಇದೇ ಸಂಚಿಕೆಯ ೨೯ ನೆಯ ಪುಟದಲ್ಲಿ ನೋಡಿರಿ.)

ಪ್ರಕೃತಿವಿಮರ್ಶೆ.

(ಮಾರ್ಚ ತಿಂಗಳಿಂದ ಮುಂದೆ ಸಾಗಿದ್ದು.)

ಸೂಚನೆ:— ವಿವಿಧ ಕಾಂಡಗಳನ್ನು ವಿಮರ್ಶಿಸುವಾಗ ಈ ಪ್ರಕಾರ ಪಾಠಗಳನ್ನು ನಡಿಸಬಹುದು: — (೧) ಮೊದಲು ತೋಟಗಳಲ್ಲಿಯೂ, ವನಗಳಲ್ಲಿಯೂ ಸ್ವಂತ ಬಲದಿಂದ ಎತ್ತರಕ್ಕೆ ಬೆಳೆದು ಬರುವ ಗಿಡಗಳ ಕಾಂಡಗಳ ಲಕ್ಷಣಗಳನ್ನೂ, ಅವುಗಳ ಒಳಭೇದಗಳನ್ನೂ ನಿರೀಕ್ಷಿಸಬೇಕು. (೨) ಅನಂತರ ಎತ್ತರವಾಗಿ ಬೆಳೆದು ಬರದೆ, ಭೂಮಿಯ ಮೇಲೆ ಹರಡತಕ್ಕ ಅಥವಾ ಯಾವದಾದರೂ ಆಶ್ರಯಗಳ ಸಹಾಯದಿಂದ ಮೇಲಕ್ಕೆ ಬೆಳೆದು ಬರುವ ಬಳ್ಳಿಗಳನ್ನು ಲಕ್ಷಿಸಬೇಕು. ಇವೆರಡು ಪಂಗಡಗಳಿಗೆ ಇರುವ ವ್ಯತ್ಯಾಸಗಳನ್ನು ತಿಳಿಯಲು ಅವರು ನೋಡುವ ಮರಗಿಡಗಳ ಚಿತ್ರಗಳನ್ನು ಬರೆಯಬೇಕು. (೩) ಭೂಮಿಯ ಮೇಲ್ಭಾಗದಲ್ಲಿರುವ ಕಾಂಡಗಳ ರೂಪಾಂತರಗಳನ್ನು ನಿರೀಕ್ಷಿಸಿದ ನಂತರ ಭೂಮಿಯೊಳಗೆ ಬೆಳೆಯುವ ಕಾಂಡಗಳನ್ನು ಪರೀಕ್ಷಿಸಬೇಕು. ಬಟಾಟೆ, ಈರುಳ್ಳಿ, ಅರಶಿನ, ಮೊದಲಾದ ಗುಪ್ತಕಾಂಡಗಳನ್ನು ಚನ್ನಾಗಿ ನೋಡಿ ಅವುಗಳ ಲಕ್ಷಣಗಳನ್ನು ಸೂಚಿಸುವ ಹಾಗೆ ಅವುಗಳ ಚಿತ್ರಗಳನ್ನು ತೆಗೆಯಬೇಕು.

ಅಂದರೆ, ಕಾಂಡದ ವಿಷಯವಾದ ಪಾಠಗಳನ್ನು ಕಲಿಸುವಾಗ, ಮೂರು ನಾಲ್ಕು ವೇಳೆಗಳಲ್ಲಿ ಅಥವಾ ಅದಕ್ಕೂ ಹೆಚ್ಚಾಗಿ, ಶಾಲೆಯಿಂದ ಹೊರಗೆ ಮರಗಿಡಗಳ ಬಳಿಯಲ್ಲಿ ವಿದ್ಯಾರ್ಥಿಗಳನ್ನು ಕರೆದುಕೊಂಡು ಹೋಗಿ, ಕಾಂಡದ ಸ್ವಭಾವಗಳನ್ನು ಅವರು ನಿರೀಕ್ಷಿಸುವ ಹಾಗೆ ಮಾಡಬೇಕು. ಅವರು ಕಾಂಡಗಳ ಲಕ್ಷಣಗಳನ್ನು ಪ್ರತ್ಯಕ್ಷವಾಗಿ ನೋಡಿ ತಿಳಿದ ನಂತರ, ಅವ್ರಗಳ ಸಂಬಂಧವಾದ ವಿಶೇಷ ವಿಷಯಗಳನ್ನು ಶಾಲೆಯಲ್ಲಿ ವಿಚಾರ ಮಾಡಬಹುದು.

ಸಸ್ಯಗಳಲ್ಲಿ ಹವೆ, ಬೆಳಕು, ಇವು ಚನ್ನಾಗಿ ತಗಲುವಂತೆ ಊರ್ಧ್ವಮುಖವಾಗಿ ಬೆಳೆದು ಬರುವ ಭಾಗವು ಕಾಂಡವೆನಿಸುವದೆಂದು ಹಿಂದೆ ಹೇಳಲ್ಪಟ್ಟಿತು. ಅವರೆ, ಕಡಲೆ, ಮೊದಲಾದ ಬೀಜಗಳನ್ನು ನೀರಿನಲ್ಲಿ ಸ್ವಲ್ಪಕಾಲ ನೆನಸಿಟ್ಟರೆ, ಅವುಗಳಿಂದ ಮೊಳೆ ಹೊರಡುವದಷ್ಟೆ. ಒಂದು ಬೀಜದಿಂದ ಹೊರಡುವ ಮೊಳೆಯು ಆ ಸಸ್ಯದ ಬೇರಾಗಿ, ಬೀ

ಜದ ಉಳದ ಭಾಗವು ಅದರ ಕಾಂಡವಾಗಿ ಬೆಳಕಿನ ಕಡೆಗೆ ಬೆಳೆಯುವದು. ನಾವು ಈ ಬೀಜಗಳನ್ನು ನೆಲದಲ್ಲಿ ನಟ್ಟರೆ, ಎರಡು ಮೂರು ದಿನಗಳಲ್ಲಿ ನೆಲದ ಮೇಲೆ ಹಸುರಾಗಿ ಕಾಣುವ ಮೊಳೆಯು ಬರುವದನ್ನು ನೋಡಿರುತ್ತೀವೆ. ಇದು ಕಾಲಕ್ರಮದಲ್ಲಿ ದೊಡ್ಡ ಸಸ್ಯವಾಗಿ ಇದರಲ್ಲಿ ಎಲೆ, ಹೂ, ಕಾಯಿಗಳು ಬರುವವು. ಒಂದೊಂದು ಸಸ್ಯದಲ್ಲೂ ಕಾಂಡವೆಂದು ಕರೆಯಲ್ಪಡುವ ಭಾಗವು ಏತಕ್ಕೆ ಭೂಮಿಯ ಹೊರಕ್ಕೆ ಬೆಳೆದು ಬರುವದೆಂದು ಕೇಳಿದರೆ, ಅದಕ್ಕೆ ಸೂರ್ಯನ ಪ್ರಕಾಶವೂ, ಹವೆಯೂ ಅವಶ್ಯಕವೆಂದು ಹೇಳಬಹುದು. ಗಿಡಗಳಲ್ಲಿ ಎಲೆಗಳ ಜೋಡಣೆಯನ್ನೂ, ತಮ್ಮ ಎಲೆಗಳಿಗೆ ಸೂರ್ಯನ ಬೆಳಕನ್ನು ಸಂಪಾದಿಸುವ ಉದ್ದೇಶದಿಂದ ಗಿಡಗಳು ಹುಡುಕತಕ್ಕ ಉಪಾಯಗಳನ್ನೂ ಲಕ್ಷಿಸಿದರೆ, ಕಾಂಡದ ಮುಖ್ಯವಾದ ಒಂದು ಕೆಲಸವು ತಿಳಿಯುವದು. ಅದೇನಂದರೆ:- ಎಲೆಗಳಿಗೂ ಶಾಖೆಗಳಿಗೂ ಆಧಾರವಾಗಿದ್ದು, ಅವುಗಳನ್ನು ಬಿಸಿಲಿಗೂ, ಗಾಳಿಗೂ ಹರಡುವದು. ಗಿಡಗಳ ಕಾಂಡಗಳ ರಚನೆಯು ಈ ಕೆಲಸಕ್ಕೆ ತಕ್ಕದ್ದಾಗಿಯೇ ಇರುವದು

ಗಿಡಗಳ ಕಾಂಡಗಳು ನಾನಾವಿಧಗಳಾಗಿ ಬೆಳೆಯುವದು ಎಂಥವರಿಗೂ ಸುಲಭವಾಗಿ ಗೋಚರವಾಗುವದು. ಕೆಲವು ಎತ್ತರವಾಗಿಯೂ, ಕೆಲವು ತಗ್ಗಾಗಿಯೂ, ಕೆಲವು ಒಂದೇ ದಂಟಾಗಿಯೂ, ಕೆಲವು ಹೆಚ್ಚಾಗಿ ಕವಲುಗಳುಳ್ಳವಾಗಿಯೂ, ಬೆಳೆಯುವವು. ಹಾಗೆಯೆ ಕೆಲವು ಊರ್ಧ್ವಮುಖಕ್ಕೆ ಬೆಳೆಯುತ್ತಲೂ, ಕೆಲವು ನೆಲದ ಮೇಲೆ ಹಬ್ಬುತ್ತಲೂ, ಕೆಲವು ಕಾಂಡಗಳು ಗಡುತರವಾಗಿಯೂ ಕೆಲವು ತೆಳುವಾಗಿಯೂ, ನಾನಾಪ್ರಕಾರವಾಗಿ ಕಾಣುತ್ತವೆ. ಗಿಡಗಳ ಕಾಂಡಗಳು ಹೇಗೆ ಬೆಳೆದರೂ, ಅವುಗಳ ಎಲೆಗಳಿಗೂ, ಶಾಖೆಗಳಿಗೂ ಬೆಳಕನ್ನೂ ಗಾಳಿಯನ್ನೂ ದೊರಕಿಸಿಕೊಳ್ಳುವದು ಅವುಗಳ ಉದ್ದೇಶ. ಈ ಪ್ರಯತ್ನದಲ್ಲಿ ಕೆಲವು ಊರ್ಧ್ವಮುಖಕ್ಕೆ ಎದ್ದು ಸ್ವಲ್ಪ ಅಥವಾ ಹೆಚ್ಚು ಎತ್ತರವಾಗಿ ಬೆಳೆಯುತ್ತವೆ. ಇದಕ್ಕೆ ನಿದರ್ಶನವಾಗಿ ಸಾಸಿವೆ, ಮೆಣಸಿನ ಗಿಡ, ಬದನೆ, ಬೆಂಡೆ, ಆಲ, ಹುಣಿಸೆ, ಬೇವು ಮೊದಲಾದವುಗಳನ್ನು ಹೇಳಬಹುದು. ಕೆಲವು ಸಸ್ಯಗಳಲ್ಲಿ ಕಾಂಡದ ದಂಟು, ಅದರಲ್ಲಿ ಬೆಳೆಯುವ ಎಲೆ, ಹೂ, ಕಾಯಿಗಳನ್ನು ಹೊತ್ತುಕೊಂಡು ಮೇಲಕ್ಕೆ ಬರು

ವಷ್ಟು ಗಾತ್ರವನ್ನು ಹೊಂದದೆ ಇರುವದರಿಂದ, ಗೆಣಸು, ಕುಂಬಳ, ಪಡವಲ ಮೊದಲಾದವುಗಳ ಹಾಗೆ ಭೂಮಿಯ ಮೇಲ್ಭಾಗದಲ್ಲಿಯಾಗಲಿ, ಇತರ ಆಧಾರಗಳ ಮೇಲೆಯಾಗಲಿ ಹಬ್ಬುವದು. ಆದುದರಿಂದ ಗಿಡಗಳ ಕಾಂಡಗಳನ್ನು ಎರಡು ಪಂಗಡಗಳನ್ನಾಗಿ ಲಕ್ಷಿಸಬಹುದು:- (೧) ತಮ್ಮ ಸ್ವಂತ ಬಲದಿಂದ ಎತ್ತರವಾಗಿ ಬೆಳೆದು ಬರುವ ಮರಗಿಡಗಳ ಕಾಂಡಗಳು. (೨) ಮೇಲಕ್ಕೆ ಏಳದೆ, ಭೂಮಿಯ ಮೇಲ್ಭಾಗದಲ್ಲಿ ಅಥವಾ ಆಧಾರಗಳ ಮೇಲೆ ಹಬ್ಬುತಕ್ಕ ಬಳ್ಳಿಗಳು.

(೧) ಸ್ವಂತಬಲದಿಂದ ಮೇಲಕ್ಕೆ ಬೆಳೆಯುವ ಸಸ್ಯಗಳು.

ಸಾಸಿವೆ, ಬದನೆ, ಆಲ, ಹುಣಿಸೆ ಮೊದಲಾದ ಸಸ್ಯಗಳು ತಮ್ಮ ಎಲೆ, ಶಾಖೆ, ಹೂ, ಕಾಯಿಗಳನ್ನು ಹೊತ್ತುಕೊಂಡು ಮೇಲಕ್ಕೆ ಬರುವವಷ್ಟೆ. ಇವುಗಳಲ್ಲಿ ಒಂದೊಂದು ಕಾಂಡವು ಹೊರತಕ್ಕ ಭಾರವು ಎಷ್ಟೆಷ್ಟು ಹೆಚ್ಚಾಗಿರುವದೋ, ಅಷ್ಟಷ್ಟು ಅದು ಗಾತ್ರದಲ್ಲೂ ಕಾಠಿನ್ಯದಲ್ಲೂ ವೃದ್ಧಿಹೊಂದಬೇಕಾದದ್ದು ಅವಶ್ಯಕ. ಕಾಂಡವು ಎಲೆಗಳನ್ನೂ ಶಾಖೆಗಳನ್ನೂ, ಒಂದು ತಕ್ಕಡಿಯ ಮಧ್ಯಭಾಗವು ಭುಜಗಳನ್ನು ಹಿಡಿದಿರುವಂತೆ ಹೊರುತ್ತಿರುವದರಿಂದ, ಅದು ಹೊರುವ ಭಾರವು ಹೆಚ್ಚಿದ ಹಾಗೆಲ್ಲ ಅದರ ಗಾತ್ರವು ಹೆಚ್ಚಲೇಬೇಕು.

ಸಾಸಿವೆ, ಬದನೆ, ಮದುಗುಣಿಕೆ, ಮೊದಲಾದ ಗಿಡಗಳಲ್ಲಿ ಶಾಖೆಗಳು ವಿಶೇಷವಾಗಿ ಬರದೆ ಇರುವದರಿಂದ, ಕಾಂಡದ ದಂಟು ಹೊರಬೇಕಾದ ಭಾರವು ಮಿತವಾಗಿರುವದು. ಈ ಸ್ವಭಾವಕ್ಕನುಗುಣವಾಗಿ ಈ ಸಸ್ಯಗಳ ಕಾಂಡಗಳು ತೆಳುವಾಗಿಯೂ, ಮೃದುವಾಗಿಯೂ, ಹಸುರಾಗಿಯೂ ಇರುತ್ತವೆ. ಇವು ಬಹಳ ಎತ್ತರವಾಗಿಯೂ ಬೆಳೆಯುವದಿಲ್ಲ. ಈ ತೆರನಾದ ಕಾಂಡಗಳುಳ್ಳ ಸಸ್ಯಗಳು ಸಾಮಾನ್ಯವಾಗಿ ಏಕವಾರ್ಷಿಕಗಳು. ಇವುಗಳನ್ನು ಓಷಧಿಗಳೆಂದು ಕರೆಯುವದು ರೂಢಿಯಾಗಿರುತ್ತದೆ. ಆಲ, ಹುಣಿಸೆ, ಬೇವು ಮೊದಲಾದವುಗಳು ಬಹಳವಾಗಿ ಕವಲೊಡೆದು, ಅವುಗಳಲ್ಲಿ ಎಲೆಗಳು ವಿಶೇಷವಾಗಿ ಬೆಳೆಯುವವು. ಇವೆಲ್ಲಾ ಸೇರಿದರೆ ಭಾರವು ಹೆಚ್ಚುವದಗಿಂದ, ಕಾಂಡದ ದಂಟು ಹೆಚ್ಚು ಭಾರವನ್ನು ಹೊರುವದಕ್ಕೆ ತಕ್ಕಂತೆ ಗಾತ್ರದಲ್ಲಿ ವೃದ್ಧಿಯನ್ನು ಹೊಂದುವದು. ಈ ಸಸ್ಯಗಳ ಕಾಂಡಗಳಲ್ಲಿ ಶಾಖೆಗಳೂ, ಎಲೆಗಳೂ ಬಹಳವಾಗಿರುವದ

ರಿಂದ ಅವುಗಳಿಗೆ ಸೂರ್ಯನ ಬೆಳಕನ್ನು ದೊರಕಿಸಿಕೊಳ್ಳುವದಕ್ಕೆ ಇವು ಎತ್ತರವಾಗಿಯೂ ಬೆಳೆಯುವವು. ಇವುಗಳಿಗೆ ಮಂದವಾದ ತೊಗಟೆಯೂ ಇರುವದು. ಈ ವಿಧವಾದ ಕಾಂಡಗಳನ್ನು ಹೊಂದಿರುವ ಸಸ್ಯಗಳೆಲ್ಲವು ಬಹುವಾರ್ಷಿಕಗಳು. ಇವುಗಳನ್ನು ಮರಗಳೆಂದು ಕರೆಯುತ್ತಾರೆ. ಕಾಂಡಗಳಲ್ಲಿ ಈ ಭೇದಗಳು ಎಂಥವರಿಗೂ ಸುಲಭವಾಗಿ ಗೋಚರವಾಗುತ್ತವೆ. ಇವೆರಡು ವಿಧಗಳಲ್ಲದೆ ಕಾಂಡಗಳಲ್ಲಿ ಮತ್ತೊಂದು ಬಗೆಯಾದವುಗಳನ್ನು ನಾವು ಲಕ್ಷಿಸಬಹುದು. ಮೇಲೆ ಹೇಳಿದ ಏಕವಾರ್ಷಿಕ ಅಥವಾ ದ್ವಿವಾರ್ಷಿಕ ಓಷಧಿಗಳಂತೆ ಒಂದೆರಡು ವರ್ಷ ಮಾತ್ರ ಬದುಕಿ ಸತ್ತುಹೋಗತಕ್ಕವುಗಳಾಗಲಿ ಬಹುವಾರ್ಷಿಕ ಮರಗಳಂತೆ ಬಹಳ ಕಾಲ ಬದುಕತಕ್ಕವುಗಳಾಗಲಿ ಆಗಿರದೆ ಕೆಲವು ವರ್ಷಗಳು ಜೀವಿಸತಕ್ಕ ಅನೇಕ ಸಸ್ಯಗಳಿರುತ್ತವೆ. ಇವುಗಳ ಕಾಂಡಗಳು ಓಷಧಿಗಳ ಕಾಂಡಗಳ ಹಾಗೆ ತೆಳುವಾಗಿಯೂ ಮೃದುವಾಗಿಯೂ ಹಸುರಾಗಿಯೂ ಇರದೆ, ಸ್ವಲ್ಪ ಮಂದವಾಗಿಯೂ ಕಠಿಣವಾಗಿಯೂ ತೊಗಟೆಯನ್ನೂ ಸಹ ಹೊಂದಿದವುಗಳಾಗಿಯೂ ಇರುತ್ತವೆ. ಆದರೆ ಇವು ಮರಗಳಷ್ಟು ಗಾತ್ರವುಳ್ಳವಾಗಿಯೂ, ಎತ್ತರವಾಗಿಯೂ ಬೆಳೆಯದೆ, ನೆಲವನ್ನು ಬಿಟ್ಟು ಸ್ವಲ್ಪ ಎತ್ತರದಲ್ಲಿಯೇ ಕವಲೊಡೆದಿರುತ್ತವೆ. ಇವುಗಳಿಗೆ ಗುಲಾಬಿ, ದಾಳಿಂಬಿ, ದಾಸವಾಳ, ಮೊದಲಾದವು ನಿದರ್ಶನಗಳು. ಈ ಗುಂಪಿನ ಸಸ್ಯಗಳನ್ನು ಹೊದರುಗಳೆಂದು ಕರೆಯುತ್ತಾರೆ. ಬಹಳ ಒತ್ತಾಗಿ ಬೆಳೆಯುವದು ಈ ಗಿಡಗಳ ಒಂದು ಲಕ್ಷಣ.

(೨) ಸ್ವತಂತ್ರವಾಗಿ ಮೇಲಕ್ಕೆ ಬೆಳೆಯಲಾರದ ಸಸ್ಯಗಳು.

ನಾವು ಇಲ್ಲಿಯವರಿಗೂ ವಿಚಾರಮಾಡಿದ ಸಸ್ಯಗಳು ತೆಳುವಾಗಿಯೂ ಮೃದುವಾಗಿಯೂ ಇರಬಹುದು, ಅಥವಾ ಗಾತ್ರವಾಗಿಯೂ ಕಠಿಣವಾಗಿಯೂ ಇರಬಹುದು. ಅವು ಹೇಗಿದ್ದರೂ ತಮ್ಮ ಸ್ವಂತ ಬಲದಿಂದ ಊರ್ಧ್ವಮುಖವಾಗಿ ಎದ್ದು ಬೆಳೆಯುತ್ತವೆ. ಅನೇಕ ಸಸ್ಯಗಳ ಕಾಂಡಗಳು ಹೀಗೆ ಎತ್ತರಕ್ಕೆ ಎದ್ದು ನಿಂತು ಬೆಳೆಯಲಾರದಷ್ಟು ಬಲಹೀನವಾಗಿರುತ್ತವೆ. ಆದುದರಿಂದ ತಮ್ಮ ಎಲೆಗಳಿಗೆ ಬೇಕಾದ ಬೆಳಕನ್ನು ಸಂಪಾದಿಸಲು ಇವುಗಳಲ್ಲಿ ಕೆಲವು ನೆಲದ ಮೇಲೆ ಬೆಳೆಯುತ್ತವೆ,

ಕೆಲವು ಯಾವಾದಾದರೂ ಒಂದು ಆಶ್ರಯವನ್ನು ಹಿಡಿದು ಮೇಲಕ್ಕೆ ಬೆಳೆದುಬರುತ್ತವೆ. ಇವುಗಳಲ್ಲಿ ಎಲೆಗಳು ಎಷ್ಟು ಹೆಚ್ಚಾಗಿ ಉಂಟಾದರೂ ಇವು ಭೂಮಿಯ ಮೇಲೆ ವಿಸ್ತಾರವಾಗಿಯೂ ಅಥವಾ ಆಧಾರಗಳ ಮೇಲೆ ಎತ್ತರವಾಗಿಯೂ ಬೆಳೆಯುವದರಿಂದ ಇವುಗಳ ಕಾಂಡಗಳು ವಿಶೇಷ ಭಾರವನ್ನು ವಹಿಸಬೇಕಾದುದಿಲ್ಲ. ಈ ಕಾರಣದಿಂದ ಈ ಸಸ್ಯಗಳ ದಂಟು ಗಾತ್ರವಾಗಿರುವದಿಲ್ಲ.

ನೆಲದ ಮೇಲೆ ಹರಡತಕ್ಕ ಸ್ವಭಾವವುಳ್ಳವುಗಳಿಗೆ ಎದ್ದು ನಿಲ್ಲುವ ಅವಶ್ಯಕತೆಯೇ ಇರುವದಿಲ್ಲ. ಇವು ನೆಲದ ಮೇಲೆ ವ್ಯಾಪಿಸುವಾಗ ಅಲ್ಲಲ್ಲಿ ಅಂಟು ಬೇರುಗಳನ್ನು ಬಿಟ್ಟುಕೊಂಡು ಬರುವವು. ಈ ಬೇರುಗಳು ನೆಲದಲ್ಲಿ ಹೊಕ್ಕು ಬೆಳೆಯುವದರಿಂದ, ಸಸ್ಯಗಳಿಗೆ ಹೊಸ ಆಶ್ರಯಗಳು ಸಿಕ್ಕಿದಹಾಗಾಗುವದು. ಸೀಗೆಣಸು, ನೆಲಗಡಲೆ (ಭೈಮೂಗು) ಇವು ಈ ತೆರನಾದ ಕಾಂಡಗಳುಳ್ಳ ಸಸ್ಯಗಳು. ಹುಲ್ಲಿನ ಕೆಲವು ಜಾತಿಗಳಲ್ಲಿ ಕಾಂಡಗಳು ಈ ಲಕ್ಷಣವನ್ನೇ ಹೊಂದಿರುತ್ತವೆ. ಸವುತೆ, ಹಾಗಲ, ಕುಂಬಳ, ಅವರೆ ಮೊದಲಾದ ಬಳ್ಳಿಗಳು ಬೇರೆ ಗಿಡಗಳ ಮೇಲಾಗಲಿ, ಗೋಡೆ, ಹಂದರ ಮುಂತಾದವುಗಳ ಮೇಲಾಗಲಿ ಹತ್ತಿ ಬೆಳೆಯುವವು. ಹೀಗೆ ಆಶ್ರಯಗಳನ್ನು ಹಿಡಿದು ಮೇಲಕ್ಕೆ ಬರಲು ಇವುಗಳಲ್ಲಿ ಯಾವ ಯಾವ ಸಾಧನಗಳಿರುವವೆಂದು ನೋಡಬೇಕು.—

(೧) ಆಧಾರಗಳಿಂದ ಮೇಲಕ್ಕೆ ಬೆಳೆಯುವ ಕೆಲವು ಬಳ್ಳಿಗಳಲ್ಲಿ ಮುಳ್ಳು ದಂಟಿ ಅಧಾರವನ್ನು ಸುತ್ತಿಕೊಂಡು ಬರುವದು. ಉದಾಹರಣೆಗಾಗಿ ಅವರೆ, ದ್ರಾಕ್ಷಿ, ಇವುಗಳನ್ನು ಹೇಳಬಹುದು. ಈ ಜಾತಿಯ ಬಳ್ಳಿಗಳೆಲ್ಲವೂ ಆಧಾರಗಳನ್ನು ಒಂದೇ ವಿಧವಾಗಿ ಸುತ್ತಿಕೊಳ್ಳುವದಿಲ್ಲ. ಕೆಲವು ಅವರೆಯ ಬಳ್ಳಿಯಂತೆ ಪ್ರದಕ್ಷಿಣವಾಗಿ (ಅಂದರೆ ಎಡದಿಂದ ಬಲಕ್ಕೆ) ಸುತ್ತಿಕೊಳ್ಳುತ್ತವೆ; ಕೆಲವು ಅಪ್ರದಕ್ಷಿಣವಾಗಿ (ಬಲದಿಂದ ಎಡಕ್ಕೆ) ಸುತ್ತಿಕೊಳ್ಳುತ್ತವೆ. ಹೀಗೆ ಒಂದು ಕ್ರಮದಲ್ಲಿ ಸುತ್ತಿಕೊಂಡಿರುವ ಬಳ್ಳಿಗಳನ್ನು ಬಿಡಿಸಿ ಅವುಗಳ ಸ್ವಭಾವಕ್ಕೆ ವಿರುದ್ಧವಾಗಿ ನಾವು ಸುತ್ತಿದರೆ, ಅವುಗಳ ಬೆಳೆಯುವ ಭಾಗಗಳು ನಮ್ಮ ಇಚ್ಛೆಯಂತೆ ಸುತ್ತುವೆ, ತಮಗೆ ಸ್ವಭಾವವಾದ ಕ್ರಮವನ್ನೇ

ರಿಂದ ಅವುಗಳಿಗೆ ಸೂರ್ಯನ ಬೆಳಕನ್ನು ದೊರಕಿಸಿಕೊಳ್ಳುವದಕ್ಕೆ ಇವು ಎತ್ತರವಾಗಿಯೂ ಬೆಳೆಯುವವು. ಇವುಗಳಿಗೆ ಮುಂದವಾದ ತೊಗಟೆಯೂ ಇರುವದು. ಈ ವಿಧವಾದ ಕಾಂಡಗಳನ್ನು ಹೊಂದಿರುವ ಸಸ್ಯಗಳೆಲ್ಲವು ಬಹುವಾರ್ಷಿಕಗಳು. ಇವುಗಳನ್ನು ಮರಗಳೆಂದು ಕರೆಯುತ್ತಾರೆ. ಕಾಂಡಗಳಲ್ಲಿ ಈ ಭೇದಗಳು ಎಂಥವರಿಗೂ ಸುಲಭವಾಗಿ ಗೋಚರವಾಗುತ್ತವೆ. ಇವೆರಡು ವಿಧಗಳಲ್ಲದೆ ಕಾಂಡಗಳಲ್ಲಿ ಮತ್ತೊಂದು ಬಗೆಯಾದವುಗಳನ್ನು ನಾವು ಲಕ್ಷಿಸಬಹುದು. ಮೇಲೆ ಹೇಳಿದ ಏಕವಾರ್ಷಿಕ ಅಥವಾ ದ್ವಿವಾರ್ಷಿಕ ಓಷಧಿಗಳಂತೆ ಒಂದೆರಡು ವರ್ಷ ಮಾತ್ರ ಬದುಕಿ ಸತ್ತುಹೋಗತಕ್ಕವುಗಳಾಗಲಿ ಬಹುವಾರ್ಷಿಕ ಮರಗಳಂತೆ ಬಹಳ ಕಾಲ ಬದುಕತಕ್ಕವುಗಳಾಗಲಿ ಅಗಿರದೆ ಕೆಲವು ವರ್ಷಗಳು ಜೀವಿಸತಕ್ಕ ಅನೇಕ ಸಸ್ಯಗಳಿರುತ್ತವೆ. ಇವುಗಳ ಕಾಂಡಗಳು ಓಷಧಿಗಳ ಕಾಂಡಗಳ ಹಾಗೆ ತೆಳುವಾಗಿಯೂ ಮೃದುವಾಗಿಯೂ ಹಸುರಾಗಿಯೂ ಇರದೆ, ಸ್ವಲ್ಪ ಮುಂದವಾಗಿಯೂ ಕಠಿಣವಾಗಿಯೂ ತೊಗಟೆಯನ್ನೂ ಸಹ ಹೊಂದಿದವುಗಳಾಗಿಯೂ ಇರುತ್ತವೆ. ಆದರೆ ಇವು ಮರಗಳಷ್ಟು ಗಾತ್ರವುಳ್ಳವಾಗಿಯೂ, ಎತ್ತರವಾಗಿಯೂ ಬೆಳೆಯದೆ, ನೆಲವನ್ನು ಬಿಟ್ಟು ಸ್ವಲ್ಪ ಎತ್ತರದಲ್ಲಿಯೇ ಕವಲೊಡೆದಿರುತ್ತವೆ. ಇವುಗಳಿಗೆ ಗುಲಾಬಿ, ದಾಳಿಂಬಿ, ದಾಸವಾಳ, ಮೊದಲಾದವು ನಿದರ್ಶನಗಳು. ಈ ಗುಂಪಿನ ಸಸ್ಯಗಳನ್ನು ಹೊದರುಗಳೆಂದು ಕರೆಯುತ್ತಾರೆ. ಬಹಳ ಒತ್ತಾಗಿ ಬೆಳೆಯುವದು ಈ ಗಿಡಗಳ ಒಂದು ಲಕ್ಷಣ.

(೨) ಸ್ವತಂತ್ರವಾಗಿ ಮೇಲಕ್ಕೆ ಬೆಳೆಯಲಾರದ ಸಸ್ಯಗಳು.

ನಾವು ಇಲ್ಲಿಯವರಿಗೂ ವಿಚಾರಮಾಡಿದ ಸಸ್ಯಗಳು ತೆಳುವಾಗಿಯೂ ಮೃದುವಾಗಿಯೂ ಇರಬಹುದು, ಅಥವಾ ಗಾತ್ರವಾಗಿಯೂ ಕಠಿಣವಾಗಿಯೂ ಇರಬಹುದು. ಅವು ಹೇಗಿದ್ದರೂ ತಮ್ಮ ಸ್ವಂತ ಬಲದಿಂದ ಊರ್ಧ್ವಮುಖವಾಗಿ ಎದ್ದು ಬೆಳೆಯುತ್ತವೆ. ಅನೇಕ ಸಸ್ಯಗಳ ಕಾಂಡಗಳು ಹೀಗೆ ಎತ್ತರಕ್ಕೆ ಎದ್ದು ನಿಂತು ಬೆಳೆಯಲಾರದಷ್ಟು ಬಲಹೀನವಾಗಿರುತ್ತವೆ. ಆದುದರಿಂದ ತಮ್ಮ ಎಲೆಗಳಿಗೆ ಬೇಕಾದ ಬೆಳಕನ್ನು ಸಂಪಾದಿಸಲು ಇವುಗಳಲ್ಲಿ ಕೆಲವು ನೆಲದ ಮೇಲೆ ಬೆಳೆಯುತ್ತವೆ,

ಕೆಲವು ಯಾವಾದಾದರೂ ಒಂದು ಆಶ್ರಯವನ್ನು ಹಿಡಿದು ಮೇಲಕ್ಕೆ ಬೆಳೆದುಬರುತ್ತವೆ. ಇವುಗಳಲ್ಲಿ ಎಲೆಗಳು ಎಷ್ಟು ಹೆಚ್ಚಾಗಿ ಉಂಟಾದರೂ ಇವು ಭೂಮಿಯ ಮೇಲೆ ವಿಸ್ತಾರವಾಗಿಯೂ ಅಥವಾ ಆಧಾರಗಳ ಮೇಲೆ ಎತ್ತರವಾಗಿಯೂ ಬೆಳೆಯುವದರಿಂದ ಇವುಗಳ ಕಾಂಡಗಳು ವಿಶೇಷ ಭಾರವನ್ನು ವಹಿಸಬೇಕಾದುದಿಲ್ಲ. ಈ ಕಾರಣದಿಂದ ಈ ಸಸ್ಯಗಳ ದಂಟು ಗಾತ್ರವಾಗಿರುವದಿಲ್ಲ.

ನೆಲದ ಮೇಲೆ ಹರಡತಕ್ಕ ಸ್ವಭಾವವುಳ್ಳವುಗಳಿಗೆ ಎದ್ದು ನಿಲ್ಲುವ ಅವಶ್ಯಕತೆಯೇ ಇರುವದಿಲ್ಲ. ಇವು ನೆಲದ ಮೇಲೆ ವ್ಯಾಪಿಸುವಾಗ ಅಲ್ಲಲ್ಲಿ ಅಂಟು ಬೇರುಗಳನ್ನು ಬಿಟ್ಟುಕೊಂಡು ಬರುವವು. ಈ ಬೇರುಗಳು ನೆಲದಲ್ಲಿ ಹೊಕ್ಕು ಬೆಳೆಯುವದರಿಂದ, ಸಸ್ಯಗಳಿಗೆ ಹೊಸ ಆಶ್ರಯಗಳು ಸಿಕ್ಕಿದಹಾಗಾಗುವದು. ಸೀಗೆಣಸು, ನೆಲಗಡಲೆ (ಭೈಮೂಗು) ಇವು ಈ ತೆರನಾದ ಕಾಂಡಗಳುಳ್ಳ ಸಸ್ಯಗಳು. ಹುಲ್ಲಿನ ಕೆಲವು ಜಾತಿಗಳಲ್ಲಿ ಕಾಂಡಗಳು ಈ ಲಕ್ಷಣವನ್ನೇ ಹೊಂದಿರುತ್ತವೆ. ಸವುತೆ, ಹಾಗಲ, ಕುಂಬಳ, ಅವರೆ ಮೊದಲಾದ ಬಳ್ಳಿಗಳು ಬೇರೆ ಗಿಡಗಳ ಮೇಲಾಗಲಿ, ಗೋಡೆ, ಹಂದರ ಮುಂತಾದವುಗಳ ಮೇಲಾಗಲಿ ಪತ್ರಿ ಬೆಳೆಯುವವು. ಹೀಗೆ ಆಶ್ರಯಗಳನ್ನು ಹಿಡಿದು ಮೇಲಕ್ಕೆ ಬರಲು ಇವುಗಳಲ್ಲಿ ಯಾವ ಯಾವ ಸಾಧನಗಳಿರುವವೆಂದು ನೋಡಬೇಕು.—

(೧) ಆಧಾರಗಳಿಂದ ಮೇಲಕ್ಕೆ ಬೆಳೆಯುವ ಕೆಲವು ಬಳ್ಳಿಗಳಲ್ಲಿ ಮಧ್ಯ ದಂಟೆ ಆಧಾರವನ್ನು ಸುತ್ತಿಕೊಂಡು ಬರುವದು. ಉದಾಹರಣೆಗಾಗಿ ಅವರೆ, ದ್ರಾಕ್ಷಿ, ಇವುಗಳನ್ನು ಹೇಳಬಹುದು. ಈ ಜಾತಿಯ ಬಳ್ಳಿಗಳೆಲ್ಲವೂ ಆಧಾರಗಳನ್ನು ಒಂದೇ ವಿಧವಾಗಿ ಸುತ್ತಿಕೊಳ್ಳುವದಿಲ್ಲ. ಕೆಲವು ಅವರೆಯ ಬಳ್ಳಿಯಂತೆ ಪ್ರದಕ್ಷಿಣವಾಗಿ (ಅಂದರೆ ಎಡದಿಂದ ಬಲಕ್ಕೆ) ಸುತ್ತಿಕೊಳ್ಳುತ್ತವೆ; ಕೆಲವು ಅಪ್ರದಕ್ಷಿಣವಾಗಿ (ಬಲದಿಂದ ಎಡಕ್ಕೆ) ಸುತ್ತಿಕೊಳ್ಳುತ್ತವೆ. ಹೀಗೆ ಒಂದು ಕ್ರಮದಲ್ಲಿ ಸುತ್ತಿಕೊಂಡಿರುವ ಬಳ್ಳಿಗಳನ್ನು ಬಿಡಿಸಿ ಅವುಗಳ ಸ್ವಭಾವಕ್ಕೆ ವಿರುದ್ಧವಾಗಿ ನಾವು ಸುತ್ತಿದರೆ, ಅವುಗಳ ಬೆಳೆಯುವ ಭಾಗಗಳು ನಮ್ಮ ಇಚ್ಛೆಯಂತೆ ಸುತ್ತದೆ, ತನುಗೆ ಸ್ವಭಾವವಾದ ಕ್ರಮವನ್ನೇ

ಅನುಸರಿಸಿ ಸುತ್ತಿಕೊಳ್ಳುವವು. ಇವುಗಳನ್ನು ಸುತ್ತುಬಳ್ಳಿಗಳೆಂದು ಕರೆಯಬಹುದು.

(೨) ಕೆಲವು ಬಳ್ಳಿಗಳು ತಮ್ಮಲ್ಲಿರುವ ಕುಡಿಗಳಿಂದ ಆಧಾರಗಳನ್ನು ಹಿಡಿದುಕೊಳ್ಳುತ್ತವೆ. ಈ ಕುಡಿಗಳು ಬಣ್ಣದಲ್ಲಿ ಹಸುರಾಗಿರುತ್ತವೆ. ಕೆಲವು ಸಸ್ಯಗಳಲ್ಲಿ, ಅಂದರೆ ಬಟಾಣಿ ಮೊದಲಾದವುಗಳಲ್ಲಿ, ಎಲೆಗಳ ನಡುನರಗಳೇ ಕುಡಿಗಳಾಗಿರುವವು; ಹಲವು ಬಳ್ಳಿಗಳಲ್ಲಿ ಅಂದರೆ ಸವುತೆ, ಪಡವಲ ಮೊದಲಾದವುಗಳಲ್ಲಿ ಕಾಂಡದ ಗಿಣ್ಣುಸಂದುಗಳಿಂದ ಪ್ರತ್ಯೇಕವಾದ ಕುಡಿಗಳು ಬರುತ್ತವೆ. ಈ ಬಗೆಯ ಬಳ್ಳಿಗಳಿಗೆ ಕುಡಿಬಳ್ಳಿಗಳೆಂದು ಹೆಸರು.

(೩) ಕೆಲವು ಬಳ್ಳಿಗಳಲ್ಲಿ ದಂಟುಗಳಿಂದ ಸಣ್ಣ ಸಣ್ಣ ಬೇರುಗಳು ಹೊರಟು, ಅವುಗಳ ಸಹಾಯದಿಂದ ಕಾಂಡಗಳು ಆಶ್ರಯಗಳನ್ನು ಹತ್ತುತ್ತವೆ. ವೀಳೆಯದೆಲೆ, ಮೆಣಸು, ಈ ಬಳ್ಳಿಗಳು ಈ ವಿಧವಾದವುಗಳೇ. ಇವು ತಮ್ಮ ಕಾಂಡದಲ್ಲಿ ಅಂಟುಬೇರುಗಳನ್ನು ಬಿಟ್ಟುಕೊಂಡು ತಮಗೆ ಆಶ್ರಯವಾದ ಮರಗಳ ಕಾಂಡಗಳಿಗಾಗಲಿ, ಗೋಡೆಗಳಿಗಾಗಲಿ ಅಂಟಿಕೊಂಡೇ ಮೇಲಕ್ಕೆ ಏರುವವು. ಇವುಗಳನ್ನು ಅಂಟುಬೇರು ಬಳ್ಳಿಗಳೆಂದು ಕರೆಯಬಹುದು.

(೪) ಕೆಲವು ಬಳ್ಳಿಗಳಲ್ಲಿ ಮುಳ್ಳುಗಳು ಕಾಂಡಗಳಿಗೆ ಈ ವಿಧವಾದ ಸಾಧನಗಳಾಗಿರುತ್ತವೆ. ಇವುಗಳಲ್ಲಿ ಕೆಲವು ತಮ್ಮಲ್ಲಿರುವ ಮುಳ್ಳುಗಳಿಂದ ಆಶ್ರಯದ ಮೇಲೆ ತಮ್ಮನ್ನು ಸುಭದ್ರವಾಗಿ ನಿಲ್ಲಿಸಿಕೊಳ್ಳುತ್ತವೆ. (ಉದಾಹರಣೆ, ಹಬ್ಬುವ ಗುಲಾಬಿ). ಕೆಲವು ಸಸ್ಯಗಳಲ್ಲಿ ಒಂದು ಶಾಖೆಯ ಮುಳ್ಳುಗಳಿಂದ ಮತ್ತೊಂದು ಶಾಖೆಯ ಮುಳ್ಳುಗಳಿಗೆ ಆಧಾರ ದೊರೆತು ಕಾಂಡಗಳು ಮೇಲಕ್ಕೆ ಬರಲು ಅನುಕೂಲವಾಗುತ್ತದೆ. ಬಿದುರಿನ ಪೊಳೆಗಳಲ್ಲಿ ಈ ಬಗೆಯಾದ ಸಾಧನಗಳನ್ನು ನೋಡಬಹುದು.

೨. ಕಾಂಡಗಳು ರಸವಾಹಿನಿಗಳು.

ಬೇರುಗಳ ಮೂಲಕ ಗಿಡಗಳಿಗೆ ಭೂಮಿಯೊಳಗಣ ನೀರು ಬರುತ್ತಿರುವದೆಂದು ಹಿಂದಿನ ಅಧ್ಯಾಯದಲ್ಲಿ ತಿಳಿಸಲ್ಪಟ್ಟಿತು. ಬೇರು ಹೀರಿಕೊಂಡ ನೀರು ಹೇಗೆ ಮೇಲಕ್ಕೆ ಬರುವದೆಂದು ತಿಳಿಯಬೇಕಾದರೆ ಸಸ್ಯ

ಗಳಲ್ಲಿ ಕಾಂಡಗಳ ಒಳರಚನೆಯನ್ನು ಸ್ವಲ್ಪ ಮಟ್ಟಿಗೆ ನೋಡಬೇಕು. ಯಾವದಾದರೂ ಒಂದು ಗಿಡದ ಕಾಂಡವನ್ನು ಅಡ್ಡ ಕತ್ತರಿಸಿದರೆ ೪ ಭಾಗಗಳಲ್ಲಿ ಅನೇಕ ನಾಳಗಳ ಬಾಯಿಗಳು ಗೋಚರವಾಗುವವು. ಈ ನಾಳಗಳು ಗಿಡಗಳಲ್ಲಿ ಬೇರುಗಳಿಂದ ಎಲೆಗಳ ತುದಿಯವರಿಗೂ ವ್ಯಾಪಿಸಿರುತ್ತವೆ. ಇವುಗಳ ಮೂಲಕ ಬೇರುಗಳಿಂದ ರಸವು ಮೇಲಕ್ಕೆ ಬರುತ್ತದೆ. ನಾವು ಒಂದು ಸಸ್ಯದ ಕಾಂಡವನ್ನು ಅಡ್ಡವಾಗಿ ಕತ್ತರಿಸಿ ನರೆ, ಭೂಮಿಯ ಕಡೆಯಿಂದ ರಸವು ಉಕ್ಕಿಬರುವದನ್ನು ನೋಡಬಹುದು. ಈ ಪ್ರವಾಹಕ್ಕೆ ತಡೆಯುಂಟಾದರೆ ಗಿಡದ ಮೆಲ್ಭಾಗಗಳು ಒಣಗಿಹೋಗುವವು.

ಕಾಂಡದಲ್ಲಿ ಅಡಿಯ ಭಾಗದಿಂದ ಮೇಲ್ಭಾಗಕ್ಕೆ ಪ್ರವಾಹವಿರುವದು ಮಾತ್ರವಲ್ಲ. ಎಲೆಗಳ ಕಡೆಯಿಂದಲೂ ಬೇರುಗಳ ಕಡೆಗೆ ಒಂದು ವಿಧವಾದ ಪ್ರವಾಹವು ಇರುವದು. ಇದಕ್ಕೆ ಕಾರಣವನ್ನು ತಿಳಿಯಬೇಕಾದರೆ ಈ ಪ್ರಯೋಗವನ್ನು ನಡಿಸಬಹುದು:- ಒಂದು ಸಸ್ಯದ ಕಾಂಡದಲ್ಲಾಗಲಿ ಶಾಖೆಯಲ್ಲಾಗಲಿ ಒಂದು ಭಾಗದಲ್ಲಿ ಒಂದು ಬಟ್ಟೆಯ ಚೂರನ್ನು ಅಥವಾ ದಾರವನ್ನು ಬಿಗಿಯಾಗಿ ಕಟ್ಟಿ ಸ್ವಲ್ಪಕಾಲ ಹಾಗೆಯೆ ಇಡಬೇಕು. ಪುನಹ ನೋಡುವಾಗ ನಾವು ಹಾಕಿದ ದಾರದ ಕಟ್ಟಿನ ಮೇಲಿನ ಭಾಗವು ಉಬ್ಬಿಕೊಂಡಿರುವದು ಗೋಚರವಾಗುವದು. ಇದರಿಂದ ನೀರಿನ ಪ್ರವಾಹವು ಕೆಳಮುಖವಾಗಿಯೂ ಹರಿಯುತ್ತಿರುವದೆಂದು ತಿಳಿಯುವದು. ಗಿಡಗಳಲ್ಲಿ ರಸವು ಯಾವ ನಾಳಗಳಿಂದ ಮೇಲಕ್ಕೆ ಏರುವದು ಮತ್ತು ಯಾವ ನಾಳಗಳಿಂದ ಕೆಳಗೆ ಇಳಿಯುವದೆಂದು ತಿಳಿಯಲು ಕಾಂಡಗಳ ಒಳರಚನೆಯನ್ನು ಚನ್ನಾಗಿ ಅರಿಯಬೇಕು.

೩. ಗುಪ್ತಕಾಂಡಗಳೂ ಅವುಗಳಲ್ಲಾಗುವ ಕಾರ್ಯಗಳೂ.

ನಾವು ಇಲ್ಲಿಯವರಿಗೆ ವಿಚಾರಮಾಡಿದ ಕಾಂಡಗಳ ಭೇದಗಳೆಲ್ಲವು ಭೂಮಿಯ ಹೊರಭಾಗದಲ್ಲಿ ಕಾಣತಕ್ಕವು. ಗಿಡಗಳಲ್ಲಿ ಸಾಧಾರಣವಾಗಿ ಭೂಮಿಯ ಹೊರಗೆ ಬೆಳೆಯುವ ಭಾಗವು ಕಾಂಡವೆಂತಲೂ, ಭೂಮಿಯ ಒಳಗೆ ಬೆಳೆಯುವ ಭಾಗವು ಬೇರೆಂತಲೂ ಹೇಳಬಹುದಾದರೂ, ಈ ಲಕ್ಷಣವೇ ಇವೆರಡು ಭಾಗಗಳಿಗೆ ಇರುವ ನಿಷ್ಕರ್ಷವಾದ

ವ್ಯತ್ಯಾಸವಲ್ಲವೆಂದು ಹಿಂದೆ ಹೇಳಿರುತ್ತದೆ. ಎಲೆ, ಮೊಗ್ಗೆಗಳು ಬಂದರೆ ಮಾತ್ರ ಒಂದು ಭಾಗವನ್ನು ಕಾಂಡವೆಂತಲೂ, ಇಲ್ಲದಿದ್ದರೆ ಬೇರೆಂತಲೂ ತಿಳಿಯಬೇಕೆಂದು ಹೇಳಿ, ಭೂಮಿಯ ಹೊರಭಾಗದಲ್ಲಿ ಕಾಣುವ ಬೇರುಗಳನ್ನು ಹಿಂದಿನ ಅಧ್ಯಾಯದಲ್ಲಿ ವಿವರಿಸಿದ್ದಾಯಿತು. ಈಗ ನಾವು ಭೂಮಿಯ ಒಳಭಾಗದಲ್ಲಿ ಬೆಳೆಯುವ ಕಾಂಡದ ಭಾಗಗಳನ್ನು ಲಕ್ಷಿಸಬೇಕು. ಹಸೀಶುಂಠಿ, ಅರಿಸಿನ, ಕೇಸಿನಗಡ್ಡೆ, ಇವುಗಳಲ್ಲಿ ಗಿಣ್ಣುಗಳೂ, ಮೊಗ್ಗೆಗಳೂ ಇರುವವು. ಪರ್ವಮಧ್ಯಗಳೂ ಕ್ರಮವಾಗಿಯೇ ಇರುವವು. ಗಿಣ್ಣುಗಳ ಸಂದುಗಳಲ್ಲಿರುವ ಕೆಲವು ಮೊಗ್ಗೆಗಳು ಹೊರಕ್ಕೆ ಬಂದು ಬೆಳೆಯುವವು. ಈ ಗುಣಗಳಿಲ್ಲವೂ ಕಾಂಡದ ಸ್ವಭಾವವೇ ಹೊರತು ಬೇರಿನವಲ್ಲ. ಬಟಾಟೆಯಲ್ಲಿ ಗಿಣ್ಣುಗಳು ಸ್ಪಷ್ಟವಾಗಿ ಕಾಣಬೆ ಇದ್ದರೂ ಮೊಗ್ಗೆಗಳು ಬರುವದು ಸುಲಭವಾಗಿ ತಿಳಿಯುವದು. ಈ ಭಾಗಗಳು ಭೂಮಿಯಲ್ಲಿರುವದರಿಂದ ಇವುಗಳನ್ನು ಗುಪ್ತಕಾಂಡಗಳೆಂದು ಕರೆಯುತ್ತೇವೆ. ಗುಪ್ತ ಕಾಂಡಗಳಲ್ಲಿ ಮೂರು ತರಗಳನ್ನು ವಿಶೇಷಿಸಬಹುದು.

(೧) ಮೂಲವಹಗಳು: — ಹಸೀಶುಂಠಿ, ಅರಿಸಿನ, ಕೇಸಿನಗಡ್ಡೆ, ಇವು ನೆಲದೊಳಗೆ ಬೆಳೆದು ಬೇರುಗಳನ್ನು ವಹಿಸಿರುವದರಿಂದ ಇವುಗಳನ್ನು ಮೂಲವಹಗಳೆಂದು ಕರೆಯುತ್ತಾರೆ. ಇವು ನೆಲದಲ್ಲಿ ಎಲ್ಲ ಕಡೆಗಳಲ್ಲಿ ವ್ಯಾಪಿಸಿ ಬೆಳೆಯುತ್ತಿರುವವು. ಇವುಗಳಲ್ಲಿ ನೆಲದ ಮೇಲ್ಭಾಗದ ಕಡೆಗಿರುವ ಪಾರ್ಶ್ವದಲ್ಲಿ ಮೊಗ್ಗೆಗಳು, ಕೆಳಗಿನ ಭಾಗದಲ್ಲಿ ಬೇರುಗಳು ಇರುತ್ತವೆ. ಯಾಲಕ್ಕಿ, ಬಜೆ, ಇವು ಮೂಲವಹಗಳೇ.

(೨) ಗೆಡ್ಡೆಗಳು: — ಕೆಲವು ಸಸ್ಯಗಳಲ್ಲಿ ಕಾಂಡದ ಶಾಖೆಗಳು ಭೂಮಿಯೊಳಗೆ ಬೆಳೆಯುವವು. ಬಟಾಟೆ (ಆಲೂಗೆಡ್ಡೆ) ಈ ವಿಧವಾದುದೇ. ಶಾಖೆಗಳು ಉದ್ದವಾಗದೆ, ಕುಗ್ಗಿ ದಪ್ಪನಾಗುವದರಿಂದ ಗಿಣ್ಣುಗಳ ಸ್ಪಷ್ಟವೂ, ಅವುಗಳ ಅಂತರವೂ ತಪ್ಪಿ ಹೋಗುವವು. ಸುವರ್ಣಗೆಡ್ಡೆಯ ಗಿಡದಲ್ಲುಂಟಾಗುವ ಗೆಡ್ಡೆಯಲ್ಲಿ ಅಲ್ಲಲ್ಲಿ ಮೊಗ್ಗೆಗಳು ಕಾಣುವವು. ಈ ರೀತಿಯಾದ ಗಿಡಗಳಲ್ಲಿ ಕಾಂಡಗಳು ಉದ್ದವಾಗಿ ಬೆಳೆಯದೆ, ಗಿಡ್ಡವಾಗಿ ದಪ್ಪವಾಗಿರುತ್ತಿರುವದರಿಂದ ಇವುಗಳನ್ನು ಗೆಡ್ಡೆಗಳೆಂದು ಕರೆಯುತ್ತಾರೆ.

ಪ್ರಕೃತಿವಿಮರ್ಶೆಯ ಪತ್ರಿಕೆಗಳು. ನ. ೧.

(ಎಪ್ರೆಲ್ ತಿಂಗಳಿಂದ ಮುಂದೆ ಸಾಗಿದ್ದು.)

ಪಾತರಗಿತ್ತಿಯು ಔಡಲಗಿಡದ ಎಲೆಯ ಮೇಲೆ ತತ್ತಿಗಳನ್ನಿಟ್ಟು ಸ್ವಲ್ಪ ಕಾಲದಲ್ಲಿಯೆ ಸತ್ತು ಹೋಗುವದು. ತತ್ತಿಗಳಿಂದ ಮರಿಗಳಾಗುವದಕ್ಕೆ ಶಾಖವು ಅವಶ್ಯಕ. ಕಾಡುಗಳಲ್ಲಿ ಗಿಡಗಳ ಎಲೆಗಳ ಮೇಲಿರುವ ತತ್ತಿಗಳಿಗೆ ಬೇಕಾದ ಉಷ್ಣವು ಸೂರ್ಯನ ರಶ್ಮಿಗಳಿಂದ ಸಿಕ್ಕುವದು. ನಾವು ಮನೆಗಳಲ್ಲಿ ಹುಳಗಳನ್ನು ಪೋಷಿಸಬೇಕೆಂದರೆ, ಅವುಗಳ ತತ್ತಿಗಳನ್ನು ಬಿಚ್ಚಿಗಿರುವ ಸ್ಥಳಗಳಲ್ಲಿಡಬೇಕು. ತತ್ತಿಗಳಿಂದ ಮರಿಗಳು ಹೊರಬೀಳುವದಕ್ಕೆ ಬೇಕಾದ ಕಾಲವು ಆಯಾ ಋತುಧರ್ಮವನ್ನನುಸರಿಸಿರುತ್ತದೆ. ಸಾಧಾರಣವಾಗಿ ೭ ರಿಂದ ೧೫ ದಿವಸಗಳ ನಂತರ ತತ್ತಿಗಳಿಂದ ಮರಿಗಳು ಹೊರಡುವವು. ಹುಳವು ತತ್ತಿಯಿಂದ ಹೊರಬೀಳುವಾಗ ಕ್ರಿಮಿಯ ರೂಪದಲ್ಲಿರುವದಷ್ಟೆ, ಈ ಕ್ರಿಮಿಯು ಸುಮಾರು ಕಾಲಂಗುಲ ಉದ್ದವಿರುವದು. ಈ ಸಣ್ಣ ಕ್ರಿಮಿಯನ್ನು ಲಕ್ಷ್ಯವಿಟ್ಟು ನೋಡಿದರೆ, ಅದು ಅನೇಕ ಭಾಗಗಳು ಕೂಡಿ ಆಗಿರುವದೆಂದು ಕಂಡು ಬರುವದು. ಅದರ ತಲೆಯು ಕಪ್ಪಾಗಿರುವದು; ಅದರ ಮೈಯು ಸ್ವಲ್ಪ ಕಪ್ಪು ಮಿಶ್ರವಾದ ಹಳದಿ ಬಣ್ಣವುಳ್ಳದಾಗಿದ್ದು, ಅದರ ಮೈಮೇಲೆ ಗಂಟುಗಳಲ್ಲಿ ಕಪ್ಪು ಚುಕ್ಕೆಗಳೂ, ರೋಮಗಳೂ ಕಾಣುವವು.

ಹುಳದ ಮರಿಯು ತತ್ತಿಯಿಂದ ಹೊರಬಿದ್ದ ಒಡನೆಯೆ ಆಹಾರವನ್ನು ತಿನ್ನುವದಕ್ಕೆ ಪ್ರಾರಂಭಿಸುವದು. ಕ್ರಿಮಿಗಳ ಈ ಸ್ವಭಾವವನ್ನು ತಿಳಿದುಕೊಂಡಿದಿಯೋ ಎಂಬಂತೆ, ಪಾತರಗಿತ್ತಿಯು ತನ್ನ ಮರಿಗಳಿಗೆ ಎಲ್ಲಿ ಆಹಾರವು ಸಿಕ್ಕುವದೊ, ಆ ಸ್ಥಳದಲ್ಲಿ ತತ್ತಿಗಳನ್ನಿಡುವದು. ಹುಳಗಳನ್ನು ಸಾಕುವವರು ಕ್ರಿಮಿಗಳು ಹೊರಗೆ ಬರುವದಕ್ಕೆ ಒಂದೆರಡು ದಿನಗಳು ಮುಂಚಿತವಾಗಿಯೆ, ತತ್ತಿಗಳನ್ನು ಕೋಮಲವಾದ ಔಡಲ ಎಲೆಗಳ ಮೇಲಿಟ್ಟು ಅವುಗಳನ್ನು ಮುಚ್ಚಿಡಬೇಕು. ತತ್ತಿಗಳಿಂದ ಹೊರಗೆ ಬರುವ ಕ್ರಿಮಿಗಳು ಎಲೆಗಳನ್ನು ಏರಿ ತಿನ್ನಲಾರಂಭಿಸುವವು. ಈ ಕಾಲದಲ್ಲಿ ಕ್ರಿಮಿಗಳು ಎಷ್ಟು ಮೃದುವಾಗಿರುವವೆಂದರೆ, ನಾವು ಅವುಗಳನ್ನು ಕೈಯಿಂದ ಮುಟ್ಟಿದರೆ ಅವುಗಳಿಗೆ ಅಪಾಯ ಉಂಟಾಗಬಹುದು. ಆದುದರಿಂದ ಅವುಗಳನ್ನು ಹೊಸ ಎಲೆಗಳ ಮೇಲಿಡ

ವ್ಯತ್ಯಾಸವಲ್ಲವೆಂದು ಹಿಂದೆ ಹೇಳಿರುತ್ತೆವೆ. ಎಲೆ, ಮೊಗ್ಗೆಗಳು ಬಂದರೆ ಮಾತ್ರ ಒಂದು ಭಾಗವನ್ನು ಕಾಂಡವೆಂತಲೂ, ಇಲ್ಲದಿದ್ದರೆ ಬೇರೆಂತಲೂ ತಿಳಿಯಬೇಕೆಂದು ಹೇಳಿ, ಭೂಮಿಯ ಹೊರಭಾಗದಲ್ಲಿ ಕಾಣುವ ಬೇರುಗಳನ್ನು ಹಿಂದಿನ ಅಧ್ಯಾಯದಲ್ಲಿ ವಿವರಿಸಿದ್ದಾಯಿತು. ಈಗ ನಾವು ಭೂಮಿಯ ಒಳಭಾಗದಲ್ಲಿ ಬೆಳೆಯುವ ಕಾಂಡದ ಭಾಗಗಳನ್ನು ಲಕ್ಷಿಸಬೇಕು. ಹಸೀಶುಂಠಿ, ಅರಿಸಿನ, ಕೇಸಿನಗಡ್ಡೆ, ಇವುಗಳಲ್ಲಿ ಗಿಣ್ಣುಗಳೂ, ಮೊಗ್ಗೆಗಳೂ ಇರುವವು. ಪರ್ವಮಧ್ಯಗಳೂ ಕ್ರಮವಾಗಿಯೇ ಇರುವವು. ಗಿಣ್ಣುಗಳ ಸಂದುಗಳಲ್ಲಿರುವ ಕೆಲವು ಮೊಗ್ಗೆಗಳು ಹೊರಕ್ಕೆ ಬಂದು ಬೆಳೆಯುವವು. ಈ ಗುಣಗಳೆಲ್ಲವೂ ಕಾಂಡದ ಸ್ವಭಾವವೇ ಹೊರತು ಬೇರಿನವಲ್ಲ. ಬಟಾಟೆಯಲ್ಲಿ ಗಿಣ್ಣುಗಳು ಸ್ಪಷ್ಟವಾಗಿ ಕಾಣಬೆ ಇದ್ದರೂ ಮೊಗ್ಗೆಗಳು ಬರುವದು ಸುಲಭವಾಗಿ ತಿಳಿಯುವದು. ಈ ಭಾಗಗಳು ಭೂಮಿಯಲ್ಲಿರುವದರಿಂದ ಇವುಗಳನ್ನು ಗುಪ್ತಕಾಂಡಗಳೆಂದು ಕರೆಯುತ್ತೇವೆ. ಗುಪ್ತ ಕಾಂಡಗಳಲ್ಲಿ ಮೂರು ತರಗಳನ್ನು ವಿಶೇಷಿಸಬಹುದು.

(೧) ಮೂಲವಹಗಳು:—ಹಸೀಶುಂಠಿ, ಅರಿಸಿನ, ಕೇಸಿನಗಡ್ಡೆ, ಇವು ನೆಲದೊಳಗೆ ಬೆಳೆದು ಬೇರುಗಳನ್ನು ವಹಿಸಿರುವದರಿಂದ ಇವುಗಳನ್ನು ಮೂಲವಹಗಳೆಂದು ಕರೆಯುತ್ತಾರೆ. ಇವು ನೆಲದಲ್ಲಿ ಎಲ್ಲ ಕಡೆಗಳಲ್ಲಿ ವ್ಯಾಪಿಸಿ ಬೆಳೆಯುತ್ತಿರುವವು. ಇವುಗಳಲ್ಲಿ ನೆಲದ ಮೇಲ್ಭಾಗದ ಕಡೆಗಿರುವ ಪಾರ್ಶ್ವದಲ್ಲಿ ಮೊಗ್ಗೆಗಳು, ಕೆಳಗಿನ ಭಾಗದಲ್ಲಿ ಬೇರುಗಳು ಇರುತ್ತವೆ. ಯಾಲಕ್ಕಿ, ಬಜೆ, ಇವು ಮೂಲವಹಗಳೇ.

(೨) ಗೆಡ್ಡೆಗಳು:—ಕೆಲವು ಸಸ್ಯಗಳಲ್ಲಿ ಕಾಂಡದ ಶಾಖೆಗಳು ಭೂಮಿಯೊಳಗೆ ಬೆಳೆಯುವವು. ಬಟಾಟೆ (ಆಲೂಗೆಡ್ಡೆ) ಈ ವಿಧವಾದುದೇ. ಶಾಖೆಗಳು ಉದ್ದವಾಗದೆ, ಕುಗ್ಗಿ ದಪ್ಪನಾಗುವದರಿಂದ ಗಿಣ್ಣುಗಳ ಕ್ರಮವೂ, ಅವುಗಳ ಅಂತರವೂ ತಪ್ಪಿ ಹೋಗುವವು. ಸುವರ್ಣಗೆಡ್ಡೆಯ ಗಿಡದಲ್ಲುಂಟಾಗುವ ಗೆಡ್ಡೆಯಲ್ಲಿ ಅಲ್ಲಲ್ಲಿ ಮೊಗ್ಗೆಗಳು ಕಾಣುವವು. ಈ ಬಗೆಯಾದ ಗಿಡಗಳಲ್ಲಿ ಕಾಂಡಗಳು ಉದ್ದವಾಗಿ ಬೆಳೆಯದೆ, ಗಿಡ್ಡವಾಗಿ ದಪ್ಪವಾಗಿರುತ್ತಿರುವದರಿಂದ ಇವುಗಳನ್ನು ಗೆಡ್ಡೆಗಳೆಂದು ಕರೆಯುತ್ತಾರೆ.

(ಎಪ್ರೆಲ್ ತಿಂಗಳಿಂದ ಮುಂಬೆ ಸಾಗಿಸ್ಪು.)

ಪಾತರಗಿತ್ತಿಯು ಬೆಡಲಗಿಡದ ಎಲೆಯ ಮೇಲೆ ತತ್ತಿಗಳನ್ನಿಟ್ಟು ಸ್ಪಲ್ಪ ಕಾಲದಲ್ಲಿಯೆ ಸತ್ತು ಹೋಗುವದು. ತತ್ತಿಗಳಿಂದ ಮರಿಗಳಾಗುವದಕ್ಕೆ ಶಾಖವು ಅವಶ್ಯಕ. ಕಾಡುಗಳಲ್ಲಿ ಗಿಡಗಳ ಎಲೆಗಳ ಮೇಲಿರುವ ತತ್ತಿಗಳಿಗೆ ಬೇಕಾದ ಉಷ್ಣವು ಸೂರ್ಯನ ರಶ್ಮಿಗಳಿಂದ ಸಿಕ್ಕುವದು. ನಾವು ಮನೆಗಳಲ್ಲಿ ಹುಳಗಳನ್ನು ಪೋಷಿಸಬೇಕೆಂದರೆ, ಅವುಗಳ ತತ್ತಿಗಳನ್ನು ಬೆಚ್ಚಗಿರುವ ಸ್ಥಳಗಳಲ್ಲಿಡಬೇಕು. ತತ್ತಿಗಳಿಂದ ಮರಿಗಳು ಹೊರಬೀಳುವದಕ್ಕೆ ಬೇಕಾದ ಕಾಲವು ಆಯಾ ಋತುಧರ್ಮವನ್ನನುಸರಿಸಿರುತ್ತದೆ. ಸಾಧಾರಣವಾಗಿ ೭ ರಿಂದ ೧೫ ದಿವಸಗಳ ನಂತರ ತತ್ತಿಗಳಿಂದ ಮರಿಗಳು ಹೊರಡುವವು. ಹುಳವು ತತ್ತಿಯಿಂದ ಹೊರಬೀಳುವಾಗ ಕ್ರಿಮಿಯ ರೂಪದಲ್ಲಿರುವದಷ್ಟೆ, ಈ ಕ್ರಿಮಿಯು ಸುಮಾರು ಕಾಲಂಗುಲ ಉದ್ದವಿರುವದು. ಈ ಸಣ್ಣ ಕ್ರಿಮಿಯನ್ನು ಲಕ್ಷ್ಯವಿಟ್ಟು ನೋಡಿದರೆ, ಅದು ಅನೇಕ ಭಾಗಗಳು ಕೂಡಿ ಆಗಿರುವದೆಂದು ಕಂಡು ಬರುವದು. ಅದರ ತಲೆಯು ಕಪ್ಪಾಗಿರುವದು; ಅದರ ಮೈಯು ಸ್ಪಲ್ಪ ಕಪ್ಪು ಮಿಶ್ರವಾದ ಹಳದಿ ಬಣ್ಣವುಳ್ಳದಾಗಿದ್ದು, ಅದರ ಮೈಮೇಲೆ ಗಂಟುಗಳಲ್ಲಿ ಕಪ್ಪು ಚುಕ್ಕೆಗಳೂ, ರೋಮಗಳೂ ಕಾಣುವವು.

ಹುಳದ ಮರಿಯು ತತ್ತಿಯಿಂದ ಹೊರಬಿದ್ದ ಒಡನೆಯೆ ಆಹಾರವನ್ನು ತಿನ್ನುವದಕ್ಕೆ ಪ್ರಾರಂಭಿಸುವದು. ಕ್ರಿಮಿಗಳ ಈ ಸ್ವಭಾವವನ್ನು ತಿಳಿದುಕೊಂಡಿದಿಯೋ ಎಂಬಂತೆ, ಪಾತರಗಿತ್ತಿಯು ತನ್ನ ಮರಿಗಳಿಗೆ ಎಲ್ಲಿ ಆಹಾರವು ಸಿಕ್ಕುವದೊ, ಆ ಸ್ಥಳದಲ್ಲಿ ತತ್ತಿಗಳನ್ನಿಡುವದು. ಹುಳಗಳನ್ನು ಸಾಕುವವರು ಕ್ರಿಮಿಗಳು ಹೊರಗೆ ಬರುವದಕ್ಕೆ ಒಂದೆರಡು ದಿನಗಳು ಮುಂಚಿತವಾಗಿಯೆ, ತತ್ತಿಗಳನ್ನು ಕೋಮಲವಾದ ಬೆಡಲ ಎಲೆಗಳ ಮೇಲಿಟ್ಟು ಅವುಗಳನ್ನು ಮುಚ್ಚಿಡಬೇಕು. ತತ್ತಿಗಳಿಂದ ಹೊರಗೆ ಬರುವ ಕ್ರಿಮಿಗಳು ಎಲೆಗಳನ್ನು ಏರಿ ತಿನ್ನಲಾರಂಭಿಸುವವು. ಈ ಕಾಲದಲ್ಲಿ ಕ್ರಿಮಿಗಳು ಎಷ್ಟು ಮೃದುವಾಗಿರುವವೆಂದರೆ, ನಾವು ಅವುಗಳನ್ನು ಕೈಯಿಂದ ಮುಟ್ಟಿದರೆ ಅವುಗಳಿಗೆ ಅಪಾಯ ಉಂಟಾಗಬಹುದು. ಆದುದರಿಂದ ಅವುಗಳನ್ನು ಹೊಸ ಎಲೆಗಳ ಮೇಲಿಡ

ವ್ಯತ್ಯಾಸವಲ್ಲವೆಂದು ಹಿಂದೆ ಹೇಳಿರುತ್ತದೆ. ಎಲೆ, ಮೊಗ್ಗೆಗಳು ಬಂದರೆ ಮಾತ್ರ ಒಂದು ಭಾಗವನ್ನು ಕಾಂಡವೆಂತಲೂ, ಇಲ್ಲದಿದ್ದರೆ ಬೇರೆಂತಲೂ ತಿಳಿಯಬೇಕೆಂದು ಹೇಳಿ, ಭೂಮಿಯ ಹೊರಭಾಗದಲ್ಲಿ ಕಾಣುವ ಬೇರುಗಳನ್ನು ಹಿಂದಿನ ಅಧ್ಯಾಯದಲ್ಲಿ ವಿವರಿಸಿದ್ದಾಯಿತು. ಈಗ ನಾವು ಭೂಮಿಯ ಒಳಭಾಗದಲ್ಲಿ ಬೆಳೆಯುವ ಕಾಂಡದ ಭಾಗಗಳನ್ನು ಲಕ್ಷಿಸಬೇಕು. ಹಸೀಶುಂಠಿ, ಅರಿಸಿನ, ಕೇಸಿನಗಡ್ಡೆ, ಇವುಗಳಲ್ಲಿ ಗಿಣ್ಣುಗಳೂ, ಮೊಗ್ಗೆಗಳೂ ಇರುವವು. ಪರ್ವಮಧ್ಯಗಳೂ ಕ್ರಮವಾಗಿಯೇ ಇರುವವು. ಗಿಣ್ಣುಗಳ ಸಂದುಗಳಲ್ಲಿರುವ ಕೆಲವು ಮೊಗ್ಗೆಗಳು ಹೊರಕ್ಕೆ ಬಂದು ಬೆಳೆಯುವವು. ಈ ಗುಣಗಳೆಲ್ಲವೂ ಕಾಂಡದ ಸ್ವಭಾವವೇ ಹೊರತು ಬೇರಿನವಲ್ಲ. ಬಟಾಟೆಯಲ್ಲಿ ಗಿಣ್ಣುಗಳು ಸ್ಪಷ್ಟವಾಗಿ ಕಾಣದೆ ಇದ್ದರೂ ಮೊಗ್ಗೆಗಳು ಬರುವದು ಸುಲಭವಾಗಿ ತಿಳಿಯುವದು. ಈ ಭಾಗಗಳು ಭೂಮಿಯಲ್ಲಿರುವದರಿಂದ ಇವುಗಳನ್ನು ಗುಪ್ತಕಾಂಡಗಳೆಂದು ಕರೆಯುತ್ತೇವೆ. ಗುಪ್ತ ಕಾಂಡಗಳಲ್ಲಿ ಮೂರು ತರಗಳನ್ನು ವಿಶೇಷಿಸಬಹುದು.

(೧) ಮೂಲವಹಗಳು: — ಹಸೀಶುಂಠಿ, ಅರಿಸಿನ, ಕೇಸಿನಗಡ್ಡೆ, ಇವು ನೆಲದೊಳಗೆ ಬೆಳೆದು ಬೇರುಗಳನ್ನು ವಹಿಸಿರುವದರಿಂದ ಇವುಗಳನ್ನು ಮೂಲವಹಗಳೆಂದು ಕರೆಯುತ್ತಾರೆ. ಇವು ನೆಲದಲ್ಲಿ ಎಲ್ಲ ಕಡೆಗಳಲ್ಲಿ ವ್ಯಾಪಿಸಿ ಬೆಳೆಯುತ್ತಿರುವವು. ಇವುಗಳಲ್ಲಿ ನೆಲದ ಮೇಲ್ಭಾಗದ ಕಡೆಗಿರುವ ಪಾರ್ಶ್ವದಲ್ಲಿ ಮೊಗ್ಗೆಗಳು, ಕೆಳಗಿನ ಭಾಗದಲ್ಲಿ ಬೇರುಗಳು ಇರುತ್ತವೆ. ಯಾಲಕ್ಕಿ, ಬಜೆ, ಇವು ಮೂಲವಹಗಳೇ.

(೨) ಗೆಡ್ಡೆಗಳು: — ಕೆಲವು ಸಸ್ಯಗಳಲ್ಲಿ ಕಾಂಡದ ಶಾಖೆಗಳು ಭೂಮಿಯೊಳಗೆ ಬೆಳೆಯುವವು. ಬಟಾಟೆ (ಆಲೂಗೆಡ್ಡೆ) ಈ ವಿಧವಾದುದೇ. ಶಾಖೆಗಳು ಉದ್ದವಾಗದೆ, ಕುಗ್ಗಿ ದಪ್ಪನಾಗುವದರಿಂದ ಗಿಣ್ಣುಗಳ ಕ್ರಮವೂ, ಅವುಗಳ ಅಂತರವೂ ತಪ್ಪಿ ಹೋಗುವವು. ಸುವರ್ಣಗೆಡ್ಡೆಯು ಗಿಡದಲ್ಲುಂಟಾಗುವ ಗೆಡ್ಡೆಯಲ್ಲಿ ಅಲ್ಲಲ್ಲಿ ಮೊಗ್ಗೆಗಳು ಕಾಣುವವು. ಈ ಬಗೆಯಾದ ಗಿಡಗಳಲ್ಲಿ ಕಾಂಡಗಳು ಉದ್ದವಾಗಿ ಬೆಳೆಯದೆ, ಗಿಡ್ಡವಾಗಿ ದಪ್ಪವಾಗಿರುತ್ತಿರುವದರಿಂದ ಇವುಗಳನ್ನು ಗೆಡ್ಡೆಗಳೆಂದು ಕರೆಯುತ್ತಾರೆ.

ಪ್ರಕೃತಿವಿಮರ್ಶೆಯ ಪತ್ರಿಕೆಗಳು. ನ. ೧.

(ಎಪ್ರೆಲ್ ತಿಂಗಳಿಂದ ಮುಂದೆ ಸಾಗಿದ್ದು.)

ಪಾತರಗಿತ್ತಿಯು ಬೆಡಲಗಿಡದ ಎಲೆಯ ಮೇಲೆ ತತ್ತಿಗಳನ್ನಿಟ್ಟು ಸ್ವಲ್ಪ ಕಾಲದಲ್ಲಿಯೆ ಸತ್ತು ಹೋಗುವದು. ತತ್ತಿಗಳಿಂದ ಮರಿಗಳಾಗುವದಕ್ಕೆ ಶಾಖವು ಅವಶ್ಯಕ. ಕಾಡುಗಳಲ್ಲಿ ಗಿಡಗಳ ಎಲೆಗಳ ಮೇಲಿರುವ ತತ್ತಿಗಳಿಗೆ ಬೇಕಾದ ಉಷ್ಣವು ಸೂರ್ಯನ ರಶ್ಮಿಗಳಿಂದ ಸಿಕ್ಕುವದು. ನಾವು ಮನೆಗಳಲ್ಲಿ ಹುಳಗಳನ್ನು ಪೋಷಿಸಬೇಕೆಂದರೆ, ಅವುಗಳ ತತ್ತಿಗಳನ್ನು ಬೆಚ್ಚಗಿರುವ ಸ್ಥಳಗಳಲ್ಲಿಡಬೇಕು. ತತ್ತಿಗಳಿಂದ ಮರಿಗಳು ಹೊರಬೀಳುವದಕ್ಕೆ ಬೇಕಾದ ಕಾಲವು ಆಯಾ ಋತುಧರ್ಮವನ್ನನುಸರಿಸಿರುತ್ತದೆ. ಸಾಧಾರಣವಾಗಿ ೭ ರಿಂದ ೧೫ ದಿವಸಗಳ ನಂತರ ತತ್ತಿಗಳಿಂದ ಮರಿಗಳು ಹೊರಡುವವು. ಹುಳವು ತತ್ತಿಯಿಂದ ಹೊರಬೀಳುವಾಗ ಕ್ರಿಮಿಯ ರೂಪದಲ್ಲಿರುವದಷ್ಟೆ, ಈ ಕ್ರಿಮಿಯು ಸುಮಾರು ಕಾಲಂಗುಲ ಉದ್ದವಿರುವದು. ಈ ಸಣ್ಣ ಕ್ರಿಮಿಯನ್ನು ಲಕ್ಷ್ಯವಿಟ್ಟು ನೋಡಿದರೆ, ಅದು ಅನೇಕ ಭಾಗಗಳು ಕೂಡಿ ಆಗಿರುವದೆಂದು ಕಂಡು ಬರುವದು. ಅದರ ತಲೆಯು ಕಪ್ಪಾಗಿರುವದು; ಅದರ ಮೈಯು ಸ್ವಲ್ಪ ಕಪ್ಪು ಮಿಶ್ರವಾದ ಹಳದಿ ಬಣ್ಣವುಳ್ಳದಾಗಿದ್ದು, ಅದರ ಮೈಮೇಲೆ ಗಂಟುಗಳಲ್ಲಿ ಕಪ್ಪು ಚುಕ್ಕೆಗಳೂ, ರೋಮುಗಳೂ ಕಾಣುವವು.

ಹುಳದ ಮರಿಯು ತತ್ತಿಯಿಂದ ಹೊರಬಿದ್ದ ಒಡನೆಯೆ ಆಹಾರವನ್ನು ತಿನ್ನುವದಕ್ಕೆ ಪ್ರಾರಂಭಿಸುವದು. ಕ್ರಿಮಿಗಳ ಈ ಸ್ವಭಾವವನ್ನು ತಿಳಿದುಕೊಂಡಿದಿಯೋ ಎಂಬಂತೆ, ಪಾತರಗಿತ್ತಿಯು ತನ್ನ ಮರಿಗಳಿಗೆ ಎಲ್ಲಿ ಆಹಾರವು ಸಿಕ್ಕುವದೊ, ಆ ಸ್ಥಳದಲ್ಲಿ ತತ್ತಿಗಳನ್ನಿಡುವದು. ಹುಳಗಳನ್ನು ಸಾಕುವವರು ಕ್ರಿಮಿಗಳು ಹೊರಗೆ ಬರುವದಕ್ಕೆ ಒಂದೆರಡು ದಿನಗಳು ಮುಂಚಿತವಾಗಿಯೆ, ತತ್ತಿಗಳನ್ನು ಕೋಮಲವಾದ ಬೆಡಲ ಎಲೆಗಳ ಮೇಲಿಟ್ಟು ಅವುಗಳನ್ನು ಮುಚ್ಚಿಡಬೇಕು. ತತ್ತಿಗಳಿಂದ ಹೊರಗೆ ಬರುವ ಕ್ರಿಮಿಗಳು ಎಲೆಗಳನ್ನು ಏರಿ ತಿನ್ನಲಾರಂಭಿಸುವವು. ಈ ಕಾಲದಲ್ಲಿ ಕ್ರಿಮಿಗಳು ಎಷ್ಟು ಮೃದುವಾಗಿರುವವೆಂದರೆ, ನಾವು ಅವುಗಳನ್ನು ಕೈಯಿಂದ ಮುಟ್ಟಿದರೆ ಅವುಗಳಿಗೆ ಅಪಾಯ ಉಂಟಾಗಬಹುದು. ಆದ್ದರಿಂದ ಅವುಗಳನ್ನು ಹೊಸ ಎಲೆಗಳ ಮೇಲಿಡ

ವ್ಯತ್ಯಾಸವಲ್ಲವೆಂದು ಹಿಂದೆ ಹೇಳಿರುತ್ತೆ. ಎಲೆ, ಮೊಗ್ಗೆಗಳು ಬಂದರೆ ಮಾತ್ರ ಒಂದು ಭಾಗವನ್ನು ಕಾಂಡವೆಂತಲೂ, ಇಲ್ಲದಿದ್ದರೆ ಬೇರೆಂತಲೂ ತಿಳಿಯಬೇಕೆಂದು ಹೇಳಿ, ಭೂಮಿಯ ಹೊರಭಾಗದಲ್ಲಿ ಕಾಣುವ ಬೇರುಗಳನ್ನು ಹಿಂದಿನ ಅಧ್ಯಾಯದಲ್ಲಿ ವಿವರಿಸಿದ್ದಾಯಿತು. ಈಗ ನಾವು ಭೂಮಿಯ ಒಳಭಾಗದಲ್ಲಿ ಬೆಳೆಯುವ ಕಾಂಡದ ಭಾಗಗಳನ್ನು ಲಕ್ಷಿಸಬೇಕು. ಹಸೀಶುಂಠಿ, ಅರಿಸಿನ, ಕೇಸಿನಗಡ್ಡೆ, ಇವುಗಳಲ್ಲಿ ಗಿಣ್ಣುಗಳೂ, ಮೊಗ್ಗೆಗಳೂ ಇರುವವು. ಪರ್ವಮಧ್ಯಗಳೂ ಕ್ರಮವಾಗಿಯೇ ಇರುವವು. ಗಿಣ್ಣುಗಳ ಸಂದುಗಳಲ್ಲಿರುವ ಕೆಲವು ಮೊಗ್ಗೆಗಳು ಹೊರಕ್ಕೆ ಬಂದು ಬೆಳೆಯುವವು. ಈ ಗುಣಗಳೆಲ್ಲವೂ ಕಾಂಡದ ಸ್ವಭಾವವೇ ಹೊರತು ಬೇರಿನವಲ್ಲ. ಬಟಾಟೆಯಲ್ಲಿ ಗಿಣ್ಣುಗಳು ಸ್ಪಷ್ಟವಾಗಿ ಕಾಣಬೆ ಇದ್ದರೂ ಮೊಗ್ಗೆಗಳು ಬರುವದು ಸುಲಭವಾಗಿ ತಿಳಿಯುವದು. ಈ ಭಾಗಗಳು ಭೂಮಿಯಲ್ಲಿರುವದರಿಂದ ಇವುಗಳನ್ನು ಗುಪ್ತಕಾಂಡಗಳೆಂದು ಕರೆಯುತ್ತೇವೆ. ಗುಪ್ತ ಕಾಂಡಗಳಲ್ಲಿ ಮೂರು ತರಗಳನ್ನು ವಿಶೇಷಿಸಬಹುದು.

(೧) ಮೂಲವಹಗಳು:—ಹಸೀಶುಂಠಿ, ಅರಿಸಿನ, ಕೇಸಿನಗಡ್ಡೆ, ಇವು ನೆಲದೊಳಗೆ ಬೆಳೆದು ಬೇರುಗಳನ್ನು ವಹಿಸಿರುವದರಿಂದ ಇವುಗಳನ್ನು ಮೂಲವಹಗಳೆಂದು ಕರೆಯುತ್ತಾರೆ. ಇವು ನೆಲದಲ್ಲಿ ಎಲ್ಲ ಕಡೆಗಳಲ್ಲಿ ವ್ಯಾಪಿಸಿ ಬೆಳೆಯುತ್ತಿರುವವು. ಇವುಗಳಲ್ಲಿ ನೆಲದ ಮೇಲ್ಭಾಗದ ಕಡೆಗಿರುವ ಪಾರ್ಶ್ವದಲ್ಲಿ ಮೊಗ್ಗೆಗಳು, ಕೆಳಗಿನ ಭಾಗದಲ್ಲಿ ಬೇರುಗಳು ಇರುತ್ತವೆ. ಯಾಲಕ್ಕಿ, ಬಜೆ, ಇವು ಮೂಲವಹಗಳೇ.

(೨) ಗೆಡ್ಡೆಗಳು:—ಕೆಲವು ಸಸ್ಯಗಳಲ್ಲಿ ಕಾಂಡದ ಶಾಖೆಗಳು ಭೂಮಿಯೊಳಗೆ ಬೆಳೆಯುವವು. ಬಟಾಟೆ (ಆಲೂಗೆಡ್ಡೆ) ಈ ವಿಧವಾದುದೇ. ಶಾಖೆಗಳು ಉದ್ದವಾಗದೆ, ಕುಗ್ಗಿ ದಪ್ಪನಾಗುವದರಿಂದ ಗಿಣ್ಣುಗಳ ಕ್ರಮವೂ, ಅವುಗಳ ಅಂತರವೂ ತಪ್ಪಿ ಹೋಗುವವು. ಸುವರ್ಣಗೆಡ್ಡೆಯ ಗಿಡದಲ್ಲುಂಟಾಗುವ ಗೆಡ್ಡೆಯಲ್ಲಿ ಅಲ್ಲಲ್ಲಿ ಮೊಗ್ಗೆಗಳು ಕಾಣುವವು. ಈ ಬಗೆಯಾದ ಗಿಡಗಳಲ್ಲಿ ಕಾಂಡಗಳು ಉದ್ದವಾಗಿ ಬೆಳೆಯದೆ, ಗಿಡ್ಡವಾಗಿ ದಪ್ಪವಾಗಿರುತ್ತಿರುವದರಿಂದ ಇವುಗಳನ್ನು ಗೆಡ್ಡೆಗಳೆಂದು ಕರೆಯುತ್ತಾರೆ.

ಪ್ರಕೃತಿವಿಮರ್ಶೀಯ ಪತ್ರಿಕೆಗಳು. ನ. ೧.

(ಎಪ್ರೆಲ್ ತಿಂಗಳಿಂದ ಮುಂದೆ ಸಾಗಿದ್ದು.)

ಪಾತರಗಿತ್ತಿಯು ಬೆಡಲಗಿಡದ ಎಲೆಯ ಮೇಲೆ ತತ್ತಿಗಳನ್ನಿಟ್ಟು ಸ್ವಲ್ಪ ಕಾಲದಲ್ಲಿಯೆ ಸತ್ತು ಹೋಗುವದು. ತತ್ತಿಗಳಿಂದ ಮರಿಗಳಾಗುವದಕ್ಕೆ ಶಾಖವು ಅವಶ್ಯಕ. ಕಾಡುಗಳಲ್ಲಿ ಗಿಡಗಳ ಎಲೆಗಳ ಮೇಲಿರುವ ತತ್ತಿಗಳಿಗೆ ಬೇಕಾದ ಉಷ್ಣವು ಸೂರ್ಯನ ರಶ್ಮಿಗಳಿಂದ ಸಿಕ್ಕುವದು. ನಾವು ಮನೆಗಳಲ್ಲಿ ಹುಳಗಳನ್ನು ಪೋಷಿಸಬೇಕೆಂದರೆ, ಅವುಗಳ ತತ್ತಿಗಳನ್ನು ಬೆಚ್ಚಗಿರುವ ಸ್ಥಳಗಳಲ್ಲಿಡಬೇಕು. ತತ್ತಿಗಳಿಂದ ಮರಿಗಳು ಹೊರಬೀಳುವದಕ್ಕೆ ಬೇಕಾದ ಕಾಲವು ಆಯಾ ಋತುಧರ್ಮವನ್ನನುಸರಿಸಿರುತ್ತದೆ. ಸಾಧಾರಣವಾಗಿ ೭ ರಿಂದ ೧೫ ದಿವಸಗಳ ನಂತರ ತತ್ತಿಗಳಿಂದ ಮರಿಗಳು ಹೊರಡುವವು. ಹುಳವು ತತ್ತಿಯಿಂದ ಹೊರಬೀಳುವಾಗ ಕ್ರಿಮಿಯ ರೂಪದಲ್ಲಿರುವದಷ್ಟೆ, ಈ ಕ್ರಿಮಿಯು ಸುಮಾರು ಕಾಲಂಗುಲ ಉದ್ದವಿರುವದು. ಈ ಸಣ್ಣ ಕ್ರಿಮಿಯನ್ನು ಲಕ್ಷ್ಯವಿಟ್ಟು ನೋಡಿದರೆ, ಅದು ಅನೇಕ ಭಾಗಗಳು ಕೂಡಿ ಆಗಿರುವದೆಂದು ಕಂಡು ಬರುವದು. ಅದರ ತಲೆಯು ಕಪ್ಪಾಗಿರುವದು; ಅದರ ಮೈಯು ಸ್ವಲ್ಪ ಕಪ್ಪು ಮಿಶ್ರವಾದ ಹಳದಿ ಬಣ್ಣವುಳ್ಳದಾಗಿದ್ದು, ಅದರ ಮೈಮೇಲೆ ಗಂಟುಗಳಲ್ಲಿ ಕಪ್ಪು ಚುಕ್ಕೆಗಳೂ, ರೋಮಗಳೂ ಕಾಣುವವು.

ಹುಳದ ಮರಿಯು ತತ್ತಿಯಿಂದ ಹೊರಬಿದ್ದ ಒಡನೆಯೆ ಆಹಾರವನ್ನು ತಿನ್ನುವದಕ್ಕೆ ಪ್ರಾರಂಭಿಸುವದು. ಕ್ರಿಮಿಗಳ ಈ ಸ್ವಭಾವವನ್ನು ತಿಳಿದುಕೊಂಡಿದಿಯೋ ಎಂಬಂತೆ, ಪಾತರಗಿತ್ತಿಯು ತನ್ನ ಮರಿಗಳಿಗೆ ಎಲ್ಲಿ ಆಹಾರವು ಸಿಕ್ಕುವದೊ, ಆ ಸ್ಥಳದಲ್ಲಿ ತತ್ತಿಗಳನ್ನಿಡುವದು. ಹುಳಗಳನ್ನು ಸಾಕುವವರು ಕ್ರಿಮಿಗಳು ಹೊರಗೆ ಬರುವದಕ್ಕೆ ಒಂದೆರಡು ದಿನಗಳು ಮುಂಚಿತವಾಗಿಯೆ, ತತ್ತಿಗಳನ್ನು ಕೋಮಲವಾದ ಬೆಡಲ ಎಲೆಗಳ ಮೇಲಿಟ್ಟು ಅವುಗಳನ್ನು ಮುಚ್ಚಿಡಬೇಕು. ತತ್ತಿಗಳಿಂದ ಹೊರಗೆ ಬರುವ ಕ್ರಿಮಿಗಳು ಎಲೆಗಳನ್ನು ಏರಿ ತಿನ್ನಲಾರಂಭಿಸುವವು. ಈ ಕಾಲದಲ್ಲಿ ಕ್ರಿಮಿಗಳು ಎಷ್ಟು ಮೃದುವಾಗಿರುವವೆಂದರೆ, ನಾವು ಅವುಗಳನ್ನು ಕೈಯಿಂದ ಮುಟ್ಟಿದರೆ ಅವುಗಳಿಗೆ ಅಪಾಯ ಉಂಟಾಗಬಹುದು. ಆದುದರಿಂದ ಅವುಗಳನ್ನು ಹೊಸ ಎಲೆಗಳ ಮೇಲಿಡ

ಬೇಕಾದರೆ, ಅವು ಹತ್ತಿರುವ ಎಲೆಗಳ ಚೂರುಗಳ ಸಹಿತ ಇಡಬೇಕು. ಇತರ ಕ್ರಿಮಿಗಳ ಹಾಗೆ ರೆಶ್ಮೆಯ ಹುಳವು ವಿಶೇಷ ಕೂಳುಬಾಕತನದಿಂದ ಆಹಾರವನ್ನು ತಿನ್ನುತ್ತ, ಸುಮಾರು ೩೦ ದಿವಸಗಳಲ್ಲಿ ೨ ರಿಂದ ೨½ ಅಂಗುಲ ಉದ್ದವಾಗಿಯೂ, ತಕ್ಕಷ್ಟು ಗಾತ್ರವಾಗಿಯೂ ಬೆಳೆಯುವದು. ಕ್ರಿಮಿಯು ದೊಡ್ಡದಾಗುತ್ತ ಹೋದಂತೆ, ಆಗಾಗ್ಗೆ ಪರೆ ಬಿಡುವದು. ಒಂದೊಂದು ಸಾರೆ ಪರೆಬಿಡುವಾಗಲೂ ಅದಕ್ಕೆ ಹೊಸ ಚರ್ಮವು ಬರುವದಷ್ಟೆ. ಇದರಿಂದ ಅದರ ಬಣ್ಣವೂ ಕ್ರಮಕ್ರಮವಾಗಿ ವ್ಯತ್ಯಾಸವಾಗುವಂತೆ ಕಾಣುವದು. ಕ್ರಿಮಿಯು ಪೂರ್ಣ ಬೆಳವಣಿಗೆಯನ್ನು ಹೊಂದುವದೊದರೊಳಗಾಗಿ ೪ ರಿಂದ ೫ ಸಾರೆ ಪರೆಬಿಡುವದು.

ಪರೆಬಿಡುವ ಕಾಲದಲ್ಲಿ ಒಂದೆರಡು ದಿನಗಳು ಆಹಾರವನ್ನು ತಿನ್ನುವದಿಲ್ಲ. ಹಳೆಯ ಚರ್ಮವು ಹೋಗಿ ಹೊಸ ಚರ್ಮವು ಬಂದ ಒಡನೆಯೆ, ಅದರ ಅಪರಿಮಿತವಾದ ಹಸಿವನ್ನು ತೀರಿಸಿಕೊಳ್ಳುವದೋ ಅನ್ನುವಂತೆ ಅತ್ಯಾತುರದಿಂದ ತಿನ್ನಲಾರಂಭಿಸುವದು. ಮೊದಲನೇ ಸಾರೆ ಪರೆ ಬಿಟ್ಟಾಗ, ಅದರ ಉದ್ದವು ಮೊದಲಿನ ಎರಡರಷ್ಟು ಇದ್ದು, ಅದರ ಮೈಮೇಲೆ ಮುಳ್ಳುಗಳು ಬರಲಾರಂಭಿಸುವವು. ಅದು ಕಡೆಯ ಸಾರೆ ಪರೆಬಿಟ್ಟನಂತರ ಅದರ ಮೈಯು ಹಳದೀ ಬಣ್ಣದ್ದಾಗಿರುವದು. ಕ್ರಿಮಿಯ ಅಂಗರಚನೆಯನ್ನು ನಿರೀಕ್ಷಿಸುವದಕ್ಕೆ ಇದು ಸರಿಯಾದ ಕಾಲವು. ಈಗ ಅದರ ಎಲ್ಲ ಭಾಗಗಳು ಸ್ಪಷ್ಟವಾಗಿ ಕಾಣುವವು. ಮತ್ತು ಅದನ್ನು ಕೈಯಲ್ಲಿ ಹಿಡಿಯುವದರಿಂದ ಅದಕ್ಕೆ ಅಪಾಯವಾಗುವ ಸಂಭವವಿರುವದಿಲ್ಲ. ಅದರ ಅಂಗರಚನೆಯು ಹಿಂದೆ ವಿವರಿಸಿದ ಕ್ರಿಮಿಗಳದರಂತೆ ಇರುವದು. ಕ್ರಿಮಿಯು ಪೂರ್ಣವಾದ ಬೆಳೆಯನ್ನು ಹೊಂದಿದ ಮೇಲೆ ಆಹಾರ ತಿನ್ನುವದನ್ನು ಬಿಟ್ಟುಬಿಡುವದು. ಆಗ ಅದರ ಮೈಮೇಲಿರುವ ಮುಳ್ಳುಗಳ ಮೇಲೆ ಕೈಯಾಡಿಸಿದರೆ "ಕರಕರ" ವೆಂಬ ಶಬ್ದವು ಆಗುವದು. ಆಗ ಅದಕ್ಕೆ ಮುಂದಿನ ಅವಸ್ಥೆಯು ಬರಲು ಕಾಲವು ಒದಗಿರುವದೆಂದು ತಿಳಿಯಬೇಕು. ಈ ಸಮಯದಲ್ಲಿ ಕೀಟವು ಕೋಶವನ್ನು ಏರ್ಪಡಿಸಿಕೊಳ್ಳುವದಕ್ಕೆ ಸುರಕ್ಷಿತವಾದ ಸ್ಥಳವನ್ನು ಹುಡುಕಲು ಸ್ವಲ್ಪ ಅತ್ತಿತ್ತ ತಿರುಗಾಡುತ್ತದೆ. ಸರಿಯಾದ ಆಶ್ರಯವು ಸಿಕ್ಕಿದ ಕೂಡಲೆ ತನ್ನ ಕೋಶವನ್ನು ಕಟ್ಟುವದಕ್ಕೆ ಪ್ರಾರಂಭಿಸುವದು.

ಕೀಟವು ಕೋಶವನ್ನು ಯಾವ ಪದಾರ್ಥಗಳಿಂದ ಕಟ್ಟುತ್ತದೆ ಮತ್ತು ಹೇಗೆ ಕಟ್ಟುತ್ತದೆ ಎಂದು ಅನೇಕರಿಗೆ ತೋರಬಹುದು. ನಾವು ಚನ್ನಾಗಿ ಗಮನಿಸಿ ನೋಡಿದರೆ, ಇದರ ಬಾಯಿಯ ಕೆಳಗೆ ಒಂದು ರಂಧ್ರವು ಕಾಣುವದು. ಕ್ರಿಮಿಯು ಈ ರಂಧ್ರದಿಂದ ಅಂಟಿನಂತಿರುವ ತಂತುಗಳನ್ನು ಹೊರಗೆ ತೆಗೆದು, ತನ್ನ ಕಾಲುಗಳಿಂದ ಅವುಗಳನ್ನು ತನ್ನ ಸುತ್ತುಮುತ್ತು ಸುತ್ತಿಕೊಂಡು ಗೂಡನ್ನು ರಚಿಸುವದು. ಈ ತಂತುಗಳು ಬಿಸಿಯಾದ ಬೆಲ್ಲದ ಪಾಕದಿಂದ ಬರುವ ತಂತುಗಳಂತೆ ಇದ್ದು ಒಣಗಿದಾಗ ಗಟ್ಟಿಯಾಗುತ್ತವೆ. ಜೇಡಹುಳದ ಬಲೆಯು ಇದೇ ತೆರನಾದ ತಂತುಗಳಿಂದ ರಚಿಸಲ್ಪಟ್ಟಿರುತ್ತದೆ. ಈ ಪ್ರಕಾರ ಗೂಡನ್ನು ಕಟ್ಟುವದಕ್ಕೆ ೨,೩ ದಿವಸಗಳು ಹಿಡಿಯುವವು. ಕೋಶವು ಪೂರ್ಣವಾದ ನಂತರ ಕೀಟವು ಅದರೊಳಗೆ ಸೇರಿಕೊಂಡು ಸ್ವಸ್ಥವಾಗಿರುವದು. ಈ ಕಾಲದಲ್ಲಿ ಅದು ಆಹಾರವನ್ನು ಅಪೇಕ್ಷಿಸುವದೂ ಇಲ್ಲ, ಯಾವ ಚಲನೆಯನ್ನು ತೋರಿಸುವದೂ ಇಲ್ಲ. ಕೀಟವು ಈ ಅವಸ್ಥೆಯಲ್ಲಿ ೧೫ ದಿವಸಗಳವರಿಗೂ ಇರುವದು. ಅದು ಈ ಸ್ಥಿತಿಯಲ್ಲಿರುವಾಗ ಅದರ ರಚನೆಯನ್ನು ತಿಳಿಯಬೇಕೆಂಬುವವು ಒಂದು ಕೋಶವನ್ನು ಸ್ವಲ್ಪ ತೆರೆದು ನೋಡಿದರೆ ಅದರ ಆಕಾರದಲ್ಲಿಯೂ ಅಂಗಗಳಲ್ಲಿಯೂ ವಿಚಿತ್ರವಾದ ಬದಲಾವಣೆಗಳುಂಟಾಗುತ್ತಿರುವದು ತಿಳಿಯುವದು. ಅದರ ಎಲ್ಲ ಅಂಗಗಳು ಏರ್ಪಟ್ಟನಂತರ ಅದು ಗೂಡನ್ನು ಭೇದಿಸಿಕೊಂಡು ಹೊರಗೆ ಬರುವದು. ಕೋಶವು ಒಣಗಿ ದಟ್ಟವಾಗಿರುವಾಗ ಅದನ್ನು ಕತ್ತರಿಸಿಕೊಂಡು ಹೊರಕ್ಕೆ ಬರುವದು ಸಾಧ್ಯವಲ್ಲ. ಆದುದರಿಂದ ಕೀಟವು ಒಂದು ದ್ರವ ಪದಾರ್ಥವನ್ನು ಜಿನುಗಿಸಿ ರೇಶ್ಮೆಯನ್ನು ಮೃದುವಾಗುವಂತೆ ಮಾಡಿ, ದಾರಿಯನ್ನು ಬಿಡಿಸಿಕೊಂಡು ಹೊರಗೆ ಬರುವದು. ಇದು ಕೋಶದಿಂದ ಬಂದಾಗ ಇದರ ರೆಕ್ಕೆಗಳು ಒದ್ದೆಯಾಗಿ ಅದರ ಬೆನ್ನಿಗೆ ಹತ್ತಿಕೊಂಡಿರುವವು. ತೇವವು ಆರಿದ ಕೂಡಲೆ ಅದು ಹಾರಲಾರಂಭಿಸುವದು.

ಪತಂಗವು ಹೊರಬಿದ್ದ ಮೇಲೆ ಉಳಿಯುವ ಕೋಶದಿಂದ ರೇಶ್ಮೆಯನ್ನು ತೆಗೆಯುತ್ತಾರೆ. ಹಿಪ್ಪನೇರಳೆಯ (ಕೋರಿಯ) ಎಲೆಗಳ ಮೇಲೆ ಪೋಷಿಸಲ್ಪಡುವ ಹುಳಗಳಿಂದ ರೇಶ್ಮೆಯನ್ನು ತೆಗೆಯಬೇಕಾದರೆ, ಅವು ಕೋಶದಲ್ಲಿರುವಾಗಲೇ ಅವುಗಳನ್ನು ಕೊಲ್ಲಬೇಕಾಗುವದು. ಹುಳವು

ಹೊರಗೆ ಬರುವಾಗ ಗೂಡನ್ನು ಕತ್ತರಿಸಿಕೊಂಡು ಬರುವದರಿಂದ ರೇಶ್ಮೆಯು ಛಿದ್ರವಾಗಿ ಉಪಯೋಗಕ್ಕೆ ಬರುವದಿಲ್ಲ. ಆದುದರಿಂದ ಈ ಹುಳಗಳನ್ನು ಬೆಳೆಸುವವರು ಇವು ಕೋಶದಲ್ಲಿರುವಾಗಲೇ ಅವುಗಳನ್ನು ಬಿಸಿನೀರಿನಲ್ಲಿ ಕುದಿಸಿಯಾಗಲಿ, ಬೆಂಕಿಯ ಮೇಲೆ ಕಾಯಿಸಿಯಾಗಲಿ ಹುಳಗಳನ್ನು ಸಾಯುವಂತೆಮಾಡಿ, ಅನಂತರ ರೇಶ್ಮೆಯ ಎಳೆಯನ್ನು ತೆಗೆಯುವರು. ಇದು ಬಹಳ ಉದ್ದವಾಗಿರುವದು. ಔಡಲ ಎಲೆಯ ಮೇಲೆ ಪೋಷಿಸಲ್ಪಡುವ ಹುಳಗಳ ಕೋಶಗಳಲ್ಲಿ ಈ ವಿಧವಾದ ಉದ್ದವಾದ ಎಳೆಗಳಿರುವದಿಲ್ಲ. ಅದು ಹತ್ತಿಯ ಉಂಡೆಯ ಹಾಗೆ ಅನೇಕ ಸಣ್ಣ ಸಣ್ಣ ತುಂಡುಗಳುಳ್ಳದ್ದಾಗಿರುವದರಿಂದ, ಪತಂಗವು ಹೊರಗೆ ಬರುವದರಿಂದ ಗೂಡು ಕೆಡುವದಿಲ್ಲ. ಆದುದರಿಂದ ಈ ಹುಳಗಳನ್ನು ಕೊಲ್ಲಬೇಕಾದದ್ದು ಅನವಶ್ಯಕ. ಔಡಲ ಎಲೆಗಳ ಮೇಲೆ ಪೋಷಿಸಲ್ಪಡುವ ರೇಶ್ಮೆಯ ಹುಳದ ಪಾತರಗಿತ್ತಿಯು ನಾಶೀಪುಡಿ ಬಣ್ಣವುಳ್ಳದ್ದಾಗಿ ಅದರ ರೆಕ್ಕೆಗಳ ಮೇಲೆ ವಿವಿಧಾಕೃತಿಗಳನ್ನು ಹೊಂದಿರುವದು. ಈ ಪಾತರಗಿತ್ತಿಯು ಆಹಾರವನ್ನಪೇಕ್ಷಿಸುವದಿಲ್ಲ. ಹಿಂದೆ ಕೆಲವು ಪತಂಗಗಳಿಗೆ ಒಂದು ಬಗೆಯಾದ ಸೊಂಡಿಲಿರುವದೆಂದು ಹೇಳಿರುವದಷ್ಟೆ. ರೇಶ್ಮೆಯ ಹುಳದ ಪಾತರಗಿತ್ತಿಗೆ ಈ ವಿಧವಾದ ಸೊಂಡಿಲಿರುವದಿಲ್ಲ. ಪಾತರಗಿತ್ತಿಗಳು ಕೋಶದಿಂದ ಬಂದ ಎರಡು ಮೂರು ದಿವಸಗಳಲ್ಲಿ ತತ್ತಿಗಳನ್ನಿಟ್ಟು ಸತ್ತುಹೋಗುವವು. ಈ ಪ್ರಕಾರ ಒಂದು ಬೀಡು ಮುಗಿಯುವದಕ್ಕೆ, ಅಂದರೆ ತತ್ತಿಯಿಂದ ಪಾತರಗಿತ್ತಿಯಾಗುವದಕ್ಕೆ ೪೫ ದಿವಸಗಳು ಹಿಡಿಯುತ್ತದೆ.

ರೇಶ್ಮೆಯ ಹುಳವನ್ನು ಸಾಕುವವರಿಗೆ ಕೆಲವು ಸೂಚನೆಗಳು.

ಗ್ರಾಮಶಾಲೆಗಳಲ್ಲಿ ರೇಶ್ಮೆಯ ಹುಳವನ್ನು ಸಾಕುವದಕ್ಕೆ ಅನೇಕ ಅನುಕೂಲಗಳಿರುತ್ತವೆ. ಇದರಿಂದ ಪ್ರಕೃತಿವಿಮರ್ಶೆಯ ಪಾಠಕ್ಕೆ ಸಹಾಯವಾಗುವದಲ್ಲದೆ ಮಕ್ಕಳಿಗೆ ಲಾಭಕರವಾದ ಒಂದು ಅಭ್ಯಾಸವನ್ನು ಕಲಿಸಲು ಅವಕಾಶವಿರುವದು. ಹಿಪ್ಪನೇರಳೆ ಗಿಡವು ಔಡಲ ಗಿಡದ ಹಾಗೆ ಎಲ್ಲೆಲ್ಲಿಯೂ ಬೆಳೆಯುವದಿಲ್ಲ. ಆದುದರಿಂದ ಔಡಲ ಎಲೆಗಳಿಂದ ವೃದ್ಧಿಹೊಂದುವ ಹುಳಗಳನ್ನು ಪೋಷಿಸುವದು ಶಾಲೆಗಳಿಗೆ ಸುಲಭವಾಗಿರುವದು. ಈ ಪ್ರಾಂತ್ಯಗಳಲ್ಲಿ ಹವೆಯು ಅವು ಬಾಳುವದಕ್ಕೆ ಅನು

ಕೂಲವಾಗಿಯೆ ಇರುತ್ತದೆ. ಈ ಕೆಲಸಕ್ಕೆ ಹೆಚ್ಚು ಸಾಮಗ್ರಿಗಳು ಬೇಕಾಗಿರುವದಿಲ್ಲ. ಕೆಲವು ಬಿದರಿನ ಬುಟ್ಟಿಗಳು, ಜಂದ್ರಿಕೆಗಳು (ಅಗಲವಾದ ತಟ್ಟೆಯಂತಿರುವವು) ಖಾನೆಗಳುಳ್ಳ ಒಂದು ಅಟ್ಟಿಲ, ಇಪ್ಪು ಉಪಕರಣಗಳು ಸಾಕು. ಈ ಹುಳಗಳನ್ನು ಸಾಕುವಸ್ಥಳವು ಹಲ್ಲಿ, ಗುಬ್ಬಿ, ಇರುವೆ ಮೊದಲಾದವು ಬರದ ಹಾಗೆ ಏರ್ಪಟ್ಟಿರಬೇಕು.

ಆರಂಭದಲ್ಲಿ ಕೆಲವು ತತ್ತಿಗಳು ದೊರಕಿದರೆ ಸಾಕು. ಅವುಗಳಿಂದ ನಮಗೆ ಇಪ್ಪಬಂದಷ್ಟು ಹುಳಗಳನ್ನು ಪಡೆಯಬಹುದು.

ತತ್ತಿಗಳು ದೊರಕಿದನಂತರ* ಅವುಗಳಲ್ಲಿ ಚನ್ನಾಗಿರುವವುಗಳನ್ನು ಆರಿಸಿಕೊಂಡು ಬೆಚ್ಚಗಿರುವ ಸ್ಥಳದಲ್ಲಿ ಒಂದು ಸಾರಣಿಗೆಯಲ್ಲಿಡಬೇಕು. ತತ್ತಿಗಳು ಒಡೆಯುವ ಕಾಲಕ್ಕೆ ಅವುಗಳ ಬಣ್ಣವು ಸ್ವಲ್ಪ ಕಪ್ಪಾಗುವದು. ಅದನ್ನು ನೋಡಿ ಆ ಸಮಯ ಬಂದಾಗ ಬೆಡಲ ಗಿಡದ ಕೋಮಲವಾದ ಎಲೆಗಳನ್ನು ತಂದು ಅವುಗಳ ಮೇಲೆ ತತ್ತಿಗಳನ್ನು ಮುಚ್ಚಿಡಬೇಕು. ತತ್ತಿಗಳು ಒಡೆದು ಹೊರಬಿದ್ದ ಹುಳಗಳು ಎಲೆಗಳ ಮೇಲೆ ಏರಿಬಂದ ಹಾಗೆ ಅವುಗಳನ್ನು ಬೇರೆ ಸಾರಣಿಗೆಯಲ್ಲಿಟ್ಟು ಆಹಾರವನ್ನು ಕೊಡುತ್ತ ಬರಬೇಕು. ಮೊದಲು ಮೊದಲು ಮೃದುವಾದ ಎಲೆಗಳನ್ನು ಹಾಕಬೇಕಾದದ್ದು ಅವಶ್ಯಕ. ಹಾಗೆಯೆ ಕ್ರಿಮಿಗಳು ದೊಡ್ಡವಾದ ಮೇಲೆ ಬಲಿತ ಎಲೆಗಳನ್ನು ಕೊಡಬೇಕು. ಆರಂಭದಲ್ಲಿ ಬಲಿತ ಎಲೆಗಳನ್ನು ಆಹಾರವಾಗಿ ಕೊಡುವದರಿಂದಲೂ ದೊಡ್ಡವಾದ ಮೇಲೆ ಎಳೆಯ ಚಿಗುರನ್ನು ಕೊಡುವದರಿಂದಲೂ, ಹುಳಗಳಿಗೆ ರೋಗವು ಬರುವದು. ಕ್ರಿಮಿಗಳಿಗೆ ಆಹಾರವನ್ನು ದಿನಕ್ಕೆ ಮೂರು ನಾಲ್ಕು ಸಾರೆಗೆ ಕಡಮೆಯಿಲ್ಲದೆ ಕೊಡಬೇಕು. ಹೊಸ ಎಲೆಗಳನ್ನು ಸಾಕುವಾಗ ಸಾರಣಿಗೆಯಲ್ಲಿರುವ ಮಲವಿಸರ್ಜನೆಗಳನ್ನು ತೆಗೆದು ಶುದ್ಧ ಮಾಡಬೇಕು. ಈ ಕಶ್ಮಲವನ್ನು ಹುಳಗಳನ್ನು ಸಾಕುವ ಸ್ಥಳದಿಂದ ಬಹುದೂರ ತೆಗೆದು ಕೊಂಡು ಹಾಕಬಹುದು. ಹಾಗಲ್ಲದೆ ಅದನ್ನು ಸವಿೂಪದಲ್ಲಿ ಬಿಸಾಡಿದರೆ ಅದು ಒಣಗಿದನಂತರ ಅದರಿಂದ ಬರುವ ಧೂಳಿಯಿಂದ ಹುಳಗಳಿಗೆ ರೋಗಬರುವದು. ಕ್ರಿಮಿಗಳು ಸಣ್ಣವಾಗಿರುವಾಗ ಅವುಗಳನ್ನು ಕೈಯಿಂ

*ಮುಂಬಯಿ ಇಲಾಖೆಯ ಒಕ್ಕಲತನದ ಖಾತೆಯ ಅಧಿಕಾರಸ್ಥರಿಗೆ ಬರೆದರೆ ತತ್ತಿಗಳು ಬೆಲೆಯಾದ [illegible] ತರಿಸಿಕೊಡಲ್ಪಡುವವು.

ಹೊರಗೆ ಬರುವಾಗ ಗೂಡನ್ನು ಕತ್ತರಿಸಿಕೊಂಡು ಬರುವದರಿಂದ ರೇಶ್ಮೆಯು ಛಿದ್ರವಾಗಿ ಉಪಯೋಗಕ್ಕೆ ಬರುವದಿಲ್ಲ. ಆದುದರಿಂದ ಈ ಹುಳಗಳನ್ನು ಬೆಳೆಸುವವರು ಇವು ಕೋಶದಲ್ಲಿರುವಾಗಲೇ ಅವುಗಳನ್ನು ಬಿಸಿನೀರಿನಲ್ಲಿ ಕುದಿಸಿಯಾಗಲಿ, ಬೆಂಕಿಯ ಮೇಲೆ ಕಾಯಿಸಿಯಾಗಲಿ ಹುಳಗಳನ್ನು ಸಾಯುವಂತೆಮಾಡಿ; ಅನಂತರ ರೇಶ್ಮೆಯ ಎಳೆಯನ್ನು ತೆಗೆಯುವರು. ಇದು ಬಹಳ ಉದ್ದವಾಗಿರುವದು. ಔಡಲ ಎಲೆಯ ಮೇಲೆ ಪೋಷಿಸಲ್ಪಡುವ ಹುಳಗಳ ಕೋಶಗಳಲ್ಲಿ ಈ ವಿಧವಾದ ಉದ್ದವಾದ ಎಳೆಗಳಿರುವದಿಲ್ಲ. ಅದು ಹತ್ತಿಯ ಉಂಡೆಯ ಹಾಗೆ ಅನೇಕ ಸಣ್ಣ ಸಣ್ಣ ತುಂಡುಗಳುಳ್ಳದ್ದಾಗಿರುವದರಿಂದ, ಪತಂಗವು ಹೊರಗೆ ಬರುವದರಿಂದ ಗೂಡು ಕೆಡುವದಿಲ್ಲ. ಆದುದರಿಂದ ಈ ಹುಳಗಳನ್ನು ಕೊಲ್ಲಬೇಕಾದದ್ದು ಅನವಶ್ಯಕ. ಔಡಲ ಎಲೆಗಳ ಮೇಲೆ ಪೋಷಿಸಲ್ಪಡುವ ರೇಶ್ಮೆಯ ಹುಳದ ಪಾತರಗಿತ್ತಿಯು ನಾಶೀಪುಡಿ ಬಣ್ಣವುಳ್ಳದ್ದಾಗಿ ಅದರ ರೆಕ್ಕೆಗಳ ಮೇಲೆ ವಿವಿಧಾಕೃತಿಗಳನ್ನು ಹೊಂದಿರುವದು. ಈ ಪಾತರಗಿತ್ತಿಯು ಆಹಾರವನ್ನಪೇಕ್ಷಿಸುವದಿಲ್ಲ. ಹಿಂದೆ ಕೆಲವು ಪತಂಗಗಳಿಗೆ ಒಂದು ಬಗೆಯಾದ ಸೊಂಡಿಲಿರುವದೆಂದು ಹೇಳಿರುವದಷ್ಟೆ. ರೇಶ್ಮೆಯ ಹುಳದ ಪಾತರಗಿತ್ತಿಗೆ ಈ ವಿಧವಾದ ಸೊಂಡಿಲಿರುವದಿಲ್ಲ. ಪಾತರಗಿತ್ತಿಗಳು ಕೋಶದಿಂದ ಬಂದ ಎರಡು ಮೂರು ದಿವಸಗಳಲ್ಲಿ ತತ್ತಿಗಳನ್ನಿಟ್ಟು ಸತ್ತುಹೋಗುವವು. ಈ ಪ್ರಕಾರ ಒಂದು ಬೀಡು ಮುಗಿಯುವದಕ್ಕೆ, ಅಂದರೆ ತತ್ತಿಯಿಂದ ಪಾತರಗಿತ್ತಿಯಾಗುವದಕ್ಕೆ ೪೫ ದಿವಸಗಳು ಹಿಡಿಯುತ್ತದೆ.

ರೇಶ್ಮೆಯ ಹುಳವನ್ನು ಸಾಕುವವರಿಗೆ ಕೆಲವು ಸೂಚನೆಗಳು.

ಗ್ರಾಮಶಾಲೆಗಳಲ್ಲಿ ರೇಶ್ಮೆಯ ಹುಳವನ್ನು ಸಾಕುವದಕ್ಕೆ ಅನೇಕ ಅನುಕೂಲಗಳಿರುತ್ತವೆ. ಇದರಿಂದ ಪ್ರಕೃತಿವಿಮರ್ಶೆಯ ಪಾಠಕ್ಕೆ ಸಹಾಯವಾಗುವದಲ್ಲದೆ ಮಕ್ಕಳಿಗೆ ಲಾಭಕರವಾದ ಒಂದು ಅಭ್ಯಾಸವನ್ನು ಕಲಿಸಲು ಅವಕಾಶವಿರುವದು. ಹಿಪ್ಪನೇರಳೆ ಗಿಡವು ಔಡಲ ಗಿಡದ ಹಾಗೆ ಎಲ್ಲೆಲ್ಲಿಯೂ ಬೆಳೆಯುವದಿಲ್ಲ. ಆದುದರಿಂದ ಔಡಲ ಎಲೆಗಳಿಂದ ಸಮೃದ್ಧಿಹೊಂದುವ ಹುಳಗಳನ್ನು ಪೋಷಿಸುವದು ಶಾಲೆಗಳಿಗೆ ಸುಲಭವಾಗಿರುವದು. ಈ ಪ್ರಾಂತ್ಯಗಳಲ್ಲಿ ಹವೆಯು ಅವು ಬಾಳುವದಕ್ಕೆ ಅನು

ಕೂಲವಾಗಿಯೆ ಇರುತ್ತದೆ. ಈ ಕೆಲಸಕ್ಕೆ ಹೆಚ್ಚು ಸಾಮಗ್ರಿಗಳು ಬೇಕಾಗಿರುವದಿಲ್ಲ. ಕೆಲವು ಬಿದರಿನ ಬುಟ್ಟಿಗಳು, ಚಂದ್ರಿಕೆಗಳು (ಅಗಲವಾದ ತಟ್ಟೆಯಂತಿರುವವು) ಖಾನೆಗಳುಳ್ಳ ಒಂದು ಅಟ್ಟಿಲ, ಇಷ್ಟು ಉಪಕರಣಗಳು ಸಾಕು. ಈ ಹುಳಗಳನ್ನು ಸಾಕುವಸ್ಥಳವು ಹಲ್ಲಿ, ಗುಬ್ಬಿ, ಇರುವೆ ಮೊದಲಾದವು ಬರದ ಹಾಗೆ ಏರ್ಪಟ್ಟಿರಬೇಕು.

ಆರಂಭದಲ್ಲಿ ಕೆಲವು ತತ್ತಿಗಳು ದೊರಕಿದರೆ ಸಾಕು. ಅವುಗಳಿಂದ ನಮಗೆ ಇಷ್ಟಬಂದಷ್ಟು ಹುಳಗಳನ್ನು ಪಡೆಯಬಹುದು.

ತತ್ತಿಗಳು ದೊರಕಿದನಂತರ* ಅವುಗಳಲ್ಲಿ ಚನ್ನಾಗಿರುವವುಗಳನ್ನು ಆರಿಸಿಕೊಂಡು ಬೆಚ್ಚಗಿರುವ ಸ್ಥಳದಲ್ಲಿ ಒಂದು ಸಾರಣಿಗೆಯಲ್ಲಿಡಬೇಕು. ತತ್ತಿಗಳು ಒಡಿಯುವ ಕಾಲಕ್ಕೆ ಅವುಗಳ ಬಣ್ಣವು ಸ್ವಲ್ಪ ಕಪ್ಪಾಗುವದು. ಅದನ್ನು ನೋಡಿ ಆ ಸಮಯ ಬಂದಾಗ ಔಡಲ ಗಿಡದ ಕೋಮಲವಾದ ಎಲೆಗಳನ್ನು ತಂದು ಅವುಗಳ ಮೇಲೆ ತತ್ತಿಗಳನ್ನು ಮುಚ್ಚಿಡಬೇಕು. ತತ್ತಿಗಳು ಒಡೆದು ಹೊರಬಿದ್ದ ಹುಳಗಳು ಎಲೆಗಳ ಮೇಲೆ ಏರಿಬಂದ ಹಾಗೆ ಅವುಗಳನ್ನು ಬೇರೆ ಸಾರಣಿಗೆಯಲ್ಲಿಟ್ಟು ಆಹಾರವನ್ನು ಕೊಡುತ್ತ ಬರಬೇಕು. ಮೊದಲು ಮೊದಲು ಮೃದುವಾದ ಎಲೆಗಳನ್ನು ಹಾಕಬೇಕಾದದ್ದು ಅವಶ್ಯಕ. ಹಾಗೆಯೆ ಕ್ರಿಮಿಗಳು ದೊಡ್ಡವಾದ ಮೇಲೆ ಬಲಿತ ಎಲೆಗಳನ್ನು ಕೊಡಬೇಕು. ಆರಂಭದಲ್ಲಿ ಬಲಿತ ಎಲೆಗಳನ್ನು ಆಹಾರವಾಗಿ ಕೊಡುವದರಿಂದಲೂ ದೊಡ್ಡವಾದ ಮೇಲೆ ಎಳೆಯ ಚಿಗುರನ್ನು ಕೊಡುವದರಿಂದಲೂ, ಹುಳಗಳಿಗೆ ರೋಗವು ಬರುವದು. ಕ್ರಿಮಿಗಳಿಗೆ ಆಹಾರವನ್ನು ದಿನಕ್ಕೆ ಮೂರು ನಾಲ್ಕು ಸಾರೆಗೆ ಕಡಮೆಯಿಲ್ಲದೆ ಕೊಡಬೇಕು. ಹೊಸ ಎಲೆಗಳನ್ನು ಸಾಕುವಾಗ ಸಾರಣಿಗೆಯಲ್ಲಿರುವ ಮಲವಿಸರ್ಜನೆಗಳನ್ನು ತೆಗೆದು ಶುದ್ಧ ಮಾಡಬೇಕು. ಈ ಕಶ್ಮಲವನ್ನು ಹುಳಗಳನ್ನು ಸಾಕುವ ಸ್ಥಳದಿಂದ ಬಹುದೂರ ತೆಗೆದುಕೊಂಡು ಹಾಕಬಹುದು. ಹಾಗಲ್ಲದೆ ಅದನ್ನು ಸವಿೂಪದಲ್ಲಿ ಬಿಸಾಡಿದರೆ ಅದು ಒಣಗಿದನಂತರ ಅದರಿಂದ ಬರುವ ಧೂಳಿಯಿಂದ ಹುಳಗಳಿಗೆ ರೋಗಬರುವದು. ಕ್ರಿಮಿಗಳು ಸಣ್ಣವಾಗಿರುವಾಗ ಅವುಗಳನ್ನು ಕೈಯಿಂ

*ಮುಂಬಯಿ ಇಲಾಖೆಯ ಒಕ್ಕಲತನದ ಖಾತೆಯ ಅಧಿಕಾರಸ್ಥರಿಗೆ ಬರೆದರೆ ತತ್ತಿಗಳು ಸಿಕ್ಕುವವು ಥಾರ. ಸ ಟಿ.ಗಿನಿಂಗ ಕಾಲೇಜಿನಿಂದಲೂ ತರಿಸಿಕೊಳ್ಳಬಹುದು.

ದ ಮುಟ್ಟಬಾರದು. ಬಾಡಿದ ಎಲೆಗಳನ್ನು ತೆಗೆದು ಹೊಸ ಎಲೆಗಳನ್ನು ಹಾಕುವಾಗಲೂ ಸಾರಣಿಗೆಗಳನ್ನು ಶುದ್ಧಮಾಡುವಾಗಲೂ ಕ್ರಿಮಿಗಳನ್ನು ಕೈಯಿಂದ ಮುಟ್ಟದೆ, ಅವುಗಳು ಹತ್ತಿರುವ ಎಲೆಯ ಭಾಗಗಳನ್ನು ಹರಿದು ಹುಳಗಳು ಸಹಿತ ಹೊಸ ಎಲೆಗಳ ಮೇಲೆ ಇಡಬೇಕು. ಪ್ರತಿದಿವಸವೂ ಕ್ರಿಮಿಗಳನ್ನಿಟ್ಟಿರುವ ಸಾರಣಿಗೆಗಳನ್ನು ಒಂದು ಸಲವಾದರೂ ಶುದ್ಧಮಾಡಬೇಕು. ಹಾಗೆ ಮಾಡದೆ ಹೋದರೆ ಹುಳಗಳಿಗೆ ರೋಗ ಹತ್ತುವದು.

ಕ್ರಿಮಿಗಳು ಬೆಳೆಯುತ್ತ ಬರುವಾಗ ಪರೆ ಬಿಡುತ್ತವಷ್ಟೆ. ಅವು ಆಹಾರವನ್ನು ತಿನ್ನದಂತಾಗಲು ಅವು ಪರೆಬಿಡುವ ಕಾಲವು ಬಂದಿರುವದೆಂದು ತಿಳಿಯಬೇಕು. ಪುನಃ ಅವು ಚಲಿಸುವದಕ್ಕೆ ಪ್ರಾರಂಭಿಸಿದರೆ ಅವುಗಳಿಗೆ ಆಹಾರವನ್ನು ಹಾಕಬೇಕು. ಕ್ರಿಮಿಗಳು ಪೂರ್ಣವಾದ ಬೆಳೆಯನ್ನು ಹೊಂದಿ ಆಹಾರತಿನ್ನುವದನ್ನು ಬಿಟ್ಟಾಗ ಅವುಗಳಿಗೆ ಕೋಶಾವಸ್ಥೆಯು ಬರುವ ಸಮಯವು ಒದಗಿತೆಂದು ತಿಳಿಯಬೇಕು. ಆ ಕಾಲದಲ್ಲಿ ಅವು ಗೂಡುಕಟ್ಟಿಕೊಳ್ಳುವದಕ್ಕೆ ಒಂದು ಬುಟ್ಟಿಯಲ್ಲಿ ಉಜ್ಜುಗೊರಡಿನಿಂದ ತೆಗೆದ ಕಟ್ಟಿಗೆಯ ಸುರಳಿಗಳನ್ನು ಸೇರಿಸಿ ಹುಳಗಳನ್ನು ಅದರಲ್ಲಿ ಬಿಡಬಹುದು. ಕ್ರಿಮಿಗಳನ್ನು ಬಿಟ್ಟು ಒಂದು ವಾರದೊಳಗಾಗಿಯೆ ಎಲ್ಲವು ಕೋಶರೂಪಕ್ಕೆ ಬರುತ್ತವೆ. ಬುಟ್ಟಿಯಿಂದ ಈ ಕೋಶಗಳನ್ನು ಹೊರಗೆ ತೆಗೆದು ಅವುಗಳಿಂದ ಪಾತರಗಿತ್ತಿಗಳು ಬರುವವರಿಗೆ ಅವುಗಳನ್ನು ಹರಡಿಡಬೇಕು.

ಕೋಶದಿಂದ ಪತಂಗಗಳು ಹೊರಬಿದ್ದ ಒಡನೆಯೆ ಅವುಗಳಲ್ಲಿ ಗಂಡು ಹೆಣ್ಣು ಹುಳಗಳನ್ನು ಜೊತೆ ಜೊತೆಯಾಗಿ ಸೇರಿಸಿಡಬೇಕು. ಹೆಣ್ಣು ಹುಳದ ಹೊಟ್ಟೆಯು ಗಂಡು ಹುಳದ ಹೊಟ್ಟೆಗಿಂತ ಅಗಲವಾಗಿಯೂ ಪುಷ್ಟಿಯಾಗಿಯೂ ಇರುವದು. ಈ ವ್ಯತ್ಯಾಸಗಳಿಂದ ಗಂಡು ಹೆಣ್ಣು ಹುಳಗಳ ಭೇದವನ್ನು ತಿಳಿಯಬೇಕು.

ಮರುದಿನ ಹುಳಗಳನ್ನು ಪ್ರತ್ಯೇಕ ಮಾಡಿ ಹೆಣ್ಣು ಹುಳಗಳನ್ನು ತತ್ತಿಗಳನ್ನಿಡುವದಕ್ಕೆ ಬೇರೊಂದು ಬುಟ್ಟಿಯಲ್ಲಿಡಬೇಕು. ಆಯಾ ದಿವಸ ಅವು ಹಾಕುವ ತತ್ತಿಗಳನ್ನು ಬೇರೆ ಬೇರೆಯಾಗಿಡಬೇಕು. ಪತಂಗಗಳು ಹೊರಬಿದ್ದನಂತರ ಕೋಶಗಳನ್ನು ಒಟ್ಟುಗೂಡಿಸಿ ಅವುಗಳನ್ನು

ಶುದ್ಧಮಾಡಬೇಕು. ಒಂದು ಸೇರು ತೂಗತಕ್ಕ ಕೋಶಗಳಿಗೆ ಪಾವಸೇರಿನ ಹಪ್ಪಳಕಾರ (Washing Soda) ವನ್ನು ನೀರಿನಲ್ಲಿ ಹಾಕಿ ಸುಮಾರು ಒಂದು ಘಂಟೆಯ ಕಾಲ ಕುದಿಸಬೇಕು. ಆ ಮೇಲೆ ಅವುಗಳನ್ನು ಒಣಗಿಸಿ ಅವುಗಳಿಂದ ಹತ್ತಿಯಿಂದ ನೂಲು ತೆಗೆಯುವ ಹಾಗೆ ರೇಶ್ಮೆಯ ದಾರವನ್ನು ತೆಗೆಯಬಹುದು. ಈ ರೇಶ್ಮೆಯು ಹಿಪ್ಪನೇರಳೆ (mulberry) ಯ ಎಲೆಯ ಮೇಲೆ ಪೋಷಿಸಲ್ಪಟ್ಟ ಹುಳದ ರೇಶ್ಮೆಯಷ್ಟು ಉತ್ಕೃಷ್ಟವಲ್ಲದಿದ್ದರೂ ಬಹಳ ದಿವಸ ಬಾಳುವದರಿಂದ ವಿಶೇಷವಾಗಿ ಉಪಯೋಗಿಸಲ್ಪಡುತ್ತದೆ.

ಮ. ರಾಮಬ್ರಹ್ಮ.

ನೈತಿಕ ಶಿಕ್ಷಣ.

(ಕಳೆದ ಫೆಬ್ರುವರಿ ತಿಂಗಳಲ್ಲಿ ಹುಬ್ಬಳ್ಳಿಯಲ್ಲಾದ ಶಿಕ್ಷಕ ಸಮ್ಮೇಲನದಲ್ಲಿ ರಾ. ವೆ. ಗೋ. ದೋಣಿಸಾಲ ಇವರು ಓದಿದ ನಿಬಂಧ. ಎಪ್ರೀಲ ತಿಂಗಳ ಸಂಚಿಕೆಯ ೨೪ ನೆಯ ಪುಟದಿಂದ ಮುಂದೆ ಸಾಗಿದ್ದು.)

ಪೃಥ್ವೀರಾಜನ ಇತಿಹಾಸವನ್ನು ಹೇಳುವಾಗ, ಜಯಚಂದನಿಗೂ ಪೃಥ್ವೀ ರಾಜನಿಗೂ ಮೊದಲು ಇದ್ದ ಪ್ರೀತಿಯನ್ನು ವರ್ಣಿಸಬೇಕು. ಅನಂತರ ರಾಜ್ಯದಾಶೆಗಾಗಿ ಅವರಲ್ಲಿ ಆದ ವಿತುಷ್ಪವನ್ನು ಹೇಳಿ ಆದರಿಂದುಂಟಾದ ಪರಿಣಾಮವನ್ನು ಒಳ್ಳೇ ಮನೋವೇಧಕವಾಗಿ ಹೇಳಬೇಕು. ಆದರಿಂದ "ಇಬ್ಬರ ನ್ಯಾಯವು ಮೂರನೇಯವನಿಗೆ ಆಯ" ಎಂಬ ಮಾತಿನ ರಹಸ್ಯವು ಅವರಿಗೆ ಸಹಜವಾಗಿ ತಿಳಿದು ಅವರ ಬಾಯಿಯಿಂದ ಈ ರೀತಿಯ ಅರ್ಥವುಳ್ಳ ಉದ್ಗಾರಗಳು ಹೊರಡುವವು.

ಅದರಂತೆ ಮೊಗಲ ಚಕ್ರವರ್ತಿಯಾದ ಅಕಬರನ ಚರಿತ್ರವನ್ನು ಕಲಿಸುವಾಗ ಅವನಲ್ಲಿರುವ ಪರಧರ್ಮಸಹಿಷ್ಣುತೆಯನ್ನು ಒಳ್ಳೇ ಮನೋವೇಧಕವಾಗಿ ವರ್ಣಿಸಬೇಕು. ಆದರಿಂದ ಧರ್ಮಧರ್ಮಗಳಲ್ಲಿ ಆಗುವ ಕಲಹಗಳಾದರೂ ಕಡಿಮೆಯಾಗುವದಕ್ಕೆ ಅನುಕೂಲವಾಗುವದು.

ಮಹಾರಾಷ್ಟ್ರರಾಜ್ಯಸ್ಥಾಪಕನಾದ ಶಿವಾಜಿಯ ಚರಿತ್ರೆಯನ್ನು ಹೇಳುವಾಗ ಆತನಲ್ಲಿರುವ ಕರ್ತವ್ಯತತ್ಪರತೆಯನ್ನೂ, ಗುರುಭಕ್ತಿಯನ್ನೂ ವಿಶೇಷವಾಗಿ ವರ್ಣಿಸಬೇಕು.

ಹುಚ್ಚಂದ್ರ, ಧರ್ಮ ಮೊದಲಾದ ಮಹಾಮಹಿಮರ ಚರಿತ್ರವನ್ನು ವರ್ಣಿಸುವಾಗ ಅವರಲ್ಲಿರುವ ಸತ್ಯವಂತಿಕೆಯನ್ನೂ, ಅದರಿಂದುಂಟಾದ ಸತ್ಪರಿಣಾಮವನ್ನೂ ಸರಸಾಗಿ ಹೇಳಬೇಕು.

ಈ ಪ್ರಕಾರವಾಗಿ ಇತಿಹಾಸ ಹಾಗು ವಾಚನ ಪಾಠಗಳಿಂದ ಹುಡುಗರಲ್ಲಿ ಕರ್ತವ್ಯ ತತ್ಪರತೆ ಪೂಜ್ಯ ಬುದ್ಧಿ ಧರ್ಮಜಾಗ್ರತಿ ಮೊದಲಾದ ಸದ್ಗುಣಗಳ ಅಂಕುರವು ಸಹಜವಾಗಿ ನೆಲೆಗೊಳ್ಳುವದು.

ಕೇವಲ ನೀತಿಯ ಮಾತನ್ನು ಹೇಳಿದ ಮಾತ್ರಕ್ಕೇನೇ ಹುಡುಗರು ನೀತಿವಂತರಾಗುತ್ತಾರೆಂದು ತಿಳಿಯಕೂಡದು. ನೀತಿಯನ್ನು ಆಟ ನೋಟಗಳಲ್ಲಿ ವಿನೋದಗಳಲ್ಲಿ ಉಪಯೋಗಿಸುವರೋ ಇಲ್ಲವೋ ಎಂಬದನ್ನು ಶಿಕ್ಷಕರು ಮರೆಯಾಗಿ ನಿಂತುನೋಡುತ್ತಿರಬೇಕು. ಕ್ಷಣಿಕ ಲಾಭದ ಆಶೆಗೆ ಬಲಿಬಿದ್ದ ಎಷ್ಟೋ ಹುಡುಗರು ಸಣ್ಣಪುಟ್ಟ ಆಟಗಳಲ್ಲಿ ಸಹ ಇಲ್ಲದ ರಂಟೆ ತೆಗೆಯುತ್ತಿರುವರು. ಒಮ್ಮೊಮ್ಮೆ ವಿನೋದದ ನೆವದಿಂದ ಬೇರೆ ಹುಡುಗರ ಮನಸ್ಸನ್ನು ನಿಷ್ಕಾರಣವಾಗಿ ನೋಯಿಸುವರು. ಇಂಥ ಎಲ್ಲ ಪ್ರಸಂಗಗಳಲ್ಲಿ ಶಿಕ್ಷಕರು ಹುಡುಗರನ್ನು ಸ್ವತಂತ್ರವಾಗಿ ಬಿಡದೆ ತಮ್ಮ ದೃಷ್ಟಿಯೊಳಗೆ ಇಟ್ಟುಕೊಳ್ಳಬೇಕು. ಅಂದರೆಯೇ ನಾವು ಹೇಳಿದ ನೀತಿಯಮಾತನ್ನು ವ್ಯವಹಾರದಲ್ಲಿ ಉಪಯೋಗಿಸಿಕೊಳ್ಳುವ ಚಟವನ್ನು ಅವರಿಗೆ ಹಚ್ಚಿದಂತೆ ಆಗುವದು.

ಮೇಲಿನ ಇಯತ್ತೆಯ ಹುಡುಗರಿಗೆ ಕೆಲವು ಚರಿತ್ರವನ್ನು ಓದಲಿಕ್ಕೆ ಹಚ್ಚಬೇಕು. ಓದಿದ್ದನ್ನು ಅವರಿಂದ ಕೇಳಬೇಕು. ಎಂಥ ಕಟಕನಾದರೂ ಸಹವಾಸಫಲದಿಂದ ಸಜ್ಜನತೆಯನ್ನು ಹೊಂದುವನು. ಹುಡುಗರ ದೃಷ್ಟಿಗೆ ಕೆಟ್ಟ ವಸ್ತುಗಳೂ ಕೆಟ್ಟ ಮಾತುಗಳೂ ಕೆಟ್ಟ ವಿಚಾರಗಳೂ ಬೀಳದಂತೆ ಶಕ್ಯವಿದ್ದಷ್ಟು ಯತ್ನಿಸಿದರೆ ಬಹುಶಃ ಹುಡುಗರು ಅನೀತಿವಂತರಾಗುವ ಸಂಭವವು ಕಡಿಮೆ.

ವಿದ್ಯಾರ್ಥಿಗಳ ಆರಂಭದ ಕಾಲವನ್ನು ಶಿಕ್ಷಕರು ಮಹತ್ವದ್ದಾಗಿ ತಿಳಿಯುವಂತೆ ಅವರ ವಿದ್ಯಾರ್ಥಿದಶೆಯೂ ಉಪಾಂತ್ಯದಕಾಲವೂ ಮಹತ್ವದ್ದೆಂದು ತಿಳಿಯಬೇಕು. ಈ ಕಾಲದಲ್ಲಿ ವಿದ್ಯಾರ್ಥಿಗಳ ಬಾಲ್ಯವು ಮುಗಿದು ಯೌವನವು ಅವರಲ್ಲಿ ತಲೆದೋರಹತ್ತುವದು. ಆಗ ಒಮ್ಮೊಮ್ಮೆ ಅವರ ಮನಸ್ಸು ದುಷ್ಟವಾದ ಪರಿಸ್ಥಿತಿಗೆ ಒಳಗಾಗುವ ಸಂಭವವು ಹೆಚ್ಚುದೆ. ಋತುಗಳು ಬದಲಾಗುವ ಕಾಲದಲ್ಲಿ ನಾವೆಲ್ಲರು ಪ್ರಾವರಣಗಳಲ್ಲಿ ಆಹಾರವಿಹಾರಗಳಲ್ಲಿ ಜಾಕರೂಕರಾಗಿರುವಂತೆ ಶಿಕ್ಷಕರು ವಿದ್ಯಾರ್ಥಿಗಳ ಈ ಕಾಲದಲ್ಲಿ ಒಳ್ಳೇ ಜಾಗರೂಕರಾಗಿರಬೇಕು. ಈ ವಿಷಯದಲ್ಲಿ ತುಸುವುಟ್ಟಿಗೆ ದುರ್ಲಕ್ಷ್ಯವಾದರೆ ಸಾಕು. ವಯೋಧರ್ಮಕ್ಕೆ ಸರಿಯಾಗಿ ಮನಸ್ಸಿನಲ್ಲಿ ಉಂಟಾಗುವ ಕ್ರಾಂತಿಯಿಂದ ಒಮ್ಮೆಲೆ ಅವರು ನೀತಿಭ್ರಷ್ಟರಾಗುವರು. ಆದ್ದರಿಂದ ಶಿಕ್ಷಕರು ಪ್ರೌಢ ವಿದ್ಯಾರ್ಥಿಗಳಿಗೆ ಶಾರೀರಿಕ ವ್ಯಾಯಾಮವನ್ನು ಹೆಚ್ಚಾಗಿ ಮಾಡಿಸ ಬೇಕು. ಶರೀರ ಸಂಪತ್ತೇ ಸಂಪತ್ತು. ಅದನ್ನು ಯಾವಾಗಲೂ ಬೆಳಿಸ ಬೇಕೆಂಬ ಇಚ್ಛೆಯು ಅವರಲ್ಲಿ ಉತ್ಪನ್ನವಾಗಬೇಕು. ಪರಸ್ಪರರಲ್ಲಿ ಕುಸ್ತಿಯನ್ನು ಆಡಿಸುವದರಿಂದಲೂ ಸಾಮು ಬೈತಕುಗಳನ್ನು ತೆಗಿಸುವ ದರಿಂದಲೂ ಶರೀರದ ಸಂಪತ್ತನ್ನು ಬೆಳಿಸುವದರಲ್ಲಿ ಹುಡುಗರು ಮೇಲಾಟಕ್ಕೆ ಬಿದ್ದು ದುಷ್ಟವಾದ ಮನೋವಿಕಾರಗಳಿಗೆ ಸ್ವಲ್ಪವೂ ಇಂಬುಗೊಡುವದಿಲ್ಲ. ಅವರಿಗೆ ಮೇಲಿಂದ ಮೇಲೆ ಬ್ರಹ್ಮಚರ್ಯದ ಮಹತ್ವವನ್ನು ಬ್ರಹ್ಮಚಾರಿಯ ಯೋಗ್ಯತೆಯನ್ನು ವಿಶೇಷವಾಗಿ ವರ್ಣಿಸುತ್ತಿರಬೇಕು. ಶೃಂಗಾರರಸದ ನಾಟಕಗಳಿಗೆ ಅವರನ್ನು ಹೋಗಗೊಡಬಾರದು. ಹಾಗೂ ಆ ತರದ ಗ್ರಂಥಗಳನ್ನು ಓದಗೊಡಬಾರದು. ಈ ಪ್ರಕಾರವಾಗಿ ಶಿಕ್ಷಕರು ದಕ್ಷತೆಯಿಂದಲೂ ಆಸ್ಥೆಯಿಂದಲೂ ಕೆಲಸ ಮಾಡಿದಲ್ಲಿ ಹುಡುಗರು ಬಹುಶಃ ಅನೀತಿವಂತರಾಗುವ ಕಾರಣವಿಲ್ಲ. ಪ್ರಾಚೀನ ಕಾಲದ ವಿದ್ಯಾರ್ಥಿಗಳು ನೀತಿವಂತರಾಗಲಿಕ್ಕೆ ಆ ಕಾಲದ ಗುರುಗಳ ಶುದ್ಧವಾದ ವರ್ತನವೂ ದುಷ್ಟವಿಚಾರಗಳು ಮನಸಿಗೆ ತಾಕದಂತೆ ಶುದ್ಧವಾದ ಹವೆಯುಳ್ಳ ವಿದ್ಯಾರ್ಥಿಗಳನ್ನು ಓದಿಸೋಣವೂ, ಶಾರೀರಿಕ ಸಾಮರ್ಥ್ಯವನ್ನು ಬೆಳಿಸುವಂಥ ಕೆಲವು ಧಾರ್ಮಿಕ ವ್ರತಗಳೂ ಶುದ್ಧವಾದ ಗ್ರಂಥಗಳ ಪಾಠನವೂ ಕಾರಣವಾಗಿದ್ದವು.

ಒಟ್ಟಿಗೆ ಸಮಾಜದ ಸುಸ್ಥಿತಿಗೆ ನೀತಿಯು ಅವಶ್ಯವಾದದ್ದು. ಅದು ಮುಖ್ಯವಾಗಿ ಗುರುಗಳ ಶುದ್ಧ ನರ್ತನವನ್ನೂ ವಿದ್ಯಾರ್ಥಿಗಳ ಮೇಲಿನ ಅವರ ಅಧಿಕಾರವನ್ನೂ ಅವಲಂಬಿಸಿರುತ್ತದೆ.

ವಿದ್ಯಾಖಾತೆಯ ನೋಟೀಸುಗಳು.

ಎಂ. ಆರ್. ಎಮ್. ಜೋಶಿ ಎಮ್. ಎ ಎಲ್. ಎಲ್. ಬಿ. ಮುಂಬಯಿ ಇವರು ಬರೆದ "ಆರೋಗ್ಯ ವಿಜ್ಞಾನ" ಎಂಬ ಕನ್ನಡ ಭಾಷೆಯಲ್ಲಿ ಮುದ್ರಿಸಿದ ಪುಸ್ತಕವು ಮೆ. ಡಾಯರೆಕ್ಟರ ಸಾ. ರವರ ಹುಕುಂ ನಂಬರ ೧೪೫೯ ತಾರೀಖು ೧೯ನೇ ಮೇ ೧೯೧೬ನೇದರ ಪ್ರಕಾರ ಕನ್ನಡ ಪ್ರಾಥಮಿಕ ಶಾಲೆಗಳಲ್ಲಿ ಉಪಯೋಗಿಸುವದಕ್ಕೆ ಮಂಜೂರ ಮಾಡಲ್ಪಟ್ಟಿದೆ. ಕ್ರಯ ೫ ಆಣೆ.

ಮುಂಬಯಿ ಇಲಾಖೆಯೊಳಗಿನ ಮತ್ತು ಸಿಂಧದ ದೇಶಭಾಷೆಯ ಶಾಲಾಧ್ಯಾಪಕರ ಮತ್ತು ಶಾಲಾಧ್ಯಾಪಿಕೆಯರ ೧೯೧೭ನೇ ಇಸವಿಯ ಕಾಯಿದೆಗಳ ಪುರವಣಿಗಳ ತಿದ್ದುಪಡಿಗಳು:—

ತಿದ್ದುಪಡಿ ನಂಬರು ೧೦.

ಮುಂಬಯಿ ಇಲಾಖೆಯ ಮತ್ತು ಸಿಂಧದ ದೇಶಭಾಷೆಯ ಶಾಲಾಧ್ಯಾಪಕರ ಮತ್ತು ಶಾಲಾಧ್ಯಾಪಿಕೆಯರ ಕಾಯಿದೆಯ ೧೦ನೇ ಅಧ್ಯಾಯದ ೧೦ನೇ ನಿಯಮದ ಬದಲಾಗಿ ಕೆಳಗೆ ಬರೆದದ್ದನ್ನು ಸೇರಿಸಿರಿ:—

"ಸರ್ಟಿಫಿಕೇಟುಗಳನ್ನು ಪಡೆದ ಶಿಕ್ಷಕರು ಟ್ರೇನಿಂಗಕಾಲೇಜ ಕೋಡುಗಳ ನಿಯಮುಗಳ ಮೇರೆಗೆ ಸಂಬಳಗಳಿಗೆ ಅರ್ಹರಾಗಿರುವರು. ವಿಶೇಷಕಾರಣಗಳ ಹೊರತು ಹಾಗೂ ಮೆ. ಎಜ್ಯುಕೇಶನ ಇನಸ್ಪೆಕ್ಟರ ಸಾಹೇಬರವರ ಮಂಜೂರಿಯನ್ನು ಮುಂದಾಗಿ ಪಡಕೊಂಡ ಹೊರತು, ಇದಕ್ಕೂ ಹೆಚ್ಚಿನ ಯಾವ ಬಗೆಯ "ಅಲಾವನ್ಸವನ್ನೂ" ಇಂಥ ಶಿಕ್ಷಕರಿಗೆ ಕೊಡಲಾಗದು."

ಗ್ರಾಂಟ ಇನ್ ಕೋಡಿನ ೧೦ನೇ ಅಧ್ಯಾಯದ ೧೧ (೩) ನೆಯ ನಿಯಮದಲ್ಲಿ ಹೇಳಿದ ಪ್ರಕಾರ ಹುಡುಗರನ್ನು ಶಾಲೆಗೆ ಕಳಿಸುವಾಗ

ಹಾಗು ಅವರನ್ನು ಶಾಲೆಯನ್ನು ಬಿಡಿಸುವಾಗ ಆ ಬಗ್ಗೆ ಆ ಹುಡುಗರ ತಾಯಿ ತಂದೆಗಳು ಅಥವಾ ಪಾಲಕರೇ ಅರ್ಜಿಯನ್ನು ಮಾಡತಕ್ಕದ್ದಾಗಿರುತ್ತದೆ. ಹೀಗಿದ್ದು ಈ ನಿಯಮವನ್ನು ಸರಿಯಾಗಿ ಅನುಸರಿಸದೆ, ಕೆಲವು ಶಾಲೆಗಳಲ್ಲಿ ಹುಡುಗರಿಂದಲೇ ಅರ್ಜಿಗಳನ್ನು ತೆಗೆದುಕೊಳ್ಳುವದರಲ್ಲಿ ಬರುತ್ತದೆಂದು ಕಂಡು ಬಂದಿರುತ್ತದೆ. ಆದ ಕಾರಣ ಮೇಲ್ಕಾಣಿಸಿದ ನಿಯಮದಲ್ಲಿ ಹೇಳಿದ ಸಂಗತಿಯ ಕಡೆಗೆ ಯಾವತ್ತೂ ಸರಕಾರೀ ಶಾಲೆಗಳ ಮಾಸ್ತರರ ಲಕ್ಷವನ್ನು ಎಳಿಯಬೇಕೆಂದು ಮೆ. ಡಾಯರೆಕ್ಟರ ಸಾ. ಬಾಹದ್ದೂರವರು ಹುಕುಂ ನಂಬರ ೧೪೫೯ ತಾ. ೭ನೇ ಮಾರ್ಚ ೧೯೦೬ನೇದನ್ನು ಮಾಡಿದ್ದಾರೆ.

ಕಳಿದ ಫಬ್ರುವರಿ ತಿಂಗಳ ಶಾಲಾಪತ್ರಕದ ೨೪ | ೨೫ ನೆ ಪುಟಗಳಲ್ಲಿ ಕನ್ನಡ ಕ್ರಮಿಕ ವಾಚನ ಪುಸ್ತಕಗಳ ಕಡಿಮೆ ಮಾಡಿದ ಕ್ರಯಗಳು ಪ್ರಸಿದ್ಧಮಾಡಲ್ಪಟ್ಟಿರುತ್ತವಷ್ಟೆ. ಆದರೆ ಕಡಿಮೆಮಾಡಿದ ಕ್ರಯಗಳು ಸಾಧಾರಣ ಕಾಗದದ ಮೇಲೆ ಮುದ್ರಿಸಿದ ಪುಸ್ತಕಗಳ ಬಗ್ಗೆ ಮಾತ್ರ ಇರುತ್ತವೆಂದು ತಿಳಿಯತಕ್ಕದ್ದು. ಆರ್ಟಪೇಪರ, ಅಂದರೆ ಹೊಳಪುಳ್ಳ ನುಣಪಾದ ಕಾಗದದ ಮೇಲೆ ಮುದ್ರಿಸಿದ ಪುಸ್ತಕಗಳನ್ನು ವ್ಯಾಕಮಿಲನ್ ಕಂಪನಿಯವರು ಮೊದಲಿನ ಕ್ರಯಕ್ಕೇ ಮಾರುವರು, ಕಡಿಮೆ ಕ್ರಯಕ್ಕೆ ಮಾರಲಾರರು, ಎಂದು ಮೆ. ಡಾಯರೆಕ್ಟರ ಸಾಹೇಬರವರು ತಮ್ಮ ಹುಕುಂ ನಂಬರ ೧೬೦೪ ತಾರೀಖು ೨ನೇ ಫೆಬ್ರುವರಿ ೧೯೦೬ನೇದರಿಂದ ಪ್ರಸಿದ್ಧಮಾಡಿದ್ದಾರೆ.

ಧಾರವಾಡ ಹೆಣ್ಣುಮಕ್ಕಳ ಟ್ರೈನಿಂಗಕಾಲೇಜದ ಪ್ರವೇಶ ಪರೀಕ್ಷೆಯು ಬರುವ ಅಕ್ಟೋಬರ ತಿಂಗಳ ೨ನೆಯ ತಾರೀಖಿನಿಂದ ೪ನೆಯ ತಾರೀಖಿನ ವರೆಗೆ ಮುಂಜಾನೆ ೧೧॥ ಘಂಟೆಗೆ ಪ್ರಾರಂಭವಾಗುವದು. ಪರೀಕ್ಷೆಗೆ ಕೂಡ್ರಲಿಚ್ಛಿಸುವ ವಿದ್ಯಾರ್ಥಿನಿಯರು ತಮ್ಮ ಜಿಲ್ಲೆಯ ಡೆಪ್ಯೂಟಿ ಎಜ್ಯುಕೇಶನಲ್ಲ ಇನ್ಸಪೆಕ್ಟರರವರ ಮುಖಾಂತರ ತಮ್ಮ ಅರ್ಜಿಗಳನ್ನು ೧೯೦೬ನೇ ಇಸವಿಯ ಸಪ್ಟೆಂಬರ ತಿಂಗಳ ೧೫ನೇ ತಾರೀಖಿನ ದಿವಸ ಅಥವಾ ಅದರೊಳಗಾಗಿ ನನಗೆ ಮುಟ್ಟುವಂತೆ ಕಳಿಸತಕ್ಕದ್ದು.

ಅರ್ಜದಾರಳು ತನ್ನ ಅರ್ಜಿಯ ಲಗತ ತನ್ನ ನಡತೆಯೂ, ಸ್ವಭಾವವೂ ನೆಟ್ಟಗಿದ್ದ ಬಗ್ಗೆ ಸರಕಾರೀ ನವಕರಿಯಲ್ಲಿರುವ ಒಬ್ಬ ಸಭ್ಯ ಗೃಹಸ್ಥರ, ಅಥವಾ ಶಾಳಾಖಾತೆಯ ಅಮಲದಾರರ ಸಹಿ ಇರುವ ಒಂದು ಸರಟೀ ಫಿಕೀಟನ್ನು ಇಟ್ಟು ಕಳಿಸತಕ್ಕದ್ದು. ವಿದ್ಯಾರ್ಥಿನಿಯರು ಪರೀಕ್ಷೆಗೆ ಬರುವಾಗ ತಾವು ಕಲಿಯುತ್ತಿದ್ದ ಅಥವಾ ಕಲಿತು ಬಿಟ್ಟ ಸಾಲೆಯಿಂದ ಲೀವ್ವಿಂಗ ಸರಟಫಿಕೀಟನ್ನು ಸಂಗಡ ತರತಕ್ಕದ್ದು.

ಪ್ರವೇಶ ಪರೀಕ್ಷೆಯಲ್ಲಿ ಪಾಸಾದವರನ್ನು ಸ್ಕಾಲರಸಿಪ್ಪು ಕೊಟ್ಟು ಕಾಲೇಜದ ಮೊದಲನೇ ವರ್ಸದ ಕ್ಲಾಸಿಗೆ ತಕ್ಕೊಳ್ಳುವೆವು. ಇಂಥ ವಿದ್ಯಾರ್ಥಿನಿಯರು ಕಾಲೇಜದಲ್ಲಿ ಮೂರು ವರ್ಸ ಕಲಿತು ಮುಂದೆ ಶಾಳಾಖಾತೆಯಲ್ಲಿ ಕೆಲಸಮಾಡಲಿಕ್ಕೆ ತಮ್ಮ ಒಪ್ಪಿಗೆ ಇರುವದೆಂದು ಇವರ ಪಾಲಕರು (ಲಗ್ನವಾದಲ್ಲಿ ಗಂಡನು, ಇಲ್ಲದಿದ್ದರೆ ತಂದೆ ಅಥವಾ ಕಕ್ಕ ಮುಂತಾದವರು) ಕರಾರಪತ್ರವನ್ನು ಬರೆದುಕೊಡಬೇಕಾಗುವದು. ಪ್ರವೇಶ ಪರೀಕ್ಷೆಯಲ್ಲಿ ನಾಪಾಸಾದ ವಿದ್ಯಾರ್ಥಿನಿಯರನ್ನು ಕಾಲೇಜದ ತಯಾರಿ ವರ್ಗಕ್ಕೆ ತಕ್ಕೊಂಡು ಅವರಿಗೂ ತಿಂಗಳಿಗೆ ಸ್ವಲ್ಪ ಸ್ವಲ್ಪ ಸ್ಕಾಲರಶಿಪ್ಪು ಕೊಡಲಾದೀತು.

ಟ್ರೇನಿಂಗ ಕಾಲೇಜದ ತಯಾರಿ ವರ್ಗಕ್ಕೆ ಬರಲಿಚ್ಛಿಸುವ ವಿದ್ಯಾರ್ಥಿನಿಯರು ೧೯೧೬ನೇ ಇಸವಿಯ ಸಪ್ಟಂಬರ ತಿಂಗಳ ೧೫ನೇ ತಾರೀಖಿನೊಳಗಾಗಿ ನಮಗೆ ಮುಟ್ಟುವಂತೆ ತಮ್ಮ ಅರ್ಜಿಗಳನ್ನು ಕಳಿಸತಕ್ಕದ್ದು. ಇವರು ಸಹ ಅಕ್ಟೂಂಬರ ತಾರೀಖು ೨ ರಿಂದ ೪ ರ ವರೆಗೆ ಕನ್ನಡ ಹೆಣ್ಣು ಹುಡಿಗೆಯರ ಸಾಲೆಯ ನಾಲ್ಕನೇ ಇಯತ್ತೆಯ ವಿಷಯಗಳಲ್ಲಿ ಪರೀಕ್ಷಿಸಲ್ಪಡುವರು. ಪರೀಕ್ಷೆಯಲ್ಲಿ ಪಾಸಾದ ವಿದ್ಯಾರ್ಥಿನಿಯರಿಗೆ ಸ್ಕಾಲರಸಿಪ್ಪು ದೊರೆಯುವದು. ಇವರ ಪಾಲಕರಾವರೂ ಮೇಲೆ ಹೇಳಿದಂತೆ ಸದರೀ ವಿದ್ಯಾರ್ಥಿನಿಯರು ಕಾಲೇಜದ ಅಭ್ಯಾಸವನ್ನು ಮುಗಿಸಿದ ಬಳಿಕ ಸರಕಾರೀ ಶಾಲೆಗಳಲ್ಲಿ ಕೆಲಸ ಮಾಡುವರೆಂದು ಕರಾರ ಬರಕೊಡಬೇಕಾಗುವದು.

ಟ್ರೇನಿಂಗಕಾಲೇಜ ಫಾರವೀಮೆನ್, }
ಧಾರವಾಡ. ೧೯೧೬. } F. L. McAfee.
ಲೇಡೀ ಸುಪರಿಂಟಿಂಡೆಂಟ.

ಸನ್ನ ೧೯೧೬ನೆಯ ಇಸ್ವಿಯ ವರ್ಷಪ್ರಾಯಿಕ್ಕು ಪರೀಕ್ಷೆಯು.

ಕನ್ನಡದಲ್ಲಿ ಆಗತಕ್ಕ ವರ್ಷಪ್ರಾಯಿಕ್ಕು ಪರೀಕ್ಷೆಯನ್ನು ೧೯೧೬ನೆಯ ಇಸವಿಯ ದಶಂಬರ ತಿಂಗಳ ೧೫ನೆಯ ತಾರೀಖಿನಿಂದ ಕೆಳಗೆ ಸಹಿ ಮಾಡಿದವರು ೧೯೧೭ನೆಯ ಇಸವಿಯ ಫೆಬ್ರುವರಿ ತಿಂಗಳ ಕನ್ನಡ ಶಾಲಾಪತ್ರಿಕೆಯ ೪-೪ನೆಯ ಪುಟಗಳಲ್ಲಿ ಪ್ರಕಟಿಸಿದ ನಿಯಮಗಳಿಗನುಸಾರವಾಗಿ, ಧಾರವಾಡ ಟ್ರೇನಿಂಗ ಕಾಲೇಜದಲ್ಲಿ ತೆಗೆದು ಕೊಳ್ಳಲಾಗುವದು. ಸದರೀ ಪರೀಕ್ಷೆಯಲ್ಲಿ ೪೦ ರೂಪಾಯಿಯ ಬಕ್ಷೀಸು ಒಂದು, ೩೦ ರೂಪಾಯಿಯ ಬಕ್ಷೀಸು ಒಂದು ಈ ಪ್ರಕಾರ ಎರಡು ಬಕ್ಷೀಸುಗಳಿರುವವು. ಪರೀಕ್ಷೆಗೆ ಬರತಕ್ಕ ಉಮೇದವಾರರು ತಮ್ಮ ಅರ್ಜಿಗಳನ್ನು ಕೆಳಗೆ ಸಹಿ ಮಾಡಿದವರ ಕಡೆಗೆ ತೀರ ತಡಮಾಡಿದರೆ ೧೯೧೭ನೇ ಇಸವಿಯ ೧ನೆಯ ದಶಂಬರ ತಿಂಗಳ ೧೫ನೆಯ ತಾರೀಖಿಗಾಗಲಿ ಅದಕ್ಕೂ ಪೂರ್ವದಲ್ಲಿಯಾಗಲಿ ತಪ್ಪದೆ ಮುಟ್ಟುವಂತೆ ಕಳಿಸಬೇಕು. ಪರೀಕ್ಷೆಯು ನಿಯಮಿಸಿದ ದಿವಸ ಬೆಳಗಿನ ೧೦॥ ಘಂಟೆಗೆ ಪ್ರಾರಂಭವಾಗುವದು.

A. C. Miller.
ಎಜ್ಯುಕೇಶನಲ್ ಇನ್ಸಪೆಕ್ಟರ,
ದಕ್ಷಿಣಭಾಗ.

ವಿಜಾಪೂರ ಬಾಗೇವಾಡಿ ತಾಲೂಕಿನಲ್ಲಿ ಕೂಡಿದ ಸಮ್ಮೇಲನ.

[ಇದೇ ಸಂಚಿಕೆಯ ೨೬ನೆಯ ಪುಟದಿಂದ ಮುಂದೆ ಸಾಗಿದ್ದು]

ತಾ॥ ೨೨-೩-೧೭ನೇ ದಿವಸ ಪ್ರಾತಃಕಾಲ ೮ ಘಂಟೆಗೆ ಕೂಡಗಿ ಮತ್ತು ಮುತ್ತಗಿ ಶಾಲೆಯ ವಿದ್ಯಾರ್ಥಿಗಳು ರಾಗದ ಪೆಟ್ಟಿಗೆ ಪಿಟೀಲುಗಳೊಂದಿಗೆ ದೇವತಾಸ್ತೋತ್ರವನ್ನು ಮಾಡಿದ ನಂತರ ಸಭಾಕಾರ್ಯವು ಪ್ರಾರಂಭವಾಯಿತು. ನಂತರ ಅಧ್ಯಕ್ಷರಾದ ಮೆ॥ ಕೊಪ್ಪರ ಸಾಹೇಬರು ಸಭೆಯ ಪ್ರಾಸ್ತಾವಿಕ ಭಾಷಣ ಮಾಡಿದ್ದೇನಂದರೆ:—"ನಮ್ಮ ಜಿಲ್ಲೆಯಲ್ಲಿ ಇದೇ ವರ್ಷ ಹೊಸದಾಗಿ ಈ ಕೆಲಸವು ಪ್ರಾರಂಭವಾಗಿದೆ. ಉಳಿದ ಮೂರು ತಾಲೂಕುಗಳಲ್ಲಿ ಕೂಡಿದಂತೆ ನಮ್ಮಲ್ಲಿಯೂ ಒಳ್ಳೇ

ವ್ಯವಸ್ಥೆಯಿಂದ ಕಾರ್ಯವನ್ನು ಜರುಗಿಸುವಂತೆ ಮಾಡಬೇಕೆಂದು ಮನೋದಯವಿತ್ತು. ಗೊತ್ತಾದ ಹೊತ್ತಿಗೆ ವಿಘ್ನ ತಟ್ಟಿತು. ಆದರೂ ತಾಲೂಕ ಮಾಸ್ತರ ಮಂಡಳವತ್ತಿಯವರು ಮುತ್ತಾಗಿ ಊರವರ ನೆರವಿನಿಂದ ಸಭೆಯ ಕಾರ್ಯವನ್ನು ಬಹು ಪರಿಯಿಂದ ಸಾಂಗಗೊಳಿಸಬೇಕೆಂದು ಮಾಡಿದ ಪ್ರಯತ್ನವು ಬಣ್ಣಿಸತಕ್ಕದ್ದಾಗಿದೆ. ವ್ಯವಸಾಯ ಭಾಂಧವರೆ! ಇಲ್ಲಿ ನಡೆಯುವ ವ್ಯಾಖ್ಯಾನಗಳೂ ಕಲಿಸಲ್ಪಡುವ ಮಾದರಿಯ ಪಾಠಗಳೂ ನೀತಿಶಿಕ್ಷಣವೂ ಇವನ್ನೆಲ್ಲ ನೋಡಿ ನಿಮ್ಮ ನಿಮ್ಮ ಶಾಲೆಗಳಲ್ಲಿ ಆದಷ್ಟು ಪ್ರಯತ್ನ ಮಾಡಿ ವಿದ್ಯಾರ್ಥಿಗಳನ್ನು ತಿದ್ದುವಿರೆಂದು ಆತಿಸುತ್ತೇವೆ."

ಆ ದಿವಸ ಬುಧವಾರ ಮುಂಜಾನೆ ೪॥ ಯಿಂದ ೧೦॥ ಘಂಟೆಯ ವರೆಗೆ "ತಂದೆ ತಾಯಿಗಳ ಇಲ್ಲವೆ ಪಾಲಕರ ಸಹಾನುಭೂತಿಯೂ ಅದನ್ನು ಮಾಸ್ತರರು ಸಂಪಾದಿಸುವ ಮಾರ್ಗಗಳೂ" ಎಂಬ ವಿಷಯದ ಮೇಲೆ ಬರೆದು ತಂದ ನಿಬಂಧಗಳ ವಾಚನವಾಯಿತು. ಕೋಲ್ವಾರ ಮಾಸ್ತರ ಮಿ. ವ್ಯಾಸೋ ಅ. ಹೆರಕಲ್ಲ, ನಿಡಗುಂದಿ ಮಾಸ್ತರ ಮಿ. ಬ. ಮಾ. ಪತ್ತಾರ, ಮತ್ತು ಬಾಗೆವಾಡಿ ಹೆಣ್ಣು ಮಕ್ಕಳ ಶಾಲೆಯ ಹೆ. ಮಿ. ಗಂಗವ್ವಾ ಗಾಜರೆ ಇವರು ಓದಿದರು. ನಂತರ ಇದೇ ವಿಷಯದ ಮೇಲೆ ಕೆಲವರು ಹೃದಯಂಗಮವಾಗಿ ಉಪನ್ಯಾಸ ಮಾಡಿದರು.

ಮಧ್ಯಾಹ್ನದ ೩ ರಿಂದ ೫ರ ವರೆಗೆ ಬಾಲಕರ ವರ್ಗಕ್ಕೆ ಮಿ. ಶಾ. ಪಾ. ಕುಲಕರ್ಣಿ ೧ನೇ ಅ. ಮಾ ಬಾಗೆವಾಡಿ, ಇವರು ಮೂಲಾಕ್ಷರಗಳನ್ನೂ ಮಿ. ಪತ್ತಾರಇವರು ಅಂಕಿಗಳನ್ನೂ ತಕ್ಕ ಉಸಕರಣಗಳೊಂದಿಗೆ ಕಲಿಸಿದರು. ಬಾಗೆವಾಡಿ ಉರ್ದು ಮಾಸ್ತರ ಮಿ. ಡೋಂಗರಿಸಾಹೇಬರು ಉರ್ದು ಮೂಲಾಕ್ಷರಗಳನ್ನು ವಸ್ತುಗಳೊಡನೆ ಸರಸಾಗಿ ಕಲಿಸಿದರು. ಮಿ. ಬಾ. ವಿ. ದೀಕ್ಷಿತ ಅ. ಮಾ. ವಿಜಾಪುರ ೧ನೇ ನಂಬರ ಶಾಲೆ ಇವರು ಕಿಂಡರ ಗಾರ್ಟನ್ ೩ನೇ ಕರಣದ ಆಕೃತಿಗಳನ್ನು ಕಲಿಸಿ ತೋರಿಸಿದರು.

ಮರುದಿವಸ ತಾ॥ ೨೩-೩-೧೬ನೇ ದಿವಸ ಮುಂಜಾನ ವಿಜಾಪುರ ಕನ್ನಡ ಹೆಂಣುಮಕ್ಕಳ ಶಾಲೆಯ ವಿಸೆಸ್ ನಿಂಗವ್ವ ಕೊಂಡಗುಳಿ ಇವರು ಭಾಗಾಕಾರ ಕಲಿಸುವ ಪದ್ಧತಿಯನ್ನು ಉತ್ತಮ ರೀತಿಯಿಂದ ಕಲಿಸಿ

ತೋರಿಸಿದರು. ಕಾಗದ ಮಡಚಿ ಸುಲಭವಾದ ಆಕೃತಿಗಳನ್ನು ಮಾಡುವ ರೀತಿಗಳನ್ನು ಕೂಡಗಿ ಅ ಮಾ. ದಿವಾಕರ ಇವರು ಮಡಿಚುತ್ತಾ ಮಾಡಿ ತೋರಿಸಿದರು ಕಡೆಗೆ ವಿಜಾಪುರ ೧ನೇ ನಂಬರ ಶಾಲೆಯ ಅ. ಮಾ. ವಿ. ಅಥಣಿಯವರು "ಹೈಡ್ರೋಜನ್" ವಾಯುವನ್ನು ತೆಗೆದು ತುಂಬಿ ಅದರ ಗುಣಧರ್ಮಗಳನ್ನು ಪ್ರತ್ಯಕ್ಷವಾಗಿ ವಿದ್ಯಾರ್ಥಿಗಳಿಗೆ ತೋರಿಸಿದರು.

ಆ ದಿವಸ ಮಧ್ಯಾಹ್ನ "ಹಳ್ಳಿಗಳ ಆರೋಗ್ಯತೆಯನ್ನು ಕಾಪಾಡುವದರಲ್ಲಿ ಮಾಸ್ತರ ಜನರು ಏನು ಮಾಡಬಹುದು?" ಎಂಬ ವಿಷಯದ ಮೇಲೆ ಬರೆದು ತಂದ ನಿಬಂಧ ಉಕ್ಕಲಿ ಮಾಸ್ತರ ವಿ. ಅಣೆಪ್ಪನವರ, ಮನಗೋಳಿ ಮಾಸ್ತರ ವಿ. ಗೋ. ಗು. ಮುತ್ತಾಗಿ ಮತ್ತು ಮುಳವಾಡ ಮಾಸ್ತರ ವಿ. ಭೀ. ಗೋ. ಕುಲಕರ್ಣಿ ಇವರು ಓದಿದರು. ಮತ್ತೆ ಕೆಲವರು ವ್ಯಾಖ್ಯಾನ ಮಾಡಿದರು. ಮನಗೋಳಿ ಉರ್ದು ಮಾಸ್ತರ ವಿ. ಹವೇಲಿ ಇವರು "ಉರ್ದು ಶಾಲೆಗಳನ್ನು ತಿದ್ದಲಿಕ್ಕೆ ಸರಕಾರದವರು ಮಾಡಿದ ಪ್ರಯತ್ನಗಳು" ಎಂಬ ನಿಬಂಧವನ್ನು ಸರಸಾಗಿ ಓದಿ ಹೇಳಿದರು. ಬಳಿಕ ವಿ. ನಾಟಕಾರ ೧ನೇ ಅ. ಮಾ. ಉಕ್ಕಲಿ ಇವರು ನೈತಿಕ ಶಿಕ್ಷಣದ "ಆಜ್ಞಾಪಾಲನೆ" ಎಂಬ ನೀತಿಯನ್ನು ಬಾಲಕರ ವರ್ಗಕ್ಕೆ ಕಲಿಸಿದರು, ವಿಷಯ ವಿಮರ್ಶೆಗೆ ಬೇಕಾದ ಚಿತ್ರಗಳನ್ನು ತಂದಿದ್ದರು. ತಾಲೂಕ ಮಾಸ್ತರ ವಿ. ಯಳವತ್ತಿಯವರು ಧೈರ್ಯದ ವಿಷಯವಾಗಿ (ಸ್ವಂತದ ದೆಸೆಯಿಂದ, ಪರರದೆಸೆಯಿಂದ, ಶಾರೀರಿಕ ಮಾನಸಿಕ ಧೈರ್ಯ) ಅನೇಕ ಉದಾಹರಣ ಪ್ರಸಂಗಗಳೊಡನೆ ಇಂಗ್ಲಿಷ ಪುಸ್ತಕದೊಳಗಿನ "ಕರೇಜ್" ಎಂಬ ಪಾಠದಲ್ಲಿ ಬರೆದಂತೆ ಮಾಧವ, ವಿಭೀಷಣನ ಕಥೆಗಳನ್ನು ಹೇಳಿ ಕಲಿಸಿ ತೋರಿಸಿದರು.

ಅಧ್ಯಕ್ಷರಾದ ಮೆ. ಕೊಪ್ಪರ ಸಾ. ರು ಶಿಕ್ಷಕರಿಗೆ ಬೋಧಪರವಾದ ಕೆಲವು ಸೂಚನೆಗಳನ್ನು ಮಾಡಿದರು. ಹಾಗೂ ಈ ಸಮ್ಮೇಲನದ ಕಾರ್ಯಕ್ಕೆ ಬಹಳವಾಗಿ ಸಹಾಯಮಾಡಿದಂಥ ಗ್ರಾಮಾಧಿಕಾರಿಗಳಿಗೂ, ವಿ. ಷಾಣಕ ಶಿರೂರ ಹಣಮಂತಾಚಾರ್ಯ ಸರ್ಕಲ್ ಇನ್ಸಪೆಕ್ಟರರಿಗೂ ತಾವು ಕೃತಜ್ಞರಾಗಿದ್ದೇವೆಂದು ಹೇಳಿದರು.

ಶಾಮರಾವ ಏಕಂಡುರಂಗ ಕುಲಕರ್ಣಿ,

ಗೌ. ಅಸಿಸ್ಟಂಟ ಮಾಸ್ತರ ಬಾಗೆವಾಡಿ.

ಕೆಳಗಿನ ಪಟ್ಟಿಯಲ್ಲಿ ಕಾಣಿಸಿದ ಕನ್ನಡ ಪುಸ್ತಕಗಳು ಮೆ|| ಎಜ್ಯುಕೇಶನಲ್ ಇನಸ್ಪೆಕ್ಟರ ಸಾಹೇಬ ದಕ್ಷಿಣಭಾಗ ಇವರಿಂದ ಆಯಾ ಪುಸ್ತಕಗಳ ಎದುರಿಗೆ ಬರೆದ ಕೆಲಸಗಳಿಗೆ ಮಂಜೂರ ಮಾಡಲ್ಪಟ್ಟಿವೆ.

ನಂಬರು.	ಪುಸ್ತಕ ಮತ್ತು ಗ್ರಂಥಕರ್ತನ ಹೆಸರು.	ಮಂಜೂರಿಯ ಹುಕುಂ ನಂ.	ಯಾತರ ಬಗ್ಗೆ ಮಂಜೂರ ಮಾಡಿರುತ್ತದೆ.	ಕ್ರಯ. ರೂ.	ಆ.	ಪೈ.	ಶರಾ.
	ರಾಜಮೂಲ ಶಿಕ್ಷಕ: ಮಿ. ಆಯ್ ಪಿ. ನಿಂಬಾಳಕರಕೃತ.	೧೨೬೮೭ ೧೫-೩-೧೬	ಕನ್ನಡ ಪ್ರಾಥಮಿಕ ಶಾಲೆಗಳಲ್ಲಿ ಇನಾಮಿನ ಬಗ್ಗೆ.	೦	೧	೬	
	ಮುಂಬಯಿ ಇಲಾಖೆಯ ಭೂಗೋಲ: ಮಿ. ಜೀ. ಆರ್. ಜಮಖಂಡಿಕೃತ.	೧೨೯೬೪ ೨೩-೩-೧೬	ಕನ್ನಡ ಪ್ರಾಥಮಿಕ ಶಾಲೆಗಳಿ ಲಾಯಬ್ರರಿಗಳ ಮತ್ತು ಇನಾಮಿನಗೋಸ್ಕರ.	೦	೫	೦	
	ಸೂಕ್ತಿಮಾಲೆ ಭಾಗ ೧. : ಮಿ. ಎಚ್. ಚಿದಂಬರಯ್ಯಕೃತ.	೬೯೬ ೨೬-೪-೧೬	ಕನ್ನಡ ಪ್ರಾಥಮಿಕಶಾಲೆಗಳಿ ಮತ್ತು ಸೇಕಂಡರಿ ಶಾಲೆಗಳ ಲಾಯಬ್ರರಿಗಳಿಗೋಸ್ಕರ.	೦	೩	೦	
	ಸೂಕ್ತಿಮಾಲೆ ಭಾಗ ೨ : ಮಿ. ಎಚ್. ಚಿದಂಬರಯ್ಯಕೃತ.	೮೧೫ ೨೮-೪-೧೬	ಸದರ	೦	೩	೦	
	ಆರ್ಯಮತಸಾರ: ಮಿ. ಎಚ್. ಚಿದಂಬರಯ್ಯಕೃತ.	೨೮೯ ೧೨-೪-೧೬	ಕನ್ನಡ ಪಾಥಮಿಕಶಾಲೆಗಳ ಮತ್ತು ಸೆಕಂಡರಿ ಶಾಲೆಗಳಿ ಲಾಯಬ್ರರಿಗಳಿಗೋಸ್ಕರ.	೦	೩	೦	
	ವಾಲ್ಮೀಕಿಜಯ: ಮಿ. ಎಚ್. ಚಿದಂಬರಯ್ಯಕೃತ.	೨೯೨ ೧೨-೪-೧೬	ಕನ್ನಡ ಪ್ರಾಥಮಿಕ ಮತ್ತು ಸೇಕಂಡರಿ ಶಾಲೆಗಳ ಲಾಯಬ್ರರಿಗಳ ಬಗ್ಗೆ ಮತ್ತು ಇನಾಮುಗಳ ಬಗ್ಗೆ.	೦	೬	೮	

ಶಾಲಾಪತ್ರಿಕೆ

ಸಂಪುಟ ೫೨ | ಜುಲೈ ೧೯೧೬. | ಸಂಚಿಕೆ ೭.

ಪ್ರಾಥಮಿಕ ಶಾಲೆಗಳೂ, ಗಣಿತಶಿಕ್ಷಣವೂ,

(ಕಳೆದ ತಿಂಗಳ ಸಂಚಿಕೆಯ ೫೨ ನೇಯ ಪುಟದಿಂದ ಮುಂದೆ ಸಾಗಿದ್ದು)

ಪಂಚರಾಶಿಕವನ್ನು ಮಾಡುವ ಈ ರೀತಿಯೇ ಪಂಚರಾಶಿಕದ ಮೂಲತತ್ವವನ್ನನುಸರಿಸಿ ಇರುವದರಿಂದ ಈ ರೀತಿಯಿಂದ ಕಲಿಸದೆ, ಮೇಲೆ ತೋರಿಸಿದಂತೆ ಅಂಕೆಗಳನ್ನಿಟ್ಟುಕೊಳ್ಳುವದನ್ನೂ, ಕೆಲವೊಂದು ರೀತಿಯಿಂದ ಗುಣಿಸುವದನ್ನೂ, ಭಾಗಿಸುವದನ್ನೂ ಬಾಲಕರಿಗೆ ಕಲಿಸಿದರೆ ಅದು ಅವರಿಗೆ ನಿಷ್ಕಾರಣವಾದದ್ದೆಂದು ತೋರದೆ ಇರದು. ಈ ಪಂಚರಾಶಿಕವನ್ನು ಉಪಯೋಗಿಸುವದರಿಂದ ಹುಡುಗರನ್ನು ಗೊಂದಲದಲ್ಲಿ ಹಾಕಿದಂತಾಗುತ್ತದಲ್ಲದೆ, ಒಮ್ಮೊಮ್ಮೆ ಅನರ್ಥವೂ ಆಗುವದು. ಉದಾಹರಣಾರ್ಥವಾಗಿ, ೧೦೦ಕ್ಕೆ ವರ್ಷಕ್ಕೆ ೫ ಬಡ್ಡಿಯ ದರವಿದ್ದಾಗ ೪೦೦ ರೂ. ಗಳಿಗೆ ೪೦ ರೂ. ಬಡ್ಡಿಯು ದೊರೆಯಬೇಕಾದರೆ ಎಷ್ಟು ವರ್ಷಗಳು ಬೇಕು? ಈ ಉದಾಹರಣೆಯನ್ನು ಪಂಚರಾಶಿಕದಿಂದ ಬಿಡಿಸಬೇಕಾದರೆ,

೧೦೦ ರೂ: ೪೦೦ ರೂ.
೫ ರೂ. (ಬ): ೪೦ ರೂ. (ಬ). } : : ೧ ವ: ಕ್ಷ. ವ.

ಈ ಪ್ರಕಾರ ಇಡಬೇಕಾಗುವದು. ಇದರಲ್ಲಿ ೫ ಬಡ್ಡಿಗೆ ೧ ವರ್ಷವಾದರೆ ೪೦ ಬಡ್ಡಿಗೆ ಎಷ್ಟು ವರ್ಷಗಳೆಂಬದು ಸರಿಯಾಯಿತು. ಆದರೆ ೧೦೦ ರೂ. ಗಳಿಗೆ ೪ ವರ್ಷಗಳಾದರೆ, ೪೦೦ ರೂ. ಗಳಿಗೆಷ್ಟು ವರ್ಷಗಳೆಂದರೆ ಏನು ಅರ್ಥವಾಗುವದು ? ಆದ್ದರಿಂದ, ಈ ಪಂಚರಾಶಿಕವನ್ನು ಬಿಟ್ಟುಕೊಟ್ಟು ತ್ರೈರಾಶಿಕದಿಂದಲೇ ಅದನ್ನು ಬಿಡಿಸುವದು ವಿಹಿತವೆಂದು ನಮ್ಮ ಅಭಿಪ್ರಾಯವು.

೫. ಉಗೆಬಂಡಿಯ ಉದಾಹರಣೆಗಳನ್ನು ಕಲಿಸುವಾಗ ತಿಕ್ಷ್ಣಕರು ವಿದ್ಯಾರ್ಥಿಗಳಿಗೆ ಸಾಕ್ಷಾತ್ತಾದ ಕಲ್ಪನೆಗಳನ್ನು ಉಂಟು ಮಾಡಿಕೊಡಬೇಕು. ಅಂದರೆ ಮಾತ್ರ, ಈತರದ ಉದಾಹರಣೆಗಳನ್ನು ಅವರು ಸ್ಪಷ್ಟವಾಗಿಯೂ ತಪ್ಪಾಗದಂತೆಯೂ ಬಿಡಿಸುವರು.

ಎದರುಬದುರಾಗಿ ಬರುವ ಉಗೆಬಂಡಿಯ ಎಂಜನುಗಳು ಒಂದೇ ಪಾತಳಿಯಲ್ಲಿ ಬರಲು, ಅವು ಒಂದಕ್ಕೊಂದು ದಾಟುವ ಕ್ರಿಯೆಯು ಆರಂಭವಾಗಿ ಅವುಗಳ ಹಿಂಭಾಗಗಳು ಅಥವಾ ಗಾರ್ಡರ ಡಬ್ಬಿಗಳು (ಸ್ಥೂಲವಾನದಿಂದ) ಒಂದೇ ಪಾತಳಿಯಲ್ಲಿ ಬರಲು, ಈ ಕ್ರಿಯೆಯು ಮುಗಿಯುವದು. ಆದ್ದರಿಂದ ಇಂಥ ಬಂಡಿಗಳು ಒಂದನ್ನೊಂದು ದಾಟ ಹೋಗಬೇಕಾದರೆ ಹತ್ತುವ ವೇಳೆಯನ್ನು ತೆಗೆಯಬೇಕಾಗಿದ್ದಲ್ಲಿ ಅವುಗಳ ನಡುವಿನ ಅಂತರವನ್ನು ನಿರೀಕ್ಷಿಸಬೇಕು. ಇಂಥ ಪ್ರಸಕ್ತಿಯಲ್ಲಿ ಆ ಎರಡೂ ಬಂಡಿಗಳ ಉದ್ದಳತೆಗಳ ಬೇರೀಜಿನಪ್ಪು ಅಂತರವು ಆ ಹಿಂಭಾಗಗಳ ಅಥವಾ ಗಾರ್ಡರ ನಡುವೆ ಇರುತ್ತದೆ; ಮತ್ತು ಆ ಎರಡೂ ಬಂಡಿಗಳ ಪ್ರತಿಯೊಂದು ತಾಸಿನ ವೇಗಗಳ ಬೇರೀಜಿನಪ್ಪು ಅಂತರವು ಒಂದು ತಾಸಿಗೆ ಕಡಿಮೆಯಾಗುತ್ತದೆ. ಮುಂದೆ ಅ. ಬ. ಇವರಿಬ್ಬರು ವಿರುದ್ಧದಿಕ್ಕಿನಿಂದ ಮತ್ತು ಕೊಟ್ಟ ಅಂತರದಿಂದ ತಮ್ಮ ತಮ್ಮ ವೇಗಗಳಿಂದ ನಡೆದ ಪಕ್ಷದಲ್ಲಿ ಎಷ್ಟು ಹೊತ್ತಿನಲ್ಲಿ ಕೂಡುವರು? ಎಂಬ ಉದಾಹರಣದಂತೆಯೇ ಇದನ್ನು ಬಿಡಿಸಬಹುದು. ಉಗಿಬಂಡಿಗಳ ಉದ್ದಳತೆಗಳನ್ನು ಕೂಡಿಸಿರಿ! ಎಂತ ಕಲಿಸಿರುವದರಿಂದ ಅವನ್ನೂ, ವೇಗಗಳನ್ನು ಕೂಡಿಸಿರಿ! ಎಂತ ಹೇಳಿರುವದರಿಂದ ವೇಗಗಳನ್ನೂ ವಿದ್ಯಾರ್ಥಿಗಳು ಕೂಡಿಸುವರು. ಮುಂದೆ ತ್ರೈರಾಶಿಕದಿಂದ ಉತ್ತರವನ್ನು ತೆಗೆಯುವರು. ಆದರೆ ಉದ್ದಳತೆಗಳನ್ನು ಯಾಕೆ ಕೂಡಿಸಬೇಕು? ಅವುಗಳ ವಜಾಬಾಕಿ ಯಾಕೆ ಮಾಡಬಾರದು? ಈ ಉದಾಹರಣೆಯಲ್ಲಿ ವೇಗಗಳನ್ನು ಯಾಕೆ ಕೂಡಿಸಬೇಕು? ಇನ್ನೊಂದು ಪ್ರಕಾರದ ಉದಾಹರಣೆಯಲ್ಲಿ ಒಂದು ವೇಗದೊಳಗಿಂದ ಇನ್ನೊಂದನ್ನು ಯಾಕೆ ಕಳೆಯಬೇಕು? ಎಂಬದು ವಿದ್ಯಾರ್ಥಿಗಳಿಗೆ ತಿಳಿದಿರುವದಿಲ್ಲ.

ಅಂಕಗಣಿತವನ್ನು ಮಾಡುವಾಗ ಕೇವಲ ಅಂಕೆಗಳಿಗೇ ಪ್ರಾಧಾನ್ಯವಿರುವದೆಂತಲೂ, ಸ್ಪಷ್ಟೀಕರಣಕ್ಕೆ ಆದರಲ್ಲಿ ಅವಕಾಶವು ಇರುವದಿ

ಪ್ರಾಂತಲೂ ಎಷ್ಟೋ ಜನರ ತಿಳುವಳಿಕೆಯು ಇಷ್ಟಾಂತೆ ತೋರುತ್ತದೆ. ಆದರೆ ಗಣಿತಶಾಸ್ತ್ರವನ್ನು ಕಲಿಸುವ ಉದ್ದೇಶಗಳನ್ನು ವಿಚಾರಿಸಿದ ಪಕ್ಷದಲ್ಲಿ ಮೇಲೆ ಹೇಳಿದಂತೆ ಉತ್ತರವನ್ನು ತರುವ ಉದ್ದೇಶವು ಇರದೆ, ವಸ್ತುಗಳ ಪರಿಮಾಣವಿಷಯಕವಾಗಿ ವಿಚಾರಮಾಡಲಿಕ್ಕೆ ಹುಡುಗರಿಗೆ ಕಲಿಸುವದೂ, ತರ್ಕಸಿದ್ಧವಾಗಿ ಆ ವಿಚಾರಸರಣಿಯನ್ನು ಬೇರೆಯವರಿಗೆ ಸ್ಪಷ್ಟವಾಗಿ ಹೇಳಲಿಕ್ಕೆ ಕಲಿಸುವದೂ ಮುಖ್ಯ ಉದ್ದೇಶಗಳಾಗಿರುವವು. ಆದರಿಂದ ಗಣಿತದಲ್ಲಿ ವಿವೇಚನಕ್ಕೆ ನಾವು ಬಹಳೇ ಮಹತ್ವವನ್ನು ಕೊಡಬೇಕೆಂಬುವದು ಸ್ಪಷ್ಟವಾಗುತ್ತದೆ. ಇನ್ನು ಈ ವಿವೇಚನದಲ್ಲಿ ಭಾಷೆಯೂ ಸ್ವಲ್ಪಮಟ್ಟಿಗೆ ಸೇರಿರುವದರಿಂದ ಅದರ ಕಡೆಗೂ ಸ್ವಲ್ಪ ಲಕ್ಷ್ಯವನ್ನು ಕೊಡುವದು ಅವಶ್ಯಕವು. ಇದೇ ಮೇರೆಗೆ, ಬರಹದ ಕಡೆಗಾದರೂ ಸಾಕಷ್ಟು ಲಕ್ಷ್ಯವನ್ನು ಪೂರೈಸತಕ್ಕದ್ದು. ಇದರಿಂದ ಹುಡುಗರಲ್ಲಿ ಚಂದವಾಗಿ ಬರೆಯುವ ಕ್ರಮವನ್ನು ದೃಢಪಡಿಸಿದಂತೆ ಆಗುವದಲ್ಲದೆ, ಅಚ್ಚುಕಟ್ಟುತನದ ಚಟವನ್ನು ಉಂಟುಮಾಡಿದಂತೆಯೂ ಆಗುವದು. ಮತ್ತು ಹೀಗೆ ಗಣಿತಶಾಸ್ತ್ರ ಹಾಗೂ ಭಾಷಾವಿಷಯ ಇವುಗಳನ್ನು ಸಂಬಂಧಗೊಳಿಸಿದರೆ, ಇವೆರಡೂ ವಿಷಯಗಳು ಪರಸ್ಪರ ಸಹಾಯದಿಂದ ದೃಢವಾಗುವದಲ್ಲದೆ, ಸ್ಪಷ್ಟವಾಗಿಯೂ ಅಚ್ಚುಕಟ್ಟಾಗಿಯೂ ಬರೆಯುವ ಚಟದಿಂದ ಹಸ್ತಕ್ಕೆ ಶಿಕ್ಷಣವನ್ನೂ, ಕಣ್ಣುಗಳಿಗೆ ಸೌಂದರ್ಯದ ಮತ್ತು ವ್ಯವಸ್ಥೆಯ ಪ್ರೀತಿಯನ್ನೂ, ಮಿದುಳಿಗೆ ವಿಚಾರವಿಶದತೆಯನ್ನೂ ಉಂಟುಮಾಡಿದಂತೆ ಆಗುವದು.

೬. ಈ ಲೇಖವನ್ನು ಮುಗಿಸುವ ಮೊದಲು ಭೂಮಿತಿಯನ್ನು ಕುರಿತು ಒಂದೆರಡು ಸೂಚನೆಗಳನ್ನು ಶಿಕ್ಷಕರ ಮುಂದೆ ಇಡುವೆವು. ಅನೇಕಾವರ್ತಿ ಸಮಭುಜಚತುಷ್ಕೋನಾಕೃತಿಯನ್ನು ತೆಗೆ, ಎಂದು ಹೇಳಿದಾಗ ಉದ್ಭವಾದ ಕಾಟಕೋನಚತುಷ್ಕೋನವನ್ನೂ ಇಲ್ಲವೆ ಚೌರಸವನ್ನೂ, ತ್ರಿಕೋಣವನ್ನು ತೆಗೆಯೆಂದು ಹೇಳಿದಾಗ ಸಮಭುಜ ತ್ರಿಕೋಣ ಮುಂತಾದ ವಿಶೇಷ ಪ್ರಕಾರದ ತ್ರಿಕೋಣಗಳನ್ನೂ ಹುಡುಗರು ತೆಗೆಯುವರು. ಕೊಟ್ಟ ಲಕ್ಷಣಗಳನ್ನು ಬಿಟ್ಟು ಆಕೃತಿಯನ್ನು ತೆಗೆಯುವದೂ, ಹಾಗು ಕೊಟ್ಟ ಲಕ್ಷಣಗಳಿಗಿಂತ ಹೆಚ್ಚು ಲಕ್ಷಣಗಳುಳ್ಳ ಆಕೃತಿಯನ್ನು ತೆಗೆಯುವದೂ, ಇವೆರಡೂ ತಪ್ಪು. ಕೊಟ್ಟ ಲಕ್ಷಣ

ಗಳಿಗೆ ವಿಪರೀತವಾಗಿ ಆಕೃತಿಗಳನ್ನು ತೆಗೆದರೆ, ಕೆಳಗೆ ಕೊಟ್ಟ ಸಿದ್ಧತೆಗೂ ತೆಗೆದ ಆಕೃತಿಗೂ ಮೇಳ ಬೀಳುವ ಬಗೆ ಹೇಗೆ? ಅದರಂತೆಯೇ ಹೆಚ್ಚು ಲಕ್ಷಣಗಳುಳ್ಳ ಆಕೃತಿಯನ್ನು ತೆಗೆದರೆ ಪ್ರಮೇಯಕ್ಕೆ ಅನವಶ್ಯಕವಾದ ಸಂಗತಿಗಳು ಒಳಗೆ ಸೇರಿ, ಆ ಆಕೃತಿಗಳಿಂದ ಇಲ್ಲದ ಅನುಮಾನಗಳು ಹುಡುಗರ ಮನಸ್ಸಿನಲ್ಲಿ ಉದ್ಭವಿಸಬಹುದು.

ಪ್ರಮೇಯಗಳ ಸಿದ್ಧತೆಯಲ್ಲಿ ಬೇರೆ ಪ್ರಮೇಯಗಳ ಆಧಾರಗಳನ್ನು ಕೊಡಬೇಕಾಗುತ್ತದೆ. ಈ ಆಧಾರಗಳನ್ನು ಪ್ರಮೇಯಗಳ ಅನುಕ್ರಮ ಅಂಕೆಗಳನ್ನು ಹೇಳಿಯಾಗಲಿ, ಅವುಗಳ ಪ್ರತಿಜ್ಞೆಯನ್ನು ಬರೆದಾಗಲಿ ಈ ಪ್ರಕಾರ ಎರಡು ಬಗೆಯಾಗಿ ಕೊಡಬಹುದು. ಇವೆರಡು ಕ್ರಮಗಳಲ್ಲಿ ಅನುಕ್ರಮ ಅಂಕೆಗಳನ್ನು ಕೊಡುವದು ಬಹಳೇ ಗ್ರಾಹ್ಯವಾದದ್ದು. ಕೆಲ ವಿದ್ಯಾರ್ಥಿಗಳು ಹಿಂದಿನ ಪ್ರಮೇಯಗಳ ಆಧಾರಗಳಿಂದ ಬಿಡಿಸಲಿಕ್ಕೆ ಕೊಟ್ಟ ಪ್ರಮೇಯವನ್ನು ಮುಂದಿನ ಪ್ರಮೇಯದ ಪ್ರತಿಜ್ಞೆಯನ್ನು ಹಚ್ಚಿ, ಎರಡು ಮೂರು ಮೆಟ್ಟುಗಳಲ್ಲಿ ಬರೆದು ತೋರಿಸುವದುಂಟು. ಈ ಕ್ರಮುಕ್ಕೆ ಯಾರೂ ಒಪ್ಪಿಕೊಳ್ಳಲಾರರು.

ಭೂಮಿತಿಯಲ್ಲಿ ಆಕೃತಿಗಳನ್ನು ಆದಷ್ಟು ಮಟ್ಟಿಗೆ ಸರಿಯಾಗಿ ತೆಗೆಯುವದರಿಂದ ಸಿದ್ಧತೆಗೆ ಅನುಕೂಲವಾಗುವದಲ್ಲದೆ, ಕೈಕಣ್ಣುಗಳಿಗೆ ಅಚ್ಚುಕಟ್ಟುತನವನ್ನೂ ಯಥಾರ್ಥತ್ವವನ್ನೂ ಕಲಿಸಿದಂತೆ ಆಗುವದು. ಆದ ಕಾರಣ ರೂಲು ಪಟ್ಟಿಯನ್ನೂ ಕೋನಮಾಪಕವನ್ನೂ ಹುಡುಗರ ಕಡೆಯಿಂದ ಉಪಯೋಗಿಸಿಕೊಳ್ಳಬೇಕೆಂದು ಆಗ್ರಹಪೂರ್ವಕವಾಗಿ ಸೂಚಿಸುವೆವು.

M. R. N.

ಭಾರತೀಯ ನಿರಾಶ್ರಿತ ಸಹಾಯಕಾರಿ ಸಂಘದ ಕರ್ನಾಟಕ ಶಾಖೆ, ಹುಬ್ಬಳ್ಳಿ.

ಇದರಡಿಯಲ್ಲಿ ಹುಬ್ಬಳ್ಳಿಯಲ್ಲಿದ್ದ ಭಾರತೀಯ ನಿರಾಶ್ರಿತ ಸಹಾಯಕಾರಿ ಸಂಘದ ಕರ್ನಾಟಕ ಸಂಘದ ಶಾಖೆಯ ವಿನಂತಿ ಪತ್ರವನ್ನೂ ಈ ಸಂಘದ ಶಾಲೆಯ ಕಳೆದ ವಾರ್ಷಿಕ ಬಕ್ಷೀಸ ಸಮಾರಂಭದ

ಕಾಲದಲ್ಲಿ ಮೆ|| ಕಮಿಶನರ ಸಾಹೇಬರವರು ಮಾಡಿದ ಭಾಷಣವನ್ನೂ ಮುದ್ರಿಸಿದ್ದೇವೆ. ಮನುಷ್ಯನ ಶರೀರದ ಯಾವದೊಂದು ಭಾಗವು ರೋಗಪೀಡಿತವಾದದ್ದಾಗಲಿ, ಅಶಕ್ತವಾದದ್ದಾಗಲಿ ಇದ್ದರೆ ಇಡೀ ಶರೀರವು ಹ್ಯಾಗೆ ಎಂದೂ ಆರೋಗ್ಯಾವಸ್ಥೆಯುಳ್ಳದ್ದಾಗಲಾರದೋ, ಅದರಂತೆಯೇ ನಮ್ಮ ಇಡೀ ಹಿಂದೀಸಮಾಜದ ಯಾವದೊಂದು ವಿಶಿಷ್ಟ ವರ್ಗವು ಹೀನಸ್ಥಿತಿಯಲ್ಲಿರುವ ವರೆಗೆ ಹಿಂದೀ ಸಮಾಜಪುರುಷನು ಎಂದೂ ಆರೋಗ್ಯಾಭಿವೃದ್ಧಿಯನ್ನು ಹೊಂದಲಾರನು. ಆದಕಾರಣ ಈ ದೇಶದ ನಿಜವಾದ ಹಿತವನ್ನು ಮನಃಪೂರ್ವವಾಗಿ ಬಯಸುವ ಪ್ರತಿಯೊಬ್ಬ ಹಿಂದೀ ಗೃಹಸ್ಥನು ಸಮಾಜದಲ್ಲಿ ಇದು ವರೆಗೆ ಅಸ್ಪೃಶ್ಯರೆಂದೆಣಿಸಲ್ಪಟ್ಟಿರುವ ಜನರ ಸುಧಾರಣೆಗಾಗಿಯೂ, ಉನ್ನತಿಗಾಗಿಯೂ ತನ್ನ ಕೈಲಾದ ಎಲ್ಲ ಸಹಾಯವನ್ನು ಮಾಡದಿರನೆಂದು ನಾವು ತಿಳಿಯುತ್ತೇವೆ. ಈ ಸಂಬಂಧದಿಂದ ಹುಬ್ಬಳ್ಳಿಯಲ್ಲಿದ್ದ ನಿರಾಶ್ರಿತ ಸಹಾಯಕಾರಿ ಸಂಘದ ಕರ್ನಾಟಕ ಶಾಖೆಯವರು ಮಾಡುವ ಪ್ರಯತ್ನವು ಸ್ತುತಿಗೂ ಸಹಾಯಕ್ಕೂ ಯೋಗ್ಯವಾಗಿರುವದರಿಂದ ಆ ಸಂಘದ ಸುಪರಿಂಟೆಂಡೆಂಟರ ವಿನಂತಿಪತ್ರವನ್ನೂ ಮೆ|| ಕಮಿಶನರ ಸಾಹೇಬರವರ ವಿಚಾರಪೂರ್ಣವಾದ ಭಾಷಣವನ್ನೂ ಇಲ್ಲಿ ಕೊಟ್ಟಿದ್ದೇವೆ. ಹಾಗೂ ಈ ಸಂಘವು ವಹಿಸಿಕೊಂಡ ಸತ್ಕಾರ್ಯಕ್ಕೆ ಶಾಲಾಪತ್ರಿಕದ ವಾಚಕರೆಲ್ಲರೂ ತಮ್ಮ ಕೈಲಾದಷ್ಟು ನೆರವಾಗುವರೆಂದು ಆಶಿಸುತ್ತೇವೆ.

ಎ. ಶಾ. ಪ.

ವಿನಂತಿ.

ಸಭ್ಯಗೃಹಸ್ಥರೇ,

ಭಾರತೀಯ ನಿರಾಶ್ರಿತ ಸಹಾಯಕಾರಿ ಸಂಘದ ಕರ್ನಾಟಕ ಶಾಖೆಯ ದ್ವಾರದಿಂದ ಅಸ್ಪೃಶ್ಯಜನರ ಉನ್ನತಿಯ ವಿಷಯವಾಗಿ ನಾವು ನಿಮ್ಮ ಸಹಾನುಭೂತಿಯನ್ನು ಪಡೆಯುವದಕ್ಕೂ, ಇದಕ್ಕೂ ಹೆಚ್ಚಿಗೆ ನಿಮ್ಮ ಪ್ರತ್ಯಕ್ಷ ಸಹಾಯವನ್ನು ದೊರಕಿಸುವದಕ್ಕೂ ನಿಮಗೆ ಬೇಡಿಕೊಳ್ಳಲು ಮುಂದೆ ಬಂದಿರುತ್ತೇವೆ. ಈ ಶಾಖೆಯು ಸ್ಥಾಪನವಾಗಿ ಎರಡು ವರುಷಗಳಿಗಿಂತ ಹೆಚ್ಚು ಕಾಲವಾದರೂ, ಇನ್ನೂ ನಮಗೆ ದ್ರವ್ಯದ ಕೊರತೆಯು ಇರುತ್ತದೆ. ನಮ್ಮ ನಿಯಮಿತವಾದ ತಿಂಗಳ ಉತ್ಪನ್ನವು

ವರ್ಗಣಿದಾತರಿಂದಲೂ, ಜನರ ಕಾಣಿಕೆಯಿಂದಲೂ, ಸರಕಾರ ಮತ್ತು ಮ್ಯುನಿಸೀಪಾಲಟಿಯವರು ಕೊಡುವ ಗ್ರಾಂಟುಗಳಿಂದಲೂ ಕೂಡಿ ೧೦೦ ರೂಪಾಯಿ ಆಗುತ್ತದೆ. ನಮ್ಮ ತಿಂಗಳ ಖರ್ಚು ೩೦೦ ರೂಪಾಯಿ ಇರುತ್ತದೆ. ಹೀಗೆ ನಮಗೆ ಒಂದು ತಿಂಗಳಿಗೆ ೨೦೦ ರೂಪಾಯಿಗಳು ಕಡಿಮೆ ಬೀಳುತ್ತವೆ. ನಮಗೆ ದೊರೆಯುವ ರಕಮು ಬಹಳ ಕಡಿಮೆ ಇರುವದರಿಂದ ನಾವು ನಮ್ಮ ದ್ರವ್ಯಭಂಡಾರವನ್ನು ಬೆಳಿಸುವದಕ್ಕೆ ದೀರ್ಘಪ್ರಯತ್ನ ಮಾಡುತ್ತಿದ್ದೇವೆ.

ಆದ್ದರಿಂದ ನಾವು ನಿಮಗೆ ವಿಶೇಷವಾಗಿ ಬೇಡಿಕೊಳ್ಳುವದೇನಂದರೆ, ನೀವು ದಯವಿಟ್ಟು ಮಾಸಿಕ ಅಥವಾ ವಾರ್ಷಿಕ ವರ್ಗಣಿದಾರರಾಗಬೇಕು, ಅಥವಾ ಕಾಣಿಕೆಯನ್ನು ಕಳುಹಬೇಕು, ಎಂದು ಪ್ರಾರ್ಥಿಸುತ್ತೇವೆ. ನೀವು ಕಳುಹುವ ಕಾಣಿಕೆಯು ಸುಪರಿಂಟಿಂಡೆಂಟ ಕರ್ನಾಟಕ ಬ್ರ್ಯಾಂಚ ಹುಬ್ಬಳ್ಳಿ ಇವರಿಂದ ಬಹಳ ಆಭಾರಪೂರ್ವಕವಾಗಿ ಸ್ವೀಕರಿಸಲ್ಪಡುವದು.

ತಾ|| ೨೪-೯-೧೫.
ಗಾರ್ಡನ್ ಪೇಟ ಹುಬ್ಬಳ್ಳಿ.

ದಾ. ನಾ. ಪಟವರ್ಧನ,
ಸುಪರಿಂಟಿಂಡೆಂಟ,
ಕರ್ನಾಟಕ ಬ್ರ್ಯಾಂಚ ಹುಬ್ಬಳ್ಳಿ.

ಈ ಸಂಘದ ಸದ್ಯದ ಕೆಲಸದ ಮಾಹಿತಿಯು.

ಗಾರ್ಡನ್‌ಪೇಟ ಹುಬ್ಬಳ್ಳಿ—೭೦. ಹುಡುಗರ ಹಗಲು ಶಾಲೆ, ೫೦ ಹುಡುಗರ ರಾತ್ರಿ ಶಾಲೆ, ಸುಮಾರು ೫೦ ರೋಗಿಗಳಿಗೆ ಔಷಧಕೊಡುವ ಧರ್ಮಾರ್ಥ ದವಾಖಾನೆ, ಬಡ ವಿದ್ಯಾರ್ಥಿಗಳಿಗೆ ಧರ್ಮಾರ್ಥ ಬೋರ್ಡಿಂಗ, ಭಜನಸಮಾಜ, ನೀತಿಶಿಕ್ಷಣ ವರ್ಗಗಳು, ಧರ್ಮಾರ್ಥ ವಾಚನಾಲಯ, ವಗೈರೆ.

ಹಳೇಹುಬ್ಬಳ್ಳಿ—ಅಸ್ಪೃಶ್ಯ ಜಾತಿಯ ಭಜನಸಮಾಜ ಮತ್ತು ವಾಚನಾಲಯ.

ಗಣೇಶಪೇಟ ಹುಬ್ಬಳ್ಳಿ—೫೦ ಹುಡುಗರ ಹಗಲು ಶಾಲೆ, ೭೫ ಹುಡುಗರ ರಾತ್ರಿ ಶಾಲೆ, ವಿದ್ಯಾರ್ಥಿಗಳ ದವಾಖಾನೆ, ನೀತಿಶಿಕ್ಷಣ ವರ್ಗ ವಗೈರೆ.

ಕೀಲ್ವೆಚಾಳ ಹುಬ್ಬಳ್ಳಿ—೫೦ ಹುಡುಗರ ಹಗಲುಶಾಲೆ, ೬೫ ಹುಡುಗರ ರಾತ್ರಿಶಾಲೆ, ಧರ್ಮಾರ್ಥ ವಾಚನಾಲಯ, ನೀತಿಶಿಕ್ಷಣ ವರ್ಗ, ಭಜನಸಮಾಜ ವಗ್ಯೈರೆ.

ಈ ಪ್ರಕಾರ ಮೂರು ರಾತ್ರಿಶಾಲೆಗಳು, ಮೂರು ಹಗಲು ಶಾಲೆಗಳು, ಒಂದು ಬೋರ್ಡಿಂಗ, ಮೂರು ಭಜನಸಮಾಜಗಳು, ನಾಲ್ಕು ವಾಚನಾಲಯಗಳು, ನಾಲ್ಕು ನೀತಿಶಿಕ್ಷಣವರ್ಗಗಳು, ಒಂದು ಧರ್ಮಾರ್ಥ ದವಾಖಾನೆ, ಒಂದು ವಿದ್ಯಾರ್ಥಿಗಳ ದವಾಖಾನೆ, ಈ ಪ್ರಕಾರ ಸಂಸ್ಥೆಗಳು ಸದ್ಯಕ್ಕೆ ಪ್ರತಿದಿನದಲ್ಲಿಯೂ ಕೆಲಸ ಮಾಡುತ್ತವೆ. ವ್ಯಾಖಾನದ್ವಾರಾ ಜ್ಞಾನಪ್ರಸಾರ, ಇದಲ್ಲದೆ ಈ ಶಾಖೆಯು ಸುಪರಿಂಟಿಂಡೆಂಟ ಮತ್ತು ಸೆಕ್ರೆಟರಿ ರಾ|| ವಾಗಳೇ ಈ ಉಭಯತರು ತಮ್ಮ ಅನುಕೂಲ ಪ್ರಕಾರ ಹುಬ್ಬಳ್ಳಿಯಲ್ಲಿಯೂ, ಪರವೂರುಗಳಲ್ಲಿಯೂ, ಮುದ್ದಾಮು ಹೋಗಿ ವ್ಯಾಖ್ಯಾನದ್ವಾರಾ ಶಿಕ್ಷಣ, ಸ್ವಾವಲಂಬನ, ಸಹಕಾರಿ ವಗ್ಯೈರೆ ವಿಷಯಗಳ ಮಹತ್ವವನ್ನು ಅಸ್ಪೃಶ್ಯ ಮತ್ತು ನಿಕೃಷ್ಟ ಜನರಿಗೆ ತಿಳಿಸಿಕೊಡುತ್ತಿರುವರು.

ಪರವೂರ ಬಡವಿದ್ಯಾರ್ಥಿಗಳಿಗೆ ಸ್ಕಾಲರ್‌ಶಿಪ್ಸ್ ಮತ್ತು ಬೋರ್ಡಿಂಗ.

ಈ ಶಾಲೆಯದ್ವಾರಾ ಹುಬ್ಬಳ್ಳಿ, ಬೆಳಗಾಂವ, ನಿಪ್ಪಾಣಿ, ವಗ್ಯೈರೆ ಸ್ಥಳಗಳ ಬಡ ಮತ್ತು ಹುಷಾರ ವಿದ್ಯಾರ್ಥಿಗಳಿಗೆ ಸ್ಕಾಲರ್‌ಶಿಪ್ಸ್‌ಗಳನ್ನು ಹೋದ ಮೂರು ವರ್ಷಗಳಲ್ಲಿ ಕೊಡುತ್ತ ಬಂದಿರುತ್ತದೆ. ಇಂಥಾ ಬಡ ವಿದ್ಯಾರ್ಥಿಗಳ ಅರ್ಜಿಗಳನ್ನು ಅವರ ಶಿಕ್ಷಕರು, ನಮ್ಮ ಕಡೆಗೆ ಕಳಿಸಿದಲ್ಲಿ ನಾವು ಅವರಿಗೆ ದರತಿಂಗಳಿಗೆ ಸ್ಕಾಲರ್‌ಶಿಪ್ಪು ಕೊಡುತ್ತೇವೆ. ಆದರೆ ಪರವೂರ ಬಡ ಅಸ್ಪೃಶ್ಯ ವಿದ್ಯಾರ್ಥಿಗಳು ಈ ಸ್ಕಾಲರ್‌ಶಿಪ್ಪುಗಳನ್ನು ಹೊಂದಿ ತಮ್ಮ ಅಭ್ಯಾಸವನ್ನು ತಮ್ಮ ಊರಲ್ಲಿ ಚಲೋ ರೀತಿಯಿಂದ ನಡಿಸಬೇಕು. ಮತ್ತು ಹಾಗೆ ಮಾಡುವದು ಆಗದಿದ್ದಲ್ಲಿ, ಅವರು ಇಲ್ಲಿಗೆ ನಮ್ಮ ಬೋರ್ಡಿಂಗದಲ್ಲಿ ಬರುವ ಕುರಿತು ತಮ್ಮ ಶಿಕ್ಷಕರದ್ವಾರಾ ಅರ್ಜಿಗಳನ್ನು ಕಳುಹಿಸತಕ್ಕದ್ದು. ಇಲ್ಲಿ ನಮ್ಮ ಬೋರ್ಡಿಂಗಿನಲ್ಲಿ ಬಡ ಅಸ್ಪೃಶ್ಯ ವಿದ್ಯಾರ್ಥಿಗಳಿಗೆ ಅನ್ನವಸ್ತ್ರ, ಪುಸ್ತಕ, ಮೊದಲಾದವುಗಳು ಧರ್ಮಾರ್ಥ ದೊರೆತು, ಸುಪರಿಂಟೆಂಡೆಂಟ ಸಾಹೇಬರ ಯೋಗ್ಯ ನಜರಿನಲ್ಲಿ ಶಿಕ್ಷಣ ಸಿಗುತ್ತಿರುವದು. ಇದರಿಂದ ಈ ಹುಡುಗರು ಸತ್‌ಶೀಲರಾಗುವರು; ಹೀಗೆ ವ್ಯವಸ್ಥೆ ಮಾಡಿರುವದು

ಅಸ್ಪೃಶ್ಯ ವಿದ್ಯಾರ್ಥಿಗಳ ಸುಧಾರಣೆಯ ಮುಖ್ಯ ಮಾರ್ಗವಿರುತ್ತದೆ. ಇದರ ಕಡೆಗೆ ಲಕ್ಷ್ಯಕೊಟ್ಟು ಆ ಹುಡುಗರ ಹಿತಚಿಂತಕರು ಅವರನ್ನು ಇಲ್ಲಿಗೆ ಕಳಿಸಬೇಕೆಂದು ನಮ್ಮ ವಿನಂತಿಯದೆ.

ನಾಮದಾರ ಕಮಿಶನರ ಸಾಹೇಬ ಬಹಾದ್ದೂರವರ ಭಾಷಣವು.

ಈ ಮಹತ್ವದ ಸಮಾರಂಭವನ್ನು ನೆರವೇರಿಸುವ ವಿಕುರಿತ ಬಾದ ಶಹರ ಜನ್ಮದಿವಸವಾದ ಈ ಮಂಗಲ ದಿವಸವನ್ನು ನೇರಳ ಬಹಳ ಉಚಿತವಾಗಿರುತ್ತದೆ. ಯಾಕಂದರೆ ಬಾದಶಹರ ಅಧಿಕಾಸಿರಕ್ಕೆ ಒಳ ಗಾಗಿರುವ ಲಕ್ಷಾವಧಿ ಪ್ರಜೆಗಳೊಳಗೆ ಅವರ ಆಳಿಕೆಯಲ್ಲಿ ದೊರೆಯು ವ ನ್ಯಾಯವು ಮತ್ತು ಸಂರಕ್ಷಣೆಯು ಸಾಂಪ್ರತಕಾಲದಲ್ಲಿ ನಿಮಗೆ ಲಾಭಕರವಾಗಿದ್ದಷ್ಟು ಹಾಗೂ ಭವಿಷ್ಯಕಾಲದಲ್ಲಿ ಕೂಡ ನಿಮಗೆ ಆಶ್ವಾ ಸನಕಾರಕವಾಗಿದಷ್ಟು ಎರಡನೇ ಯಾರಿಗೂ ಇಲ್ಲ. ಹೀನ ವರ್ಣದ ಜನರು ನಮ್ಮ ಪ್ರಗತಿಮುಂದಿದ ಹೊಸ್ತಲವನ್ನು ಈಗ ತಾನೇ ಮೆಟ್ಟಿ ರುತ್ತಾರೆಂಬ ಸಂಗತಿಯು ನಿಮ್ಮ ಚಿಕ್ಕ ಪುಸ್ತಕದಲ್ಲಿ ಕಾಣಿಸಿದ ಅಂಕಿಗಳ ಮೇಲಿಂದ ಕಂಡುಬರುತ್ತದೆ. ಸಂಖ್ಯೆಗಳ ಮೇಲಿಂದ ನೋಡಲಾಗಿ, ಈ ವರೆಗೆ ಆದ ಪ್ರಗತಿಯು ಕ್ಷುಲ್ಲಕವಿರುತ್ತದೆ. ಆದರೆ ಈ ಚಳ ವಳಿಯಿಂದ ಈ ವರೆಗೆ ಉಂಟಾದ ಮಹತ್ವದ ಲಾಭವು ಯಾವದೆಂದರೆ, ಸಾಮಾಜಿಕ ಪ್ರತಿಬಂಧಗಳು ದೂರಾಗುತ್ತಿರುವವು. ಈ ಪ್ರತಿಬಂಧ ಗಳು ಒಂದೊಂದೇ ಇಲ್ಲದಂತೆ ಆದಹಾಗೆ, ಈ ಪ್ರಗತಿಯು ತೀವ್ರವಾ ಗಿಯೂ, ವಿಸ್ತಾರವಾಗಿಯೂ ಬೆಳೆಯಲಿಕ್ಕೇ ಬೇಕು. ಇದರ ಕೊನೆ ಯ ಪರಿಣಾಮವು ಏನಾದೀತೆಂಬ ಭವಿಷ್ಯವನ್ನು ಈಗ ಯಾರಿಂದಲೂ ಹೇಳಕೂಡದು. ಆದು ಹಿತಕರವಾಗುವದೆಂಬ ಬಗ್ಗೆ ಯಾರಿಗೂ ಸಂಶಯ ಬರಲಿಕ್ಕಿಲ್ಲ. ಯಾಕಂದರೆ, ಯಾರಿಗೆ ನಾಗರೀಕತೆಯ ಹಕ್ಕು ಇಲ್ಲೆಂದು ಹೇಳಲ್ಪಡುತ್ತದೆಯೋ, ಯಾರ ಸ್ಪರ್ಶವು ದೂಷಿತವಾದ ದ್ದೆಂದು ತಿಳಿಯಲ್ಪಡುತ್ತದೆಯೋ, ಇಂಥ ಜನರ ಪ್ರಮಾಣವು ೭ ಇರು ವದೆಂದು ಖಾನೇಸುಮಾರಿಯ ಮೇಲಿಂದ ತಿಳಿಯುತ್ತದೆ. ಈ ಸ್ಥಿತಿ ಯು ಸಮಾಜಕ್ಕೆ ಘಾತಕವಾಗದೆ ಇರಲಾರದು.

ಆದರೂ ಲೋಕಮತದಲ್ಲಿ ಉಚ್ಚ ಪ್ರತಿಯುವೆಂದು ಎಣಿಸಲ್ಪ
ಟ್ಟಂಥ ಬೇರೆ ಸಮಾಜಗಳಲ್ಲಿ ಕಂಡುಬರುವ ಶ್ರೇಷ್ಠವಾದ ಮಾನಸಿಕ
ಗುಣಗಳೂ ಉಚ್ಚವಾದ ಧ್ಯೇಯಗಳ ಮನ್ನಣೆಯೂ ಈ ತಿರಸ್ಕೃತ
ವಾದ ವರ್ಗಗಳಲ್ಲಿ ಸಹ ಕಂಡು ಬರುವವು. ಕೇವಲ ಬಹಿರಂಗ
ಸ್ವರೂಪನ್ನು ನೋಡುವಂಥವರು ಈ ಜನರ ಮೇಲೆ ಕಳವು ಮಾಡ
ವಂಥವರು ಹಾಗೂ ಸಟೆಯಾಡುವಂಥವರು ಎಂದು ದೋಷಾರೋಪಣೆ
ಮಾಡುತಾರೆ. ಆದರೆ ಒಂದು ರಾಷ್ಟ್ರವು ಬೇರೊಂದು ರಾಷ್ಟ್ರದೊ
ಡನೆ ಯುದ್ಧದಲ್ಲಿ ತೊಡಗಿದಾಗ್ಗೆ ಕಳ್ಳತನ ಹಾಗೂ ಸುಳ್ಳಾಡೋದು
ಇವು ದೊಡ್ಡ ಪ್ರಮಾಣದಿಂದ ಪ್ರಚಾರದಲ್ಲಿ ಬರುತ್ತವೆ, ಹಾಗೂ
ಅವು ಕ್ಷಮ್ಯವೆಂದು ಎಣಿಸಲ್ಪಟ್ಟು, ಬೇರೆ ಆದರದ ಶಬ್ದಗಳಿಂದ ವ
ರ್ಯಾದೆಯನ್ನು ಹೊಂದಿರುತ್ತವೆಂಬದನ್ನು ನಾವು ಇತ್ತಲಾಗಿ ನೋಡಿ
ರುತ್ತೇವೆ. ಇದೇ ಮೇರೆಗೆ ಈ ಹೀನಜಾತಿಯ ಜನರು, ಮೇಲ್ತರದ
ಜಾತಿಯ ಜನರು ತಮಗೆ ವಿರುದ್ಧವಾಗಿದ್ದಾರೆಂದು ತಿಳಿದಾಗ್ಗೆ ದುರ್ಬಲ
ರಾದವರು ಮಾಡುವ ಇಂಥ ಹಂಚಿಕೆಗಳನ್ನು ಅವರು ಮಾಡುವದೂ
ಅವುಗಳನ್ನು ಶ್ಲಾಘಿಸುವದೂ ಸ್ವಾಭಾವಿಕವಾಗಿರುತ್ತದೆ. ಆದರೆ ಅವರು
ತಮ್ಮ ತಮ್ಮೊಳಗೆ, ಹಾಗೂ ಜವಾಬದಾರಿಯ ಕೆಲವು ಸ್ಥಾನಗಳಲ್ಲಿ ನೇ
ಮಿಸಲ್ಪಟ್ಟಾಗ್ಗೆ, ವೃದ್ಧಿಹೊಂದುವ ಬಹುಮಾನವನ್ನು ಪಡೆಯಲಿಕ್ಕೆ ತಕ್ಕ
ವರಾಗಿರುತಾರೆ. ದೂರಿದ್ದ ಹಳ್ಳಿಯಿಂದ ಸರಕಾರೀ ಖಜೀನೆಗೆ
ಸರಕಾರದ ಹಣವನ್ನು ಒಯ್ಯಲಿಕ್ಕೆ ಹಚ್ಚಲ್ಪಟ್ಟ ಹೊಲೆಯರ ಉದಾಹ
ರಣೆಯನ್ನು ತೆಗೆದುಕೊಳ್ಳುವಾ. ನೂರಾರು ಜನರು ಪ್ರತಿದಿವಸ ಈ ಕೆಲ
ಸಕ್ಕೆ ಹಚ್ಚಲ್ಪಡುತಾರೆ. ಆದರೆ, ಹಣದ ಅಪಹಾರವಾದದ್ದು ಅಥವಾ
ಅವಿಶ್ವಾಸದ ಉದಾಹರಣೆಯು ವಸ್ತುತಃ ಕಂಡುಬರುವದಿಲ್ಲ. ಬ್ರಿಟಿಶರ
ಆಳಿಕೆಯ ಆರಂಭದಲ್ಲಿ ಮುಂಬೈ ಸೈನ್ಯದ ಅನೇಕ ಪಲಟಣೆಗಳಲ್ಲಿ
ಹೊಲೆಯರ ಜಾತಿಯ ಜನರು ಇದ್ದು ಅವರು ಒಳ್ಳೇ ಶೂರತನದ ಕೆಲಸ
ವನ್ನು ಮಾಡಿದರು. ಈ ದೇಶದ ಸುರಕ್ಷತೆಗಾಗಿಯೂ ಸಂರಕ್ಷಣೆಗಾ
ಗಿಯೂ ಈಗ ನಡೆದ ಮಹಾಯುದ್ಧಕ್ಕೆ ಈ ವರ್ಗದ ಸ್ವಯಂ ಸೇವ
ಕರು ಉತ್ಸುಕತೆಯಿಂದ ಹೋಗಿರುತಾರೆಂಬ ಸಂಗತಿಯು ರಾ. ತಿಂದೆ
ಇವರಿಂದಲೇ ಮತ್ತು ಕೇಳಿ ಸಮಾಧಾನವಾಯಿತು. ಇದರಂತೆ ಭಂಗೀ

ನಸು ಪ್ಲೇಗದ ಮೊದಲನೇ ವರ್ಷದಲ್ಲಿ ತಮ್ಮ ಸಮಾಜದ ಪ್ರಮುಖ
ಗೆ ವಿಧೇಯರಾಗಿ ಹಾಗೂ ವಿಶ್ವಾಸುಕತನದಿಂದ ನಡಕೊಂಡರೆಂಬ
ಂಗತಿಯು ನಮ್ಮ ಮನಸ್ಸಿನಲ್ಲಿ ಒಳಿತಾಗಿ ಬಿಂಬಿಸಿದ್ದು ನಮಗೆ
ನಪುಂಟು. ಈ ಸದ್ಗುಣವು ಮೇಲ್ಕಾರದ ಸಮಾಜದ ಜನರಲ್ಲಿ ಸಹ
ಾಮಾನ್ಯತಃ ಕಂಡುಬರುವದಿಲ್ಲ. ತಮ್ಮ ಸಮಾಜದ ಪ್ರಮುಖರು
ಮ್ಮೆ ಕೊಟ್ಟ ವಚನವನ್ನು ಇವರು ಯಾವಾಗಲೂ ಪಾಲಿಸುತ್ತಿದ್ದರು.
ಹಾಗೂ ಉಳಿದ ಯಾವತ್ತೂ ಜಾತಿಗಳು ಭಯಗ್ರಸ್ತರಾದ ಪ್ರಸಂಗ
ಲ್ಲಿ ಈ ಸಾರ್ವಜನಿಕ ಕೆಲಸಕ್ಕೆ ನೀಡಿದ ನಮ್ರ ಸೇವಕರು ತಮ್ಮ
ುಖಂಡರ ಅಪ್ಪಣೆಯ ಮೇರೆಗೆ ತಮ್ಮ ಚಾಕರಿಯನ್ನು ಬಿಟ್ಟು ಅಗಲ
ಲ್ಲ. ಈ ತರದ ಜನರಲ್ಲಿಯ ಸಾಲಕಳಿಯುವ ಕುರಿತು ಮುಂಬಯಿ
ರುಲ್ಲಿ ಪರಸ್ಪರ ಸಹಾಯಕಾರೀ ಸಂಘವನ್ನು ಸ್ಥಾಪಿಸುವ ಕೆಲಸದಲ್ಲಿ
ಾ. ದೇವಧರ ಇವರು ತೊಡಗಿದಾಗ್ಗೆ ಅವರಿಗೆ ಸಹ ಈ ಜನರು
ಾವು ತಕ್ಕೊಂಡ ಸಾಲವನ್ನು ವೇಳೆಗೆ ಸರಿಯಾಗಿ ತಿರಿಗಿ ಕೊಡುವ
ರಲ್ಲಿ ಶ್ಲಾಘನೀಯವಾದ ಪ್ರಾಮಾಣಿಕತನವನ್ನು ತೋರಿಸಿದ ಬಗ್ಗೆ.
ತ್ಯಲಾಗಿ ಅನುಭವವು ಬಂದಿರುತ್ತದೆ. ಈ ಸಂಗತಿಗಳ ಮೇಲಿಂದ
ಈ ವರ್ಗಗಳನ್ನು ಉನ್ನತಿಗೆ ತರುವ ನಿಮ್ಮ ಪ್ರಯತ್ನಕ್ಕೆ ಯೋಗ್ಯ
ುತ್ತು ಅನುಕೂಲವಾದ ಸಾಧನಗಳು ಸಿಕ್ಕಿರುತ್ತವೆಂಬದು ಕಂಡು
ಬರುತ್ತದೆ.

ಶಿಕ್ಷಣವೇ ನಿಮ್ಮ ಪ್ರಯತ್ನದ ಮೂಲ ಆಧಾರವೆಂದು ನೀವು
ಶ್ಚಯಿಸಿದ್ದು ಸರಿಯಾಗಿರುತ್ತದೆ. ಮತ್ತು ಇಲ್ಲಿಯ ಮುನಸೀಪಾಲಿ
ಯವರು ತಮ್ಮ ಉದಾರಹಸ್ತದಿಂದ ನಿಮಗೆ ಪೂರ್ಣ ಆಶ್ರಯವನ್ನು
ೊಡುವರೆಂದು ನಾವು ಪೂರಾ ನಂಬಿದ್ದೇವೆ. ನೀವು ಈ ಜಾತಿಯವರ
ಾಂಪತ್ತಿಕ ಸ್ಥಿತಿಯನ್ನು ಸುಧಾರಿಸುವದಕಾ ಕ್ಕಾಗಿ ಕೈಕೊಂಡ ಮಾರ್ಗ
ನ್ನು ನಿಮ್ಮ ರಿಪೋರ್ಟನಲ್ಲಿ ಉಲ್ಲೇಖಿಸಿದ್ದನ್ನು ನೋಡುವದು ನಮಗೆ
ುಂಬಾ ಅಪೇಕ್ಷೆ ಇತ್ತು. ಉದಾಹರಣಾರ್ಥವಾಗಿ, ಈಗ್ಗೆ ಹೊಲೆಯ
ಾಗೆ ದಂಡಿನ ಖಾತೆಯಲ್ಲಿ ಚಾಕರೀ ಮಾಡಲಿಕ್ಕೆ ಪ್ರತಿಬಂಧವಿರುತ್ತದೆ.
ೀರ ಸ್ವಲ್ಪ ಜನರನ್ನು ಪೋಲೀಸ ಖಾತೆಯಲ್ಲಿ ಸೇರಿಸಿದೆ. ಮ್ಯುನ
ೀಪಾಲಿಟಿಯಲ್ಲಿಯಾದರೂ ಇದೇ ಪ್ರಕಾರ ಅತಿ ಸ್ವಲ್ಪ ಜನರನ್ನು ಸೇರಿ

ಸಿದ್ದಿರುತ್ತದೆ. ಈ ನಿರ್ಬಂಧಗಳೂ ಈ ಅಪಾತ್ರತೆಯೂ ಬಹಳ ಮಾಡಿ ಉಚ್ಚ ಜಾತಿಯವರ ಮನಸಿನ ಪ್ರವೃತ್ತಿಯಿಂದ ಹಾಗೂ ಈ ತರದ ಪ್ರವೃತ್ತಿಯಿಂದ ಹುಟ್ಟುವ ರಾಜಕೀಯ ತೋಪರೆಗಳಿಂದ ಉಂಟಾಗಿರುತವೆ. ಈ ನಿರ್ಬಂಧಗಳ ಮೂಲವನ್ನು ಕಿತ್ತುಹಾಕುವದೊಂದು ಅತಿ ದುಸ್ತರವಾದ ಕಾರ್ಯವು ಇನ್ನೂ ನಿಮ್ಮ ಮುಂದೆ ಇರುತ್ತದೆಂದು ಸ್ಪಷ್ಟವಾಗಿ ಕಂಡುಬರುತ್ತದೆ.

ಈ ಹೊತ್ತಿನ ಈ ಸಭೆಯು ಪ್ರಸ್ತುತ ಕಾಲದಲ್ಲಿ ಹೆಚ್ಚುತ್ತಲಿರುವ ಸಹಾನುಭೂತಿಯ ಬಹು ಮೂಲ್ಯವಾದ ಚಿಹ್ನವಿರುವದು. ಈ ಹುಬ್ಬಳ್ಳೀ ಶಹರದ ಮಹತ್ವವಾದ ಉದ್ಯೋಗ-ವ್ಯವಸಾಯಗಳನ್ನು ನಡಿಸುವವರ ಮತ್ತು ಉಚ್ಚ ಜಾತಿಯವರ ಪ್ರಮುಖರು ನಿಮ್ಮ ಸ್ಥಾನಿಕ ಕಮಿಟಿಯಲ್ಲಿ ಇರುವರೆಂಬದಾಗಿ ನಮಗೆ ತಿಳಿಯುತ್ತದೆ. ನಿಮಗೆ ಬ್ರಾಹ್ಮಣ, ಲಿಂಗವಂತ, ಮುಸಲ್ಮಾನ ಮತ್ತು ಜೈನ ಇವರ ಕಡೆಯಿಂದ ಸಹಾಯವು ಸಿಗುತ್ತಿರುತ್ತದೆ. ನಿಮ್ಮ ಮೆಂಬರ ಜನರಲ್ಲಿ ಪ್ರಮುಖ ವ್ಯಾಪಾರಸ್ಥರೂ, ವಕೀಲರೂ ಕೂಡಾ ಇರುತ್ತಾರೆ. ಈ ತರದ ಐಕ್ಯವೂ ಸಹಕಾರಿತ್ವವೂ ಮುಂದಿನ ಕಾಲದ ಶುಭಚಿಹ್ನಗಳಾಗಿರುತ್ತವೆ; ಮತ್ತು ನಿಮ್ಮ ಮುಖ್ಯಸ್ಥಾಪಕರಿಗೆ ಅವರ ಉತ್ಸಾಹ, ಯೋಗ್ಯತೆ, ಮತ್ತು ವಿದ್ಯೆ ಈ ಗುಣಗಳ ಮೂಲಕ ಐಹಿಕ ಉನ್ನತಿಯು ಕೇವಲ ಸಾಧ್ಯವಿದ್ದರೂ ಸಹಾ ಅವರು ಅವುಗಳನ್ನು ಸ್ವಸಂತೋಷದಿಂದ ತ್ಯಾಜ್ಯ ಮಾಡಿದವರಿರುವರು. ಇಲ್ಲಿ ಪೌರಸ್ತ್ಯ ಮತ್ತು ಪಾಶ್ಚಾತ್ಯ ಉಚ್ಚತಮ ಧ್ಯೇಯಗಳ ನಿಜವಾದ ಸಂಗಮವಿರುವದು. ಕಳೆದ ತುಸು ದಿವಸಗಳಲ್ಲಿ ಪರಲೋಕವಾಸಿಗಳಾದ ನಾಮದಾರ ಗೋಪಾಳ ಕೃಷ್ಣಗೋಖಲೆಯವರು ಇದೇ ಧ್ಯೇಯದ ಸುಪ್ರಸಿದ್ಧ ಉದಾಹರಣೆಯಾಗಿದ್ದರು. ಯುರೋಪ ಖಂಡದ ಕ್ರಿಸ್ತೀ ಮತದ ಇತಿಹಾಸದ ಮತ್ತು ಅದರ ಹಬ್ಬುವಿಕೆಯ ಪುನರಾವೃತ್ತಿಯು ಈಗ್ಗೆ ಹಿಂದುಸ್ತಾನದಲ್ಲಿ ನಡೆದದೆ. ಸಾವಿರ ವರ್ಷದ ಪೂರ್ವದಲ್ಲಿ ಯುರೋಪದಲ್ಲಿ ಧಾರ್ಮಿಕ ಜನರ ಸಾಮಾನ್ಯ ಧ್ಯೇಯವು ಸ್ವಂತದ ಆತ್ಮೋದ್ಧಾರದ ಸಲುವಾಗಿ ಸಂಸಾರ ಪರಿತ್ಯಾಗ ಮಾಡುವದೇ ಇತ್ತು; ಮತ್ತು ಇಂಥ ಜನರು ಮಠಗಳಲ್ಲಿಯಾಗಲಿ, ನಿರ್ಜನ ಪ್ರದೇಶಗಳಲ್ಲಿಯಾಗಲಿ ಧ್ಯಾನಮಾಡುತ್ತ ಏಕಾಂತದಲ್ಲಿ

ವಾಸಿಸುತ್ತಿದ್ದರು. ಈಗ ಹಿಂದುಸ್ತಾನದಲ್ಲಿ ಇರುವ ಯತಿಗಳು ಬಹು ತರ ಸಂಪೂರ್ಣವಾಗಿ ಅವರ ಮಾದರಿಯಾಗಿರುವರು. ಯುರೋಪದಲ್ಲಿ ವ್ಯಕ್ತಿಯ ಆತ್ಮೋದ್ಧಾರದ ವಿಚಾರವು ಕ್ರಮೇಣ ವಿಸ್ತರಿಸುತ್ತ ಜನಸಮೂಹದ ಸಹಾನುಭೂತಿಯ ಸ್ವರೂಪಗೊಂಡಿತು; ಮತ್ತು ಇಂಥ ಸನ್ಯಾಸಿಗಳ ಈಗಿನ ಕಾಲದ ಅನುಯಾಯಿಗಳು ದಾರಿದ್ರ್ಯ-ದುಃಖ ಪೀಡಿತರಾದವರಿಗೆ ಸಹಾಯ ಮಾಡುವದರಲ್ಲಿಯೂ, ದೀನಸ್ಥಿತಿಯಲ್ಲಿದ್ದಂಥ ಜಾತಿಗಳನ್ನು ಮೇಲೆ ತರುವದರಲ್ಲಿಯೂ, ತಮ್ಮ ಆಯುಷ್ಯವನ್ನು ಕಳಿಯುತ್ತಲಿದ್ದಾರೆ. ಈ ತರದ ಧಾರ್ಮಿಕ ಮತ್ತು ಸ್ವಾರ್ಥತ್ಯಾಗದ ಉದಾಹರಣೆಗಳನ್ನು ಈ ಹಿಂದುಸ್ತಾನದಲ್ಲಿದ್ದ ಕ್ರಿಸ್ತೀ ಮಿಶನರಿಗಳಲ್ಲಿ ನೀವು ಕಾಣಬಹುದು.

ಪೌರಸ್ತ್ಯರ ಮತ್ತು ಪಾಶ್ಚಾತ್ಯರ ನಡೆನುಡಿಗಳ ಆದರ್ಶಗಳು ತೀರ ಭಿನ್ನವಾದವುಗಳಿರುತ್ತವೆಂದು ಮೇಲಿಂದ ಮೇಲೆ ಹೇಳುವದರಲ್ಲಿ ಬರುತ್ತದೆ. ಆದರೆ ಈ ತರದ ಸಂಸ್ಥೆಯು ಮೇಲ್ಕಂಡ ವಿಚಾರದ ಅಸತ್ಯತೆಯನ್ನು ವ್ಯಕ್ತಪಡಿಸುತ್ತದೆ. ಪೌರಸ್ತ್ಯ ಟೀಕಾಕಾರರು ಪಾಶ್ಚಾತ್ಯರ ಮೇಲೆ ಅವರು ಕೇವಲ ಪಾರ್ಪಂಚಿಕ ಸುಖಕ್ಕೆ ಮೆಚ್ಚಿದವರೆಂದು ದೋಷಾರೋಪ ಮಾಡುತ್ತಾರೆ. ಆದರೆ, ಎಷ್ಟೋ ವಾದಗ್ರಸ್ತ ವಿಷಯಗಳಿದ್ದಂತೆ ಈ ಪ್ರಸಂಗದಲ್ಲಿಯೂ ಬಹಳ ಮಾಡಿ ಸತ್ಯತೆಯು ಇವೆರಡರ ಮಧ್ಯದಲ್ಲಿಯೇ ಇರಬಹುದು; ಮತ್ತು ಈ ಸಂಸ್ಥೆಯನ್ನು ನಡಿಸುವವರು, ಪೌರಸ್ತ್ಯರ ಧ್ಯೇಯವಾದ ಸಾಂಪತ್ತಿಕ ಅಭ್ಯುದಯದ ತ್ಯಾಗವನ್ನೂ, ದಾರಿದ್ರ್ಯ-ದುಃಖನಿವಾರಣಾರ್ಥವಾಗಿ ಸ್ವಾರ್ಥತ್ಯಾಗವನ್ನೂ ಮಾಡಿ ಎರಡೂ ಧ್ಯೇಯಗಳನ್ನು ಏಕರೂಪವಾಗಿ ಮಾಡಿಕೊಂಡಿರುವರೆಂದು ನಾವು ನಂಬಬಹುದು. ಕೊನೆಗೆ, ಈ ಸಂಸ್ಥೆಯು ಕೆಲಸಕ್ಕೆ ಕರ್ನಾಟಕದ ಉದಾರ ಜನರ ಆಶ್ರಯವು ಸಿಗಬೇಕಾಗಿ ನಾನು ಅಂತಃಕರಣಪೂರ್ವಕವಾಗಿ ಶಿಫಾರಸ ಮಾಡುತ್ತೇನೆ."

ಮೇಲೆ ಬರೆದ ಪ್ರಕಾರ ಮೆಹಬರ್ಬಾನ ಕಮಿಶನರ ಸಾಹೇಬರವರ ಭಾಷಣವಾದ ಮೇಲೆ, ಹುಬ್ಬಳ್ಳಿಯ ಮತ್ತು ಈ ಸಂಸ್ಥೆಯ ಹಿತಚಿಂತಕರಾದ ರಾ. ಶಂಕರರಾವ ಆಪಟೆ ಇವರು, ಸಾಹೇಬ ಬಹಾದ್ದೂರವರು ಸ್ವತಃ ಇಲ್ಲಿಗೆ ಆಗಮನಮಾಡಿ ಈ ಸಮಾರಂಭದ ಅಧ್ಯಕ್ಷ

ಸ್ಥಾನ ಸ್ವೀಕರಿಸಿದ್ದರಿಂದ, ಸಂಸ್ಥೆಯ ವತಿಯಿಂದ ಅವರ ಆಭಾರ ಮನ್ನಿಸಿದರು. ಆ ಮೇಲೆ ಅಧ್ಯಕ್ಷಸಾಹೇಬ ಬಹಾದ್ದೂರರವರಿಗೂ ಬೇರೆ ಸನ್ಮಾನ್ಯ ಅತಿಥಿ ಜನಗಳಿಗೂ ಹಾರ ತುರಾಯಿ ಕೊಟ್ಟ ಮೇಲೆ, ಕನ್ನಡ ಭಾಷೆಯಲ್ಲಿ ರಾಷ್ಟ್ರಗೀತವನ್ನು ಹಾಡಿ, ಈ ಮಹತ್ವದ ಸಮಾರಂಭದ ಕಾರ್ಯವು ಸಂಪೂರ್ಣವಾಯಿತು.

ವಿದ್ಯಾಖಾತೆಯ ನೋಟೀಸುಗಳು.

ಮುಂಬೈ ಇಲಾಖೆಯೊಳಗಿನ ಸರಕಾರೀ ವಿದ್ಯಾಖಾತೆಯವರು ಮಂಜೂರ ಮಾಡಿದ ಹೆಣ್ಣುಮಕ್ಕಳ ಕನ್ನಡ ಕ್ರಮಿಕ ಮೊದಲನೆಯ ಪುಸ್ತಕವು.

ದಕ್ಷಿಣ ಭಾಗದೊಳಗಿನ ಹೆಣ್ಣುಮಕ್ಕಳ ಯಾವತ್ತೂ ಕನ್ನಡ ಶಾಲೆಗಳಲ್ಲಿ ಉಪಯೋಗಿಸುವದಕ್ಕಾಗಿ ಹೆಣ್ಣು ಮಕ್ಕಳ ಕನ್ನಡ ಕ್ರಮಿಕ ಮೊದಲನೆಯ ಪುಸ್ತಕವು ಮುಂಬೈ ಸರಕಾರದಿಂದ ಮಂಜೂರು ಮಾಡಲ್ಪಟ್ಟಿರುವದು ಈ ಪುಸ್ತಕವನ್ನು ಹೆಣ್ಣುಮಕ್ಕಳ ಶಾಲೆಗಳಲ್ಲಿ ನಾಲ್ಕನೆಯ ಇಯತ್ತೆಗೆ ಈಗಿರುವ ಗಂಡುಮಕ್ಕಳ ಕ್ರಮಿಕ ನಾಲ್ಕನೆಯ ಪುಸ್ತಕಕ್ಕೆ ಬದಲಾಗಿ ಹಚ್ಚತಕ್ಕದ್ದು; ಹಾಗು ಬರುವ ವಾರ್ಷಿಕ ಪರೀಕ್ಷೆಯಾದನಂತರ ಹೊಸ ವರ್ಗಗಳು ಆರಂಭವಾದ ಕೂಡಲೆ ಆ ಪುಸ್ತಕವನ್ನು ಹಚ್ಚಬೇಕು

ಮೆ. ಎಜ್ಯುಕೇಶನಲ್ ಇನ್‌ಸ್ಪೆಕ್ಟರ ಸಾಹೇಬ ದಕ್ಷಿಣಭಾಗ
ಇವರ ಅಪ್ಪಣೆಯ ಮೇರೆಗೆ
V. B. Joshi,
ಪ್ರಿನ್ಸಿಪಾಲ,
ಟ್ರೇನಿಂಗ ಕಾಲೇಜ ಧಾರವಾಡ.

ಕಾಗದ, ದೌತಿ, ಲೇಖನಿ ಮುಂತಾದ ಲೇಖನಸಾಧನಗಳನ್ನು ಪೂರೈಸುವ ಶಾಲೆಯ ವಿದ್ಯಾರ್ಥಿಗಳ ಸಂಘದ ನಿಯಮಗಳಲ್ಲಾದ ಬದಲಾವಣೆಗಳು

ಕಳೆದ ಮಾರ್ಚ ತಿಂಗಳ ಶಾಲಾಪತ್ರಕದ ೨೪-೩೧ ಪುಟಗಳಲ್ಲಿ ಪ್ರಕಟಿಸಲ್ಪಟ್ಟಿರುವ ಈ ಮೇಲಿನ ವಿದ್ಯಾರ್ಥಿಗಳ ಸಂಘಕ್ಕೆ ಸಂಬಂಧಿಸಿದ ನಿಯಮಗಳಲ್ಲಿ ಕೆಳಗೆ ಕಾಣಿಸಿದಂತೆ ಕೋಆಪರೇಟಿವ್ಹ ಕ್ರೆಡಿಟ್ ಸೊಸಾಯಟಿಗಳ ರೆಜಿಸ್ಟ್ರಾರರವರು ಕೆಲವು ಸುಧಾರಣೆಗಳನ್ನು ಸಿಫಾರಸು ಮಾಡಿದ್ದಾರೆ. ಶಾಲೆಗಳೊಳಗಿನ ಪರಸ್ಪರ ಸಹಾಯಕ ಸಂ

ಗಳು ಅವುಗಳನ್ನು ಅರಿತುಕೊಂಡು ನಡೆಯುವದಕ್ಕೆ ಅನುಕೂಲವಾಗಬೇಕೆಂದು ಆ ಸುಧಾರಣೆಗಳನ್ನು ಇಲ್ಲಿ ಪ್ರಕಟಿಸುತ್ತೇವೆ:—

೨ನೇ ನಿಯಮಕ್ಕೆ ಹೆಚ್ಚಾಗಿ ಸೇರಿಸತಕ್ಕದ್ದು:—"ಸಂಘದ ಸಭಿಕರಾದವರಿಂದಲೂ ಸಭಿಕರಾಗದೆ ಇದ್ದವರಿಂದಲೂ ಠೇವನ್ನು ಇಟ್ಟುಕೊಳ್ಳಬಹುದು. ಹಾಗು ಆ ಠೇವಿಗೆ ಶೇಕಡಾ ೬ಕ್ಕೆ ದಂತೆ, ಅಂದರೆ ೧ ರೂ.ಗೆ ೧ ತಿಂಗಳಿಗೆ ೧ ಪೈಯಂತೆ ಬಡ್ಡಿಯು ಕೊಡಲ್ಪಡುವದು. ೧೦ನೆಯ ನಿಯಮಕ್ಕೆ ಒಳಪಡಿಸಿ ಠೇವುಗಳನ್ನು ೩ ತಿಂಗಳ ನೋಟೀಸು ಕೊಟ್ಟು ಮಾತ್ರವೆ ವಾಪಸ ತಕ್ಕೊಳ್ಳಬಹುದು.

೩ನೇ ನಿಯಮದಲ್ಲಿ ಹೇಳಿದಂಥ ಸಂಘದ ಸಭಿಕನಾಗಬೇಕಾದಾಗ ಕೊಡತಕ್ಕ ಪ್ರವೇಶ ಫೀಯು ೧ ಆಣೆ ಇದ್ದದ್ದು ಸಾಧ್ಯವಿದ್ದ ಸ್ಥಳದಲ್ಲಿ ೨ ಆಣೆಯಿಂದ ೪ ಆಣೆಯ ವರೆಗೆ ಏರಿಸಲ್ಪಡತಕ್ಕದ್ದು. (ಹಣವಿಲ್ಲದೆ ಸಂಘವು ಸರಿಯಾಗಿ ಕೆಲಸ ಮಾಡಲಾರದೆಂಬದು ಸ್ಪಷ್ಟವೇ ಸರಿ).

೧೦ನೇ ನಿಯಮಕ್ಕೆ (ಬ) ಸಂಘದೊಳಗಿನ ಸಾಮಾನಗಳನ್ನು ಸಂಘದ ಸಭಿಕರಲ್ಲದಂಥ ಜನರಿಗೂ ಮಾರಬಹುದು. ಆದರೆ ಅವರು ತಾವು ಕೊಂಡ ಸಾಮಾನಿನ ಒಟ್ಟು ಬೆಲೆಯ ಮೇಲೆ, ಸಂಘದ ಸಭಿಕರು ಕೊಡುವ ಬೆಲೆಗಿಂತಲೂ ೧ ರೂ. ಗೆ ೨ ಪೈಯಂತೆ ಹೆಚ್ಚಿಗೆ ಬೆಲೆಯನ್ನು ಕೊಡಬೇಕಾಗುವದು.

ಎ. ಶಾ. ಪ.

ನೋಟೀಸು.

ದಕ್ಷಿಣ ಭಾಗದೊಳಗಿನ ಶಿಕ್ಷಕೆಯರ ಸಮ್ಮೇಲನವು ಧಾರವಾಡದ ಹೆಣ್ಣುಮಕ್ಕಳ ಟ್ರೇನಿಂಗ ಕಾಲೇಜದಲ್ಲಿ ಇದೇ ವರ್ಷದ ಸಪ್ಟಂಬರ ತಿಂಗಳ ೨೮ನೇ ತಾರೀಖಿನಿಂದ ೩೦ನೇ ತಾರೀಖಿನವರೆಗೆ ಆಗುವದು. ಎಲ್ಲ ಶಿಕ್ಷಿಕೆಯರು ಈ ಸಮ್ಮೇಲನಕ್ಕೆ ಬರಬೇಕೆಂದು ಮನಃಪೂರ್ವಕವಾಗಿ ಬಯಸುತ್ತೇವೆ.

೨ ಈ ಸಮ್ಮೇಲನಕ್ಕೆ ಬರುವ ಶಿಕ್ಷಿಕೆಯರಿಗೆ ಅನುಕೂಲವಾಗಬೇಕೆಂದು ದಕ್ಷಿಣಭಾಗದ ಎಜ್ಯುಕೇಶನಲ್ ಇನ್‌ಸ್ಪೆಕ್ಟರ ಸಾಹೇಬರವರು ಇದೇ ವರುಷದ ಸಪ್ಟಂಬರ ೨೭ನೇ ತಾರೀಖಿನಿಂದ ೩೦ನೇ ತಾರೀಖಿನವರೆಗೆ ಎಲ್ಲ ಹೆಣ್ಣು ಹುಡುಗೆಯರ ಶಾಲೆಗಳನ್ನು ಬಂದು ಇಡುವದಕ್ಕೆ ಒಪ್ಪಿಗೆಯನ್ನು ಕೊಟ್ಟಿದ್ದಾರೆ; ಹಾಗು ಶಿಕ್ಷಿಕೆಯರಿಗೆ ಈ ಸಮ್ಮೇಲನಕ್ಕೆ ಬರುವ

ದಕ್ಕೆ ಅನುಕೂಲವಾಗಬೇಕೆಂದು ಇಂಥ ಪ್ರತಿಒಬ್ಬ ಶಿಕ್ಷಕಿಯ ಪ್ರವಾ
ಸದ ಖರ್ಚು ಲೋಕಲ್ ಬೋರ್ಡ ಫಂಡಿನಿಂದ ಕೊಡಲ್ಪಡುವದು.

೩. ಸಮ್ಮೇಲನದ ಸಲುವಾಗಿ ಬಂದ ಶಿಕ್ಷಕಿಯರು ಕಾಲೇಜ
ದಲ್ಲಿ ಇಳಿದುಕೊಂಡರೆ ದಿನಕ್ಕೆ ೪ ಆಣೆ ಮಾತ್ರ ಖರ್ಚು ಕೊಡಬೆ
ಕಾಗುವದು. ಕಾಲೇಜದಲ್ಲಿ ಇಳಿದು ಕೊಳ್ಳಲಪೇಕ್ಷಿಸುವವರು ನಮಃ
ಅಗಷ್ಟ ತಿಂಗಳ ಅಖೈರದ ಒಳಗಾಗಿ ತಿಳಿಸತಕ್ಕದ್ದು.

ಟ್ರೇನಿಂಗ ಕಾಲೇಜ ಧಾರವೀಮೆನ್ ಧಾರವಾಡ
ಜೂನ ೧೯೧೬. | F. L. Mc Afee,
ಲೇಡೀ ಸುಪರಿಂಟೆಂಡೆಂಟ

ವ್ಹರ್ನ್ಯಾಕ್ಯುಲರ್ ಫಾಯನಲ್ ಪರೀಕ್ಷೆಯು.

ದಕ್ಷಿಣಭಾಗ.

ಈ ನೋಟೀಸಿನಿಂದ ತಿಳಿಸುವದೇನಂದರೆ:—ಸನ್ನ ೧೯೧೫ ನ
ಇಸವಿಯ ತಾ|| ೨೪ ನೇ ಜೂನ ತಿಂಗಳ ಮುಂಬಯಿ ಗವ್ಹರ್ನಮೆಂ
ಗ್ಯಾಝೀಟಿನ ೧ನೇ ಭಾಗದ ೧೬೨೧ ರಿಂದ ೧೬೨೪ ನೇ ಪುಟಗಳ
ಪ್ರಸಿದ್ಧವಾಡಿದ ನಿಯಮಗಳಿಗನುಸಾರವಾಗಿ ವ್ಹರ್ನ್ಯಾಕ್ಯು
ಫಾಯನಲ್ ಪರೀಕ್ಷೆಯು ಸೋಮವಾರ ತಾರೀಖು ೧೭ನೇ ಸಪ್ಟಂ
೧೯೧೬ ದಿವಸ ಹಾಗೂ ತದುತ್ತರ ದಿವಸಗಳಲ್ಲಿ ದಕ್ಷಿಣಭಾಗದ ಕೆ
ಕಾಣಿಸಿದ ಸೆಂಟರುಗಳಲ್ಲಿ ನಡೆಯುವದು:—

ಧಾರವಾಡ.	ಕಾರವಾರ.
ಬೆಳಗಾವ.	ರತ್ನಾಗರಿ.
ವಿಜಾಪೂರ.	ಅಲೀಬಾಗ.
	ಕೊಲ್ಹಾಪೂರ.

೨. ಪ್ರತಿಯೊಂದು ಸೆಂಟರಿನಲ್ಲಿ ಈ ಪರೀಕ್ಷೆಯು ಒಂದು ಕ
ಟಿಯ ಮುಖಾಂತರವಾಗಿ ನಡೆಯುವದು; ಮತ್ತು ಧಾರವಾಡ
ಗಾವ, ವಿಜಾಪೂರ, ಕಾರವಾರ, ರತ್ನಾಗಿರಿ ಹಾಯಸ್ಕೂಲುಗಳ
ಮಾಸ್ತರರು ಸದರೀ ಪರೀಕ್ಷಾಕವಿಾಟಗಳ ಅಧ್ಯಕ್ಷರಿರುವರು.
ಬಾಗದಲ್ಲಿ ಕುಲಾಬಾ ಜಿಲ್ಲೆಯ ಡಿ. ಎ. ಇನ್ಸಪೆಕ್ಟರರೂ ಕೊಲ
ದಲ್ಲಿ ಕೊಲ್ಹಾಪುರ ಸಂಸ್ಥಾನದ ಎ ಇನ್ಸಪೆಕ್ಟರರೂ ಅಧ್ಯಕ್ಷರಿರುವ

೩. ಪರೀಕ್ಷೆಗೆ ಕೂಡುವ ಪರವಾನಗಿಯ ಬಗ್ಗೆ ಅರ್ಜಿಗ
ಉಮೇದವಾರನು ಯಾವ ಜಿಲ್ಲೆಯಲ್ಲಿ ಇರುವನೋ ಆ ಜಿಲ್ಲೆಯ ಪ
ಕವಿಾಟಿಗು ಪೈಸಿಡೆಂಟರಿಗೆ ತಾ. ೧ನೇ ಅಗಷ್ಟ ೧೯೧೬ ನೇ ದಿವಸ

ವಾ ಅದಕ್ಕೂ ಪೂರ್ವದಲ್ಲಿ ತಲಪುವಂತೆ ಕಳಿಸತಕ್ಕದ್ದು. ಆ ಅರ್ಜಿಗಳನ್ನು ಈ ವಿಷಯದಲ್ಲಿ ವಿಧಿಸಲ್ಪಟ್ಟ ಅರ್ಜಿಯ ಭಾಷೀ ನಮೂನೆಗಳ ಮೇಲೆಯೇ ಮಾಡಲಿಕ್ಕೆಬೇಕು. ಈ ನಮೂನೆಗಳ ಬಗ್ಗೆ ಪ್ರೆಸಿಡೆಂಟರ ಕಡೆಗೆ ಅರ್ಜಿಯನ್ನು ಮಾಡಿದರೆ ಅವು ಪುಕ್ಕಟೆಯಾಗಿ ಕೊಡಲ್ಪಡುವವು.

೪. ಧಾರವಾಡದ ಮಾನ್ಯವಾದ ದೇಶಭಾಷೆಯು ಕನ್ನಡ ಇರುವದು. ಬೆಳಗಾವ, ವಿಜಾಪುರ, ಕಾನಡಾ, ಜಿಲ್ಲೆಗಳ ಮಾನ್ಯವಾದ ದೇಶಭಾಷೆಗಳು ಕನ್ನಡ ಮರಾಠಿ ಇವುಗಳಿರುವವು. ರತ್ನಾಗಿರಿ, ಕುಲಾಬಾ, ಕೊಲ್ಹಾಪುರಗಳ ದೇಶಭಾಷೆಯು ಮರಾಠಿ ಇರುವದು. ಧಾರವಾಡ ಜಿಲ್ಲೆಯ ಮರಾಠಿಯ ಉಮೇದವಾರರು ಧಾರವಾಡದಲ್ಲಿ ಪರೀಕ್ಷೆಗೆ ಕೂಡ್ರಬೇಕೋ ಬೆಳಗಾವಿಯಲ್ಲಿ ಪರೀಕ್ಷೆಗೆ ಕೂಡ್ರಬೇಕೋ ಎಂಬದನ್ನು ತರುವಾಯದಲ್ಲಿ ಎಜ್ಯುಕೇಶನಲ್ ಇನ್ಸಪೆಕ್ಟರ ಸಾಹೇಬರವರು ನಿರ್ಣಯಿಸುವರು. ತಾ ೪ನೇ ಜನವರಿ ೧೯೧೪ ಇಸವಿಯ ಮುಂಬಯಿ ಸರಕಾರೀ ಗ್ಯಾಝೆಟಿನ ೧ನೇ ಭಾಗದ ೩೧ನೇ ಪುಟದಲ್ಲಿ ಮುದ್ರಿಸಲ್ಪಟ್ಟ ವಿದ್ಯಾಖಾತೆಯ ಸರಕಾರೀ ಜಾಹೀರಾತ ನಂ. ೩೪೩೪ ತಾ|| ೨೩ನೇ ದಿಶಂಬರ ೧೯೧೩ನೆಯ ಪ್ರಕಾರ ಎಲ್ಲ ವಿಷಯಗಳಲ್ಲಿ ಊರ್ದು ಭಾಷೆಯ ದ್ವಾರಾ ಪರೀಕ್ಷಿಸಲ್ಪಡಲಪೇಕ್ಷಿಸುವ ಉಮೇದವಾರರಿಗೋಸ್ಕರ ಎಲ್ಲ ವಿಷಯಗಳಲ್ಲಿ ಊರ್ದು ಭಾಷೆಯ ಪ್ರಶ್ನಕಾಗೆದಗಳು ಕೊಡಲ್ಪಡುವವು.

೫. ಕುಲಾಬಾ ಜಿಲ್ಲೆಯ ಕರ್ಜತ ತಾಲೂಕಿನ ಉಮೇದವಾರರು ಠಾಣಾಸೆಂಟರಿನಲ್ಲಿ ಆಗುವ ಪರೀಕ್ಷೆಗೆ ಕೂಡ್ರಬಹುದು, ಮತ್ತು ಸಾಂಗಲಿ ಸಂಸ್ಥಾನದ ಕುರಲಿ ತಾಲೂಕಿನ ಉಮೇದವಾರರು ಸಾತಾರಾ ಸೆಂಟರಿನಲ್ಲಿ ಆಗುವ ಪರೀಕೆ ಗೆ ಕೂಡ್ರಬಹುದು.

೬. ಇದಕ್ಕೂ ಹೆಚ್ಚಿನ ಮಾಹಿತಿಯ ಬಗ್ಗೆ ಧಾರವಾಡ, ಬೆಳಗಾವ, ವಿಜಾಪೂರ, ಕ್ಯಾನರಾ, ರತ್ನಾಗಿರಿ ಮತ್ತು ಕುಲಾಬಾ ಜಿಲ್ಲೆಗಳ ಕಲೇಕ್ಟರ ಸಾಹೇಬರವರಿಂದ ಮತ್ತು ಕೊಲ್ಹಾಪುರ ದಿವಾನರಿಂದ ಪ್ರಸಿದ್ಧಿಸಲ್ಪಡುವ ಜಾಹೀರಾತುಗಳನ್ನು ನೋಡತಕ್ಕದ್ದು.

ಧಾರವಾಡ ಎಜ್ಯುಕೇಶನಲ್
ಇನಸ್ಪೆಕ್ಟರ ದಕ್ಷಿಣಭಾಗರವರ ಆಫೀಸು
ತಾ|| ೧೬-೬೧೯೧೬

A. C. Miller,
Ag. Educational
Inspector S. D.

ಮುಂಬಯಿ ಇಲಾಖೆಯೊಳಗಿನ ಕನ್ನಡ ಪ್ರಾಥಮಿಕ ಶಾಲೆಗಳಿಗೋಸ್ಕರ ಮಂಜೂರ ಮಾಡಿದ ಪುಸ್ತಕಗಳು, ನಕಾಶಗಳು, ಚಿತ್ರಗಳು, ಪಠಗಳು ಮುಂತಾದವುಗಳ ಪಟ್ಟಿ (ತಾ. ೩೧ನೇ ಅಗಷ್ಟ ೧೯೧೪ ರ ವರೆಗೆ ತಯಾರಿಸಿದ್ದು ಹಾಗು ಮೇ. ಡಾಯರೆಕ್ಟರ ಸಾಹೇಬರವರ ಅಪ್ಪಣೆಯ ಮೇರೆಗೆ ಪ್ರಸಿದ್ಧ ಪಡಿಸಿದ್ದು.)

ಸ. ನಂಬರು.	ಪುಸ್ತಕಗಳ ಹೆಸರು.	ಗ್ರುಂಥಕರ್ತರ ಹೆಸರು.	ಪ್ರಸಿದ್ಧ ಪಡಿಸಿದವರ ಹೆಸರು. ಮತ್ತು ವಿಳಾಸ.	ಕ್ರಯ. ರು.	ಆ.	ಪೈ.	ಯಾತರ ಬಗ್ಗೆ ಮಂಜೂರ ಮಾಡಿದ್ದು.
	ಗದ್ಯ ಪುಸ್ತಕಗಳು.						
೧	ಮಹಾರಾಜಾಧಿರಾಜ ಶ್ರೀ ಚಾಮರಾಜೇಂದ್ರ ಒಡೆಯರ ಬಹಾದ್ದೂರ ಜಿ. ಸಿ. ಎಸ್. ಆಯ್. ಇವರ ಚರಿತ್ರೆ.	ಎಮ್. ಸಿಂಗರಯ್ಯ ಮೈಸೂರ	ಎಮ್. ಸಿಂಗರಯ್ಯ ಚಿಲವಯ್ಯನ ಓಣಿ, ಕೃಷ್ಣರಾಜಮಹಾಲ್ಲಾ ಮೈಸೂರ	೧	೮	೦	ಲಾಯಬ್ರರಿಗಾಗಿಯೂ ಇನಾಮಿಗಾಗಿಯೂ ಮಂಜೂರ ಮಾಡಲ್ಪಟ್ಟದ್ದು.
೨	ಕನ್ನಡ ಬಾಲಮಿತ್ರ	ಪ್ಹಿ. ಕೆ. ಗಾಡಗೋಳಿ	ಕರ್ನಾಟಕ ವಿದ್ಯಾವರ್ಧಕ ಸಂಘ ಧಾರವಾಡ	೦	೮	೦	ಸದರ
೩	ಗದ್ಯ ಸಂಗ್ರಹ	...	ಬಾಸೆಲ್ ಮಿಶನ್ ಬುಕ್ಕಡಿಪೋ ಮಂಗಳೂರ	೦	೬	೦	,,
೪	ಹೈದರ ನಾಮೆ (ಹೈದರಳ್ಳಿಯ ಚರಿತ್ರ)	ಎಚ್. ಅಪ್ಪಣಸೆಟ್ಟ ಮೈಸೂರ	ಎಚ್. ಅಪ್ಪಣಸೆಟ್ಟ ಮೈಸೂರ	೦	೧೨	೦	,,
೫	ಕಾದಂಬರಿ	ನಿಸ್ತರ ತೂರಮರಿ	ಕರ್ನಾಟಕ ವಿದ್ಯಾವರ್ಧಕ ಸಂಘ	೦	೮	೦	,,

೧	ಪುಸ್ತಕದ ಹೆಸರು	ಕರ್ತೃ	ಪ್ರಕಾಶಕರು	ಆವೃತ್ತಿ	೧೦೦೦ ಪ್ರತಿಗಳ ಬೆಲೆ	೧೦೦೦ ಪ್ರತಿಗಳ ಮುದ್ರಣ ವೆಚ್ಚ	ಒಟ್ಟು ಖರ್ಚು	ಮಾರಿದ ಪ್ರತಿಗಳು	ಒಟ್ಟು ಆದಾಯ
					ರೂ.	ರೂ.	ರೂ.		ರೂ.
೧	ಸಿಕಂದರ ಚಾಡಪಟ್ಟಿನ ಚರಿತ್ರೆ	ಎಸ್. ಜಿ. ನರಸಿಂಹಾಚಾರ್ಯ	ಕರ್ನಾಟಕ ಗ್ರಂಥಭಂಡಾರ	೨	೦	೧೫೦	೧೫೦	೧೦೦	೦
೨	ಸಿಕಂದರ ಚಾಡಪಟ್ಟಿನ ಚರಿತ್ರೆ	ಎಸ್. ಜಿ. ನರಸಿಂಹಾಚಾರ್ಯ	ಕರ್ನಾಟಕ ಗ್ರಂಥಭಂಡಾರ	೩	೦	೧೫೦	೧೫೦	೧೦೦	೦
೩	ಶ್ರೀಮತಿ ಕಮಲಮನಿಯಲ್ಲಿ ಬಂಗಾಲದ ಭೂಸುಧಾರಕನಾದ ಜೈಲ್ ಜೀವನ ಚರಿತ್ರೆ	ಬಿ. ಎಸ್. ವೆಂಕಟರಾವ್	ಕರ್ನಾಟಕ ಗ್ರಂಥಭಂಡಾರ	೨	೦	೧೫೦	೧೫೦	೧೦೦	೦
೪	ಮೊಗಲಾಯಿಯವರ ಇತಿಹಾಸ ಭಾಗ ೧ ರಾಜಕೀಯ ಚರಿತ್ರೆ	ಎಸ್. ಎಂ. ಜಮೀರ್ ಅಹಮದ್	ಕರ್ನಾಟಕ ಗ್ರಂಥಭಂಡಾರ	೨	೦	೧೫೦	೧೫೦	೧೦೦	೦
೫	ಶೂರಪದ್ಮನ ಚರಿತ್ರೆ (ಪದ್ಯರೂಪ)	ಎಸ್. ರಾಮಚಂದ್ರರಾವ್	ಕರ್ನಾಟಕ ಗ್ರಂಥಭಂಡಾರ	೨	೦	೧೫೦	೧೫೦	೧೦೦	೦
೬	ಪ್ರಸ್ತಾಪ ಪೌರಾಣಿಕ ಚರಿತ್ರೆ	ಎಸ್. ಜಿ. ನರಸಿಂಹಾಚಾರ್ಯ	ಕರ್ನಾಟಕ ಗ್ರಂಥಭಂಡಾರ	೨	೦	೧೫೦	೧೫೦	೧೦೦	೦
೭	ಶ್ರೀಮತಿ ರಾಮಚಂದ್ರರ ಭಾರತ	ಎಸ್. ಜಿ. ನರಸಿಂಹಾಚಾರ್ಯ	ಕರ್ನಾಟಕ ಗ್ರಂಥಭಂಡಾರ	೨	೦	೧೫೦	೧೫೦	೧೦೦	೦
೮	ಶ್ರೀಮತಿ ಹಂಪಮ್ಮ ಚರಿತ್ರೆ	ಎಸ್. ಕೃಷ್ಣಚಾರ್ಯ ಹೊಳ್ಳಾರ	ಕರ್ನಾಟಕ ಗ್ರಂಥಭಂಡಾರ	೨	೦	೧೫೦	೧೫೦	೧೦೦	೦
								ಖಾತೆಯಲ್ಲಿ ಉಪಯೋಗಿಸಬಹುದಾದ ಉಳಿದ ಹಣ	

							ಮಂಜೂರ ನೂಡಲ್ಪಟ್ಟದ್ದು.
೧೫	ವೇಣೀಸಂಹಾರ (ಏನೇಯಾವೃತ್ತಿ)	ಧೋಂಡೋ ನರಸಿಂಹ ಮುಳಬಾಗಲ	ಕ. ವಿ. ವ. ಸಂಘ ಧಾರವಾಡ	೦	೧೬	೦	ಲಾಯಬ್ರರಿಗಾಗಿಯೂ ಇನಾವಿಗಾಗಿಯೂ ಮಂಜೂರ ಮಾಡಲ್ಪಟ್ಟದ್ದು.
೧೬	ವಿಶ್ವಗುಣಾದರ್ಶ	ಶಾಮರಾವ ಕಾಯಕಿಣಿ	ಕ. ವಿ. ವ. ಸಂಘ ಧಾರವಾಡ	೨	೮	೦	ಲಾಯಬ್ರರಿಗಾಗಿಯೂ ಇನಾಮಿಗಾಗಿಯೂ ಮಂಜೂರ ಮಾಡಲ್ಪಟ್ಟದ್ದು.
೧೭	ನನ್ನ ತಾಯಿ	ಶಿ. ಸೋ. ಕುಲಕರ್ಣಿ	ಶಿ. ಸೋ. ಕುಲಕರ್ಣಿ ಮಾಸ್ತರ ಬಂಕಾಪೂರ ಜಿ. ಧಾರವಾಡ	೦	೨	೬	ಶಾಲೆಯಲ್ಲಿ ಉಪಯೋಗಿಸುವದಕ್ಕಾಗಿಯೂ ಲಾಯಬ್ರರಿಗಾಗಿಯೂ ಇನಾಮಿಗಾಗಿಯೂ ಮಂಜೂರ ಮಾಡಲ್ಪಟ್ಟದ್ದು.
೧೮	ಶ್ರೀಶಂಕರ ಚರಿತ್ರ	ಗು. ನಾ. ಸಂಗಮ	ಗುರುನಾಥ ನಾರಾಯಣ ಸಂಗಮ ಬಾಗಲಕೋಟ	೦	೮	೦	ಲಾಯಬ್ರರಿಗಾಗಿಯೂ ಇನಾಮಿಗಾಗಿಯೂ ಮಂಜೂರ ಮಾಡಲ್ಪಟ್ಟದ್ದು.
೧೯	ಡಾಕ್ಟರ ಜಾನಸನನ ರಾಸೆಲಾಸದ ಭಾಷಾಂತರವು	ಜೀವಾಜಿ ವಿಷ್ಣು ಗೋಠೆ	ಕ. ವಿ. ವ. ಸಂಘ ಧಾರವಾಡ	೧	೦	೦	,,
೨೦	ಅಶೋಕನ ಚರಿತ್ರ	ಆರ್. ಕೆ. ಇನಾಮತಿ	ಆರ್. ಕೆ. ಇನಾಮತಿ ಅಣ್ಣಿಗೇರಿ	೦	೬	೦	

೨೧	ಬಾಲರಾಮಾಯಣ	ಜೀ. ಎಸ್. ನರಗುಂದ	ಜಿ. ಎಸ್. ನರಗುಂದ ಹಾಯಸ್ಕೂಲ ಧಾರವಾಡ	೦	೮	೦	,,
೨೨	ಕರ್ನಾಟಕ ಕವಿ ಚರಿತ್ರೆ ೧ನೇ ಭಾಗ	ಆರ್. ನರಸಿಂಹಾಚಾರ್ಯ ಮತ್ತು ಎಸ್. ಜಿ. ನರಸಿಂಹಾಚಾರ್ಯ ಮೈಸೂರ	ಗವ್ಹರ್ನಮೆಂಟ ಸೆಂಟ್ರಲ್ ಬುಕ್ ಡಿಪೋ ಬೆಂಗಳೂರ	೩	೦	೦	,,
೨೩	ಅಮೃತ ಪುಲಿನ	ಬಿ. ವೆಂಕಟಾಚಾರ್ಯ	ಕ. ವಿ. ವ. ಸಂಘ ಧಾರವಾಡ	೦	೧೦	೦	,,
೨೪	ನಾಡನೆಲೆಗಾರ	ಶಿವರುದ್ರ ಸೋಮಪ್ಪಾ ಕುಲಕರ್ಣಿ	ಶಿವರುದ್ರ ಸೋಮಪ್ಪಾ ಕುಲಕರ್ಣಿ ಮಾಸ್ತರ ಬಂಕಾಪೂರ	೦	೨	೦	,,
೨೫	ಮಲೆನಾಡಿನ ಜ್ವರವೂ ಅದರ ನಿವಾರಣೋಪಾಯಗಳೂ	ಎಮ್. ಗುರುರಾವ	ಎಮ್. ಗುರುರಾವ ಸಬ್. ಅ| ಸರ್ಜನ್ ಬಿರೂರ	೦	೦	೪	,,
೨೬	ಚರಿತ್ರ ಸಂಗ್ರಹ ೧ನೇ ಭಾಗ	ಆರ್. ಎಚ್. ದೇಶಪಾಂಡೆ ಎಮ್. ಎ.	ಆರ್. ಎಚ್. ದೇಶಪಾಂಡೆ ಎಮ್. ಎ. ಧಾರವಾಡ	೦	೮	೦	,,
೨೭	ಚರಿತ್ರ ಸಂಗ್ರಹ ೨ನೇ ಭಾಗ	ಸದರ	ಸದರ	೧	೦	೦	,,
೨೮	ಅಲ್ಲಾದೀನನೂ ಅದ್ಭುತ ದೀಪವೂ	ಎಲ್. ಜಯರಾವ ಮೈಸೂರ	ಎಲ್. ಜಯರಾವ ಗ್ರಾಜುಏಟ್ಸ ಟ್ರೇಡಿಂಗ ಅಸೋಸಿಏಶನ್ ಮೈಸೂರ	೦	೫	೦	ಲಾಯಬ್ರರಿಯ ಸಲುವಾಗಿ ಮಂಜೂರ ಮಾಡಲ್ಪಟ್ಟಿದೆ.
೨೯	ಆರ್ಯವಿದ್ಯಾದರ್ಶ	ಜೀ. ವ್ಹಿ. ಕಿತ್ತೂರ. ಬಿ. ಏ.	ಕ. ವಿ. ವ. ಸಂಘ ಧಾರವಾಡ	೦	೮	೦	,,
೩೦	ಹಿತೋಪದೇಶ ೧ನೇ ಭಾಗ	ಧೋಂಡೋ ನರಸಿಂಹ ಮುಳಬಾಗಲ	ಸದರ	೦	೫	೦	,,
೩೧	ಹಿತೋಪದೇಶ ೨ನೇ ಭಾಗ	ಧೋಂಡೋ ನರಸಿಂಹ ಮುಳಬಾಗಲ	ಸದರ	೦	೪	೦	,,
೩೨	ಈಶ್ವರಚಂದ್ರ ವಿದ್ಯಾಸಾಗರನ ಚರಿತ್ರ	ರಾಮಸ್ವಾಮಿ ಅಯ್ಯಂಗಾರ	ದಿ. ಇಂಡಿಯನ್ ಪ್ರಾಗ್ರೆಸ್ ಯೂನಿಯನ್ ೯ಂ ಬಸನಪುರ ಬೆಂಗಳೂರ ಸಿಟಿ	೦	೧	೦	,,

೩೩	ಕಾಲಿದಾಸನ ನೂಲವಿಕಾಗ್ನಿ ಮಿತ್ರ	ಧೋಂಡೋ ನರಸಿಂಹ ಮುಳಬಾಗಲ	ಕರ್ನಾಟಕ ವಿದ್ಯಾವರ್ಧಕ ಸಂಘ ಧಾರವಾಡ	೦	೭	೦	,,
೩೪	ಪ್ರಬಂಧ ಮಂಜರಿ.	ಎಸ್. ಟಿ. ರಾಘವಾಚಾರ್ಯ ಬಿ. ಏ. ತುಮಕೂರ	ಎಸ್. ಟಿ. ರಾಘವಾಚಾರ್ಯ ಬಿ. ಏ. ಅ. ಮಾಸ್ತರ ಗವ್ಹರ್ನಮೆಂಟ ಹಾಯಸ್ಕೂಲ ಬೆಂಗಳೂರ ಸಿಟಿ	೦	೧೨	೦	,,
೩೫	ರಾಜ್ಯಾಭಿಷೇಕೋತ್ಸವದ ಪುಸ್ತಕ	...	ದಿ. ಕ್ರಿಶ್ಚನ್ ಲಿಟರೇಚರ ಸೊಸಾಯಿಟಿ ಮೈಸೂರ	೦	೨	೬	ಇನಾಮಿನ ಸಲುವಾಗಿ ಮಂಜೂರ ಮಾಡಲ್ಪಟ್ಟದ್ದು.
೩೬	ನೂರಜಹಾನ ರಾಣಿಯ ಚರಿತ್ರ	ಆರ್. ಎಚ್. ದೇಶಪಾಂಡೆ	ಆರ್. ಎಚ್. ದೇಶಪಾಂಡೆ ಎಮ್. ಏ. ಧಾರವಾಡ	೦	೧	೬	,,
೩೭	ಹೈದರ ಅಲ್ಲಿಯೂ ಟೀಪೂ ಸುಲ್ತಾನನೂ	ಆರ್. ಎಚ್. ದೇಶಪಾಂಡೆ ಎಮ್. ಏ.	ಆರ್. ಎಚ್. ದೇಶಪಾಂಡೆ ಎಮ್. ಏ. ಧಾರವಾಡ.	೦	೪	೦	,,
೩೮	ಎಪ್ಪಡರ್ ಬಾದಶಹರೂ ಅಲೇಕ್ಸಾಂಡ್ರಾ ಮಹಾರಾಣಿಯವರೂ	...	ದಿ. ಕ್ರಿಶ್ಚನ್ ಲಿಟರೇಚರ ಸೊಸಾಯಿಟಿ ಮೈಸೂರ	೦	೪	೦	ಇನಾಮಿಗಾಗಿ ಮಂಜೂರ ಮಾಡಲ್ಪಟ್ಟದ್ದು
೩೯	ಪ್ರಾಚೀನ ಗ್ರೀಕರ ಬಗ್ಗೆ ಕಥೆಗಳು	...	ಸದರ	೦	೨	೦	,,
೪೦	ನಾನಾಫಡನವೀಸನ ಚರಿತ್ರ	ಆರ್. ಎಚ್. ದೇಶಪಾಂಡೆ ಎಮ್. ಏ.	ಆರ್. ಎಚ್. ದೇಶಪಾಂಡೆ ಎಮ್. ಏ. ಧಾರವಾಡ	೦	೩	೦	,,
೪೧	ಮೃಚ್ಛಕಟಿಕ	ಧೋಂಡೊ ನರಸಿಂಹ ಮುಳಬಾಗಲ	ಕ. ವಿ. ವರ್ಧಕ ಸಂಘ ಧಾರವಾಡ	೧	೦	೦	,,
೪೨	ಮುದ್ರಾ ಮಂಜೂಷ	ಕೆಂಪು ನಾರಾಯಣ	ವೆಸಲೀಯನ್ ಪ್ರೆಸ್ ಮೈಸೂರ	೨	೦	೦	ಸಾಲೆಯಲ್ಲಿ ಉಪಯೋಗಿಸುವವಕ್ಕಾಗಿಯೂ ಇನಾಮಿ

ಕ್ರ. ಸಂ.	ಹೆಸರು ಮತ್ತು ವಿಳಾಸ	ಮೊಬೈಲ್ ಸಂಖ್ಯೆ	ಸಂಪರ್ಕ ಸಾಧನ ಸಂಖ್ಯೆ	ಸಂಪರ್ಕ ಸಾಧನ ಸಂಖ್ಯೆ ಮತ್ತು ಮೊಬೈಲ್ ಸಂಖ್ಯೆ
೧	೨	೩	೪	೫
೧	ಶ್ರೀ ಎಂ. ಎಸ್. ಪಾಟೀಲ್ ಮಾಲೀಕರು ಪಾಟೀಲ್ ಟ್ರೇಡರ್ಸ್ ಹಳೆ ಬಸ್ ನಿಲ್ದಾಣದ ಹತ್ತಿರ ಬೆಳಗಾವಿ	೯೮೪೫೧೨೩೪೫೬	೦೮೩೧-೨೪೫೬೭೮	೯೮೪೫೧೨೩೪೫೬
೨	ಶ್ರೀಮತಿ ಸುಮಿತ್ರಾ ಬಾಯಿ ಕಾಮತ್ ಗೃಹಿಣಿ ಕಾಮತ್ ನಿವಾಸ ಮಾರುತಿ ಗಲ್ಲಿ ಬೆಳಗಾವಿ	೯೭೪೧೨೩೪೫೬೭	೦೮೩೧-೨೪೫೬೭೯	೯೭೪೧೨೩೪೫೬೭
೩	ಶ್ರೀ ಎಂ. ಎಸ್. ಪಾಟೀಲ್ ಮಾಲೀಕರು ಪಾಟೀಲ್ ಟ್ರೇಡರ್ಸ್ ಹಳೆ ಬಸ್ ನಿಲ್ದಾಣದ ಹತ್ತಿರ ಬೆಳಗಾವಿ	೯೮೪೫೧೨೩೪೫೬	೦೮೩೧-೨೪೫೬೭೮	೯೮೪೫೧೨೩೪೫೬
೪	ಶ್ರೀಮತಿ ಸುಮಿತ್ರಾ ಬಾಯಿ ಕಾಮತ್ ಗೃಹಿಣಿ ಕಾಮತ್ ನಿವಾಸ ಮಾರುತಿ ಗಲ್ಲಿ ಬೆಳಗಾವಿ	೯೭೪೧೨೩೪೫೬೭	೦೮೩೧-೨೪೫೬೭೯	೯೭೪೧೨೩೪೫೬೭
೫	ಶ್ರೀ ಎಂ. ಎಸ್. ಪಾಟೀಲ್ ಮಾಲೀಕರು ಪಾಟೀಲ್ ಟ್ರೇಡರ್ಸ್ ಹಳೆ ಬಸ್ ನಿಲ್ದಾಣದ ಹತ್ತಿರ ಬೆಳಗಾವಿ	೯೮೪೫೧೨೩೪೫೬	೦೮೩೧-೨೪೫೬೭೮	೯೮೪೫೧೨೩೪೫೬
೬	ಶ್ರೀಮತಿ ಸುಮಿತ್ರಾ ಬಾಯಿ ಕಾಮತ್ ಗೃಹಿಣಿ ಕಾಮತ್ ನಿವಾಸ ಮಾರುತಿ ಗಲ್ಲಿ ಬೆಳಗಾವಿ	೯೭೪೧೨೩೪೫೬೭	೦೮೩೧-೨೪೫೬೭೯	೯೭೪೧೨೩೪೫೬೭
೭	ಶ್ರೀ ಎಂ. ಎಸ್. ಪಾಟೀಲ್ ಮಾಲೀಕರು ಪಾಟೀಲ್ ಟ್ರೇಡರ್ಸ್ ಹಳೆ ಬಸ್ ನಿಲ್ದಾಣದ ಹತ್ತಿರ ಬೆಳಗಾವಿ	೯೮೪೫೧೨೩೪೫೬	೦೮೩೧-೨೪೫೬೭೮	೯೮೪೫೧೨೩೪೫೬
೮	ಶ್ರೀಮತಿ ಸುಮಿತ್ರಾ ಬಾಯಿ ಕಾಮತ್ ಗೃಹಿಣಿ ಕಾಮತ್ ನಿವಾಸ ಮಾರುತಿ ಗಲ್ಲಿ ಬೆಳಗಾವಿ	೯೭೪೧೨೩೪೫೬೭	೦೮೩೧-೨೪೫೬೭೯	೯೭೪೧೨೩೪೫೬೭
೯	ಶ್ರೀ ಎಂ. ಎಸ್. ಪಾಟೀಲ್ ಮಾಲೀಕರು ಪಾಟೀಲ್ ಟ್ರೇಡರ್ಸ್ ಹಳೆ ಬಸ್ ನಿಲ್ದಾಣದ ಹತ್ತಿರ ಬೆಳಗಾವಿ	೯೮೪೫೧೨೩೪೫೬	೦೮೩೧-೨೪೫೬೭೮	೯೮೪೫೧೨೩೪೫೬
೧೦	ಶ್ರೀಮತಿ ಸುಮಿತ್ರಾ ಬಾಯಿ ಕಾಮತ್ ಗೃಹಿಣಿ ಕಾಮತ್ ನಿವಾಸ ಮಾರುತಿ ಗಲ್ಲಿ ಬೆಳಗಾವಿ	೯೭೪೧೨೩೪೫೬೭	೦೮೩೧-೨೪೫೬೭೯	೯೭೪೧೨೩೪೫೬೭

೧	೨	೩	೪	೫
೧	ಜೈನ ಭೂದಾನ ಬೆಳೆ ಸಂಖ್ಯೆ	ಸಿ. ಜಿ. ಮೆಂಡಗೇರಿ ಬಿ. ಎ. ಬಿಜಾಪುರ	೦ ಸಾಲೆಯಲ್ಲಿ ಉಪಸ್ಥಿತರಿರುವವರು ಅಂಕಿಯಲ್ಲಿ ಮಾತ್ರ ಹಾಜರಿ ಹಾಕಬೇಕು ಮತ್ತು ಅವರು ಹಾಜರಿ ಪುಸ್ತಕದಲ್ಲಿ ಸಹಿ ಮಾಡಬೇಕು ಅಷ್ಟೆ	೦
೨	೨೫೮	೨೫೮	೦ ಅಂಕಿಯಲ್ಲಿ ಮತ್ತು ಅಕ್ಷರದಲ್ಲಿ ಹಾಜರಿ ಹಾಕಬೇಕು ಅಷ್ಟೆ	೦
೩	ಶಿರಸಿ ತಾಲ್ಲೂಕ	ಮಂಜುನಾಥ ಕಾಮತ್ ಶಿರಸಿ	೦ ಅಂಕಿಯಲ್ಲಿ ಮತ್ತು ಅಕ್ಷರದಲ್ಲಿ ಹಾಜರಿ ಹಾಕಬೇಕು ಅಷ್ಟೆ	೦
೪	ಸಿದ್ದಾಪುರ ತಾಲ್ಲೂಕ	ಸಿ. ಜಿ. ಮೆಂಡಗೇರಿ ಬಿ. ಎ. ಬಿಜಾಪುರ	೦ ಸಾಲೆಯಲ್ಲಿ ಉಪಸ್ಥಿತರಿರುವವರು ಅಂಕಿಯಲ್ಲಿ ಮಾತ್ರ ಹಾಜರಿ ಹಾಕಬೇಕು ಮತ್ತು ಅವರು ಹಾಜರಿ ಪುಸ್ತಕದಲ್ಲಿ ಸಹಿ ಮಾಡಬೇಕು ಅಷ್ಟೆ	೦
೫	ಜೈನ ಭೂದಾನ ಬೆಳೆ ಸಂಖ್ಯೆ ೨೫೮	ಸಿ. ಜಿ. ಮೆಂಡಗೇರಿ ಬಿ. ಎ. ಬಿಜಾಪುರ	೦ ಅಂಕಿಯಲ್ಲಿ ಮತ್ತು ಅಕ್ಷರದಲ್ಲಿ ಹಾಜರಿ ಹಾಕಬೇಕು ಅಷ್ಟೆ	೦
೬	ಶಿರಸಿ ತಾಲ್ಲೂಕ ಸಂಖ್ಯೆ ೨೫೮	ಮಂಜುನಾಥ ಕಾಮತ್ ಶಿರಸಿ	೦ ಅಂಕಿಯಲ್ಲಿ ಮತ್ತು ಅಕ್ಷರದಲ್ಲಿ ಹಾಜರಿ ಹಾಕಬೇಕು ಅಷ್ಟೆ	೦
೭	ಸಿದ್ದಾಪುರ ತಾಲ್ಲೂಕ (ಸಂಖ್ಯೆ ೨೫೮)	ಸಿ. ಜಿ. ಮೆಂಡಗೇರಿ ಬಿ. ಎ. ಬಿಜಾಪುರ	೦ ಸಾಲೆಯಲ್ಲಿ ಉಪಸ್ಥಿತರಿರುವವರು ಅಂಕಿಯಲ್ಲಿ ಮಾತ್ರ ಹಾಜರಿ ಹಾಕಬೇಕು ಮತ್ತು ಅವರು ಹಾಜರಿ ಪುಸ್ತಕದಲ್ಲಿ ಸಹಿ ಮಾಡಬೇಕು ಅಷ್ಟೆ	೦

೬	ಪಂಪ ರಾಮಾಯಣ	ಅಭಿನವ ಪಂಪ	ಗವ್ಹರ್ನಮೆಂಟ ಸೆಂಟ್ರಲ್ ಬುಕ್ ಡಿಪೋ ಬೆಂಗಳೂರ	೫	೦	೦	ಇನಾಮಿಗಾಗಿ ಮಂಜೂರ ಮಾಡಲ್ಪಟ್ಟದ್ದು
೮	ಸರ್ವಜ್ಞಗಳು	ಸರ್ವಜ್ಞ ಕವಿ	ರಾಮರಾವ ಬಳ್ಳಾರಿ ಬುಕ್‌ಸೇಲರ ಧಾರವಾಡ	೦	೮	೦	,,
೯	ಸಾವಿತ್ರಿ ಚರಿತ್ರೆ	ಬಸವಪ್ಪ ಶಾಸ್ತ್ರಿ	ಗವ್ಹರ್ನಮೆಂಟ ಸೆಂಟ್ರಲ್ ಬುಕ್ ಡಿಪೋ ಬೆಂಗಳೂರ	೦	೨	೦	,,
೧೦	ಸೋಮೇಶ್ವರ ಶತಕ	ಸದರ	ರಾಮರಾವ ಬಳ್ಳಾರಿ ಬುಕ್‌ಸೇಲರ ಧಾರವಾಡ	೦	೪	೦	,,
೧೧	ತೊರವೆ ರಾಮಾಯಣ	ಕುಮಾರ ವಾಲ್ಮೀಕಿ	ಸದರ	೧	೮	೦	,,
೧೨	ಬಸವ ಪುರಾಣ	ಭೀಮ ಕವಿ	ಮೇಸರ್ಸ ಆರ್. ರುದ್ರಪ್ಪ ಅ್ಯಂಡ ಸನ್ಸ ಬುಕ್‌ಸೇಲರ ಬೆಂಗಳೂರ	೧	೦	೦	ಸಾಲೆಯಲ್ಲಿ ಉಪಯೋಗಿಸುವದಕ್ಕಾಗಿ ಮಂಜೂರ ಮಾಡಲ್ಪಟ್ಟದ್ದು.
	ವ್ಯಾಕರಣಗಳೂ ನಿಬಂಧಗಳೂ.						
೧	ಛಂದಃಸ್ಸಾರ	ಧೋಂಡೋ ನರಸಿಂಹ ಮುಳಬಾಗಲ	ತೊನಸಿ ಬುಕ್‌ಡಿಪೋ ಧಾರವಾಡ	೦	೪	೦	ಸಾಲೆಯಲ್ಲಿ ಉಪಯೋಗಿಸುವದಕ್ಕಾಗಿ ಮಂಜೂರ ಮಾಡಲ್ಪಟ್ಟದ್ದು.
೨	ನುಡಿಗಟ್ಟು	ಸದರ	ಸದರ	೦	೫	೦	,,
೩	ಲಘು ವ್ಯಾಕರಣ	ವೆಂಕಟರಂಗೋ ಕಟ್ಟಿ	ಕೆ. ವ್ಹಿ. ಛಂಡಿವಾಡ ಪಬ್ಲಿಶರಅ್ಯಂಡ ಬುಕ್‌ಸೇಲರ ಧಾರವಾಡ	೦	೧೦	೦	,,

೫ ಶಬ್ದಮಣಿದರ್ಪಣ	ರೆವ್ಹರೆಂಡ ಎಫ್ ಕಿಟಲ್‌ರವರಿಂದ ಸಂಕಲಿತವಾದದ್ದು	ಬಾಸೆಲ್ ಮಿಶನ್ ಬುಕ್‌ಡೀಪೋ ಮಂಗಳೂರ	೧	೮	೦	,,
೬ ಶಬ್ದವ್ಯುತ್ಪತ್ತಿ (ಸಂಸ್ಕೃತ ಕನ್ನಡ)	ಚಿಂತಾಮಣಿ ಪೇಟಕರ	ಸದರ	೦	೪	೦	,,
೭ ಕೈಪಿಡಿ ೧ ನೇ ಭಾಗ (ಕನ್ನಡ ಪ್ರೌಢ ವ್ಯಾಕರಣ)	ಧೋಂಡೋ ನರಸಿಂಹ ಮುಬಾಗಲ	ಕರ್ನಾಟಕ ವಿದ್ಯಾವರ್ಧಕ ಸಂಘ ಧಾರವಾಡ	೦	೧೨	೦	ಲಾಯಬ್ರರಿಗಾಗಿಯೂ ಇನಾಮಿಗಾಗಿಯೂ ಮಂಜೂರ ಮಾಡಲ್ಪಟ್ಟದ್ದು
೮ ಲಘು ನಿಬಂಧ ಸಂಗ್ರಹ ಹಾಗು ಪತ್ರವ್ಯವಹಾರ	ವೆಂಕಟೇಶ ತಿರಕೋ ಕುಲಕರ್ಣಿ	ವೆ. ತಿ. ಕುಲಕರ್ಣಿ ಅಗಡಿ, ಜಿ. ಧಾರವಾಡ	೦	೧೦	೦	,,
೯ ಸಾಮತಿ ಸಂಗ್ರಹ	ಎಚ್. ಜಿ. ಜೋಶಿ	ಎಚ್. ಜಿ. ಜೋಶಿ ಅ. ಡಿಪುಟ ಬೆಳಗಾವ	೦	೬	೦	,,
ಶಿಕ್ಷಣವಿಷಯಕ ಗ್ರಂಥಗಳು ಹಾಗು ಶಾರೀರಿಕ ಶಿಕ್ಷಣ.						
೧ ವ್ಯಾಯಾಮ ದೀಪಿಕೆ	ಸಿವರಾಮ ಭಾರದ್ವಾಜ	ಸಿವರಾಮ ಭಾರದ್ವಾಜ ಬೆಂಗಳೂರ ಸಿಟ	೦	೪	೦	ಲಾಯಬ್ರರಿಗಾಗಿಯೂ ಇನಾಮಿಗಾಗಿಯೂ ಮಂಜೂರ ಮಾಡಲ್ಪಟ್ಟದ್ದು
೨ ಕನ್ನಡ ಲೇಖ್ಯ ಬೋಧಿನಿ	ಎಚ್. ವ್ಹಿ. ನಂಜುಂಡಯ್ಯ	ಗವ್ಹರ್ನಮೆಂಟ ಸೆಂಟ್ರಲ್ ಬುಕ್ ಡಿಪೋ ಬೆಂಗಳೂರ	೧	೦	೦	ಲಾಯಬ್ರರಿಯ ಸಲುವಾಗಿ ಮಂಜೂರ ಮಾಡಲ್ಪಟ್ಟದ್ದು
೩ ಒಡವೆಯ ಪಾಠಗಳು	ಜಿ. ವ್ಹಿ. ಗೋಠೆ	ಜೀವಾಜಿ ವಿಷ್ಣು ಗೋಠೆ ಧಾರವಾಡ	೦	೬	೦	ಸದರ

ಳ	ತಿದ್ದುವಿಕೆಯೂ ಶಿಕ್ಷಣವೂ ಫೌಲರನ ಇಂಗ್ಲಿಷ ಪುಸ್ತಕದ ಭಾಷಾಂತರವು	ರಾ. ಬಾ. ಕರಂದೀಕರ	ಬಾಸೆಲ್ ಮಿಶನ್ ಬುಕ್ಕ ಆ್ಯಂಡ ಟ್ರ್ಯಾಕ್ಟ ಡಿಪಾಯಿಟರೀ ಮಂಗಳೂರ	೧	೦	೦	ಧಾರವಾಡದ ಗಂಡು ಮಕ್ಕಳ ಟ್ರೇನಿಂಗ ಕಾಲೇಜದಲ್ಲಿ ಉಪಯೋಗಿಸುವದಕ್ಕಾಗಿ ಮಂಜೂರ ಮಾಡಲ್ಪಟ್ಟದ್ದು
ಶ	ಸುಧಾರಿಸಿದ ಇಯತ್ತೆಗಳನ್ನು ಕಲಿಸುವ ಬಗ್ಗೆ ಶಿಕ್ಷಕರಿಗೆ ಸೂಚನೆಗಳು	ಸರಕಾರಿ ವಿದ್ಯಾಖಾತೆ	ಮ್ಯಾನೇಜರ ಗವ್ಹರ್ನಮೆಂಟ ಸೆಂಟ್ರಲ್ ಪ್ರೆಸ್, ಮುಂಬಯಿ	೦	೮	೦	ಪ್ರಾಥಮಿಕ ಶಾಲೆಗಳ ಉಪಯೋಗಕ್ಕಾಗಿ ಮಂಜೂರ ಮಾಡಲ್ಪಟ್ಟದ್ದು
	ಇತಿಹಾಸಗಳು.						
೧	ಹಿಂದುಸ್ತಾನದ ಸಂಕ್ಷಿಪ್ತ ಇತಿಹಾಸ	ನಾರಾಯಣ ಟ. ಶಿರಾಲಿ	ನಾರಾಯಣ ಟ. ಶಿರಾಲಿ ಅಸಿಸ್ಟಂಟ ಮಾಸ್ತರ ಹಾಯಸ್ಕೂಲ ಕಾರವಾರ	೦	೮	೦	ಲಾಯಬ್ರರಿಗಾಗಿಯೂ ಇನಾಮಿಗಾಗಿಯೂ ಮಂಜೂರ ಮಾಡಲ್ಪಟ್ಟದ್ದು
೨	ಇಂಗ್ಲಂಡದ ಇತಿಹಾಸ	ಗು. ಫ. ಹಳಕಟ್ಟಿ	ಗು. ಫ. ಹಳಕಟ್ಟಿ ಧಾರವಾಡ	೨	೦	೦	ಸದರ ಮತ್ತು ಧಾರವಾಡ ಟ್ರೇನಿಂಗ ಕಾಲೇಜದ ಬಗ್ಗೆ ಸದರ
೩	ಜಗತ್ತಿನ ಸಂಕ್ಷಿಪ್ತ ಇತಿಹಾಸ	ರಾ. ಬಾ. ಕರಂದೀಕರ	...	೦	೬	೦	
ಳ	ಪೇಶ್ವಾಯಿಯ ಇತಿಹಾಸ	ಮರಾಠಿ ಪುಸ್ತಕದಿಂದ ಬಾ. ರ. ಕದಡಿ ಇವರು ಭಾಷಾಂತರಿಸಿದ್ದು.	ಕರ್ನಾಟಕ ವಿದ್ಯಾವರ್ಧಕ ಸಂಘ ಧಾರವಾಡ	೧	೦	೦	ಲಾಯಬ್ರರಿಗಾಗಿಮಂಜೂರ ಮಾಡಲ್ಪಟ್ಟದ್ದು.
೫	ಹಿಂದುಸ್ತಾನದ ನಿವಾಸಿ	ಸರ್ ಡಬ್ಲ್ಯು. ಲೀವಾರ್ಡರ ಮೇಸರ್ಸ ಮ್ಯಾಕಮಿಲನ್ ಎನ್ನ		೦	೧೨	೦	ಪ್ರಾಥಮಿಕ ಶಾಲೆಗ

		ರವರ ಪುಸ್ತಕದ ಭಾಷಾಂತರ (೬ನೇ ಇಯತ್ತೆಯನ್ನು ಕಲಿಸುವ ಕನ್ನಡ ಶಾಲೆಗಳಿಗಾಗಿ)	ಕಂಪನಿ, ಮುಂಬಯಿ				ಳಲ್ಲಿ ಉಪಯೋಗಿಸುವದಕ್ಕಾಗಿ ಮುಂಜೂರ ಮಾಡಿದ್ದು
೬	ಕರ್ನಾಟಕದ ವರ್ಣನೆಯೂ ಇತಿಹಾಸವೂ	ವ್ಹಿ. ಆರ್. ಕಟ್ಟಿ	ಬಾಸೆಲ್‌ಮಿಶನ್‌ಬುಕ ಎನ್ಡ ಟ್ರ್ಯಾಕ್ಟ ಡಿಪಾಯಿಟರಿ ಮಂಗಳೂರ	೦	೫	೦	ಸದರ
೭	ಹಿಂದುಸ್ತಾನದ ಇತಿಹಾಸ (ಇ. ಮಾರ್ಸಡೆನ್‌ರವರು ಬರೆದ ಇಂಗ್ಲಿಷ ಪುಸ್ತಕದ ಕನ್ನಡ ಭಾಷಾಂತರ)	ರಾ. ಬ. ಎಸ್. ಕೇ. ರೊದ್ದ ಇವರು ಕನ್ನಡಿಸಿದ್ದು	ಮೆಸರ್ಸ ಮ್ಯಾಕಮಿಲನ್ ಎನ್ಡ ಕಂಪನಿ ಮುಂಬಯಿ	೧	೦	೦	ಸದರ
	ಭೂಗೋಲಗಳು.						
೧	ಭೂಗೋಲದ ಮೂಲತತ್ವಗಳು ೧ನೇ ಭಾಗ ೭ನೇ ಆವೃತ್ತಿ	ವೆಂಕಟ ರಂಗೋ ಕಟ್ಟಿ ಧಾರವಾಡ	ಕೆ. ವ್ಹಿ. ಭಂಡಿವಾಡ, ಪಬ್ಲಿಶರ ಆ್ಯಂಡ ಬುಕ್‌ಸೆಲರ, ಧಾರವಾಡ	೦	೧	೬	ಪ್ರಾಥಮಿಕ ಶಾಲೆಗಳಲ್ಲಿ ಉಪಯೋಗಿಸುವದಕ್ಕಾಗಿ ಮುಂಜೂರ ಮಾಡಲ್ಪಟ್ಟದ್ದು
೨	ಸದರ ೨ನೇ ಭಾಗ	ಸದರ	ಸದರ	೦	೧	೬	ಸದರ
೩	ಸದರ ೩ನೇ ಭಾಗ ೬ನೇ ಆವೃತ್ತಿ	ಸದರ	ಸದರ	೦	೪	೦	ಸದರ
೪	ಪ್ರಾಕೃತಿಕ ಭೂಗೋಲ ಶಾಸ್ತ್ರ (ಸರ. ಎ. ಗೀಕಿ ಇವರ ಇಂಗ್ಲಿಷ ಪುಸ್ತಕದ ಭಾಷಾಂತರವು)	ಸದರ	ಬಾಸೆಲ್ ಮಿಶನ್ ಬುಕ್ ಆ್ಯಂಡ ಟ್ರ್ಯಾಕ್ಟ ಡಿಪೋಯಿಟರಿ ಮಂಗಳೂರ	೦	೮	೦	ಸದರ
೫	ಹಿಂದುಸ್ತಾನದ ಭೂಗೋಲ	ವೆಂಕಟೇಶ ನರಸಿಂಹ ಮುಗಡಾಲ ಬಿ. ಏ.	ವೆ. ನ. ಮಗಡಾಲ ಬಿ. ಏ. ಅಸಿಸ್ಟಂಟ ಮಾಸ್ತರ ಹೆಣ್ಣು ಮಕ್ಕಳಟ್ರೇ	೦	೮	೦	ಪ್ರಾಥಮಿಕ ಸಾಲೆಗಳಲ್ಲಿಯೂ ಟ್ರೇನಿಂ

			ನಿಂಗ ಕಾಲೇಜ ಧಾರವಾಡ				ಗ ಕಾಲೇಜಗಳಲ್ಲಿ ಯೂ ಉಪಯೋಗಿ ಸುವದಕ್ಕಾಗಿಯೂ ಲಾ ಯ ಬ್ರ ರಿ ಗಾಗಿ ಯೂ ಮಂಜೂರ ನೂಡಲಟ್ಟಿದ್ದು
	ಗಣಿತ ಶಾಸ್ತ್ರದ ಪುಸ್ತಕಗಳು.						
೧	ಯುಕ್ಲೀಡನ ೧ ರಿಂದ ೬ ಪುಸ್ತಕಗಳು	...	ಬಾಸೆಲ್ ಮಿಶನ್ ಬುಕ್ ಆ್ಯಂಡ ಟ್ರ್ಯಾಕ್ಟ ಡಿಪೋಯ್ಗೀಟರಿ ಮಂಗಳೂರ	೧	೧೨	೦	ಪ್ರಾಥಮಿಕಸಾಲೆಗಳ್ಲಿ ಉಪಯೋಗಿಸು ವದಕ್ಕಾಗಿಮಂಜೂ ರ ಮಾಡಲ್ಪಟ್ಟಿದ್ದು.
೨	ಯುಕ್ಲಿಡನ ಮೊದಲನೇ ಪುಸ್ತಕವು	...	ಬಾಸೆಲ್ ಮಿಶನ್ ಬುಕ್ ಆ್ಯಂಡ ಟ್ರ್ಯಾಕ್ಟ ಡಿಪೋಯ್ಗುಟರಿ ಮಂಗಳೂರ	೦	೪	೦	ಸದರ
೩	ದಲಾಲ ಕೃತ ಬೀಜಗಣಿತದ ಕನ್ನಡ ಭಾಷಾಂತರವು	ರಾ. ಹ. ದೇಶಪಾಂಡೆ ಎಮ್. ಎ.	ಸದರ	೧	೬	೦	ಸದರ
೪	ಕರ್ತವ್ಯ ಭೂಮಿತಿ	ರಾ. ಬಾ. ಕರಂದೀಕರ	ಸದರ	೦	೮	೦	ಸದರ
೫	ಮಹತ್ವ ಮಾಪನದ ಮೂಲತತ್ವಗಳು. ಟೀ. ಕುಕ್ ಇವರ ಪುಸ್ತಕದ ಭಾಷಾಂತರವು	...	ಸರಕಾರಿ	೦	೩	೦	ಸದರ
೬	ಪ್ರೊಫೇಸರ ಗೋಖಲೆ ಇವರ ಅಂಕಗಣಿತದ ಕನ್ನಡ ಭಾಷಾಂತರ ೧ನೇ ಭಾಗ	ಕೃ. ಗೋ. ಗೆಜ್ಜಿ	ಕೃ. ಗೋ ಗೆಜ್ಜಿ, ಬಿ. ಏ. ಎಲ್. ಎಲ್. ಬಿ. ವಕೀಲ ಬೆಳಗಾಂವ	೦	೪	೬	ಸಾಲೆಗಳ್ಲಿ ಉಪಯೋಗಿಸುವದಕ್ಕೂ ಲಾಯಬ್ರರಿಗಾಗಿ

೭	ಸದರ ೨ನೇ ಭಾಗ	ಸದರ	ಸದರ	೦	೮	೦	ಯೂ ಮಂಜೂರ
೮	ಸದರ ೩ನೇ ಭಾಗ ೨ನೇ ಆವೃತ್ತಿ	ಸದರ	ಸದರ	೧	೦	೦	ಮಾಡಲ್ಪಟ್ಟದ್ದು ಲಾ ಯಬ್ರರಿಗಾ ಗಿ ಯೂ ಇನಾಮಿಗಾ ಗಿಯೂ ಸಾಲೆಗಳಲ್ಲಿ ಉಪಯೋಗಿಸುವದ ಕ್ಕಾಗಿಯೂ ಮಂ ಜೂರ
೯	ಗಣಿತ ವ್ಯುತ್ಪತ್ತಿ ೧ನೇ ಭಾಗ	ರಾ. ಕುಲಕರ್ಣಿ	ರಾ. ಶ್ರೀ. ಕುಲಕರ್ಣಿ ೧ನೇ. ಅ ಸ್ಟರ ಟ್ರೇ. ಕಾ. ಧಾರವಾಡ	೧	೦	೦	ಧಾರವಾಡ ಟ್ರೇನಿಂಗ ಕಾಲೇಜದ ಉಪ ಯೋಗಕ್ಕಾಗಿ ಮಂ ಜೂರ ಮಾಡಲ್ಪ ಟ್ಟದ್ದು
೧೦	ಹೂಲಿಕ್ಯತ ಅಂಕಗಣಿತ೧ನೇಭಾಗ	ವಿ. ಜಿ. ಪೂಲಿ	ವಿ. ಜಿ. ಗರಗ ಧಾರವಾಡ	೦	೧೦	೦	ಲಾ ಯಬ್ರರಿಗಾ ಗಿ ಮಂಜೂರ ಮಾಡ ಲ್ಪಟ್ಟದ್ದು
೧೧	ಸದರ ೨ನೇ ಭಾಗ	ಸದರ	ಸದರ	೧	೬	೦	ಸದರ
೧೨	ಮಹತ್ವಮಾಪನ ೧ನೇ ೨ನೇ ೩ನೇ ಭಾಗಗಳು.	ಸಿ ಕಪ್ಪಣ್ಣಾ ಮೈಸೂರ	ಸಿ. ಕಪ್ಪಣ್ಣಾ ಮೈಸೂರ	೧	೪	೦	ಸದರ
೧೩	ಹೊಸ ಪದ್ಧತಿಯ ಭೂಮಿತಿ ೧ನೇ ಭಾಗ	ಪಿ. ಎಸ್. ಚಂದಾವರಕರ ಬಿ. ಎ. ಇವರು ಇಂಗ್ಲೀಷ ದಲ್ಲಿ ಬರೆದದನ್ನು ಎಸ್. ಷ್ಹಿ. ಕಟ್ಟ ಇವರು ಕನ್ನಡ ಕ್ಕೆ ಪರಿವರ್ತಿಸಿದರು	ಪಿ. ಎಸ್. ಚಂದಾವರಕರ ಕಾರ ವಾರ	೦	೧೨	೦	ಪ್ರಾಥಮಿಕ ಶಾಲೆಗ ಳಿಗಾಗಿಯೂ ಲಾ ಯಬ್ರರಿಗಳಿಗಾಗಿ ಯವ ಮಂಜೂರ ಮಾಡಿದ್ದು.

೪	ಜಮಾಖರ್ಚಿನ ಪದ್ಧತಿ ೧ನೇಭಾಗ	ವಿರುಪಾಕ್ಷಪ್ಪ ಹೂಲಿ ಗ ರಗ-ಧಾರವಾಡ	ವಿ. ಜಿ. ಹೂಲಿ ಪೆನ್ಮನರ ಸ್ಕೂಲ ಮಾಸ್ತರ ಗರಗ ಧಾರವಾಡ ಮತ್ತು ರಾಮರಾವ ಬಳ್ಳಾರಿ ಬುಕ್‌ಸೆಲರ ಧಾರವಾಡ	೦	೮	೦	ಸಾಲೆಗಳಲ್ಲಿ ಉಪಯೋಗಿಸುವಸಕ್ಕಾಗಿಯೂ ಲಾಯಬ್ರರಿಗಾಗಿಯೂ ಇನಾಮಿಗಾಗಿಯೂ ಮಂಜೂರ ಮಾಡಲ್ಪಟ್ಟದೆ
	ಶಾಸ್ತ್ರೀಯ ವಿಷಯದ ಪುಸ್ತಕಗಳು						
೧	ಖನಿಜಶಾಸ್ತ್ರ	ಬಿ. ಎನ್. ದಾಸಪ್ಪಾ, ಬಿ. ಎ.	ಬಿ. ಎನ್. ದಾಸಪ್ಪಾ, ಬಿ. ಎ.	೦	೮	೦	ಲಾಯಬ್ರರಿಗಾಗಿಯೂ ಇನಾಮಿಗಾಗಿಯೂ ಮಂಜೂರ ಮಾಡಲ್ಪಟ್ಟದ್ದು
೨	ಉದ್ಭಿಜ್ಜಶಾಸ್ತ್ರದ ಮೂಲತತ್ವಗಳು	ಕೆ. ಶೇಷಾದ್ರಿ ಅಯ್ಯಂಗಾರ	ಕೆ. ಶೇಷಾದ್ರಿ ಅಯ್ಯಂಗಾರ	೦	೫	೦	ಸದರ
೩	ಪ್ರಾಣಿಶಾಸ್ತ್ರ	....	ಗ್ರಾಜುಏಟ್ಸ ಟ್ರೇಡಿಂಗ ಅಸೋಸಿಯೇಶನ್ ಮೈಸೂರ	೧	೦	೦	,,
೪	ವನಸ್ಪತಿ ಶಾಸ್ತ್ರ	ಎಲ್. ಜಯರಾವ	ಎಲ್. ಜಯರಾವ ಮೈಸೂರ	೦	೧೨	೦	,,
೫	ಕೃಷಿಕರ್ಮ ಶಾಸ್ತ್ರ	ರಾ. ಮ. ಮಹಿಷಿ ಬಿ. ಎ.	ಕ. ವಿ. ವ. ಸಂಘ ಧಾರವಾಡ	೦	೧೨	೦	,,
೬	ಗೃಹವ್ಯವಸ್ಥೆಯೂ ಆರೋಗ್ಯ ಶಾಸ್ತ್ರವೂ ೧ನೇಭಾಗ	ವಿನಾಯಕ ಬಾಬಾಜಿ ಜೋಶಿ ಡಾ. ರಾಬರ್ಟ್ಸ ಡೊಮೆಸ್ಟಿಕ್ ಎಕಾನಮಿ ಅ್ಯಂಡ್ ಸ್ಯಾನಿಟರಿ ಸಾಯೆನ್ಸ ಎಂ					

| | | |

೬	ಎಪ್ಪರ್ಡ ಕಾರ್ಡುಗಳು.	ಎಮ್. ಎನ್. ಕಾಳೆ	ಎಮ್. ಎನ್. ಕಾಳೆ ಪಾಲಶೇತ-ರತ್ನಾಗಿರಿ	೦	೮	೦	ಸಾಲೆಯಲ್ಲಿ ಉಪಯೋಗಿಸುವದಕ್ಕೂ ಲಾಯಬ್ರರಿಗಾಗಿಯೂ ಇನಾಮಿಗಾಗಿಯೂ ಮಂಜೂರ ಮಾಡಿದ್ದು
೭	ಕನ್ನಡ ಬರಹದ ಅಕ್ಷರಗಳ ಪಟ	ರಾ. ಶ್ರೀ. ಕುಲಕರ್ಣಿ ಎಲ್ ಸಿ. ಇ.	ರಾ. ಶ್ರೀ. ಕುಲಕರ್ಣಿ ಎಲ್. ಸಿ. ಇ. ಡಿ. ಎ. ಇನಸ್ಪೆಕ್ಟರ ಜಿಲ್ಲಾ ಧಾರವಾಡ	೦	೧೨	೦	ಸಾಲೆಗಳಲ್ಲಿಉಪಉಪಯೋಗಿಸುವದಕ್ಕಾಗಿ ಮಂಜೂರ ಮಾಡಲ್ಪಟ್ಟದ್ದು.
೮	ಕನ್ನಡ ಮೂಲಾಕ್ಷರಗಳ ಪಟ	ಸದರ	ಸದರ	೦	೧೨	೦	ಸದರ
೯	ಬಾದೆಶಹ ಜನೇಜಾರ್ಜ ಹಾಗು ಮೇರೀ ಮಹಾರಾಣಿ ಇವರ ಸಿಂಹಾಸನಾರೋಹಣದ ಚಿತ್ರ	ಎನ್. ಎನ್. ದಾತಾರ ಅ್ಯಂಡ ಸನ್ಸ ಪುನಾ ಸಿಟೀ	ಮೇಸರ್ಸ ಎನ್. ಎನ್. ದಾತಾರ ಅ್ಯಂಡ ಸನ್ಸ ಕಲಬುಧವಾರಪೇಠ ಪುನಾ ಸಿಟೀ	೦	೧೦	೦	ಲಾಯಬ್ರರಿಗಾಗಿಯೂ ಇನಾಮಿಗಾಗಿಯೂ ಮಂಜೂರ ಮಾಡಲ್ಪಟ್ಟದ್ದು
	ಕನ್ನಡ ನಕಾಶಗಳು.						
೧	ಧಾರವಾಡ ಜಿಲ್ಲೆಯ ನಕಾಶ ಕಾಗದ (ಮನೆಯಲ್ಲಿ ಉಪಯೋಗಿಸಲಿಕ್ಕೆ ತಕ್ಕದ್ದು)	ಎನ್. ಎನ್. ದಾತಾರ ಅ್ಯಂಡ ಸನ್ಸ ಪುನಾ ಸಿಟೀ	ಸದರ	೦	೨	೦	ಪ್ರಾಥಮಿಕ ಶಾಲೆಗಳಲ್ಲಿ ಉಪಯೋಗಿಸುವದಕ್ಕೂ ಇನಾಮಿಗಾಗಿಯೂ ಮಂಜೂರ ಮಾಡಲ್ಪಟ್ಟದ್ದು
೨	ವಿಜಾಪುರ ಸದರ ಸದರ	ಸದರ	,,	೦	೨	೦	ಸದರ
೩	ಉತ್ತರ ಕಾನಡಾ ಜಿಲ್ಲೆಯ ಸದರ	,,	,,	೦	೨	೦	,,
೪	ಬೆಳಗಾವ ಜಿಲ್ಲೆಯ ಸದರ	,,	,,	೦	೨	೦	,,

೫	ಮುಂಬಯಿ ಇಲಾಖೆಯ ಸದರ	,,	,,	೦	೩	೦	,,	
೬	ಹಿಂದುಸ್ತಾನದ ಸದರ ಸದರ	,,	,,	೦	೩	೦	,,	
೭	ಕುಮಠಾ ತಾಲೂಕಿನ ನಕಾಶವು	ಎಸ್. ಎನ್. ಧಾರೇಶ್ವರ	ಎಸ್. ಎನ್. ಧಾರೇಶ್ವರ ಶಾನಭಾಗ ಗೋಕರ್ಣ	೧	೪	೦	ಪ್ರಾಥಮಿಕ ಶಾಲೆಗಳ ಉಪಯೋಗಕ್ಕಾಗಿ	
೮	ಬೆಳಗಾಂವ ಜಿಲ್ಲೆಯ ಕನ್ನಡ ನಕಾಶವು (೪೨"×೪೦")	ಸರಕಾರಿ	ಮೇಸರ್ಸ ಎನ್. ಎನ್. ದಾತಾರ ಅ್ಯಂಡ ಸನ್ಸ ಬುಧವಾರಪೇಠ ಪುನಾ ಸಿಟೀ	೪	೮	೦	ಸದರ	
೯	ಧಾರವಾಡ ಜಿಲ್ಲೆಯ ನಕಾಶವು (೪೦"×೩೫")	ಸರಕಾರಿ	ಮೇಸರ್ಸ ಎನ್. ಎನ್. ದಾತಾರ ಅಂಡ ಸನ್ಸ ಬ ಪೇಠ ಪೂನಾ ಸಿಟ	೩	೮	೦	ಸದರ	
೧೦	ಉತ್ತರ ಕಾನಡಾ ಜಿಲ್ಲೆಯ ನ ಶವು (೩೬"×೨೯")	ಸದರ	ಸದರ	೨	೫	೦	ಸದರ	
೧೧	ವಿಜಾಪೂರ ಜಿಲ್ಲೆಯ ನಕಾಶವು (೪೨"×೩೨")	,,	,,	೩	೪	೦	,,	
೧೨	ಹಿಂದುಸ್ತಾನದ ನಕಾಶವು (೪೮"×೪೨")	,,	,,	೪	೧೨	೦	,,	
೧೩	ಯುರೋಪ ಖಂಡದ ನಕಾಶವು (೨೩"×೪೦)	,,	,,	೨	೦	೦	,,	
೧೪	ಅಮೇರಿಕಾ ಖಂಡದ ನಕಾಶವು (೨೧"×೪೨")	,,	,,	೨	೦	೦	,,	
೧೫	ಆಫ್ರಿಕಾ ಖಂಡದ ನಕಾಶವು (೨೦"×೪೦")	,,	,,	೨	೦	೦	,,	

| | | |

ಕಥಾಸಂಗ್ರಹ ೧ನೇಭಾಗ	ಡಾನಿಯಲ್ ಸಂಡರಸನ್	ಸದರ	೧	೦	೦	,,
ಸದರ ೨ನೇಭಾಗ	ಸದರ	ಸದರ	೧	೦	೦	,,
Kittell's minor Antho-logy	Kittel	...	೦	೮	೦	,,
ೃಷ್ಣಾಚಾರ್ಯರ ಹೊಸಗನ್ನಡ ನುಡಿಗನ್ನಡಿ	...	...	೧	೮	೦	,,
ೀತಿಮಂಜರಿ (Kannada Moral Class Book)	ಗದಿಗೆಯ್ಯ ಹೊನ್ನಾಪುರ ಮಠ ವಕೀಲ ಧಾರವಾಡ	...	೦	೬	೦	ಇನಾಮಿಗಾಗಿ ಮಂ ಜೂರ ಮಾಡಲ್ಪ ಟ್ಟದ್ದು
ಪಂಚತಂತ್ರ	...	...	೦	೬	೦	ಸದರ
ಪಂಚತಂತ್ರ ಅಥವಾ ಪಂಚೋಪಾ ಖ್ಯಾನ	...	ಬಾಸೆಲ್ ಮಿಶನ್ ಟ್ರ್ಯಾಕ್ಟ ಆ್ಯಂಡ ಬುಕ್‌ಡಿಪೋಸಿಟರಿ ಮಂಗ ಳೂರ	೦	೧೦	೦	,,
ವ್ಯಾಕ್ಯಾನ್ಯಮೂಲಾ	...	...	೧	೦	೦	,,
Proverbs 3647	...	...	೦	೮	೦	,,
ಬಾಲಾವ್ಯಾಕರಣ	...	...	೦	೫	೦	,,
ವರ್ಧಕೃತ ಹಳಗನ್ನಡ ವ್ಯಾಕರಣ ಸೂತ್ರಗಳು	ವರ್ಧ	...	೦	೬	೦	,,
ಶಬ್ದಮಣಿದರ್ಪಣ ಮೈಸೂರ ಸೀರೀಜು	...	...	೧	೦	೦	,,
ಕನ್ನಬಸವ ಪುರಾಣ	ವಿರೂಪಾಕ್ಷ ಪಂಡಿತ ಕವಿ	ಜನರಲ್ ಎಜನ್ಸೀ ಮೈಸೂರ	೨	೫	೦	,,
ರಿಶ್ಚಂದ್ರ ನಾಟಕ	...	...	೦	೮	೦	,,
ೃವಿನಿ ಭಾರತ	...	...	೦	೫	೦	,,

೪	ಕಥಾ ಮಂಜರಿ	ವಾಣೀವಿಲಾಸ ಟೀಕಾ ಸೀರೀಜ	ಗವ್ಹರ್ನಮೆಂಟ ಸೆಂಟ್ರಲ್ ಬುಕ್ ಡಿಪೋ ಬೆಂಗಳೂರ	೦	೬	೦	ಸದರ
೫	ಕರ್ನಾಟಕ ಭಾಷಾಭೂಷಣ	...	...	೨	೮	೦	,,
೬	ಕರ್ನಾಟಕ ಕಾದಂಬರಿ	...	...	೨	೪	೦	,,
೭	ನೀತಿ ಚಿಂತಾಮಣಿ ೧ ನೇ ಭಾಗ	ಮೈಸೂರ ಸರಕಾರದವರು ಪ್ರಸಿದ್ಧ ಪಡಿಸಿದ್ದು	ಗವ್ಹರ್ನಮೆಂಟ ಸೆಂಟ್ರಲ್ ಬುಕ್ ಡೀಪೋ ಬೆಂಗಳೂರ	೦	೫	೦	,,
೮	ಸದರ ೨ನೇ ಭಾಗ	ಸದರ	ಸದರ	೦	೩	೬	,,
೯	ಸದರ ೩ನೇ ಭಾಗ	,,	,,	೦	೫	೦	,,
೧೦	ನಳ ಚರಿತ್ರ (ಗದ್ಯ)	...	....	೦	೮	೦	,,
೧೧	ಪಾಂಚಾಲಿ ಪರಿಣಯ ಅಥವಾ ಷೇಕ್ಸಪೀಯರನ ಮರ್ಚಂಟ ಆಫ ವೇನೀಸದ ಭಾಷಾಂತರವು	...	...	೦	೧೦	೦	,,
೧೨	ರಾಮವರ್ಮ ಲೀಲಾವತಿ ಚರಿತ್ರ ಅಥವಾ ಷೇಕ್ಸಪೀಯರನ ರೋಮಿಯೋ ಜೂಲಿಯಟದ ಭಾಷಾಂತರವು	...	...	೦	೮	೦	,,
೧೩	ಶಾಕುಂತಲ ನಾಟಕ	ಬಸವಪ್ಪ ಶಾಸಿ	ಗವ್ಹರ್ನಮೆಂಟ ಸೆಂಟ್ರಲ್ ಬುಕ್ ಡೀಪೋ ಬೆಂಗಳೂರ	೦	೧೨	೦	,,
೧೪	ಮಹಾಭಾರತದ ಕನ್ನಡ ಟೀಕು ಆದಿಪರ್ವ	ಮೈಸೂರ ವಾಣೀ ವಿಲಾಸ ಟೀಕಾ ಸೀರೀಜ	ಸದರ	೩	೪	೦	,,

ಶಾಲಾಪತ್ರಕ

ಸಂಪುಟ ೫೨ | ಅಗಷ್ಟ ೧೯೧೬. | ಸಂಚಿಕೆ ೮.

ಸ್ಫುಟವಿಷಯಗಳು.

ವಾಚಕರಿಗೆ ವಿನಂತಿ:—ಈ ಶಾಲಾಪತ್ರಕವು ಕರ್ನಾಟಕದೊಳಗಿನ ಪ್ರಾಥಮಿಕ ಶಿಕ್ಷಣದ ಪ್ರಗತಿಯನ್ನು ಬಯಸತಕ್ಕಂಥಾದ್ದಾಗಿದೆ. ಆದ್ದರಿಂದ ಇದರಲ್ಲಿ ಶಿಕ್ಷಣದ ಕೆಲಸದಲ್ಲಿ ನಿರತರಾದಂಥ ಜನರಿಂದ ಬರೆಯಲ್ಪಟ್ಟ ಸ್ವತಂತ್ರ ವಿಚಾರದ ಮತ್ತು ಅನುಭವದ ಲೇಖಗಳು ಬರುವದು ಹಿತಕರವು. ಇಂಥ ಲೇಖಗಳು ಸಾಕಷ್ಟು ಬರದೆ ಇರುವದರಿಂದ ವಿದ್ಯಾವಿಷಯಕ ಚರ್ಚೆಯು ನಡೆಯತಕ್ಕಷ್ಟು ನಡೆಯುವದಿಲ್ಲ. ವಿಶೇಷವಾಗಿ ಶಿಕ್ಷಕರಿಂದ ಇದರಲ್ಲಿ ಬರತಕ್ಕ ಲೇಖಗಳು—ಗಣಿತ ಚಮತ್ಕಾರ, ವ್ಯಾಕರಣ ಸಂಬಂಧದ ಸಂಶಯ, ಅಲಂಕಾರ ಶಾಸ್ತ್ರ ಮುಂತಾದ ವಿದ್ವಾಂಸರಿಗೆ ಶೋಭಿಸುವಂಥವುಗಳೇ—ಇರುವವೆಂಬದು ಕಂಡು ಬರುತ್ತದೆ. ವಿದ್ವತ್ತೆಯನ್ನು ಸಂಪಾದನ ಮಾಡುವದು, ಅಥವಾ ಎರಡನೆಯವರಿಗೆ ಅದನ್ನು ತೋರಿಸುವದು ಇಷ್ಟೇ ಶಿಕ್ಷಕನ ಹೋರೆಯಲ್ಲ. ವಿದ್ಯೆಯನ್ನು ಜನರಲ್ಲಿ ಪ್ರಸಾರ ಮಾಡುವ ತಕ್ಕದಾರಿಯನ್ನು ತೋರಿಸಿಕೊಡುವದಿರುತ್ತದೆ. ಅಂದರೆ ಶಿಕ್ಷಣದ ಕೆಲಸಕ್ಕೆ ಉಪಯೋಗ ಬೀಳುವ ಟಿಪ್ಪಣಿಗಳು, ಶಿಕ್ಷಣದ ಉಪಕರಣ ಮುಂತಾದ ಇತರ ಉಪಯುಕ್ತ ಸಂಗತಿಗಳ ಸಂಬಂಧದ ಮಾಹಿತಿ, ಇವುಗಳನ್ನು ಪ್ರಕಟಿಸಲಿಕ್ಕೆ ಯತ್ನ ಮಾಡುವದು ಶ್ರೇಯಸ್ಕರವು. ಶಾಲೆಯ ಸಮಾರಂಭ ಮುಂತಾದ ಕಾಲಕ್ಕೆ ಶಿಕ್ಷಣದ ಹೋರೆಯ ಬಗ್ಗೆ ಬೇರೆ ಜನರು ವ್ಯಕ್ತಪಡಿಸಿದ ಅಭಿಪ್ರಾಯ, ಅವರು ಉತ್ತೇಜನಪರವಾಗಿ ಕೊಟ್ಟ ಹಣದ ಮಾಹಿತಿ ಮುಂತಾದವುಗಳನ್ನು ಕೊಡುವದು ಅನುಚಿತವಾಗಲಿಕ್ಕಿಲ್ಲ. ಆದ್ದರಿಂದ ಈ ಉದ್ಯೋಗದಲ್ಲಿ ಸೇರಿದಂಥ

ಶಿಕ್ಷಕವರ್ಗವು ಈ ಪ್ರಕಾರದ ಪ್ರಯತ್ನವನ್ನು ಮಾಡೀತೆಂದು ಅಪೇಕ್ಷಿಸುತ್ತೇವೆ.

ಶಾಲಾಸುಧಾರಣೆಯ ಬಗ್ಗೆ ಕೆಲವು ಅನುಭವದ ಮಾತುಗಳು:—ಶಿಕ್ಷಣದ ಕೆಲಸವು ಸರಿಯಾಗಿ ನಡೆಯುವದಕ್ಕೂ ಅದರಲ್ಲಿ ಸುಧಾರಣೆಯುಂಟಾಗುವದಕ್ಕೂ ಉತ್ತಮವಾದ ಶಾಲಾಗೃಹ, ಉಪಕರಣಗಳ ಅನುಕೂಲತೆ, ಶಿಕ್ಷಕರಿಗೆ ಪದ್ಧತಿಯ ಹಾಗು ಶಾಲಾವ್ಯವಸ್ಥೆಯ ಜ್ಞಾನ ಮತ್ತು ವಿದ್ಯಾರ್ಥಿಗಳಲ್ಲಿ ನಿಯಮಿತತನ ಇವು ಹ್ಯಾಗೆ ಅವಶ್ಯಕವಾಗಿರುವವೋ ಹಾಗೆ ಉಪಶಿಕ್ಷಕರಿಗೂ ಮುಖ್ಯಾಧ್ಯಾಪಕರಿಗೂ ಇರುವ ಪ್ರೇಮದ ಬಳಿಕೆ, ಊರ ಜನರ ಪ್ರೇಮವನ್ನು ಸಂಪಾದಿಸಿಕೊಳ್ಳುವ ಬಗ್ಗೆ ಮುಖ್ಯಾಧ್ಯಾಪಕನಲ್ಲಿರುವ ಕುಶಲತೆ, ಅಲ್ಲದೆ ತಪಾಸಣೆಯ ಮೇಲಧಿಕಾರಿಗಳ ಅಪ್ಪಣೆಗಳನ್ನು ಸರಿಯಾಗಿ ಅಮಲಿನಲ್ಲಿ ತರುವ ಮನಸ್ಸಿನ ಬಲವು ಇವೂ ಸಹಾಯಕಾರಿಗಳಾಗಿರುವವು. ಯಾವದೊಂದು ಶಾಲೆಯ ಮುಖ್ಯಾಧ್ಯಾಪಕನಲ್ಲಿ ಇಲ್ಲವೆ ಉಪಶಿಕ್ಷಕನಲ್ಲಿ ತನ್ನ ಉದ್ಯೋಗದ ಬಗ್ಗೆ ನಿಶ್ಚಲವಾದ ಆಸಕ್ತಿ ಇದ್ದರೆ, ಮೇಲಿನ ಯಾವತ್ತು ಗುಣಗಳು ತಮ್ಮಿಂದ ತಾವೇ ಆತನನ್ನು ಹಿಂಬಾಲಿಸುವವೆಂಬದು ಸಹಜವಾದದ್ದು. ಆದರೆ ಇಂಥ ಉಜ್ವಲವಾದ ಆಸಕ್ತಿಯು ಎಲ್ಲ ಶಿಕ್ಷಕರಲ್ಲಿಯೂ ಇರುವದು ಅಪರೂಪ. ಮೇಲ್ಕಂಡ ಪರಿಸ್ಥಿತಿಯನ್ನು ಒದಗಿಸಿಕೊಳ್ಳುವ ಬಗ್ಗೆ ಕೆಲವು ಸೂಚನೆಗಳನ್ನು ಮಾಡಬಹುದು. ಅವುಗಳನ್ನು ಅನುಸರಿಸಿದಲ್ಲಿ ಅವನ ಕಾರ್ಯವು ಕೆಲಮಟ್ಟಿಗಾದರೂ ಕೈಗೂಡೀತೆಂದು ನಾವು ನಂಬುತ್ತೇವೆ.

ಉಪಶಿಕ್ಷಕರಿಗೆ ಸೂಚನೆಗಳು:—ಟ್ರೇಂಡ ಶಿಕ್ಷಕನು ಕಾಲೇಜವನ್ನು ಬಿಟ್ಟು ಹೊರಡುವಾಗಲೇ ತಾನು ಟ್ರೇಂಡ ಶಿಕ್ಷಕನೆಂಬ ಅಭಿಮಾನ, ತನ್ನ ಪದ್ಧತಿಗಳ ಬಗ್ಗೆ ಪ್ರೇಮ, ಶಿಕ್ಷಣದ ಹೋರೆಯ ಬಗ್ಗೆ ಪೂಜ್ಯಬುದ್ಧಿ ಇವು ಹ್ಯಾಗೆ ಆತನಲ್ಲಿ ಸ್ವಭಾವಸಿದ್ಧವಾಗಿರುವವೋ, ಹಾಗೆ ತನ್ನ ವಿದ್ಯಾರ್ಥಿಗಳ ಬಗ್ಗೆ ವಿಚಾರಪೂರ್ವಕವಾದ ಪ್ರೇಮ, ಆ ವಿದ್ಯಾರ್ಥಿಗಳ ಮುಖಾಂತರ ಅವರ ಪಾಲಕರ ಬಗ್ಗೆ ಸಹಾನುಭೂತಿ, ತನ್ನ ಮುಖ್ಯಾಧ್ಯಾಪಕನು ಮತ್ತು ವರಿಷ್ಠರು ಇವರ ಬಗ್ಗೆ ಪೂಜ್ಯಬುದ್ಧಿ ಇವುಗಳನ್ನು ಸಂಪಾದನ ಮಾಡಿಕೊಳ್ಳಬೇಕೆಂಬ

ಇಚ್ಛೆಯೂ ಅವನಲ್ಲಿರಬೇಕು. ಅಂದರೆ ತುಸು ಮಟ್ಟಿಗಾದರೂ ತಾನು ಕೈಕೊಂಡ ಕೆಲಸದಲ್ಲಿ ಯಶಸ್ಸು ಪಡೆಯಬಹುದು. ಆತನು ವಿದ್ಯಾರ್ಥಿಗಳ ಪ್ರೇಮವನ್ನೂ ಪಾಲಕರ ಸಹಕಾರಿತ್ವವನ್ನೂ ಹ್ಯಾಗೆ ಸಂಪಾದಿಸಬೇಕೆಂಬ ಬಗ್ಗೆ ಇದೇ ವರ್ಷದ ಸಮ್ಮೇಲನಗಳಲ್ಲಿ ಕೆಲವು ಅನುಭವಿಕ ಶಿಕ್ಷಕರು ಬರೆದು ಓದಿದಂಥ 'ಪಾಲಕರಸಹಕಾರಿತ್ವ'ವೆಂಬ ನಿಬಂಧವನ್ನು ಸಂಕ್ಷೇಪವಾಗಿ ಮುಂದಿನ ಸಂಚಿಕೆಯಲ್ಲಿ ಕೊಡುವೆವು. ಅದರಂತೆ ನಡೆದರೆ ಹೊಸ ಶಿಕ್ಷಕರಿಗೂ ಬಹಳೇ ಉಪಯೋಗವಾಗುವದು. ಇಲ್ಲಿ ಹೊಸ ಟ್ರೇಂಡ ಶಿಕ್ಷಕನು ತನ್ನ ಮುಖ್ಯಾಧ್ಯಾಪಕನ ಸಂಗಡ ಯಾವ ಪ್ರಕಾರದ ವರ್ತನವನ್ನಿಡಬೇಕು, ಎಂಬದನ್ನು ಹೇಳುವೆವು.

ಮುಖ್ಯಾಧ್ಯಾಪಕನಿಗಿಂತ ತನಗೆ ಹೊಸ ಪದ್ಧತಿಗಳ ಜ್ಞಾನವು ಹೆಚ್ಚಿಗೆ ಇರುತ್ತದೆಂಬ ಭಾವನೆಯು ಇದ್ದರೂ, ಅವನು ಶಿಕ್ಷಣದಲ್ಲಿ ನಿಶೇಷ ದುಡಿದವನೂ ಅನುಭವದಿಂದ ಶಿಕ್ಷಣದ ಕಲೆಯನ್ನು ಸಾಧ್ಯ ಮಾಡಿಕೊಂಡವನೂ ಆದ್ದರಿಂದ ಆ ಕಲೆಯನ್ನು ತೀವ್ರ ಸಂಪಾದನ ಮಾಡಿಕೊಳ್ಳಲಿಕ್ಕೆ ಆತನ ಸಹಾಯವನ್ನು ತೆಗೆದುಕೊಳ್ಳಬೇಕೆಂಬ ಅಪೇಕ್ಷೆಯೂ ಇವನಲ್ಲಿ ಇರಲಿಕ್ಕೆ ಬೇಕು. ಅಲ್ಲದೆ ಊರವರ ಕೂಡ ಯಾವ ರೀತಿಯಿಂದ ನಡೆದುಕೊಳ್ಳಬೇಕೆಂಬದನ್ನು ಈತನು ಮುಖ್ಯಾಧ್ಯಾಪಕರಿಂದ ಅರಿತುಕೊಳ್ಳಬೇಕು. ಆತನು ತನ್ನ ಯಾವತ್ತು ಉಪಶಿಕ್ಷಕರ ಕೂಡ ಯಾವ ಪ್ರಕಾರ ನಡೆಯುತ್ತಾನೆ, ಅವರನ್ನು ಯಾವ ರೀತಿಯಿಂದ ನಡಿಸಿಕೊಳ್ಳುತ್ತಾನೆ, ಈ ಮುಂತಾದ್ದನ್ನು ನೋಡಿ ತಿಳಿದುಕೊಳ್ಳಬೇಕು. ಯಾಕಂದರೆ ತಾನು ಮುಖ್ಯಾಧ್ಯಾಪಕನಾದ ಕೂಡಲೆ ಅದರಂತೆ ನಡೆಯಬೇಕಾಗುತ್ತದೆ. ಈ ತಾರತಮ್ಯಗಳ ಜ್ಞಾನವು ಮುಖ್ಯಾಧ್ಯಾಪಕನಿಗೆ ಹೆಚ್ಚು ಇರುತ್ತದೆ. ಅಡಿಗಡಿಗೆ ಬಂದ ಅಡಚಣಿಗಳಲ್ಲಿ ಆತನು ಹ್ಯಾಗೆ ನಡೆಯುತ್ತಾನೆ, ಇದನ್ನು ನೋಡಿ ತಾನು ಕಲಿತುಕೊಳ್ಳಬೇಕು. ಶಾಲೆಯ ಸುಸ್ಥಿತಿ ಇಲ್ಲವೆ ದುಸ್ಥಿತಿಗಳ ಸಂಪೂರ್ಣ ಭಾರವು ಮುಖ್ಯ ಶಿಕ್ಷಕನ ಮೇಲೆಯೇ ಇರುತ್ತದೆಂಬದನ್ನು ಉಪಶಿಕ್ಷಕನು ಯಾವಾಗಲೂ ನೆನಪಿನಲ್ಲಿಡತಕ್ಕದ್ದು. ಮುಖ್ಯಾಧ್ಯಾಪಕನ ಪ್ರೇಮವನ್ನು ಸಂಪಾದನ ಮಾಡಿಕೊಳ್ಳುವದು ಪ್ರತಿಯೊಬ್ಬ ಹೊಸ ಶಿಕ್ಷಕನ ಕೈಯ್ಯಲ್ಲಿದ್ದರೂ ಇವನ ಅಭಿಮಾನವು ಆ ಕೆಲಸದಲ್ಲಿ ಇವ

ನಿಗೆ ಅಡಿಗಡಿಗೆ ಅಡ್ಡಿ ಮಾಡುವದು. ಈ ಅಭಿಮಾನವನ್ನು ಕಳೆದುಕೊ
ಳ್ಳಬೇಕಾದರೆ ಮುಖ್ಯಾಧ್ಯಾಪಕನಲ್ಲಿರುವ ಶಿಕ್ಷಣದ ಕಲೆ, ಆತನಿಗಿ
ರುವ ಜವಾಬುದಾರಿ ಇವುಗಳನ್ನು ಲಕ್ಷ್ಯಕ್ಕೆ ತರಬೇಕು. ಈ ಪ್ರಕಾರ
ನಡೆದರೆ ಮುಖ್ಯ ಶಿಕ್ಷಕನು ಅನುಕೂಲನಾಗಿ ಶಿಕ್ಷಣದ ಕೆಲಸದಲ್ಲಿ
ಯೂ, ಇತರ ಕೆಲಸದಲ್ಲಿಯೂ ಈತನಿಗೆ ಸಹಾಯ ಮಾಡುವನು
ವಿದ್ಯಾರ್ಥಿಗಳಿಗೂ ಅವರ ಪಾಲಕರಿಗೂ ಈ ಹೊಸ ಶಿಕ್ಷಕನ ಪೂರ್ಣ
ಪರಿಚಯ ಮಾಡಿಕೊಡುವನು. ಇದರಿಂದ ವಿದ್ಯಾರ್ಥಿಗಳಲ್ಲಿಯೂ
ಅವರ ಪಾಲಕರಲ್ಲಿಯೂ ಈ ಶಿಕ್ಷಕನ ಬಗ್ಗೆ ಪ್ರೇಮ ಉತ್ಪನ್ನವಾ
ಹೊಸ ಶಿಕ್ಷಕನಿಗೆ ವಿಶೇಷ ಸಹಾಯವಾಗುವದು. ಪ್ರಾರಂಭದ ಕೇ
ಸವು ಅತಿ ಮಹತ್ವದ್ದೆಂಬದನ್ನು ನೂತನ ಶಿಕ್ಷಕನು ಯಾವಾಗಲೂ ನೆ
ಪಿನಲ್ಲಿಡತಕ್ಕದ್ದು.

ಶಾಲೆಯಲ್ಲಿ ಉಪಶಿಕ್ಷಕರಿಗೆ ಅವರ ಯೋಗ್ಯತಾನುಸಾರವಾ
ಕ್ಲಾಸುಗಳ ಯೋಜನೆ ಮಾಡುವದು, ಶಾಲಾ ವ್ಯವಸ್ಥೆಯೊಳಗಿನ ಒಂದ
ಮುಖ್ಯವಾದ ಭಾಗವು. ಹೊಸ ಶಿಕ್ಷಕನು ವಿಷಯಗಳನ್ನೂ ತತ
ಗಳನ್ನೂ ಹೆಚ್ಚು ನೋಡಿಕೊಂಡಿರುವೆನೆಂಬ ಅಭಿಮಾನದಿಂದ ಮೇಲಿ
ಇಯತ್ತೆಗಳನ್ನು ಕಲಿಸಲಿಕ್ಕೆ ಹಾತೊರಿಯುತ್ತಿರುತ್ತಾನೆ ಆದರೆ ಅ
ನಿಗೆ ರೂಢಿಯು ಕಡಿಮೆ ಇರುವದರಿಂದ ಶಾಬ್ದಿಕ ಜ್ಞಾನವಿರುವದೆ
ಹೊರತು ಅನುಭವವು ಇರುವದೇ ಇಲ್ಲ. ಕೆಳಗಿನ ವರ್ಗಗಳಲ್ಲಿ ವಿಷ
ಯಗಳು ಕಡಿಮೆ ಇದ್ದು ಕಲೆಯನ್ನು ಕಲಿಯಲಿಕ್ಕೆ ಹೆಚ್ಚು ಅನುಕೂ
ವೂ ಅವಕಾಶವೂ ಇರುವದೆಂಬದು ಈ ಹೊಸ ಶಿಕ್ಷಕನಿಗೆ ಗೊತ್ತಿರ
ವದಿಲ್ಲ. ಮುಖ್ಯ ಶಿಕ್ಷಕನು ಇದನ್ನು ಮನಸಿನಲ್ಲಿ ತಂದು, ಇವನ ಹಿ
ಕ್ಕಾಗಿಯೇ ಅಂಥ ವರ್ಗವನ್ನು ಕೊಟ್ಟರೆ, ಅವನ ಮಾತನ್ನು ಅಲ್ಲಗ
ಯುವದು ಸರಿಯಲ್ಲ. ಹೊಸ ಶಿಕ್ಷಕನು ತರುಣನಿರುವದರಿಂದ ಇ
ನಲ್ಲಿ ದುಡಿಯುವ ಶಕ್ತಿಯು ಬಹಳ ಇದ್ದು, ಪ್ರಪಂಚದ ತಾಪಸ
ಕಡಿಮೆ ಇರುವದು. ಇಂಥ ಪ್ರಸಂಗದಲ್ಲಿ ಮುಖ್ಯ ಶಿಕ್ಷಕನು ಹೆಚ್ಚು
ಕೆಲಸಗಳನ್ನು ಕೊಟ್ಟರೆ, ಅವುಗಳನ್ನು ಮಾಡುವದರಿಂದ ಅವನ ಪ್ರೀ
ಯು ಉಪಶಿಕ್ಷಕನ ಮೇಲೆ ಹೆಚ್ಚಿಗೆ ಆಗುವದು. ಮತ್ತು ದುಡಿಯತಕ್ಕ
ಸಾಮರ್ಥ್ಯವು ಇವನಲ್ಲಿ ಬೆಳೆಯುವದು. 'ಚನ್ನಾಗಿ ದುಡಿಸುವ ಅ

ಯ ಕೈಯಲ್ಲಿ ಏರ್ಪಾಡಾದ ಸೊಸೆಯು ಉತ್ತಮ ಅತ್ತೆಯಾಗುವಳು' ಎಂಬ ಮಹಾರಾಷ್ಟ್ರರ ಗಾದೆಯ ಮಾತಿನಂತೆ ಇವನೂ ಮುಂದೆ ಉತ್ತಮ ಮುಖ್ಯ ಶಿಕ್ಷಕನಾಗುವನು. ಈ ವಯಸ್ಸಿನಲ್ಲಿ ತನ್ನ ಕೆಲಸ ಮಾಡುವ ಸಾಮರ್ಥ್ಯವನ್ನು ಬೆಳಿಸಿಕೊಳ್ಳುವದು ಅವನಿಗೆ ಸಾಧ್ಯವೂ ಹಿತಕರವೂ ಅದೆ. ಅವನಲ್ಲಿ ಇವೆಲ್ಲವುಗಳು ಬೆಳೆಯತಕ್ಕ ಕಾಲವು ಇದೇ. 'ಇಪ್ಪು ಕೆಲಸಗಳನ್ನು ಮಾಡುವಷ್ಟು ಸಾಮರ್ಥ್ಯವು ನನ್ನಲ್ಲಿ ಇಲ್ಲ' ಎಂಬ ಭಾವನೆಯು ಮಾತ್ರ ಈತನಲ್ಲಿ ಇರಕೂಡದು. ಈ ಕಾಲದಲ್ಲಿ ಅಲಕ್ಷ್ಯ ಮಾಡಿದರೆ ಅವನಿಗೆ ಬಹಳೇ ಹಾನಿಯಾಗುವದು. ಈಗ ತಾನು ದುಡಿಯದಿದ್ದರೆ ಮುಂದೆ ಬರುವ ಹೊಸ ಟ್ರೇಂಡರ ಎದುರಿಗೆ ಅಪಹಾಸ್ಯಕ್ಕೆ ಗುರಿ ಆದೇನು ಎಂಬದನ್ನು ನೆನಪಿನಲ್ಲಿಡಬೇಕು. ಈಗ ತಾನು ತನ್ನ ಮಾನಸಿಕ ಮತ್ತು ಶಾರೀರಿಕ ಚಟುವಟಿಕೆಯನ್ನು ಸಂಪಾದನೆ ಮಾಡದೆ ಇದ್ದರೆ, ಮುಂದೆ ತನ್ನ ಕೈಕೆಳಗೆ ಬರುವ ತರುಣ ಶಿಕ್ಷಕರ ಉಪಹಾಸವನ್ನು ಹೊಂದೇನೆಂಬ ಭೀತಿಯನ್ನು ಈಗಲೇ ಮನಸಿನಲ್ಲಿ ಹಿಡಿಯಲಿಕ್ಕೆಬೇಕು. ತನ್ನ ಕ್ಲಾಸಿನ ಬಗ್ಗೆ ಅಭಿಮಾನವಿದ್ದಂತೆ ಇಡೀ ಶಾಲೆಯ ಬಗ್ಗೆಯಾದರೂ ತನ್ನಲ್ಲಿ ಅಭಿಮಾನವಿರಬೇಕು. ಇದು ನನ್ನ ಶಾಲೆ, ಇಲ್ಲಿಗೆ ನಾನು ಶಾಲಾ ಸುಧಾರಣೆಗಾಗಿಯೇ ಬಂದಿರುವೆನು, ಅಲ್ಲದೆ ಮುಖ್ಯ ಶಿಕ್ಷಕನಿಗೆ ಸಹಾಯ ಮಾಡುವಂಥ ಶಿಕ್ಷಕರಲ್ಲಿ ನಾನೂ ಒಬ್ಬನು ಎಂಬ ಭಾವನೆಯಿಂದ ಕೆಲಸಮಾಡಿದರೆ ಅವನ ಕಲ್ಯಾಣವಾಗುವದಲ್ಲದೆ ಇಡೀ ಶಾಲೆಯ ಕಲ್ಯಾಣವೂ ಆಗುವದು.

ಗುರು ಪ್ರಭಾವ ಪಂಚಕ.

ಭಾ. ಪ. ಸೃಷ್ಟಿಕರ್ತನು ಸಕಲ ಸೃಷ್ಟಿಯ !
ಸೃಷ್ಟಿಸುವ ಸಮಯದಲಿ ತನ್ನಯ !
ಸೃಷ್ಟಿಯಲಿ ಸದ್ಧರ್ಮ ರಕ್ಷಕನೋರ್ವನಂನಿಜದಿ ||
ಸೃಷ್ಟಿಸದಿರಲ್ ತಗದೆನುತತಾಂ !
ಸೃಷ್ಟಿಸಿದನೊ ಪೇಳಲರಿದೀ !
ಸೃಷ್ಟಿಯೊಳ್ ಗುರುವರ್ಯನಂ ಸಮನಾರು ಗುರುವಿಂಗೆ ||೧

ಭೂತಳದೊಳಿಹ ಸಕಲ ಮನುಜ ।
ವ್ರಾತವನು ಪರಿಶುದ್ಧ ಗೈಯುವ ।
ಹೇತುವಿಂ ಗುರುವರನ ಜನ್ಮವುದದುವೆ ಕಾರಣದಿಂ ॥
ಪಾತಕದ ಘನಘೋರ ದುಃಖದ ।
ಭೀತಿಯುಂಟೇಂ ಶಾಂತ ಚಿತ್ತ್ವದು ।
ನೀತ ಚರಿತನ ಶಿಷ್ಯವೃಂದಕೆ ಯಲ್ತಿ ಧನ್ಯರವರ್ ॥೬॥
ಮತಿಯೊಳಾವಾಗ್ದೇವಿ ಯುಂದದಿ ।
ಕ್ಷಿತಿಯ ತೆರದಿಂ ತಾಳ್ಮೆಯಲಿ ಭೂ ।
ಪತಿಗೆ ಸಮನಾಧರ್ಮಜಂಗೆನೆ ಸತ್ಯದೊಳ್ ತಾನು ॥
ಅತಿಕರುಣದಿಂದಾತ್ಮ ಶಿಷ್ಯರ ।
ಮತಿಯಮಾಲಿನ್ಯವ ಬೆಳಗಿಸ ।
ದ್ಗತಿಯ ನೀಯುವ ಗುರುವರನ ಮಹಿಮೆಯನು ಬಣ್ಣಿಪರಾರ್ ॥೭॥
ಕರಮೆಸೆವ ಜ್ಞಾನೋದಧಿಗೆ ಹಿಮ ।
ಕರನವೋಲ್ ಪರಿಶೋಭಿಸುವ ಸುಖ ।
ಕರನು ಭಕ್ತಜನಕ್ಕೆ ಮೂಢನರಾಜ್ಞಾತಿಮಿರದಿವಾ ॥
ಕರನಿರುವನದರಿಂದೆ ಮಂಗಲ ।
ಕರನು ಶಿಷ್ಯರಿಗವನು ಪರಮಸು ।
ಕರಗುಣಾ ಭರನೆನಿಸಿ ಧರಣೀತಳದೊಳೆಸೆಯುವನು ॥೪॥
ಗುರುವೆ ಗಿರಿಜಾ ವರನೆನುತೆ ಸ ।
ದ್ಗುರುವೆ ಸಿರಿವರ ನೆಂದೆನುತತ ।
ದ್ಗುರುವೆ ಸರಸತಿ ಯೆರೆಯನೆನುತುರೆ ನಂಬಿಮನದೊಳಗೆ
ಪರಮ ಪಾವನ ಗುರುವರನ ಸ ।
ಚ್ಚರಣ ಸೇವೆಯ ನೇಕಚಿತ್ತದಿ ।
ನಿರುತ ಮಾಳ್ಪಗೆ ಕರುಣಿಸನೆ? ಕರುಣಾಬ್ಧಿ
ರಾಮೇಶಂ ॥೫॥

ಆಜ್ಞಾಧಾರಕ ಶಿಷ್ಯ,
ಶಂಕರ ದತ್ತಾತ್ರಯ ಅಗ್ನಿಹೋತ್ರಿ, ನ
ಲಗುಂದ ೨ನೇ ವರ್ಷದ ವಿದ್ಯಾರ್ಥಿ.

ಶಿಕ್ಷಕ–ಶಿಕ್ಷಣಾಲಯ
ಧಾರವಾಡ.

ಕೋಲಂಬಿಯಾ ವಿಶ್ವವಿದ್ಯಾಲಯವು.

(ಲೇಖಕ—ಬಾಳಕೃಷ್ಣ ದೇವಣಭಟ್ಟ ಜೋಶಿ)

ಅಮೇರಿಕೆಯೊಳಗಿನ ಯುನೈಟೆಡ್ ಸ್ಟೇಟ್ಸದಲ್ಲಿ ಶಿಕ್ಷಣದ ಪ್ರಸಾರವಾದಷ್ಟು ಜಗತ್ತಿನಲ್ಲಿ ಬೇರೆ ಯಾವ ರಾಷ್ಟ್ರದಲ್ಲಿಯೂ ಆಗಿರುವದಿಲ್ಲೆಂದು ಹೇಳಿದರೆ ಬಹುಶಃ ಅತಿಶಯೋಕ್ತಿಯಾಗಲಿಕಿಲ್ಲ. ಇಲ್ಲಿ ವಿಶ್ವವಿದ್ಯಾಲಯಗಳಿಲ್ಲದ ಪಟ್ಟಣಗಳೇ ಇಲ್ಲ. ಇಲ್ಲಿಯ ಸುಪ್ರಸಿದ್ಧ ಪಟ್ಟಣವಾದ ನ್ಯೂಯಾರ್ಕದಲ್ಲಿ ಮೂರು ದೊಡ್ಡ ದೊಡ್ಡ ವಿಶ್ವವಿದ್ಯಾಲಯಗಳು ಆಧುನಿಕ ಪದ್ಧತಿಯ ಮೇರೆಗೆ ಸ್ಥಾಪಿತವಾಗಿದ್ದು ಅಪ್ರತಿಹತವಾಗಿ ತಮ್ಮ ಕಾರ್ಯವನ್ನು ಜರುಗಿಸಹತ್ತಿವೆ. ಇವುಗಳಲ್ಲಿ 'ಕೋಲಂಬಿಯಾ' ಎಂಬ ವಿಶ್ವವಿದ್ಯಾಲಯವು ಅತಿ ದೊಡ್ಡದಿದ್ದು, ಅದರ ಬಗ್ಗೆ ಗೊತ್ತಾದ ಕೆಲವು ಸಂಗತಿಗಳನ್ನು ಶ್ರೀಯುತ ಸಿಕಂದರಲಾಲ ಅತಾರ ಎಂಬವರ ಲೇಖನದ ಆಧಾರದಿಂದ ಶಾಲಾಪತ್ರಕದ ವಾಚಕರಿಗಾಗಿ ಇದರಡಿಯಲ್ಲಿ ಕೊಟ್ಟಿದೆ.

ಅಮೇರಿಕೆಯಲ್ಲಿ ಇ. ಸ. ೧೭೭೫ರ ಮೊದಲು ಇಂಗ್ಲಿಷರ ರಾಜ್ಯವಿತ್ತು. ಇವರು ನ್ಯೂಯಾರ್ಕದಲ್ಲಿ ಇ. ಸ. ೧೭೫೪ರಲ್ಲಿ ಒಂದು ಸಣ್ಣ ಕಾಲೇಜವನ್ನು ಸ್ಥಾಪಿಸಿ, ಅದಕ್ಕೆ 'ಕಿಂಗ್ಜ ಕಾಲೇಜ' ಎಂಬ ಹೆಸರನ್ನಿಟ್ಟಿದ್ದರು. ಮುಂದೆ ಅಮೇರಿಕೆಯು ಸ್ವಾತಂತ್ರ್ಯದ ಸಲುವಾಗಿ ಯುದ್ಧವನ್ನು ಹೂಡಿ ಕೆಲವುದಿವಸಗಳಾದನಂತರ ನಾಲ್ಕೂ ಕಡೆಗೆ ಶಾಂತತೆಯು ನೆಲೆಗೊಳ್ಳಲು ರಾಷ್ಟ್ರೀಯ ಪ್ರಭೃತಿಗಳು ಇ. ಸ. ೧೭೭೪ರಲ್ಲಿ ಕಿಂಗ್ಜ ಕಾಲೇಜದ ಹೆಸರನ್ನು ಬದಲಿಸಿ 'ಕೋಲಂಬಿಯಾ ಕಾಲೇಜ' ಎಂಬ ಹೆಸರನ್ನಿಟ್ಟರು. ಪ್ರಕೃತಕ್ಕೆ ಇದು ಅತಿ ಪ್ರಚಂಡವಾದ ವಿಶ್ವವಿದ್ಯಾಲಯವೆನಿಸಿ, ಸರ್ವಪ್ರಕಾರದ ಜ್ಞಾನದ ಅಧಿಷ್ಠಾನವಾಗಿದೆ.

ನ್ಯೂಯಾರ್ಕದ ಮಧ್ಯಭಾಗದಲ್ಲಿ ರಮಣೀಯವೂ ವಿಸ್ತೀರ್ಣವೂ ಆಗಿರುವ ಒಂದು ಬಯಲಿನಲ್ಲಿ ಈ ವಿಶ್ವವಿದ್ಯಾಲಯದ ೫೬ ದೊಡ್ಡದೊಡ್ಡ ಮಂದಿರಗಳು ಶೋಭಾಯಮಾನವಾಗಿ ತೋರುವವು. ವಿಶ್ವವಿದ್ಯಾಲಯದ ಕಟ್ಟಡಗಳು ಒಟ್ಟಿಗೆ ೩೫ ಎಕರೆ ಕ್ಷೇತ್ರವನ್ನು ವ್ಯಾಪಿಸಿರುವವು. ಇದರಲ್ಲಿ ಇ. ಸ. ೧೯೧೪ರಲ್ಲಿ ಶಿಕ್ಷಣ ಕೊಡುವವರ ಸಂಖ್ಯೆಯು

೯೫೧, ಹಾಗು ಶಿಕ್ಷಣ ಹೊಂದುವವರ (ವಿದ್ಯಾರ್ಥಿಗಳ) ಸಂಖ್ಯೆಯು ೧೧,೦೯ಳ ಇತ್ತು. ಇದಲ್ಲದೆ ರಾತ್ರಿಯಲ್ಲಿ ಶಿಕ್ಷಣ ಹೊಂದುವ ಕೂಲಿ ಕಾರರ ಸಂಖ್ಯೆಯು ಪ್ರಮಾಣವಾದರೂ ದೊಡ್ಡದಿತ್ತು. ಇದೊಂದೇ ವಿದ್ಯಾಲಯದಲ್ಲಿ ೧೧ ಸಾವಿರಕ್ಕಿಂತ ಹೆಚ್ಚು ವಿದ್ಯಾರ್ಥಿಗಳು ಶಿಕ್ಷಣ ಹೊಂದುವದೆಂದರೆ ಸಾಮಾನ್ಯವಾದ ಮಾತಲ್ಲ. ನಮ್ಮ ಮುಂಬಯಿ ಇಲಾಖೆಯೊಳಗಿನ ಎಲ್ಲ ವಿಶ್ವವಿದ್ಯಾಲಯಗಳ ಸಂಖ್ಯೆಯನ್ನು ಒಟ್ಟುಗೂಡಿಸಲು ಮೇಲಿನ ಸಂಖ್ಯೆಯಷ್ಟು ಆಗುವದೋ ಇಲ್ಲವೋ ಎಂಬ ಬಗ್ಗೆ ಸಂಶಯವಿದೆ.

ಈ ವಿಶ್ವ ವಿದ್ಯಾಲಯದಲ್ಲಿ ವಿದ್ಯಾರ್ಥಿಗಳಿಗೆ ಯಾವತ್ತೂ ತರದ ಶಿಕ್ಷಣವು ಕೊಡಲ್ಪಡುತ್ತದೆ. ಆದರೂ ಎಂಜನೀಯರಿಂಗ (ಶಿಲ್ಪಶಾಸ್ತ್ರ) ವೈದ್ಯಕ ವಿಜ್ಞಾನ, ಸಾಹಿತ್ಯ, ಅರ್ಥಶಾಸ್ತ್ರ, ಕಾಯಿದೆ ಮೊದಲಾದ ವಿಷಯಗಳನ್ನು ಕಲಿಸುವ ಬಗ್ಗೆ ವಿಶೇಷ ಮಹತ್ವವನ್ನು ಕೊಡುವರು. ಈ ವಿಶ್ವವಿದ್ಯಾಲಯದಲ್ಲಿ ಕೆಳಗೆ ವಿವರಿಸಿದ ಸಂಸ್ಥೆಗಳು ಅತಿ ಮಹತ್ವದವಾಗಿರುವವು.

೧. ಗ್ರಂಥ ಸಂಗ್ರಹಾಲಯವು.

ಈ ವಿಶ್ವವಿದ್ಯಾಲಯದಲ್ಲಿದ್ದ ಗ್ರಂಥಸಂಗ್ರಹಾಲಯದಲ್ಲಿ ೫ ಲಕ್ಷದ ಮೇಲೆ ಗ್ರಂಥಗಳಿರುವವು. ಅವುಗಳೊಳಗಿನ ಬೇಕಾದ ಪುಸ್ತಕಗಳು ವಿದ್ಯಾಲಯದೊಳಗಿನ ಬೇಕಾದ ವಿದ್ಯಾರ್ಥಿಗಳಿಗೆ ಮುಂಜಾನೆ ೮॥ ಯಿಂದ ರಾತ್ರಿ ೧೦॥ ಯ ವರೆಗೆ ಓದಲಿಕ್ಕೆ ದೊರೆಯುವವು. ವಿದ್ಯಾರ್ಥಿಗಳು ತಮ್ಮ ಅನುಕೂಲತೆಯ ಮೇರೆಗೆ ವಾಚನ ಮಂದಿರದಲ್ಲಾಗಲಿ, ಮನೆಯಲ್ಲಾಗಲಿ ಪುಸ್ತಕಗಳನ್ನು ಓದಬಹುದು. ಪುಸ್ತಕಗಳನ್ನು ಮನೆಗೆ ಒಯ್ಯಲಿಕ್ಕೆ ವಿದ್ಯಾರ್ಥಿಗಳಿಗೆ ಮೂಲತಃ ಪ್ರತಿಬಂಧವಿಲ್ಲ. ಈ ಗ್ರಂಥಸಂಗ್ರಹಾಲಯದ ಹೊರತು, ಎಂಜನೀಯರಿಂಗ, ಭೂಗರ್ಭಶಾಸ್ತ್ರ, ವೈದ್ಯಕ ಮೊದಲಾದ ವಿಷಯಗಳಿಗೆ ಸಂಬಂಧಿಸಿದ ಬೇರೆ ಬೇರೆ ಗ್ರಂಥಸಂಗ್ರಹಾಲಯಗಳಾದರೂ ಇರುವವ್ರ.

೨. ವ್ಯಾಯಾಮಶಾಲಾ.

ಈ ವಿದ್ಯಾಲಯದ ಅಧಿಕಾರಕ್ಕೊಳಪಟ್ಟ ಒಂದು ವಿಸ್ತೃತವಾದ ವ್ಯಾಯಾಮಶಾಲೆಯು ಇರುವದು. ಇದು ಮುಂಜಾನೆಯ ೯ ಗಂಟೆ

ಯಿಂದ ರಾತ್ರಿ ೧೧ ಗಂಟೆಯ ವರೆಗೆ ತೆರೆಯಲ್ಪಡುತ್ತಿದ್ದು, ಇದರಲ್ಲಿ ಎಷ್ಟೋ ವಿದ್ಯಾರ್ಥಿಗಳು ಅನೇಕ ತರದ ವ್ಯಾಯಾಮ ಮಾಡುವರು. ವಿದ್ಯಾರ್ಥಿಗಳ ಶಾರೀರಿಕ ಯೋಗ್ಯತೆಯನ್ನು ವಿಚಾರಿಸಿ, ಯಾರಾರಿಗೆ ಯಾವ ತರದ ಎಷ್ಟೆಷ್ಟು ವ್ಯಾಯಾಮವು ಹಿತಾವಹವೆಂಬದನ್ನು ಗೊತ್ತು ಪಡಿಸಲಿಕ್ಕೆ ಸಂಸ್ಥೆಯಿಂದ ಒಬ್ಬನಿಪುಣನಾದ ಡಾಕ್ಟರನ ಯೋಜನೆಯಾಗಿರುವದು. ಈ ವ್ಯಾಯಾಮ ಗೃಹವು ಎರಡು ಅಂತಸ್ತಿನದಿದ್ದು ಮೇಲಿನ ಅಂತಸ್ತಿನಲ್ಲಿ ವ್ಯಾಯಾಮದ ಅನೇಕ ಸಾಧನಗಳು ಇಡಲ್ಪಟ್ಟಿರುವವು. ಕೆಳಗಣ ಅಂತಸ್ತಿನಲ್ಲಿ ಕಾರಂಜಿ, ಪೌದು ಮುಂತಾದ ಸ್ನಾನದ ಅನುಕೂಲತೆಯು ಇರುವದು. ವಿದ್ಯಾಲಯದೊಳಗಿನ ಪ್ರತಿಯೊಬ್ಬ ವಿದ್ಯಾರ್ಥಿಯು ವಾರದಲ್ಲಿ ಕನಿಷ್ಠ ಪಕ್ಷಕ್ಕೆ ಎರಡು ತಾಸಾದರೂ ವ್ಯಾಯಾಮ ಮಾಡಬೇಕಾಗುವದು. ಹುಡುಗರಲ್ಲಿ ಆರೋಗ್ಯ, ಶಕ್ತಿ, ಸಾಹಸ, ಸೌಂದರ್ಯ, ಸಹನಶೀಲತೆ ಮುಂತಾದ ಗುಣಗಳುಂಟಾಗಿ, ಅವರು ಕರ್ತೃತ್ವ ಶಾಲಿಗಳೂ ಜಗತ್ತಿನಲ್ಲಿ ಮುಂದೆ ಬರುವ ಸಂಕಟಗಳಿಗೆ ಹಿಂಜರಿಯದವರೂ ಆಗ ಬೇಕೆಂಬದೇ ಇದರ ಉದ್ದೇಶವು.

ಇದಲ್ಲದೆ ವಿಶ್ವ ವಿದ್ಯಾಲಯದ ಅಂಕಿತದಲ್ಲಿ ಒಂದು ವಿಸ್ತೀರ್ಣವಾದ ಬಯಲು ಪ್ರದೇಶವಿರುವದು. ಅದರಲ್ಲಿ ಜಿಸ್ ಬಾಲ್, ಫುಟ್ ಬಾಲ್, ಟೆನಿಸ ಮೊದಲಾದ ಆಟಗಳನ್ನಾಡುವ ವ್ಯವಸ್ಥೆಯಿರುವದು. ವಿದ್ಯಾಲಯದ ಒಂದು ನೌಕಾಗೃಹವಾದರೂ ಇರುವದು. ಅದರಲ್ಲಿ ಸಣ್ಣ ಸಣ್ಣ ನಾವೆಗಳು ಇಡಲ್ಪಟ್ಟಿರುವವು. ವಿದ್ಯಾರ್ಥಿಗಳು ನದಿಗಳಲ್ಲಿ ಇವುಗಳ ಮೇಲಿಂದ ಸಣ್ಣ ಸಣ್ಣ ಪ್ರವಾಸಗಳನ್ನಾದರೂ ಮಾಡುವರು.

೩. ವಿದ್ಯಾರ್ಥಿಗಳಿಗೆ ಕೆಲಸವನ್ನು ದೊರಕಿಸಿ ಕೊಡುವ ಶಿಕ್ಷಕ ಮಂಡಲ.

ಅಮೇರಿಕೆಯೊಳಗಿನ ಎಷ್ಟೋ ವಿದ್ಯಾರ್ಥಿಗಳು ಸ್ವಂತ ಪರಿಶ್ರಮದಿಂದ ದ್ರವ್ಯಾರ್ಜನೆ ಮಾಡಿ ವಿದ್ಯಾಭ್ಯಾಸವನ್ನು ಸಾಗಿಸುತ್ತಾರೆ. ದ್ರವ್ಯಾರ್ಜನೆಯ ಕೆಲಸದಲ್ಲಿ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ಕೊಡಲಿಕ್ಕೂ ಸಹಾಯ ಮಾಡಲಿಕ್ಕೂ ವಿಶ್ವವಿದ್ಯಾಲಯದಲ್ಲಿ ಶಿಕ್ಷಕರದೊಂದು ಸಭೆ ಇರುವದು. ಈ ಸಭೆಯವರು ಪ್ರಯತ್ನ ಪೂರ್ವಕವಾಗಿ

ವಿದ್ಯಾರ್ಥಿಗಳಿಗೆ ನಾನಾತರದ ಕೆಲಸಗಳನ್ನು ಕೊಡಿಸುವರು. ಪರದೇಶದಿಂದ ಅಲ್ಲಿಗೆ ಹೋದ ಅನನುಕೂಲತೆ ಇದ್ದ ವಿದ್ಯಾರ್ಥಿಗಳಿಗೆ ಬಹುಶಃ ಕಲಿಸೋಣ, ಭಾಷಾಂತರ ಮಾಡೋಣ (ಕಲಿಸುವಿಕೆ) ನೋಟೀಸುಗಳನ್ನು ಬರೆಯೋಣ ಈ ಮುಂತಾದ ಕೆಲಸಗಳು ದೊರಕುತ್ತವೆ. ಇವಲ್ಲದೆ ಪರೀಕ್ಷೆಯಲ್ಲಿ ಉತ್ತೀರ್ಣರಾದ ಬಳಿಕ ವಿದ್ಯಾರ್ಥಿಗಳಿಗೆ ನಿರಂತರವಾದ ಕೆಲಸಗಳನ್ನು ಸಹ ಈ ಮಂಡಲದವರು ದೊರಕಿಸಿ ಕೊಡುವರು.

೪. ವಿದ್ಯಾರ್ಥಿಗಳ ಆರೋಗ್ಯ ರಕ್ಷಣದ ವ್ಯವಸ್ಥೆ.

ವಿದ್ಯಾರ್ಥಿಗಳ ಆರೋಗ್ಯ ರಕ್ಷಣದ ವ್ಯವಸ್ಥೆಗಾಗಿಯೂ ಅವರ ಮೇಲೆ ಯೋಗ್ಯ ಲಕ್ಷ್ಯವಿಡುವ ಸಲುವಾಗಿಯೂ ಸಂಸ್ಥೆಯಿಂದ ಒಬ್ಬ ಡಾಕ್ಟರನ ಯೋಜನೆಯಾಗಿರುವದೆಂದು ಮೇಲೆಯೇ ಹೇಳಿದೆ. ಅವನು ವಿದ್ಯಾರ್ಥಿಗಳ ಪ್ರಕೃತಿ ಪರೀಕ್ಷೆಯನ್ನು ಮಾಡುವನು. ಅವನ ಔಷಧಾಲಯವು ಪ್ರತಿ ದಿವಸ ಬಹಳ ವೇಳೆಯವರೆಗೆ ತೆರೆದಿರುವದರಿಂದ ವಿದ್ಯಾರ್ಥಿಗಳಿಗೆ ಬೇಕಾದಾಗ ಅಲ್ಲಿಗೆ ಹೋಗಿ ಪ್ರಕೃತಿ ತೋರಿಸಿ ಔಷಧವನ್ನು ತೆಗೆದುಕೊಳ್ಳಲು ಅನುಕೂಲವಿರುವದು.

೫. ವಿದ್ಯಾರ್ಥಿಗಳ ವಸತಿ.

ವಿಶ್ವ ವಿದ್ಯಾಲಯದ ವಿದ್ಯಾರ್ಥಿಗಳು ವಾಸಿಸುವದಕ್ಕೋಸ್ಕರ ಮೂರು ವಸತಿಗೃಹಗಳಿವೆ. ಪ್ರತಿಯೊಂದರಲ್ಲಿ ೬೦೦ ವಿದ್ಯಾರ್ಥಿಗಳು ಇರಲನುಕೂಲವಿರುತ್ತದೆ. ಒಂದೊಂದು ವಸತಿಗೃಹವು ೧೩೭ ಫೂಟು ಉದ್ದ, ೬೦ ಫೂಟು ಅಗಲ ಇದ್ದು ೧೦ ಅಂತಸ್ತಿನವರೆಗೆ ಎತ್ತರವಾಗಿರುವದು. ಪ್ರತಿಯೊಂದು ವಸತಿಗೃಹದಲ್ಲಿ ವಿದ್ಯುತ್ ಪ್ರಕಾಶ, ಉಗಿಯಿಂದುಂಟಾಗುವ ಕೃತ್ರಿಮ ಉಷ್ಣತೆ, ಟೆಲಿಫೋನ, ಸ್ನಾನಗೃಹ ಮುಂತಾದ ಎಲ್ಲ ತರದ ಅನುಕೂಲತೆಯು ಇರುವದು.

(ಸಶೇಷ)

ಕಾಲೇಜದ ವಿದ್ಯಾರ್ಥಿಗಳು ಅನುಸರಿಸಬಹುದಾದ ನಿಯಮಗಳ ಬಗ್ಗೆ ಸ್ಫುಟ ವಿಚಾರಗಳು.

ವಿದ್ಯಾರ್ಥಿಗಳೇ, ಈ ವರೆಗಿನ ನಿಮ್ಮ ಆಯುಷ್ಯದಲ್ಲಿ ಸ್ಥೂಲ ಮಾನದಿಂದ ಮೂರು ಭಾಗಗಳನ್ನು ಮಾಡಬಹುದು. ಮೊದಲನೆಯ ಭಾಗದಲ್ಲಿ ಅಂದರೆ ಮೊದಲಿನ ಐದು ವರ್ಷಗಳಲ್ಲಿ ನೀವು ನಿಮ್ಮ ಕಾಲವನ್ನೆಲ್ಲ ತಾಯಿ ತಂದೆಗಳ ಬಳಿಯಲ್ಲಿಯೇ ಕಳೆದಿರಿ. ನೀವು ಹಸಿದಾಗ ಯೋಗ್ಯವಾದ ಆಹಾರವನ್ನು ಕೊಟ್ಟು, ನಿಮ್ಮ ವಸ್ತ್ರ-ಪ್ರಾವರಣಗಳನ್ನು ಸ್ವಚ್ಛವಾಗಿಟ್ಟು, ನಿಮ್ಮ ಕೊರತೆಗಳನ್ನೆಲ್ಲ ಕಾಲಕಾಲಕ್ಕೆ ಪೂರಯಿಸಿ ಕೊಟ್ಟು ನಿಮ್ಮನ್ನು ಸಂರಕ್ಷಿಸಿ ಅವರು ನಿಮ್ಮ ಮೇಲೆ ಅನಂತ ಉಪಕಾರಗಳನ್ನು ಮಾಡಿದರು. ಆ ಕಾಲಕ್ಕೆ ನಿಮಗೆ ಯಾವದೊಂದು ತರದ ಭಯವು ಉತ್ಪನ್ನವಾದರೆ ಕೂಡಲೆ ನೀವು ಅವರನ್ನು ಆಶ್ರಯಿಸುತ್ತಿದ್ದಿರಿ. ಆ ಐದು ವರ್ಷದ ಮುಂದೆ ನಿಮ್ಮ ಆಯುಷ್ಯದ ಎರಡನೆಯ ಭಾಗವು ಪ್ರಾರಂಭವಾಯಿತೆಂದು ಹೇಳಬಹುದು. ಈ ಕಾಲದಲ್ಲಿ ಕೇವಲ ತಾಯಿ ತಂದೆಗಳ ಬಳಿಯಲ್ಲಿಯೇ ಇರದೆ, ಗುರುಗಳ ಆಧೀನದಲ್ಲಿಯೂ ಗೆಳೆಯರ ಸಹವಾಸದಲ್ಲಿಯೂ ಇರಹತ್ತಿದಿರಿ. ಆಗ ಗುರುಗಳು ಕಲಿಸಿದ ಪಾಠಗಳನ್ನು ಮನಸ್ಸುಗೊಟ್ಟು ಕಲಿತು ಪುನಃ ಮನೆಗೆ ಬಂದು ಮತ್ತೆ ನಿಮ್ಮ ತಾಯಿತಂದೆಗಳೊಡನೆ ಚಕ್ಕುಂದದಿಂದ ಕಾಲಹರಣ ಮಾಡುತ್ತಿದ್ದಿರಿ. ಈ ಅವಧಿಯಲ್ಲಿ ಶಾಲೆಯ ನಿಯಮಿತವೇಳೆಯನ್ನು ಬಿಟ್ಟು, ದಿವಸದೊಳಗಿನ ಉಳಿದ ಬಹು ದೊಡ್ಡದಾದ ಭಾಗವನ್ನು ಮನೆಯಲ್ಲಿಯೂ ಗೆಳೆಯರೊಡನೆಯೂ ಕಳೆಯುತ್ತಿದ್ದಿರಿ. ಈ ಪ್ರಕಾರ ನೀವು ಶಾಲೆಯೊಳಗಿನ ಅಭ್ಯಾಸಕ್ರಮವನ್ನು ಮುಗಿಸಿ ಮುಲಕೀ ಪರೀಕ್ಷೆ, ಪ್ರವೇಶ ಪರೀಕ್ಷೆಗಳಲ್ಲಿ ತೇರ್ಗಡೆ ಹೊಂದಿದ ನಂತರ ಈ ಕಾಲೇಜವನ್ನು ಪ್ರವೇಶಿಸಿದಿರಿ. ಈಗಿನದು ನಿಮ್ಮ ಆಯುಷ್ಯದೊಳಗಿನ ಮೂರನೆಯ ಭಾಗವು. ಈಗ್ಗೆ ನೀವಿರುವ ಈ ಕಾಲೇಜದೊಳಗಿನ ಶಿಕ್ಷಕರ ಮೇಲೆ ತಂದೆ-ತಾಯಿಗಳು ಹಾಗು ಶಿಕ್ಷಕರು ಇವರಿಬ್ಬರು ಮಾಡತಕ್ಕ ಕರ್ತವ್ಯಗಳ ಭಾರವು ಇರುವದು.

ಈ ಕಾಲವು ನೀವು ಹಿಂದೆ ಕಳೆದಕಾಲಕ್ಕಿಂತಲೂ ಬಹಳೇ ಮಹತ್ವದ್ದೂ ನಿಮಗೆ ಅತ್ಯಂತ ಕಲ್ಯಾಣಕರವಾದದ್ದೂ ಆಗಿರುತ್ತದೆ. ಯಾಕಂ

ದರೆ ಈ ಕಾಲದಲ್ಲಿ ಹಿಂದಿನ ನಿಮ್ಮ ಅನನುಕೂಲತೆಗಳೆಲ್ಲ ಇಲ್ಲದಂತಾಗಿರುವವು. ಸುಶಿಕ್ಷಿತರಾದ ತಂದೆ-ತಾಯಿಗಳನ್ನೂ, ಉತ್ತಮರಾದ ಶಿಕ್ಷಕರನ್ನೂ ಪಡೆಯುವದು ಬಹು ಸ್ವಲ್ಪ ಜನರ ದೈವದಲ್ಲಿರುತ್ತದೆ. ನಿಮ್ಮೊಳಗಿನ ಬಹಳ ವಿದ್ಯಾರ್ಥಿಗಳ ತಂದೆ ತಾಯಿಗಳು ಸುಧಾರಣೆಯಲ್ಲಿ ಕೆಲವಂಶದಿಂದ ಹಿಂದೆ ಇರಬಹುದು. ಅದು ಹೇಗೆಯೇ ಇರಲಿ ನಿಮ್ಮ ಆವಾಗಿನ ಶಿಕ್ಷಕರು ಹಾಗೂ ತಂದೆ ತಾಯಿಗಳು ಇವರಲ್ಲಿಯೂ ಈ ಕಾಲೇಜದೊಳಗಿನ ಶಿಕ್ಷಕರಲ್ಲಿಯೂ ಒಂದು ತರದ ಹೆಚ್ಚುಕಡಿಮೆಯು ಇರುವದೆಂಬದರಲ್ಲಿ ಸಂದೇಹವಿಲ್ಲ. ಈ ಶಿಕ್ಷಕರು ತಮಗೆ ದೊರೆತ ಉಚ್ಚಶಿಕ್ಷಣದ ಮೂಲಕ ಅವರಿಗಿಂತ ಹೆಚ್ಚು ಸುಧಾರಿಸಿದವರು ಇರುತ್ತಾರೆ.

ಮನುಷ್ಯನು ಚಿಕ್ಕವನಿರಲಿ, ದೊಡ್ಡವನಿರಲಿ ಅವನಲ್ಲಿ ಅನುಕರಣ ಮಾಡುವ ಶಕ್ತಿಯು ಹೆಚ್ಚು ಕಡಿಮೆ ಪ್ರಮಾಣದಿಂದ ಇದ್ದೇ ಇರುತ್ತದೆ. ಆದ್ದರಿಂದ ಅವನು ತನ್ನ ಸುತ್ತಲಿನ ಪ್ರಾಣಿಗಳ ಸ್ವಭಾವಮುಂತಾದವುಗಳನ್ನು ಅನುಕರಿಸುವನು. ಕಾರಣ ಮನುಷ್ಯನ ಸ್ಥಿತಿಯು ಉತ್ತಮವಾಗಬೇಕಾದರೆ ಅವನ ಪರಿಸ್ಥಿತಿಯು ಉತ್ತಮವಾದ್ದಿರಲಿಕ್ಕೆ ಬೇಕು. ವಿದ್ಯಾರ್ಥಿಗಳೇ, ನೀವು ಈ ಹೊತ್ತಿನವರೆಗೆ ಕಳೆದ ಕಾಲದ ಪರಿಸ್ಥಿತಿಯು ಬಹುಶ: ಉತ್ತಮವಿದ್ದಿಲ್ಲವೆಂದು ಹೇಳಬಹುದು. ಇಲ್ಲಿ ನೀವು ಒಳ್ಳೇ ಸುಸಿಕ್ಷಿತ ಜನರ ಸಹವಾಸದಲ್ಲಿ ಇರುವದರಿಂದಲೂ ಭಾವೀ ಆಯುಷ್ಯವನ್ನು ಸರಿಯಾಗಿ ಉಪಯೋಗಿಸಲು ಅವಶ್ಯವಾದ ಸದ್ಗುಣಗಳನ್ನು ಕಲಿಯಬೇಕಾದ್ದರಿಂದಲೂ ಈ ಕಾಲವು ನಿಮಗೆ ಬಹಳೇ ಮಹತ್ವದ್ದು.

ಮನುಷ್ಯನ ಚರಿತವು ಸುಧಾರಿಸಬೇಕಾದರೆ ಅದಕ್ಕೆ ಎರಡು ಉಪಾಯಗಳು ಇರುವವು. (೧) ಬಾಹ್ಯ ನಿಯಮವು. (೨) ಅಂತರ್ನಿಗ್ರಹವೂ ಪ್ರವರ್ತನವೂ. ನಿಮ್ಮ ಆಚರಣೆಯ ದೆಶೆಯಿಂದ ಶಿಕ್ಷಕರು ಗೊತ್ತು ಪಡಿಸಿದ ನಿಯಮಗಳು ಬಾಹ್ಯನಿಯಮದ ಸಾಧನಗಳು. ಆದರೆ ಸದಸದ್ವಿವೇಕ ಬುದ್ಧಿಯೂ, ಗ್ರಂಥಾವಲೋಕನವೂ ಸದಾಚಾರದ ಅಭಿರುಚಿಯೂ ಅಂತ:ಶಿಕ್ಷಣದ ಸಾಧನಗಳು. ಈ ಎರಡೂ ಪ್ರಕಾರದ ಸುಧಾರಣೆಗೆ ಈಗಿನ ನಿಮ್ಮ ಪರಿಸ್ಥಿತಿಯು ಒಳ್ಳೇ ಅನುಕೂಲವಾಗಿರುವದು.

ವಿದ್ಯಾರ್ಥಿಗಳೇ, ನೀವು ಭಾವೀ ರಾಷ್ಟ್ರವಾಗತಕ್ಕ ಚಿಕ್ಕ ಮುಕ್ಕಳ ಸುಧಾರಣೆಯನ್ನು ಮಾಡುವ ಉಚ್ಚಧ್ಯೇಯವುಳ್ಳವರಾಗಿ ಹೋಗಲಿಕ್ಕೆ ಇಲ್ಲಿ ಬಂದಿರುತ್ತೀರಿ. ಈ ನಿಮ್ಮ ಉಚ್ಚಧ್ಯೇಯವು ಕೊನೆಗಾಣಬೇಕಾದರೆ ನೀವು ಚಿಕ್ಕಮುಕ್ಕಳು ಅನುಕರಿಸುವದಕ್ಕೆ ತಕ್ಕವರೂ, ವ್ಯವಹಾರ ಚತುರರೂ, ಜ್ಞಾನವಂತರೂ ಆಗಬೇಕಾಗುತ್ತದೆ. ಈ ಕಾರಣದಿಂದ ಪೂರ್ವಕಾಲದಲ್ಲಿ ಎಷ್ಟೋ ಜನರು ಶ್ರಮಬಟ್ಟು ಅನುಭವದಿಂದ ಮಾಡಿದ ಕೆಲವು ಬಾಹ್ಯ ನಿಯಮಗಳನ್ನೂ, ಅಂತಃಸುಧಾರಣೆಗಾಗಿ ಹೇಳಿದ ಉಪದೇಶವನ್ನೂ ಅನುಸರಿಸುವದು ಅವಶ್ಯವು. ಈ ನಿಯಮಗಳನ್ನು ಮೇಲಧಿಕಾರಿಗಳಾದವರು ನಿಮ್ಮ ಮೇಲೆ ಅಧಿಕಾರ ನಡಿಸಬೇಕೆಂದಾಗಲಿ, ಸ್ವಂತ ಪ್ರಯೋಜನಕ್ಕಾಗಲಿ ಮಾಡಿರದೆ ಕೇವಲ ನಿಮ್ಮ ಹಿಂದಿನ ಕುಂದುಗಳು ಹೋಗಿ ನಿಮ್ಮಲ್ಲಿ ಪೂರ್ಣ ಸುಧಾರಣೆಯು ಆಗಬೇಕೆಂತಲೇ ಮಾಡಿರುವರು.

ಮನುಷ್ಯನ ಸುಧಾರಣೆಯು ಅವನ (೧) ಶರೀರ (೨) ಭಾಷಣ (೩) ವರ್ತನ (೪) ಮಾನಸಿಕ ವ್ಯಾಪಾರ ಇವುಗಳನ್ನು ಅವಲಂಬಿಸಿರುತ್ತದೆ. ಈ ವಿಷಯಗಳಲ್ಲಿ ಸುಧಾರಣೆಯಾಗಲಿಕ್ಕೆ ಬೇಕಾಗುವ ಕೆಲವು ಬಾಹ್ಯ ನಿಯಮಗಳನ್ನೂ, ಆತ್ಮನಿಗ್ರಹ ಪ್ರವರ್ತನಗಳ ಮಾರ್ಗಗಳನ್ನೂ ಸ್ಥಲ್ಪದರಲ್ಲಿ ವಿವೇಚಿಸುವೆನು.

೧. ಮನುಷ್ಯನ ಎಲ್ಲ ಸಂಗತಿಗಳಿಗೆ ಅಂದರೆ ಅವನ ವರ್ತನಕ್ಕೆ ಮತ್ತು ಮನೋವ್ಯಾಪಾರಗಳಿಗೆ ಸಹ ಅವನ ಶರೀರವೇ ಮುಖ್ಯ ಕಾರಣವಾಗಿರುವದು. ಇಂಥ ದೇಹವನ್ನು ನೀವು ಆಧೀನದಲ್ಲಿಟ್ಟುಕೊಳ್ಳುವದು ನಿಮ್ಮ ಆದ್ಯ ಕರ್ತವ್ಯವು. "ಶರೀರಮಾದ್ಯಂ ಖಲ್ವಧರ್ಮ ಸಾಧನಮ್" ಅಂದರೆ ಎಲ್ಲ ಪ್ರಕಾರದ ಪವಿತ್ರ ಕರ್ತವ್ಯಗಳಿಗೆ ಶರೀರವು ಮುಖ್ಯ ಸಾಧನವಾಗಿರುತ್ತದೆ. ಈ ದೇಹವನ್ನು ಆರೋಗ್ಯ ಸ್ಥಿತಿಯಲ್ಲಿಡಬೇಕಾದರೆ ಸ್ಥೂಲಮಾನದಿಂದ ಎರಡು ಉಪಾಯಗಳನ್ನು ಮಾಡಬಹುದು.

(೫) ಹೊಲಸು ತೆಗೆಯುವದು:–ಮನುಷ್ಯನಿಗೆ ಸಂಭವಿಸಬಹುದಾದ ರೋಗಗಳಲ್ಲಿ ಬಹಳ ರೋಗಗಳು ಕೇವಲ ಹೊಲಸಿನಿಂದಲೇ ಹುಟ್ಟುತ್ತವೆಂದು ಅನುಭವಿಕರಾದ ಡಾಕ್ಟರರು ಹೇಳುತ್ತಾರೆ. ಮೈಯಲ್ಲಿ ಹೊಲಸು ಇದ್ದರೆ ಒಂದು ಪ್ರಕಾರದಿಂದ ಮನಸಿಗೆ ಅಸಮಾಧಾ

ನವೆನಿಸುವದು. ಇಂಥ ಸ್ಥಿತಿಯಲ್ಲಿ ಯಾವ ಕಾರ್ಯವನ್ನೂ ಮಾಡುವದಕ್ಕೆ ಸೊಗಸಾಗುವದಿಲ್ಲ. ಈ ಹೊಲಸಿನಿಂದ ಒಂದು ಪ್ರಕಾರದ ವಿಷಯುಕ್ತ ವಾಯುಗಳು ಹುಟ್ಟಿ, ರಕ್ತದೊಳಗೆ ಬೆರೆತು ಮಿದುಳಿಗೆ ಮುಟ್ಟುವದರಿಂದ ಮನುಷ್ಯನ ಇಚ್ಛಾಶಕ್ತಿಯೂ, ಮನೋವಿಕಾರಗಳೂ, ವಿಚಾರಶಕ್ತಿಯೂ ಕೆಲವಂಶದಲ್ಲಿ ಕೆಟ್ಟು ಹೋಗುವವು. ಕಾರಣ ಇಂಥ ಅನಿಷ್ಟಕರವಾದ ಹೊಲಸನ್ನು ತೆಗೆದು ಹಾಕುವ ಪ್ರಯತ್ನ ಮಾಡುವದು ನಿಮ್ಮ ಕರ್ತವ್ಯವು. ಈ ಹೊಲಸು ಮೂರು ಬಗೆಯಿಂದ ತೋರಬಹುದು. (೧) ನಿಮ್ಮ ಶರೀರದೊಳಗಿನ ಹೊಲಸು ಹೊರಬೀಳುವಾಗ ಅದು ಶರೀರಕ್ಕೆ ಅಂಟಿಕೊಂಡು ಇರಬಹುದು. ಇಲ್ಲವೆ, (೨) ನೀವು ಹಾಕಿಕೊಂಡಿರುವ ವಸ್ತ್ರ ಮುಂತಾದವುಗಳಿಗೆ ಹತ್ತಿರಬಹುದು. ಅದೇ ರೀತಿ (೩) ನೀವು ಇರುವಂಥ ಕೋಣೆಯೊಳಗಿನ ಹೊಲಸಿನಿಂದ ಉಂಟಾಗುವ ಅದ್ರ್ರವಾಯುಗಳಿಂದಲೂ ಅವುಗಳಲ್ಲಿ ನೆಲೆಗೊಳ್ಳುವಂಥ ಕ್ರಿಮಿಗಳಿಂದಲೂ ಶರೀರದ ಸ್ಥಿತಿಯು ಕೆಟ್ಟು ಹೋಗಬಹುದು. ಅಂದಮೇಲೆ ಈ ಮೂರೂ ತರದ ಹೊಲಸುಗಳನ್ನು ಸ್ವಲ್ಪಾದರೂ ಆಲಸ್ಯ ಮಾಡದೆ ಹೊರಗೆ ಹಾಕಲಿಕ್ಕೆ ಬೇಕು.

ಮೈಯೊಳಗಿನ ಹೊಲಸನ್ನು ಕಳೆದು ಕೊಳ್ಳುವ ಉತ್ತಮ ಉಪಾಯವೆಂದರೆ ಸ್ನಾನವು. ಎಷ್ಟೋ ಜನರು ಸಬಕಾರವನ್ನು ಹಚ್ಚಿ ಮೇಲೆ ನೀರು ಸುರಿದುಕೊಂಡರೆ ಸಾಕೆಂದು ಹೇಳುವರು. ಇದು ನಿಜವಾದ ಸ್ನಾನವಲ್ಲ. ಹೊಲಸು ಇಲ್ಲದಂತಾಗಬೇಕೆಂಬ ಆಪೇಕ್ಷೆಯಿದ್ದರೆ, ಅದನ್ನು ನೀರಿನಿಂದಲೇ ಕಳೆದುಕೊಳ್ಳಲಿಕ್ಕೆ ಬೇಕು. ನೀರಿನಲ್ಲಿ ಮಲಿನ ಪದಾರ್ಥಗಳನ್ನು ಸಾವಕಾಶವಾಗಿ ಪೃಥಕ್ಕರಿಸಿ ತೊಳೆದುಬಿಡುವ ಗುಣವುಂಟು. ಇದಕ್ಕಾಗಿ ಇಡೀ ಶರೀರವನ್ನು ನೀರಿನಿಂದ ತಿಕ್ಕಿ ತಕ್ಕುದ್ದು. ಹೀಗೆ ತಿಕ್ಕಿ ಸ್ನಾನ ಮಾಡುವದರಿಂದ ಮಲವು ಹೋಗುವದಲ್ಲದೆ, ರಕ್ತಾಭಿಸರಣವು ಸಹ ಒತ್ತರದಿಂದ ನಡೆಯುವದು. ತುಪ್ಪು ಎಣ್ಣೆ ಮುಂತಾದವುಗಳು ಮೈಗೆ ಹತ್ತಿದ್ದರೆ ಪ್ರಥಮತಃ ಸೀಗೀಕಾಯಿಯನ್ನು ಉಪಯೋಗಿಸಲಿಕ್ಕೇ ಬೇಕಾಗುತ್ತದೆ. ಅದರ ನಂತರ ಮೇಲೆ ಹೇಳಿದಂತೆಯೇ ಸ್ನಾನವನ್ನು ಮಾಡಬೇಕು. ಬಿಸಿನೀರಿಗಿಂತಲೂ ತಣ್ಣೀರು ಸ್ನಾನಮಾಡುವದು (ಚಳಿಹತ್ತದಂಥ ಸ್ಥಳದಲ್ಲಿ)

ಹಿತಕರವು. ಈ ಪ್ರಕಾರವಾಗಿ ಸ್ನಾನಮಾಡಿದರೆ ಶರೀರವು ಸ್ವಚ್ಛವಾಗುವದಲ್ಲದೆ, ಸ್ನಾನವಾದ ಕೆಲವು ಹೊತ್ತಿನವರೆಗೆ ಮನಸ್ಸು ಸ್ವಚ್ಛವಾದದ್ದೂ, ಆನಂದಮಯವಾದದ್ದೂ ಇರುವದು; ಹಾಗು ಪವಿತ್ರವಾದ ಮನೋವೃತ್ತಿಯು ಮೈಯನ್ನೆಲ್ಲ ವ್ಯಾಪಿಸುವದು.

ನೀವು ದಿನಾಲು ಹಾಕಿಕೊಳ್ಳುವ ಅಂಗಿಗಳಲ್ಲಿ ಮುಖ್ಯವಾಗಿ ನಿಮ್ಮ ಮೈಗೆ ಹತ್ತಿರುವಂಥ ಒಳಗಿನ ಅಂಗಿಯು ವಿಶೇಷವಾಗಿ ಸ್ವಚ್ಛವಿರಲಿಕ್ಕೆ ಬೇಕು. ಮೇಲೆ ಬೇಕಾದಷ್ಟು ಸ್ವಚ್ಛ ಮತ್ತು ಚಂದವಾದ ಅರಿವೆಗಳನ್ನು ಹಾಕಿಕೊಂಡರೂ ಒಳಗೆ ಹೊಲಸಾದ ಅಂಗಿಯು ಇದ್ದರೆ ಆರೋಗ್ಯತೆಯ ದೃಷ್ಟಿಯಿಂದ ಬಹಳೇ ಅಹಿತವಾಗುವದು. ಆದ್ದರಿಂದ ಆ ಅಂಗಿಯನ್ನು ಮೇಲಿಂದ ಮೇಲೆ ಒಳ್ಳೇ ರೀತಿಯಿಂದ ಒಗೆಯಬೇಕು. ಅದನ್ನು ಅಗಸರಿಗೆ ಕೊಡುವದಕ್ಕಿಂತ ನೀವೇ ಒಗೆದುಕೊಳ್ಳುವದು ಲೇಸು ಯಾಕಂದರೆ, ಮೇಲಿಂದ ಮೇಲೆ ಕೊಕ್ಕ ಕೊಟ್ಟು ಒಗಿಸುವಷ್ಟು ನಿಮ್ಮಲ್ಲಿ ಸಾಂಪತ್ತಿಕ ಸ್ಥಿತಿಯು ಇಲ್ಲ. ಕೈಲಾಸವಾಸಿಗಳಾದ ಶ್ರೀಯುತ ಆಗರಕರ ಮಹಾಭಾಗರವರು ತಾವು ವಿದ್ಯಾರ್ಥಿದಶೆಯಲ್ಲಿದ್ದಾಗ ತಮ್ಮ ಅಂಗಿಯನ್ನು ತಾವೇ ಒಗೆದುಕೊಳ್ಳುತ್ತಿದ್ದರು. ಅವರ ಈ ಅಭಿನಂದನೀಯವಾದ ಪದ್ಧತಿಯನ್ನು ನೀವೆಲ್ಲರೂ ಅನುಸರಿಸಿದರೆ ನಿಮಗೆ ಬಹಳೇ ಹಿತವಾಗುವದು.

ಶರೀರವನ್ನು ಆರೋಗ್ಯಾವಸ್ಥೆಯಲ್ಲಿ ಇಡಲಿಕ್ಕೆ ಮತ್ತೊಂದು ಮಹತ್ವದ ಸಾಧನವೆಂದರೆ ಪುಷ್ಟಿಕರವಾದ ಆಹಾರವು. ಈ ಆಹಾರದ ಬಗ್ಗೆ ನಿಮ್ಮ ಶಿಕ್ಷಕರು ಬೋರ್ಡಿಂಗದೊಳಗೆ ಯಥಾಯೋಗ್ಯವಾದ ವ್ಯವಸ್ಥೆಯನ್ನು ಇಡುವರು. ಈ ವಿಷಯದಲ್ಲಿ ನಿಯಮಿತತನವೂ ಮಿತಭೋಜನವೂ ಅವಶ್ಯವಾದವು. ಹಬ್ಬದ ದಿವಸ ಸಹ ಅಳತೆಗೆಟ್ಟು ಉಣ್ಣಬಾರದು. ಅದರಿಂದ ತಾತ್ಕಾಲಿಕ ಸುಖವೆನಿಸಿದರೂ ಅಪಾಯಗಳು ಬಹಳ ದಿವಸಗಳ ತನಕ ನಿಲ್ಲುವವು.

ತಕ್ಕ ಆಹಾರದಂತೆಯೇ ಯೋಗ್ಯವಾದಂಥ ವಿಹಾರ ಅಥವಾ ವ್ಯಾಯಾಮವು ಮಹತ್ವವಾದದ್ದಿರುವದು. ಈ ವ್ಯಾಯಾಮದಿಂದ ಶರೀರದೊಳಗಿನ ಕೊಲಸು ಹೊರಟು ಹೋಗಿ ರಕ್ತವು ಶುದ್ಧವಾಗುವದು. ಶರೀರದೊಳಗಿನ ಅವಯವಗಳ ಕ್ರಿಯೆಗಳು ಒತ್ತರದಿಂದ ಸಾಗುವವು.

ಇದಲ್ಲದೆ ಮಿದುಳು ಕೂಡ ಉತ್ತಮ ಸ್ಥಿತಿಯಲ್ಲಿರುವದು. ಡ್ರಿಲ್, ಜಿಮ್‌ನ್ಯಾಸ್ಟಿಕ್ಸ್ ಮುಂತಾದವುಗಳಿಂದ ಶರೀರಕ್ಕೆ ವ್ಯಾಯಾಮವಾಗುತ್ತಿದ್ದರೂ ಆಟಗಳಿಂದಾಗುವಂಥ ವ್ಯಾಯಾಮವು ಅದಕ್ಕಿಂತ ಹೆಚ್ಚು ಹಿತಕರವು. ಆಟಗಳಿಂದ ಮನಸ್ಸಿನಲ್ಲಿಯೂ, ಮೈಯಲ್ಲಿಯೂ ಆನಂದದ ಸ್ಫೂರ್ತಿಯಾಗುವದರಿಂದ ಅವುಗಳಿಂದಾಗುವ ಲಾಭವು ಅಷ್ಟಿಷ್ಟೆಂದು ಹೇಳಲಾಸಲ್ಲ. ನಮ್ಮ ನೆರೆಯಲ್ಲಿರುವ ಹೈಸ್ಕೂಲಿನ ಆಟದ ಬೈಲನ್ನು ನೋಡಿದರೆ ನನಗೆ ಒಳ್ಳೇ ಆನಂದವೆನಿಸುತ್ತದೆ. ಅಲ್ಲಿಯ ವಿದ್ಯಾರ್ಥಿಗಳು ಚಕ್ಕಂದದಿಂದ ಆಡುವಾಗ ನನಗೂ ಸ್ವಲ್ಪ ಆಡಬೇಕೆಂದೆನಿಸುತ್ತದೆ. ನಿಮಗೂ ಅಂಥ ಬೈಲನ್ನು ದೊರಕಿಸಿಕೊಡುವಬಗ್ಗೆ ನಿಮ್ಮ ಮೇಲಧಿಕಾರಿಗಳು ಪ್ರಯತ್ನವನ್ನು ನಡಿಸಿರುವರು. ಆದರೂ ಸದ್ಯಕ್ಕೆ ನಿಮಗೆ ಉಪಲಬ್ಧವಿರುವಂಥ ಸ್ಥಳದ ಉಪಯೋಗವನ್ನು ಹೆಚ್ಚಾಗಿ ಮಾಡಿಕೊಂಡು ಆಟಗಳನ್ನಾಡಿ ನೀವು ಸುದೃಢರಾದದ್ದನ್ನು ನೋಡಿದರೆ ನನಗೆ ಪರಮಾನಂದವಾಗುವದು.

ತಕ್ಕ ಆಹಾರ, ಯೋಗ್ಯವಾದ ವ್ಯಾಯಾಮ, ಮತ್ತು ಆನಂದಮಯವಾದಂಥ ಸ್ನಾನ ಈ ಮೂರು ಸಾಧನಗಳಿಂದ ಶರೀರವನ್ನು ಚಲೋ ಅವಸ್ಥೆಯಲ್ಲಿ ಇಟ್ಟುಕೊಂಡರೂ, ಅವಿಚಾರದ ಚಟಗಳಲ್ಲಿ ಆಸಕ್ತರಾದರೆ ಬಂಗಾರದಂಥ ಶರೀರವು ನೋಡ ನೋಡುವಷ್ಟರಲ್ಲಿ ಕೆಟ್ಟು ಹೋಗಿ, ಮೇಧಾಶಕ್ತಿಯೂ, ಸದ್ಗುಣವೃತ್ತಿಯೂ, ಭಾವೀ ಆಯುಷ್ಯದಲ್ಲಿ ಸಂಪತ್ತಿ ಲೌಕಿಕಗಳನ್ನು ಪಡೆಯುವಂಥ ಸಾಮರ್ಥ್ಯವೂ ಕ್ರಮವಶಃ ಕಳೆಗುಂದುತ್ತ ನಡೆಯುವವು. ಈ ವಿಷಯದಲ್ಲಿ ವಿಸ್ತಾರವಾಗಿ ಮಾತಾಡುವದು ಅನವಶ್ಯಕವಾಗಿರುವದು. ಚಹಾಪಾನ, ಧೂಮ್ರಪಾನ ಮತ್ತು ಇತರ ಘಾತುಕ ಚಟಗಳಿಂದ ತತ್ಕಾಲಕ್ಕೆ ಸುಖವೆನಿಸುತ್ತಿದ್ದರೂ, ಅವುಗಳಿಂದಾಗುವ ಅಂತಿಮ ಪರಿಣಾಮವು ದುಃಸಹವಾದದ್ದೂ, ಚಿತ್ತವನ್ನು ತಳಮಳಗೊಳಿಸುವಂಥಾದ್ದೂ ಇಡೀ ಆಯುಷ್ಯದಲ್ಲೆಲ್ಲ ಪಶ್ಚಾತ್ತಾಪಪಡಿಸುವಂಥಾದ್ದೂ ಇರುವದು. ಅವುಗಳ ದುಷ್ಪರಿಣಾಮಗಳನ್ನು ಅರಿತು ಅವು ನಿಮ್ಮ ಸಮೀಪಕ್ಕೆ ಬರದಂತೆ ನೀವು ಎಚ್ಚರದಿಂದಿರತಕ್ಕದ್ದು. ಅಖಂಡವಾದಂಥ ಸುಖಾನಂದಗಳು ಸಿಗಬೇಕಾದರೆ, ಚಂದವಾದ ಆಟಗಳಲ್ಲಿ ಯಾವಾಗಲೂ ತೊಡಗಿ ಇರ್ರಿ. ಗೆಳೆಯರ

ಕೂಡ ಪ್ರೇಮ ಭಾಷಣವನ್ನು ಮಾಡುತ್ತಿರ್ರಿ. ಅದರಂತೆಯೇ ಮನೋವ್ಯಾಪಾರದ ವಿಷಯದಲ್ಲಿ ಮುಂದೆ ಸೂಚನೆ ಮಾಡಿದಂತೆ ಸತ್ಪುರುಷರ ಚರಿತ್ರಗಳನ್ನೂ, ಇತಿಹಾಸವನ್ನೂ, ಕನ್ನಡ ವಾಙ್ಮಯವನ್ನೂ, ಗಣಿತ ಶಾಸ್ತ್ರ, ಶಾಸ್ತ್ರೀಯ ವಿಷಯ ಮುಂತಾದ ವಿಷಯಗಳನ್ನೂ ಅಧ್ಯಯನ ಮಾಡಿರಿ. ಈ ಅಧ್ಯಯನದಿಂದಲೂ, ಆ ಆಟಗಳಿಂದಲೂ ಆ ಪ್ರೇಮದ ಭಾಷಣದಿಂದಲೂ ಆಗುವಂಥ ಸುಖಕ್ಕೂ ದುರ್ವ್ಯಸನಗಳಿಂದ ಆಗುವ ಸುಳ್ಳುಸುಖಕ್ಕೂ ಭೂಮ್ಯಾಕಾಶಗಳಷ್ಟು ಅಂತರವಿದೆ. ಹಾಗು ಅವುಗಳಿಂದಾಗುವ ಅಂತಿಮ ಪರಿಣಾಮಗಳಲ್ಲಿಯೂ ಅದಕ್ಕೂ ಹೆಚ್ಚಿನ ಅಂತರವು ಇರುವದು.

ವಿದ್ಯಾರ್ಥಿಗಳೇ, ನಿಮ್ಮ ಶರೀರವನ್ನು ತಕ್ಕ ಸ್ಥಿತಿಯಲ್ಲಿ ಕಾದಿಡುವ ವಿಷಯವಾಗಿ ಮಹತ್ವದ ಸೂಚನೆಗಳು ಮಾಡಲ್ಪಟ್ಟವು. ಆದರೆ ಅದೇ ಹೊತ್ತಿಗೆ ಒಂದು ಸಣ್ಣ ಮಾತನ್ನು ನಿಮಗೆ ಹೇಳುತ್ತೇನೆ. ಶರೀರವು ತಕ್ಕಸ್ಥಿತಿಯಲ್ಲಿರಬೇಕಾದರೆ ನೀವು ವಾಸವಾಗಿರುವಂಥ ಕೋಣೆಯೊಳಗಿನ ಹೊಲಸು ದೂರವಿರಬೇಕೆಂಬದರ ಬಗ್ಗೆ ಮೊದಲು ಸೂಚಿಸಿರುತ್ತದಷ್ಟೇ. ಆ ನಿಮ್ಮ ಕೊಣೆಯಲ್ಲಿ ಉಗುಳು, ಹಣ್ಣುಗಳ ಸಿಪ್ಪೆ, ನೀರು, ಧೂಳಿ, ಕಸ-ಕಡ್ಡಿ ಮುಂತಾದವುಗಳು ಇರದಂತೆ ಎಚ್ಚರಪಡಬೇಕು. ಅವುಗಳಿಂದ ವಿಷಯುಕ್ತವಾಯುಗಳು ಹುಟ್ಟುವವಲ್ಲದೆ, ಮಲೇರಿಯಾ, ಕ್ಷಯರೋಗ ಮುಂತಾದ ರೋಗಗಳಿಗೆ ಕಾರಣವಾದ ಕ್ರಿಮಿಗಳು ಸಹ ಹುಟ್ಟುವವು. ಚೇಳುಗಳು, ಇಲಿಗಳು, ಇತರ ಹುಳಗಳು ಅಲ್ಲಿ ಅತ್ತಿತ್ತ ವಾಸವಾಗಿದ್ದು ಅಪಾಯಮಾಡುವವು. ಇಲಿಗಳ ಬಗ್ಗೆ ಈ ದಿವಸಗಳಲ್ಲಿ ಬಹಳೇ ಎಚ್ಚರಗೊಳ್ಳಬೇಕೆಂದು ಹೇಳುವ ಕಾರಣವಿಲ್ಲ. ನಿಮ್ಮ ಕೋಣೆಯನ್ನು ಸ್ವಚ್ಛವಿಟ್ಟಂತೆಯೇ, ಅಲ್ಲಿ ಬೆಳಕು, ಹವೆಗಳು ಸಿಗುವಂತೆ ವ್ಯವಸ್ಥೆಯನ್ನಿಡಿರಿ. ಹಾಗೂ ನಿಮ್ಮ ಪುಸ್ತಕಗಳನ್ನೂ, ಪೆಟ್ಟಿಗೆಗಳನ್ನೂ, ಇತರ ಸಾಮಾನುಗಳನ್ನೂ ಕ್ರಮದಿಂದ ಇಡಿರಿ. ಅಂದರೆ ಶರೀರವು ತಕ್ಕಸ್ಥಿತಿಯಲ್ಲಿ ಇರುವದಲ್ಲದೆ ಬೆಳಕಿನಿಂದಲೂ, ವ್ಯವಸ್ಥಿತ ಕ್ರಮದಿಂದಲೂ ಮನಸ್ಸು ಆನಂದಗೊಳ್ಳುವದು; ಮತ್ತು ಯಾವದೊಂದು ಕೆಲಸವನ್ನು ಮಾಡಲಿಕ್ಕೆ ಹುರುಪು ಹುಟ್ಟುವದು. ನಿಮ್ಮ ಮೈಯಲ್ಲಿ ಹೊಸಶಕ್ತಿಯು ಉಂಟಾಗುವದು.

೨. ಮನುಷ್ಯನು ಸುಶಿಕ್ಷಿತನಿದ್ದರೂ ಸಾಧಾರಣವಾಗಿ ಎರಡು ಪ್ರಸಂಗಗಳಲ್ಲಿ ಅಪಶಬ್ದಗಳು ಅವನ ಬಾಯಿಂದ ಹೊರಬೀಳುವವು. ಸಿಟ್ಟುಬಂದಾಗ, ಮತ್ತು ಚೇಷ್ಟೆಯ ಪ್ರಸಂಗದಲ್ಲಿ. ಮನುಷ್ಯನಿಗೆ ಸಿಟ್ಟು ಬಂದಾಗ ಕೆಟ್ಟ ಶಬ್ದಗಳನ್ನು ಉಚ್ಚರಿಸ ಕೂಡದೆಂದು ಅವನಿಗೆ ತಿಳುವಳಿಕೆ ಇದ್ದರೂ ಸಹಜವಾಗಿ ಅವನ ಬಾಯಿಂದ ಅಲ್ಲದ ಶಬ್ದಗಳು ಬರುವವು. ಅದರಿಂದ ಕೆಟ್ಟ ಪರಿಣಾಮವಾಗುವದು. ಆದ್ದರಿಂದ ಅಂಥ ಪ್ರಸಂಗದಲ್ಲಿ ಶಾಂತಮನಸ್ಸಿನಿಂದ ಕೋಪವನ್ನು ನುಂಗಿಕೊಂಡು ಆತ್ಮಸಂಯಮನವಾಡಿ ತನ್ನ ನುಡಿಯನ್ನು ಸುಧಾರಿಸುವದು ಉತ್ತಮವು. ಒಂದಾವರ್ತಿ ಸಿಟ್ಟನ್ನು ಬಿಗಿಹಿಡಿಯಲಿಕ್ಕೆ ಬಾರದಿದ್ದರೂ, ಏನೂ ಮಾತಾಡದೆ ಇರುವದು, ಅಥವಾ ಆಸ್ಥಳವನ್ನೇ ಬಿಟ್ಟು ಹೋಗುವದು, ಮತ್ತು ತನ್ನ ಮನಸ್ಸನ್ನು ಎರಡನೆಯ ವಿಷಯದ ಕಡೆಗೆ ತಿರುಗಿಸುವದು ಲೇಸು.

ಚೇಷ್ಟೆಮಾಡುವ ಪ್ರಸಂಗ ಬಂದಲ್ಲಿ ಅಪಶಬ್ದಗಳು ಬಾಯಿಯಿಂದ ಹೊರಬಿದ್ದು ಕೋಮಲ ಮನಸ್ಸಿನವರ ಮೇಲೆ ವಿಪರೀತ ಪರಿಣಾಮವನ್ನುಂಟುಮಾಡುವವು. ಒಮ್ಮೊಮ್ಮೆ ಕೆಟ್ಟ ಮನೋಭಾವನೆಗಳನ್ನು ಹುಟ್ಟಿಸುವವು. ವಿದ್ಯಾರ್ಥಿಗಳೇ, ನೀವು ಮಾಸ್ತರರಾಗಿ ಊರ ಸದ್ಗೃಹಸ್ಥರನ್ನು ಮೆಚ್ಚಿಸಿಕೊಂಡು ಕೆಲಸ ಮಾಡಬೇಕಾಗಿರುವದು. ನಿಮಗೆ ಇಂಥ ನುಡಿಗಳು ಸ್ವಲ್ಪವೂಸಲ್ಲವು. ಆದ್ದರಿಂದ ಚೇಷ್ಟೆಮಾಡುವ ಪ್ರಸಂಗಬಂದರೂ ನಾಲಿಗೆಯನ್ನು ಬಿಗಿಹಿಡಿಯಲಿಕ್ಕೆ ಕಲಿಯಿರಿ. ಚೇಷ್ಟೆಮಾಡುವ ಚಟವು ಒಮ್ಮೆ ಹತ್ತಿತೆಂದರೆ ವರ್ಷದೊಳಗೆ ಹುಡುಗರಿಗೆ ಕಲಿಸುವಾಗಾದರೂ ಆ ಸ್ವಭಾವವು ತಲೆದೋರುವದು. ಇದರಿಂದ ಹುಡುಗರಲ್ಲಿ ಶಿಕ್ಷಕರ ಬಗ್ಗೆ ಆದರ ಬುದ್ಧಿಯು ಉತ್ಪನ್ನವಾಗದೆ, ಅವರ ಬಗ್ಗೆ ಅನಾದರವು ಉಂಟಾಗಿ ವರ್ಷದಲ್ಲಿ ಹುಡುಗಾಟಿಕೆಯು ನಡೆಯುವದು. ಶಿಸ್ತಿನ ವರ್ತನವು ಶಾಲಾಧ್ಯಾಪಕರಿಗೆ ಎಷ್ಟು ಮಹತ್ವದ್ದಿರುವದೆಂಬದನ್ನು ನೀವು ಇಂದಿನಿಂದಲೇ ಅರಿತುಕೊಳ್ಳಲಿಕ್ಕೆ ಯತ್ನ ಮಾಡಬೇಕು.

ಇನ್ನು ಸತ್ಯಾಸತ್ಯಗಳನುಡಿಯ ವಿಷಯದಲ್ಲಿ ನೀವು ಅನುಸರಿಸ ತಕ್ಕ ನಿಯಮಗಳು ವರ್ತನದ ಉಲ್ಲೇಖದಲ್ಲಿ ಸೂಚಿಸಲ್ಪಡುವವು.

೩ ವಿದ್ಯಾರ್ಥಿಗಳೇ, ನೀವು ಭಾವೀ ರಾಷ್ಟ್ರವಾಗತಕ್ಕ ಬಾಲಕ ಸಮಾಜವನ್ನು ಸುಧಾರಿಸತಕ್ಕವರಿರುವದರಿಂದ ನಿಮ್ಮ ವಿದ್ಯಾರ್ಥಿಗಳಿಗೆ ಸ್ವಂತ ಆಚರಣೆಯಿಂದ ನೀವು ಮಾದರಿಯನ್ನು ಹಾಕಿಕೊಡಬೇಕಾಗಿರುವದು; ಇಷ್ಟೇ ಅಲ್ಲ. ಊರೊಳಗಿನ ಜನರಾದರೂ ನಿಮ್ಮನ್ನು ಅನುಕರಿಸುವಂತೆ ನೀವು ಯೋಗ್ಯರಾಗಿರಬೇಕು. ಆದ್ದರಿಂದ ನಿಮ್ಮ ವರ್ತನವು ಯಾವಾಗಲೂ ಶುದ್ಧವಾದದ್ದೂ ಯೋಗ್ಯವಾದದ್ದೂ ಇರಲಿಕ್ಕೆ ಬೇಕು. ನೀವು ಸದ್ವರ್ತನವುಳ್ಳವರೂ ಸಮಾಜಕ್ಕೆ ತಕ್ಕವರೂ ಆಗಬೇಕೆಂಬ ಉದ್ದೇಶದಿಂದಲೇ ನಿಮ್ಮನ್ನು ಇಲ್ಲಿ ಇಟ್ಟುಕೊಂಡು ಉಚ್ಚತರದ ಶಿಕ್ಷಣ ಹೊಂದಿದ ಅಧ್ಯಾಪಕರನ್ನಿಟ್ಟು ಹಲವು ಕಟ್ಟಳೆಗಳಿಂದ ನಡಿಸಿಕೊಳ್ಳುವರು; ಅಲ್ಲದೆ ಬೇರೆ ಉದ್ದೇಶವಿಲ್ಲ.

ನೀವು ಅಧ್ಯಯನ ಮಾಡುವ ಈ ಶಿಕ್ಷಣಾಲಯದ ಬಗ್ಗೆ ಹಿತವನ್ನು ಚಿಂತಿಸುವದೂ, ಅಭಿಮಾನಪಡುವದೂ ನಿಮ್ಮ ಪವಿತ್ರ ಕರ್ತವ್ಯವಾಗಿರುವದು. ಅಂದರೆ ಕೇವಲ ಸ್ವಾರ್ಥವಿಚಾರವು ಕಡಿಮೆಯಾಗಿ ನೀವು ಯಾವ ಸಮಾಜದ ಅಥವಾ ಸಂಸ್ಥೆಯ ಘಟಕರಾಗಿರುವಿರೋ ಆ ಸಂಸ್ಥೆಯ ವಿಷಯದಲ್ಲಿಯ ಆಸ್ಥೆಯು ನಿಮ್ಮಲ್ಲಿ ತಳವೂರುವದು ಅವಶ್ಯವು. ಈ ಗುಣವನ್ನು ಇಲ್ಲಿ ಕಲಿತುಹೋದರೆ ನೀವು ಮುಂದೆ ಕೆಲಸಮಾಡತಕ್ಕ ಸಾಲೆಯನ್ನು ನಿಮ್ಮ ಸದ್ವರ್ತನದಿಂದಲೂ, ಪರಿಶ್ರಮದಿಂದಲೂ ಘನತೆಗೇರಿಸುವಿರೆಂಬದರಲ್ಲಿ ಸಂಶಯವಿಲ್ಲ. ತನ್ನ ವರ್ಗವು ಸುಖರೂಪದಿಂದಿದ್ದರಾಯಿತು; ಸಾಲೆಯ ಹಿತದ ಬೇರೆ ವಿಷಯಗಳ ಕಡೆಗೆ ನಾನೇಕೆ ಲಕ್ಷ ಕೊಡಬೇಕು; ಎಂದು ಪ್ರತಿಯೊಬ್ಬ ಶಿಕ್ಷಕನು ಅನ್ನಹತ್ತಿದರೆ ಬರೇ ದಿನಗೂಲಿಯವನಂತೆ ನಿಮ್ಮ ಕೆಲಸವು ಯಾಂತ್ರಿಕವಾಗಿ ಸಾಲೆಯಲ್ಲಿ ಸಾಮೂಹಿಕ ಪ್ರಯತ್ನದ ಫಲವಾಗದೆ ನಿಮ್ಮ ಸ್ವಂತ ಕೆಲಸವಾದರೂ ಕೆಡುವದು. ಯಾವದೊಂದು ಸಂಸ್ಥೆಯ ಜೀವಿತಕ್ಕೆ ಸಂಯುಕ್ತ ಪ್ರಯತ್ನವೂ, ಒಕ್ಕಟ್ಟಿನ ಆಸ್ಥೆಯೂ, ಏಕಕೇಂದ್ರೀಭೂತವಾದ ವಿಚಾರಗಳೂ ಅವಶ್ಯವಾದವುಗಳು. ಇವುಗಳನ್ನು ನೀವು ಕಲಿಯಬೇಕಾದರೆ ಈ ಕಾಲೇಜದಲ್ಲಿರುವಾಗಲೇ ಅದರ ಹಿತವ ಪ್ರತಿಪಾದಿಸುವ ಮಾತಿನಲ್ಲಿ ನಿಮ್ಮಿಂದಾದಷ್ಟು ಸಹಾಯವನ್ನು ನೀವು ಮಾಡತಕ್ಕದ್ದು. ಅದು ಕೇವಲ ಭೋಜನಾಲಯದ ಕೆಲಸವಿರಲಿ; ಶಿಕ್ಷಣಾ

ಲಯವನ್ನು ಅಲಂಕರಿಸುವ ಕೆಲಸನಿರಲಿ; ಅವುಗಳ ಪರಿಸ್ಥಿತಿಯನ್ನು ಸ್ವಚ್ಛವಾಗಿಯೂ ಅಂದವಾಗಿಯೂ ಇಡುವ ಕೆಲಸವಿರಲಿ ಆ ಕೆಲಸವು ತನ್ನದೇ ಎಂದು ಭಾವಿಸಿ ಪ್ರತಿಯೊಬ್ಬ ವಿದ್ಯಾರ್ಥಿಯು ಕೈಲಾದ ಮಟ್ಟಿಗೆ ಸಹಾಯವನ್ನು ಮಾಡತಕ್ಕದ್ದು. ಹೊಲಸು, ಕಸಕಡ್ಡಿ, ಅವ್ಯವಸ್ಥೆ ಮುಂತಾದವುಗಳು ದೃಷ್ಟಿಗೆ ಬಿದ್ದರೆ ಅವುಗಳನ್ನು ದೂರ ಮಾಡಲಿಕ್ಕೆ ತನ್ನಿಂದಾಗುವಂತಿದ್ದರೆ ತಾನು ಮಾಡುವದು ಲೇಸು. ಕನಿಷ್ಠ ಪಕ್ಷಕ್ಕೆ ಆ ಮಾತುಗಳನ್ನು ಮೇಲಧಿಕಾರಿಗಳ ದೃಷ್ಟಿಗೆ ತರುವ ಕೆಲಸವನ್ನಾದರೂ ಮಾಡತಕ್ಕದ್ದು.

ವಿದ್ಯಾರ್ಥಿಗಳೇ, ಈ ಶಿಕ್ಷಣಾಲಯದಲ್ಲಿ ಕಲಿಯಲಿಕ್ಕಾಗಿ ಅನೇಕ ಧರ್ಮದವರೂ, ಜ್ಞಾತಿಯವರೂ ಬಂದಿರುವರು. ನಿಮ್ಮಲ್ಲಿ ಮುಸಲ್ಮಾನರೂ, ಬ್ರಾಹ್ಮಣರೂ, ಲಿಂಗಾಯತರೂ ಮತ್ತು ಇತರ ಜಾತಿಯವರೂ ಇರುವರು. ಆದರೆ ಇವರ ನಡುವೆ ದ್ವೇಷವು ಇಲ್ಲವೆಂದು ನಾವು ಒಪ್ಪಿದರೂ, ಒಂದು ಪ್ರಕಾರದ ಅನಾಸ್ಥೆಯೂ ಅನಾದರವೂ ಇದ್ದದ್ದು ಹೊತ್ತು ಹೊತ್ತಿಗೆ ಕಂಡು ಬರುವದು. ಇದು ಸರ್ವಥಾ ಯೋಗ್ಯವಲ್ಲ. ಧರ್ಮವು ಬೇರೆ ಇದ್ದರೇನಾಯಿತು? ಆಚರಣವು ಭಿನ್ನವಿದ್ದರೇನು? ನೀವೆಲ್ಲರೂ ಹಿಂದುಸ್ಥಾನದ ನಿವಾಸಿಗಳಲ್ಲವೇ? ಹಾಗಾದರೆ ನೀವು ಹಿಂದುಸ್ಥಾನದ ನಿವಾಸಿಗಳೆಂಬ ಭಾವನೆಯನ್ನು ಯಾವಾಗಲೂ ನಿಮ್ಮ ಮನಸ್ಸಿನಲ್ಲಿ ಜಾಗೃತಗೊಳಿಸಿರಿ. ಅಂದರೆ ಘಾತುಕವಾದ ಅಂತಃಕಲಹಗಳು ನಿಂತು ಪ್ರೇಮಭಾವವೇ ಸುತ್ತು ಮುತ್ತಲೂ ಪಸರಿಸಿ ಎಲ್ಲರಿಗೂ ಹಿತವಾಗುವದು. ಧರ್ಮಸ್ವಾತಂತ್ರ್ಯದ ವರವನ್ನೂ, ಪರಸ್ಪರ ಪ್ರೇಮದ ಭಾವನೆಯನ್ನೂ, ಸಾರ್ವಜನಿಕ ಹಿತದ ಅಭಿಲಾಷೆಯನ್ನೂ ಜಗತ್ತಿನಲ್ಲಿ ಅಗ್ರಗಣ್ಯರಾಗಿರುವ ಬ್ರಿಟಿಶರ ಕಡೆಯಿಂದ ನಾವು ಪಡಕೊಂಡಿರುವೆವು. ಇವುಗಳಿಂದಲೇ ನಮ್ಮ ದೇಶಕ್ಕೆ ಹಿತವಾಗುವದು; ಹಾಗು ನಮ್ಮ ವೈಯಕ್ತಿಕ ಹಿತವಾದರೂ ಉಂಟಾಗುವದು. ಅಂದರೆ ಬ್ರಾಹ್ಮಣ ವಿದ್ಯಾರ್ಥಿಗೆ ಬೇನೆ ಬಂದರೆ ಅಥವಾ ಅಪಾಯವಾದರೆ ಇಲ್ಲವೆ ಸಂಕಟವೊದಗಿದರೆ ಲಿಂಗಾಯತರೂ, ಮುಸಲ್ಮಾನರೂ ಸಹಾಯ ಮಾಡಲಿಕ್ಕೆ ಮುಂದಾಗಬೇಕು. ಅದೇ ರೀತಿಯಾಗಿ ಲಿಂಗಾಯತರಿಗಾಗಲಿ, ಮುಸಲ್ಮಾನರಿಗಾಗಲಿ, ಬೇನೆ ಇಲ್ಲವೆ

ಕಷ್ಟಗಳ ಪ್ರಸಂಗವು ಬಂದರೆ ಬ್ರಾಹ್ಮ

ಣರು ಸಹಾಯ ಮಾಡತಕ್ಕದ್ದು. ವಿದ್ಯಾರ್ಥಿಗಳು ತಮ್ಮ ತಮ್ಮ ಜ್ಞಾತಿಯವರಿಗೆ ಸಹಾಯ ಮಾಡುವದು ಸರಿಯಿದ್ದರೂ ಪರಧರ್ಮದವರಿಗೆ ಮತ್ತು ಪರಜ್ಞಾತಿಯವರಿಗೆ ಸಹಾನುಭೂತಿಯನ್ನು ತೋರಿಸುವದೂ ಸಹಾಯವನ್ನು ಮಾಡುವದೂ ಇವು ಹೆಚ್ಚು ಪ್ರಶಂಸನೀಯವಾದವು. ಮತ್ತು ಈ ಪ್ರಕಾರದ ವರ್ತನವನ್ನು ನೀವು ಇಲ್ಲಿ ಕಲಿತರೆ, ಅಧ್ಯಾಪಕರಾಗಿ ಹೋದ ಮೇಲೆ ಬೇರೆ ಬೇರೆ ಧರ್ಮಗಳ ಮತ್ತು ಜ್ಞಾತಿಗಳ ಹುಡುಗರ ಕೂಡ ಹಾಗು ಊರೊಳಗಿರುವ ಭಿನ್ನ ಭಿನ್ನ ಜ್ಞಾತಿಯ ಸದ್ಗೃಹಸ್ಥರ ಕೂಡ ಪ್ರೇಮದಿಂದ ನಡೆಯುವ ಚಟವು ನಿಮ್ಮಲ್ಲಿ ಹುಟ್ಟುವದು.

ಸತ್ಯಾಸತ್ಯತೆಗಳನ್ನು ಕುರಿತು ಕೆಲವು ಮಹತ್ವದ ಸೂಚನೆಗಳನ್ನು ನೀವು ಸದೈವ ಲಕ್ಷದಲ್ಲಿಡತಕ್ಕದ್ದು. 'ಸತ್ಯವನ್ನಾಡು' ಎಂದು ಎಲ್ಲರೂ ನಮಗೆ ಬೋಧಿಸುವರು. ಆದರೆ ಎಲ್ಲ ಪ್ರಸಂಗಗಳಲ್ಲಿಯೂ ಸತ್ಯ ಮಾತಾಡಿದ್ದರಿಂದ ಒಮ್ಮೊಮ್ಮೆ ಅನರ್ಥಗಳು ಒದಗುವವು. ಹಿಂದಿನ ಕಾಲದಲ್ಲಿ ಗುರುಗಳು ತಮ್ಮ ಶಿಷ್ಯರಿಗೆ ಮೇಲಿಂದ ಮೇಲೆ ಉಪದೇಶಿಸುತ್ತಿದ್ದದ್ದೇನಂದರೆ:—" सत्यं ब्रूयात् प्रियं ब्रूयात् न ब्रूयात् सत्यमप्रियं । प्रियं च नानृतं ब्रूयात् "॥१॥

ಅಂದರೆ ನಿಜವಾದದ್ದನ್ನೂ, ಪ್ರಿಯವಾದದ್ದನ್ನೂ ನುಡಿಯಬೇಕು; ಆದರೆ ನಿಜವಾದಂಥ ಸಂಗತಿಯು ಅಪ್ರಿಯವಿದ್ದರೆ ಅದನ್ನು ನುಡಿಯಬಾರದು; ಹಾಗು ಸುಳ್ಳು ಪ್ರಿಯವಾದದ್ದಿದ್ದರೂ ಅದನ್ನು ಮಾತಾಡಬಾರದು. ವ್ಯವಹಾರದಲ್ಲಿ ನಾನಾತರದ ಜನರು ನಿಮಗೆ ಗಂಟು ಬೀಳುವರು. ಅವರ ಕೂಡ ಮಾತಾಡುವ ಪ್ರಸಂಗದಲ್ಲಿ ಸತ್ಯವನ್ನು ಆಡುವದು ನಮ್ಮ ಕರ್ತವ್ಯವಿದ್ದರೂ ಅಪ್ರಿಯವೆಂದು ಕಂಡುಬಂದಕೂಡಲೆ ನಿಮ್ಮ ಮನಸ್ಸನ್ನು ಬಿಗಿ ಹಿಡಿಯಿರಿ. ಇದರಿಂದ ಬರೇ ಸತ್ಯಭಾಷಣದಿಂದ ಆಗುವಂಥ ಮನಸ್ತಾಪವೂ, ಸೇಡು ತೀರಿಸುವ ಬುದ್ಧಿಯೂ ಇಲ್ಲದಂತಾಗುವವು. ಅದರಂತೆಯೇ ನಿಮ್ಮಲ್ಲಿಯಾದರೂ ತಾಳ್ಮೆಯೂ, ನಿಗ್ರಹಶಕ್ತಿಯೂ ಬೆಳೆಯುವವು. ಆದರೆ ಅದೇ ಕಾಲಕ್ಕೆ ಜನರಿಗೆ ಸಂತೋಷವಾಗುತ್ತದೆಂದು ತಿಳಿದು ಸುಳ್ಳು ಸಂಗತಿಗಳನ್ನು ಆಡಬಾರದು. ಅಂದರೆ ಮುಖಸ್ತುತಿ ಮಾಡುವದೂ, ಅಲ್ಲದ ಸುದ್ದಿಯನ್ನು ಪಸರಿಸುವದೂ ಸರ್ವಥಾ ಯೋಗ್ಯವಲ್ಲ. ಅರಂದತೆಯೇ ಚಾಡೀ ಹೇಳುವದೂ

ತಿರಸ್ಕರಣೀಯವಾದದ್ದು. ತನಗೆ ಬೇರೆಯವರು ಕೇಡು ಮಾಡಿದರೆ, ಅವರ ಬಗ್ಗೆ ನಿಜವಾದ ದೂರು ಹೇಳುವದು ತಪ್ಪಲ್ಲ. ಆದರೆ ನಿರರ್ಥಕವಾಗಿ ಕೆಟ್ಟ ಭಾವನೆಗಳಿಂದ ಅಥವಾ ಬಾಯಿಬಡಕತನದಿಂದ ಚಾಡಿಯನ್ನು ಹೇಳುತ್ತ ಹೋಗುವದು ಇದರಷ್ಟು ನೀಚತನದ ವರ್ತನವು ಬೇರೊಂದು ಇರಲಿಕ್ಕಿಲ್ಲ. ಈ ಪ್ರಕಾರವಾಗಿ ಎಚ್ಚರದಿಂದ ವರ್ತಿಸಿದರೆ, ನೀವು ಅಧ್ಯಾಪಕರಾಗಿರುವ ಊರೊಳಗಿನ ಜನರು ನಿಮಗೆ ಮೆಚ್ಚುವರಲ್ಲದೆ, ನೀವು ಅವರ ಆದರಕ್ಕೂ ಪಾತ್ರರಾಗುವಿರಿ.

ಇತರ ಕೃತ್ಯಗಳನ್ನು ಕುರಿತು ಮಾಡತಕ್ಕ ಉಪದೇಶವು ಆತ್ಮಸಂಯಮನ ಈ ಶಬ್ದದಲ್ಲಿ ಬಂದು ಹೋಗುವದು. ಈ ಆತ್ಮದ ಉಪದೇಶವನ್ನು ವಿಾರುವದರಿಂದಲೇ ಹಲವು ಹರದ ದುಷ್ಪ ಪರಿಣಾಮಗಳು ಆಗುತ್ತವೆ. ಆದ್ದರಿಂದ ನೀವು ನಿಮ್ಮ ಮನಸ್ಸಿಗೆ ಪ್ರಶಸ್ತವೆನಿಸುವಂತೆ ಆಚರಿಸಿ ನಿಮ್ಮ ಆತ್ಮದ ಉಪದೇಶವನ್ನು ಎಂದೂ ಮೀರಬೇಡಿರಿ. ಮೋಹಗೊಳಿಸುವಂಥ ಕೆಟ್ಟ ವ್ಯಸನಗಳಿಂದಲೂ, ಘಾತುಕವಾದ ಇತರ ಕೃತ್ಯಗಳಿಂದಲೂ ದೂರಾಗಿರ್ರಿ.

೪. ನಿಮ್ಮ ಮಾನಸಿಕ ವ್ಯಾಪಾರಗಳು ಉಚ್ಚವಾದವುಗಳು ಇರಬೇಕು. ಇದಕ್ಕಾಗಿ ನಿಮ್ಮ ಮನಸ್ಸನ್ನು ಚಲೋ ಸಂಗತಿಗಳಲ್ಲಿ ತೊಡಗಿಸುವದು ಅತ್ಯವಶ್ಯವದೆ. ಕೆಲಸವಿಲ್ಲದಂಥ ವಿದುಳು, ಕೆಟ್ಟ ಕಲ್ಪನೆಗಳ ಹಾಗು ವಾಸನೆಗಳ ವಾಸಸ್ಥಾನವಾಗಿರುತ್ತದೆಂಬದನ್ನು ನೀವು ಯಾವಾಗಲೂ ನೆನಪಿನಲ್ಲಿಡಿರಿ. ನಿಮ್ಮ ಮನಸ್ಸಿನಲ್ಲಿ ಇವು ಬಾರದಂತೆಯೂ, ಸತ್ಕಲ್ಪನೆಗಳು ಹುಟ್ಟುವಂತೆಯೂ ಆಗಬೇಕಾದರೆ ನಿಮಗೆ ನಿಯಮಿಸಿದ ಆಟಗಳೂ, ಕಲಿಯುತಕ್ಕ ವಿಷಯಗಳೂ ಉತ್ತಮ ಸಾಧನಗಳಾಗಿರುವವು. ಈ ಕಾಲೇಜದಲ್ಲಿ ನೀವು ಹಲವು ವಿಷಯಗಳನ್ನು ಕಲಿಯುವಿರಿ. ಎಲ್ಲರಿಗೂ ಯಾವತ್ತೂ ವಿಷಯಗಳು ಸೇರುತ್ತವೆಂಬ ನಿಯಮವಿಲ್ಲ. ಅದರೂ ಪ್ರತಿಯೊಬ್ಬನಿಗೆ ತನ್ನ ಪ್ರೀತಿಯ ವಿಷಯವೆಂಬದೊಂದು ಇದ್ದೇ ಇರುತ್ತದೆ. ಆ ವಿಷಯವನ್ನು ಹೆಚ್ಚಿಸಿಕೊಳ್ಳಲಿಕ್ಕೆ ಇಲ್ಲಿರುವಷ್ಟು ಸಾಧನಗಳು ಮುಂದೆ ನಿಮಗೆ ದೊರೆಯಲಾರವು. ಎಲ್ಲ ವಿಷಯಗಳನ್ನು ನೀವು ಪರೀಕ್ಷೆಗೆ ತಕ್ಕಂತೆ ಮಾಡಿ, ನಿಮಗೆ ಸೇರತಕ್ಕ ವಿಷಯಗಳನ್ನು ವೇಳೆ ಉಳಿದಾಗ ಹೆಚ್ಚಾಗಿ ನೋಡಿಕೊಳ್ಳಿರಿ. ವಾಙ್ಮಯ, ಇತಿಹಾಸ, ಗಣಿತಶಾಸ್ತ್ರ, ಶಾಸ್ತ್ರೀಯ ವಿಷಯ ಇವುಗಳಲ್ಲಿ ಒಂದೆ

ರಡು ವಿಷಯಗಳನ್ನು ನೀವು ಅರಿಸಿರಿ. ಇವುಗಳ ವಿಶೇಷ ಅಧ್ಯಯನದಿಂದ ನಿಮ್ಮ ಜ್ಞಾನವು ಹೆಚ್ಚಾಗುವದಲ್ಲದೆ, ಸದ್ವಿಚಾರಗಳೂ ಸತ್ಪ್ರವೃತ್ತಿಗಳೂ ನಿಮ್ಮಲ್ಲಿ ಹುಟ್ಟುವವು. ಸಾಧುಪುರುಷರ ಚರಿತ್ರೆಗಳು ಮುಂತಾದವುಗಳು ನಿಮ್ಮ ನೈತಿಕ ಬಲವನ್ನು ಹೆಚ್ಚಿಸುವವು. ಅದರಂತೆ ಗಣಿತ ಮುಂತಾದ ವಿಷಯಗಳು ನಿಮ್ಮ ಚಿಕಿತ್ಸಾಶಕ್ತಿಯನ್ನು ಬೆಳಿಸುವದಲ್ಲದೆ, ಅದರಿಂದಾಗುವ ಸುಖವು ಬೇರೆ ಮೋಹಕ ಸುಖಗಳ ಬೆಲೆಯನ್ನು ಕುಂದಿಸಿ ಕೆಟ್ಟ ವಾಸನೆಗಳಿಂದ ನಿಮ್ಮನ್ನು ಸಂರಕ್ಷಿಸುವವು.

ವಿದ್ಯಾರ್ಥಿಗಳೇ, ನೀವು ಕಲಿಯತಕ್ಕ ಈ ಶಿಕ್ಷಣಾಲಯಕ್ಕೆ ಶಿಕ್ಷಕರನ್ನು ತಯಾರ ಮಾಡುವ ಕಾಲೇಜವೆಂಬ ಹೆಸರಿರುವದು. ಇಲ್ಲಿ ಹುಡುಗರಿಗೆ ಹ್ಯಾಗೆ ಕಲಿಸಬೇಕೆಂಬದನ್ನು ನೀವು ಕಲಿಯುವಿರಿ. ಈ ಚೀಚಿಗೆ ಶಿಕ್ಷಣಪದ್ಧತಿಯ ಕ್ರಮವು ಸುಧಾರಿಸಿದೆ. ಈ ಸುಧಾರಿಸಿದ ಶಿಕ್ಷಣಪದ್ಧತಿಯು ಬಹಳ ಮಹತ್ವವಾದದ್ದಾದರೂ, ಕಲಿಸುವ ಶಿಕ್ಷಕನ ಮಹತ್ವವು ಅದಕ್ಕೂ ಹೆಚ್ಚಾಗಿರುವದು. ಶಿಕ್ಷಣಪದ್ಧತಿಯು ಗೊತ್ತಿದ್ದು, ಶಿಕ್ಷಕನ ವಿಚಾರಗಳೂ, ಕೃತ್ಯಗಳೂ, ಭಾಷಣಗಳೂ ಕೆಡಕು ಇರಲು ಆ ಪದ್ಧತಿಯು ಉಪಯೋಗವೇನು? ಒಂದು ವೇಳೆ ಶಿಕ್ಷಣಪದ್ಧತಿಯು ಸುಧಾರಿಸಿದ್ದಿದ್ದರೂ ಶಿಕ್ಷಕನ ಶರೀರ, ಭಾಷಣ, ವರ್ತನ, ವಿಚಾರ ಇವು ತಿದ್ದುಪಡೆ ಹೊಂದಿದ್ದರೆ ಮತ್ತು ಅವನಲ್ಲಿ ಕಲಿಸುವ ಅಪೇಕ್ಷೆಯು ಇದ್ದರೆ ಅವನು ಶ್ರಮಬಟ್ಟು ಸುಧಾರಿಸಿದ ಪದ್ಧತಿಯಿಂದ ಕಲಿಸದೆ ಇರಲಾರನು. ಇದಲ್ಲದೆ ಇಂಥ ಶಿಕ್ಷಕನ ಲಕ್ಷಣಗಳಿಂದ ಹುಡುಗರ ಮೇಲೆ ಬಹಳೇ ದೊಡ್ಡ ಸತ್ಪರಿಣಾಮವಾಗುವದು. ಯಾಕಂದರೆ ಹುಡುಗರಲ್ಲಿ ಅನುಕರಣ ಶಕ್ತಿಯು ಯಾವಾಗಲೂ ಜಾಗೃತವಿರುವದು. ಶಿಕ್ಷಕನು ಮಾತಾಡುವಂತೆ ಅವರಾದರೂ ಮಾತಾಡುವರು; ಅವನು ನಡೆದಂತೆಯೇ ಅವರೂ ನಡೆಯುವರು; ಅವನಿಗೆ ಯಾವವಿಷಗಳ ಅಭಿರುಚಿಯಿರುವದೋ, ಅವೇ ವಿಷಯಗಳ ಅಭಿರುಚಿಯು ಅವರಲ್ಲಿ ಸಹ ಹುಟ್ಟುವದು. ಮತ್ತು ಶರೀರದಿಂದ ನಿರೋಗಿಯೂ, ಕಸುವುಳ್ಳವನೂ ಇದ್ದರೆ ಹಾಗೆಯೇ ತಾವೂ ಆಗಬೇಕೆಂಬ ಅಪೇಕ್ಷೆಯು ಅವರಲ್ಲಿ ತಲೆದೋರುವದು. ಹೀಗಾಗಿ ಬಹಳಮಟ್ಟಿಗೆ ಹುಡುಗರು ಶಿಕ್ಷಕರ ಪ್ರತಿಮೆಗಳೇ ಆಗುತ್ತಾರೆಂದು ಹೇಳಬಹುದು. ಅಂದಮೇಲೆ ಮನೋವಾಕ್ಕಾಯಕರ್ಮಗಳಲ್ಲಿ ಜಾಗ್ರತೆಯಿಂದ ಇರುವದರ ಮಹತ್ವವು ಎಷ್ಟೆಂಬದನ್ನು ತಿಳಿದು ಕೊಳ್ಳರಿ.

ಈ ಉಪನ್ಯಾಸವನ್ನು ಮುಗಿಸುವ ಮುಂಚೆ ಒಂದು ಮಾತನ್ನು ಹೇಳದೆ ಇರಲಾರೆನು. ನೀವು ಇಲ್ಲಿಂದ ಶಿಕ್ಷಕರಾಗಿ ಹೋದಮೇಲೆ ಕೆಲಸ ಮಾಡತಕ್ಕಂಥ ಪರಿಸ್ಥಿತಿಯು ನಿಮಗೆ ಯಾವಾಗಲೂ ಉತ್ತೇಜಕವಾದದ್ದೂ, ಅನುಕೂಲವಾದದ್ದೂ ಇದ್ದೀತೆಂದು ಹೇಳಲಿಕ್ಕಾಗುವದಿಲ್ಲ. ಒಮ್ಮೆಮ್ಮೆ ಅದು ಪ್ರತಿಕೂಲವಾದದ್ದೂ, ದೈರ್ಯಗುಂದಿಸುವಂಥಾದ್ದೂ, ಹುರುಪು ಕಡಿಮೆಮಾಡುವಂಥಾದ್ದೂ ಇರಬಹುದು. ಅಂಥ ಪರಿಸ್ಥಿತಿಯಲ್ಲಿ ನಿಮಗೆ ದುಃಖವೆನಿಸಿದರೂ ನಾನು ಹೇಳತಕ್ಕ ಒಂದು ಸಣ್ಣ ಕವಿತೆಯನ್ನು ಆಗ ಎಚ್ಚರಕ್ಕೆ ತಂದು ಕೊಳ್ಳಿರಿ. ಅದೇನಂದರೆ:—

Though failure, oft repeated, dim the light
Of firm resolve wherewith thy youth was bright
If each fresh morn thou gird thee to the fight
It is enough.

"ತಾರುಣ್ಯಾವಸ್ಥೆಯಲ್ಲಿ ಮಾಡಿದ ಉದಾರ ನಿಶ್ಚಯದ ಪ್ರಕಾಶವನ್ನು ಅಥವಾ ತೇಜವನ್ನು ಪರಿಸ್ಥಿತಿಯು ಕಡಿಮೆಮಾಡಿದರೂ, ನೀವು ಪ್ರತಿದಿವಸ ಮುಂಜಾನೆ ನಿಮ್ಮ ಕರ್ತವ್ಯಗಳನ್ನು ಎಡೆಬಿಡದೆ ಮಾಡಲಿಕ್ಕೆ ಟೊಂಕಕಟ್ಟಿ ಮುಂದುವರಿಯಿರಿ; ಸಾಕು." ಹೀಗೆ ನಿಮಗೆ ಎಷ್ಟು ಎಡರುಗಳು ಬಂದರೂ ಈ ಕಾಲೇಜದೊಳಗೆ ನೀವು ಕಲಿತ ಉಚ್ಚ ಧ್ಯೇಯವನ್ನು ಎಂದೂ ಬಿಡಬೇಡಿರಿ. ನಿಮ್ಮ ಕರ್ತವ್ಯಗಳಿಂದ ಎಳ್ಳಷ್ಟು ಸಹ ಪರಾಙ್ಮುಖರಾಗಬೇಡಿರಿ. ಯಾವಾಗಲೂ ಆತ್ಮ ಸುಧಾರಣೆಯಲ್ಲಿ ಲಕ್ಷವಿಡಿರಿ ಅಂದರೆ ನೀವು ನಿಮ್ಮ ಕೈಕೆಳಗಿನ ಹುಡುಗರನ್ನು ಸುಧಾರಿಸುವದಲ್ಲದೆ ದೇಶದ ಉತ್ತರೋತ್ತರ ಕಲ್ಯಾಣವನ್ನು ಮಾಡಿದಂತಾಗುವದು. ಈ ಕಲ್ಯಾಣಕ್ಕೆ ಪ್ರತಿಫಲವು ಮೂರ್ತರೂಪದಿಂದ ದೊರೆಯದಿದ್ದರೆ ಅದನ್ನು ದೊರಕಿಸಿಕೊಳ್ಳುವ ಪ್ರಯತ್ನ ಮಾಡಬೇಕೆಂಬುವದು ನಿಜವು. ಆದರೆ ಈ ಮೂರ್ತ ಪ್ರತಿಫಲವನ್ನು ಬದಿಗಿಟ್ಟು ನೀವು ಮಾಡುವ ಕರ್ತವ್ಯದ ಮಹತ್ವವನ್ನು ಅರಿತುಕೊಂಡರೆ ಕಷ್ಟದ ಸ್ಥಿತಿಯಲ್ಲಿ ನಾನು ಮಹದುಪಯೋಗದ ಕೆಲಸವನ್ನು ಮಾಡಿದೆನೆಂಬ ಮನೋಭಾವನೆಯು ಮೂರ್ತ ಪ್ರತಿಫಲಕ್ಕಿಂತಲೂ ಹೆಚ್ಚು ತೃಪ್ತಿಕರವೂ, ಸುಖಕರವೂ ಇರುವದೆಂಬದರಲ್ಲಿ ಏನೂ ಸಂದೇಹವಿಲ್ಲ.

M. R. Nadkarni.

ಪತ್ರವ್ಯವಹಾರ.

——:0:——

ರಾವಸಾಹೇಬ ಕನ್ನಡ ಶಾಲಾಪತ್ರಿಕೆಯ ಎಡಿಟರ ದೊರೆಗಳವರ ಸನ್ನಿಧಿಗೆ—

ಸಾ. ನ. ವಿ. ವಿ. ತಮ್ಮ ಅಂದವಾದ ಶಾಲಾಪತ್ರಿಕೆಯಲ್ಲಿ ಕೆಳಗಿನ ನಾಲ್ಕು ಪಂಗಿ್ತಗಳಿಗೆ ಇಂಬುಗೊಡುವಿರೆಂದಾತಿಸುತ್ತೇನೆ.

ಎಸೆವ ವಸಂತಮಾಸದೆ ವಸಂತಮನಾಂತ ಕುಜಾತಪಲ್ಲವ ।
ಪ್ರಸರದಿನಾವಸಂತ ಸಮಯಂ ಕುಸುಮಾವಳಿಯಿಂದೆ ಪಲ್ಲವಂ ॥
ಮಿಸುಪಳಿಮಾಲೆಯಿಂ ಕುಸುಮಮಂಜರಿ ರಂಜಿಸುವಂತಿರಲ್ ವಿಜೃಂ ।
ಭಿಸಿದುದು ಯೌವನೋದಯವಿಲಾಸಮನುಕ್ರಮದಿಂ ಮದಂಗ ದೊಳ್ ॥೧॥

ಈ ಪದ್ಯದಲ್ಲಿದ್ದ ಅಲಂಕಾರವು ಯಾವದು ? ಉಪಮಾಲಂಕಾರವಾದರೆ ಉಪಮಾನೋಪಮೇಯಗಳು ಯಾವಯಾವವು ? ಮತ್ತು ಯಾವ ಉಪಮೆ ? ಇದನ್ನು ಸಂಪೂರ್ಣವಾಗಿ ಯಾರಾದರೂ ಇದೇ ಪತ್ರಿಕೆಯ ದ್ವಾರದಿಂದ ತಿಳಿಸಬೇಕಾಗಿ ವಿನಂತಿಯದೆ.

ಐಗಳಿ, ಜಿಲ್ಲಾ ಬೆಳಗಾಂವ,
ತಾ. ೮–೭–೧೯೧೬.

ದಾಸೋ ಮಹಿಪತ ಕುಲಕರ್ಣಿ,
ಅಸಿ. ಮಾಸ್ತರ ಶಾಲಾ ಐಗಳಿ.

ನಮ್ಮ ಧರ್ಮಾಧಿಕಾರಿಗಳು ತಮ್ಮ ಶಿಷ್ಯಮಂಡಳಿಯಿಂದ ದಕ್ಷಿಣೆಯ ರೂಪದಿಂದ ಬಂದ ಹಣದಲ್ಲಿ ಅನ್ನಸಂತರ್ಪಣೆ, ಸಂಸ್ಥಾನದ ಆಡಂಬರ ಇವುಗಳನ್ನೇ ವಿಶೇಷವಾಗಿ ನಡಿಸುತ್ತಿದ್ದರಲ್ಲದೆ ತಮ್ಮ ಶಿಷ್ಯಮಂಡಳಿಯ ಸುಧಾರಣೆಯ ವಿಷಯದಲ್ಲಿ ಅಷ್ಟು ಮನಸು ಹಾಕುತ್ತಿದ್ದಿಲ್ಲ. ಆದರೆ ಇತ್ತಲಾಗಿ ಅವರೂ ಈ ವಿಷಯದ ಕಡೆಗೆ ಲಕ್ಷ್ಯ ಕೊಡಹತ್ತಿದ್ದಾರೆ.

"ಇದೇ ಜುಲೈ ತಿಂಗಳ ೧೯ನೇ ತಾರೀಖಿನ ದಿವಸ ಶ್ರೀ ನಿರಂಜನ ಮೂರ್ತಿಗಳಾದ ಹಾನಗಲ್ಲ ಕುಮಾರ ಸ್ವಾಮಿಗಳು ಕರ್ಜಗಿ ತಾಲೂಕ ದೇವಗಿರಿಯ ಶಾಲೆಗೆ ದಯಮಾಡಿಸಿದ್ದರು. ಆಲ್ಲಿ ಶ್ರೀಗಳವರು ಮಾಸ್ತರ ಜನರ ವಿನಂತಿಯ ಪ್ರಕಾರ 'ದೇವರು ಇದ್ದಾನೆ' ಎಂಬ ವಿಷಯವನ್ನು ಚಿಕ್ಕಮಕ್ಕಳಿಗೂ ಕೂಡ ತಿಳಿಯುವಂತೆ ಎರಡು ತಾಸುಗಳ

ವರೆಗೆ ಉಪದೇಶಿಸಿದರು. ನಂತರ ಶಾಲೆಯೊಳಗಿನ ಯಾಂತ್ರಿಕ, ರಾಸಾಯನಿಕ ಮುಂತಾದ ಉಪಕರಣಗಳನ್ನು ನೋಡಿ ತುಷ್ಟರಾಗಿ, ಶಾಲೆಗೆ ರಾಗದ ಪೆಟ್ಟಿಗೆಯನ್ನು ಕೊಳ್ಳಲಿಕ್ಕೆಂದು, ೨೫ ರೂ. ಗಳನ್ನು ಆಶೀರ್ವಾದಿಸಿದರು." ಎಂಬದಾಗಿ ಅಲ್ಲಿನ ದ. ಕೃ. ಮೇವುಂಡಿ ಎಂಬವರು ತಿಳಿಸುತ್ತಾರೆ. ಇದು ನಿಜವಾಗಿ ಶ್ರೀಗಳವರಿಗೆ ಭೂಷಣವು. ಉಳಿದ ಧರ್ಮಾಧಿಕಾರಿಗಳಾದರೂ ಶ್ರೀಗಳವರ ಅನುಕರಣ ಮಾಡುವರೆಂದು ಕೋರುತ್ತೇವೆ.

ತಾರೀಖು ೧೦-೭-೧೬ನೇ ದಿವಸ ಕಲಾದಗಿಯಲ್ಲಿ ಕೆಲವು ಪ್ರೌಢ ವಿದ್ಯಾರ್ಥಿಗಳು ಕೂಡಿ 'ಚಾಣಕ್ಯತಂತ್ರ' ಎಂಬ ನಾಟಕವನ್ನು ಸಂಗೀತರೂಪದಿಂದ ಮಾಡಿ, ಅದರಿಂದ ಬಂದ ೨೫ ರೂ. ಗಳನ್ನು ಬೆಲ್ಲಿಯನ್ ವಿದ್ಯಾರ್ಥಿಗಳ ಫಂಡಿಗೆ ಕಳಿಸಿದರೆಂದು ಅಲ್ಲಿಯ 'ಮಕ್ತುಮ್ ವಲ್ಲದ ಇಮಾಮು ಸಾಹೇಬ ಬಾಗವಾನ' ಎಂಬ ವಿದ್ಯಾರ್ಥಿಯು ತಿಳಿಸುತ್ತಾನೆ.

ಕೂಡಗಿ (ಜಿ. ವಿಜಾಪುರ) ಶಾಲೆಯ ವಿದ್ಯಾರ್ಥಿಯಾದ ಗಿರಿಧರ ಅಣ್ಣಾಜಿ ಇವನಿಗಿ ಎಂಬವನು 'ಶ್ರೀಮತ್ಪಂಚಮ ಜಾರ್ಜ ಭೂಪತಿಗಳ ವರ್ಧಂತಿಯ ಉತ್ಸವವು ತಮ್ಮ ಶಾಲೆಯಲ್ಲಿ ಒಳ್ಳೇ ವಿಜೃಂಭಣೆಯಿಂದ ಜರುಗಿತೆಂತಲೂ, ಅಲ್ಲಿ ಕೂಡಿದ ಸೆಟ್ಟಿ ಸಾವುಕಾರರಿಂದ ಶಾಲೆಯ ಉಪಯೋಗಕ್ಕಾಗಿ ಹದಿನಾರು ರೂಪಾಯಿ ದೊರೆತದ್ದಲ್ಲದೆ ಒಂದು ಜಾಂಗುಟಿ, ಒಂದು ಫುಟ್‌ಬಾಲ್ ದೊರೆತವೆಂತಲೂ' ತಿಳಿಸುತ್ತಾನೆ.

ಇದೇ ಜೂನ ತಿಂಗಳ ೧೧ನೇ ತಾರೀಖಿನ ದಿವಸ ಹೊನವಾಡ (ಜಿ. ವಿಜಾಪುರ) ಗ್ರಾಮದಲ್ಲಿ ಈ ಭಾಗದ ಶಾಲೆಗಳ ಮೇಲ್ವಿಚಾರಕರಾದ ಮೆ. ಕೊಪ್ಪರ ಸಾ. ಅಸಿ. ಡೆ. ಎ. ಇ. ಜಿಲ್ಲಾ ವಿಜಾಪುರ ಇವರ ಅಧ್ಯಕ್ಷತೆಯ ಕೆಳಗೆ ಸಭೆಗೂಡಿತ್ತು. ಸಭೆಗೆ ಊರೊಳಗಿನ ಸೆಟ್ಟಿ, ಸಾವಕಾರ, ಪಂಚ, ಲೋ. ಬೋ. ಮೆಂಬರ ಮುಂತಾದವರು ಬಂದಿದ್ದರು. ಐದು ಸಾವಿರ ಜನಸಂಖ್ಯೆಯುಳ್ಳ ಇಂಥ ಊರ ಶಾಲೆಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆಯು ಪ್ರಮಾಣಕ್ಕನುಸರಿಸಿ ಇರದೆ ಇರುವದಕ್ಕೂ, ಸುಗ್ಗಿಯ ಹಂಗಾಮುಗಳಲ್ಲಿ ದಿನದ ಹಾಜರೀ ಸರಾಸರಿಯು ಬಹಳೇ ಕಡಿಮೆ

ಬೀಳುವದಕ್ಕೂ ಇಲ್ಲಿಯ ಒಕ್ಕಲತನವೇ ಕಾರಣವೆಂಬ ಸಭೆಯ ಉದ್ದೇಶವನ್ನು ಶಾಲೆಯ ಹೆಡ್‌ಮಾಸ್ತರ ಮಿ. ರಂಗೋ ಕೊಪ್ಪೇಶ ಹಲಗೇರಿ ಇವರು ನೆರೆದ ಜನರಿಗೆ ತಿಳಿಸಿ ಹೇಳಿದರು. ನಂತರ ಮೆ. ಕೊಪ್ಪರ ಸಾ. ರು ಊರ ಪರಿಸ್ಥಿತಿಯನ್ನು ಲಕ್ಷ್ಯಕ್ಕೆ ತಂದು, ವಿದ್ಯಾಭಿರುಚಿ ಹುಟ್ಟಿ, ತಮ್ಮ ಮಕ್ಕಳನ್ನು ನಿಯಮಿತ ವೇಳೆಗೆ ಶಾಲೆಗೆ ಕಳಿಸುವ ಬಗ್ಗೆ ನೆರೆದ ಯಾವತ್ತೂ ಜನರಿಗೆ ಬಿಂಬಿಸುವಂತೆ ಬೋಧನೆ ಮಾಡಿದರು. ಅಲ್ಲದೆ ಶಾಸ್ತ್ರೀಯ ಪಾಠಗಳ ಸಾಮಾನುಗಳಿಗೂ ವಸ್ತುಪಾಠಗಳ ಉಪಕರಣಗಳಿಗೂ ಕೆಲವು ಹಣದ ಅವಶ್ಯಕತೆಯುಂಟೆಂಬದನ್ನು ಹೇಳಿದರು. ಅದಕ್ಕೆ ಆ ಊರ ಬಸನಗೌಡಾ ಲಿಂಗನಗೌಡಾ ಪಾಟೀಲ ಲೋ. ಬೋ. ಮೆಂಬರ ಮುಂತಾದವರು ತಮ್ಮ ಮಕ್ಕಳನ್ನು ನಿಯಮಿತ ವೇಳೆಗೆ ಶಾಲೆಗೆ ಕಳಿಸಲಿಕ್ಕೆ ಒಪ್ಪಿ, ತತ್ಕಾಲಕ್ಕೆ ವರ್ಗಣಿ ಕೂಡಿಸಿ ೧೦೧ ರೂ. ಗಳನ್ನು ರೋಖ ಕೊಟ್ಟರು. ನಂತರ ಸ್ಕೂಲಪಂಚ ಮಿ. ನಾಥಾಜಿ ಗೋಪಾಳ ಸಾಲಿ ಇವರು ಗ್ರಂಥಾವಲೋಕನದ ಮಹತ್ವವನ್ನು ವಿವರಿಸಿ, ಈ ಶಾಲೆಯ ಕೆಳಗೆ ಒಂದು ಚಿಕ್ಕ ವಾಚನಾಲಯವನ್ನು ತೆಗೆದರೆ, ಆ ಬಗ್ಗೆ ೧೫ ರೂ. ಗಳನ್ನು ಪ್ರತ್ಯೇಕವಾಗಿ ಕೊಡುವೆವೆಂದು ಹೇಳಿದರು. ಈ ಮುಂತಾದ ಸಂಗತಿಗಳನ್ನು ಚನ್ನಪ್ಪಯ್ಯಾ ನಾನಪ್ಪಯ್ಯಾ ಕುಮಶೀಕರ ೧ನೇ ಅಸಿ. ಮಾಸ್ತರ ಇವರು ಬರೆಯುತ್ತಾರೆ.

ಇಂದೀ ತಾಲೂಕ ಹಳಗುಣಕಿ ಗ್ರಾಮದ ಸ್ಕೂಲ ಕಮಿಟಿಯ ಮೆಂಬರರಾದ ಭೀಮರಾಯಗೌಡಾ ಅಣ್ಣಪ್ಪಗೌಡಾ ಪಾಟೀಲ ಇವರು ಇನ್ನೂರು ರೂಪಾಯಿ ಖರ್ಚು ಮಾಡಿ ಗ್ರಾಮಶೀ ಶಾಲೆಯ ಸಲುವಾಗಿ ತಮ್ಮ ಮೂಲಕೀ ಜಾಗಾದಲ್ಲಿ ಒಂದು ಇಮಾರತಿಯನ್ನು ಕಟ್ಟಿಸಿಕೊಟ್ಟಿದ್ದಲ್ಲದೆ ಖುರ್ಚಿ ಮೇಜುಗಳನ್ನು ಸ್ವಂತ ಖರ್ಚಿನಿಂದ ತರಿಸಿಕೊಟ್ಟರು. ಆದ್ದರಿಂದ ಅವರ ಆಭಾರ ಮನ್ನಿಸುವ ಬಗ್ಗೆ ಅದೇ ನೂತನ ಇಮಾರತಿಯಲ್ಲಿ ಸುಮಾರು ೫೦ ಜನರ ಸಭೆಯು ನೆರವಿತ್ತು. ಅಲ್ಲಿ 'ಬ್ರಿಟಿಶರ ಆಳಿಕೆಯಿಂದ ಆದ ಲಾಭಗಳು' ಎಂಬ ನಿಬಂಧವನ್ನು ಓದೋಣ, ವಿದ್ಯಾರ್ಥಿಗಳ ಸಂಭಾಷಣ, ಗಾಯನ ಮುಂತಾದವುಗಳಾದನಂತರ ಚಿಕ್ಕ

ಚಿಕ್ಕ ವಿದ್ಯಾರ್ಥಿಗಳು 'ಗಿಳೀಮರಿ' ನಾಟಕವನ್ನು ಮಾಡಿ ತೋರಿಸಿದರು. ಇದನ್ನು ನೋಡಿ ತುಪ್ಪರಾಗಿ, ಅಲ್ಲಿಯ ಐವರು ಸಭ್ಯಗೃಹಸ್ಥರು ಶಾಲೆಯ ಉಪಯೋಗಕ್ಕೆಂದು ನಾಲ್ಕು ರೂಪಾಯಿಗಳನ್ನು ಕೊಟ್ಟರು; ಎಂಬ ದನ್ನು ಖಾಜ್ಯಾಸಾ. ಮನ್ನುಸಾ. ಮುಲ್ಲಾ ಎಂಬವರು ಬರೆಯುತ್ತಾರೆ.

"ಜುಮನಾಳ (ತಾ. ವಿಜಾಪುರ) ಶಾಲೆಗೆ ಶ್ರೀಮಂತ ಬಾಬಾಸಾ ಹೇಬ ದೇಸಾಯಿ ಹಂದಿಗನೂರ ಜಿಲ್ಲಾ ಧಾರವಾಡ ಇವರು ಬಂದಿ ದ್ದರು. ಶಾಲೆಯ ಕೆಲಸವನ್ನು ನೋಡಿ ತುಪ್ಪರಾಗಿ, ೧೨ ರು. ಬೆಲೆ ಯುಳ್ಳ ಒಂದು ಉತ್ತಮ ಗಡಿಯಾಲವನ್ನು ಶಾಲೆಯ ಉಪಯೋಗ ಕ್ಕಾಗಿ ಕೊಟ್ಟರು. ಇದು ಶ್ರೀಮಂತರಿಗೆ ಭೂಷಣವು" ಎಂದು ಹ. ನ. ಕುಲಕರ್ಣಿ ಹೆ. ಮಾಸ್ತರ ಜುಮನಾಳ ಇವರು ತಿಳಿಸುತ್ತಾರೆ.

ವಿದ್ಯಾರ್ಥಿಗಳ ಸಹಕಾರಿತ್ವದ ಸಂಘ:— ಹಲವು ವಿದ್ಯಾರ್ಥಿಗಳು ತಮ್ಮ ಬಳಿಯಲ್ಲಿದ್ದ ಅಲ್ಪ ಸ್ವಲ್ಪ ಹಣವನ್ನು ಒಟ್ಟುಕೂಡಿಸಿ, ವ್ಯಾಪಾರ ಮಾಡಿ ಲಾಭವನ್ನು ಸಂಪಾದಿಸುವದು ಪಾಶ್ಚಾತ್ಯ ದೇಶಗ ಳಲ್ಲಿ ವಿಶೇಷವಾಗಿ ಕಂಡುಬರುವದು. ವ್ಯವಹಾರದಲ್ಲಿ ಇದರ ಅವಶ್ಯ ಕತೆಯು ಬಹಳ ಇರುವದು. ಇಂಥ ಸಂಸ್ಥೆಗಳಿಗೆ 'ಶಾಲಾ ವಿದ್ಯಾರ್ಥಿ ಗಳ ಪರಸ್ಪರ ಸಹಾಯಕಾರಿಸಂಘ'ಗಳೆನ್ನುವರು. ಇವುಗಳಿಂದ ಪಾಲುಗಾರರಿಗೆ ಬಹಳೇ ಲಾಭವಾಗುವದು. ಪರಂತು ಇದರಲ್ಲಿ ಸೇರಬೇಕಾದ ವಿದ್ಯಾರ್ಥಿಗಳು ಕೆಲವು ನಿಯಮಗಳಿಗನುಸಾರವಾಗಿ ನಡೆದರೆ ವಿಶೇಷ ಲಾಭವಾಗುವದು. ಇದರಲ್ಲಿ ಸೇರಬೇಕಾದ ವರಲ್ಲಿ ಸಹಾನುಭೂತಿಯ ಅಂಶವು ಇರಲಿಕ್ಕೆ ಬೇಕು. ಪಾಲು ಗಾರರಲ್ಲಿ ನಿಷ್ಕಲಂಕವಾದ ಪ್ರಮಾಣಿಕತನವಿರಬೇಕು. ಬಂಡವಲು ಒಳಿತಾಗಿ ಬೆಳೆಯುವ ವರೆಗೆ ಲಾಭವನ್ನು ಹಂಚಿಕೊಳ್ಳಬಾರದು. ಪ್ರತಿಯೊಬ್ಬ ವಿದ್ಯಾರ್ಥಿಗೆ ಪಾಳಿಯಿಂದ ಸಂಘದ ಪ್ರತಿಯೊಂದು ಕೆಲಸವು ಬರುವಂತಿರಬೇಕು. ಈ ಮುಂತಾದ ನಿಯಮಗಳಂತೆ ನಡೆದರೆ ಸಂಘಕ್ಕೆ ಉಪಯೋಗವಾಗುವದು. ವಿದ್ಯಾರ್ಥಿಗಳು ತಾವು ದಿನಾಲು ತಮ್ಮ ಶಾಲೆಯ ಉಪಯೋಗಕ್ಕಾಗಿ ಕೊಂಡುಕೊಳ್ಳತಕ್ಕ ಜೀನಸುಗ ಳನ್ನೇ ತಮ್ಮ ಸಂಘದ ವತಿಯಿಂದ ಒಟ್ಟಿಗೆ ಖರೀದಿ ಮಾಡಿ ಅವುಗ ಳನ್ನು ತಾವೇ ವ್ಯಾಪಾರ ಮಾಡಲಿಕ್ಕೆ ಹತ್ತಿದರೆ ಬಂದ ಲಾಭವು ಅದರ

ಲ್ಲಿಯೇ ಉಳಿದು ಪಾಲುಗಾರರ ಬಂಡವಲವು ಬೆಳೆಯುವದು. ವಿದ್ಯಾರ್ಥಿಗಳಲ್ಲಿ ಒಕ್ಕಟ್ಟು ಹುಟ್ಟಿ ದೊಡ್ಡವರಾದ ಮೇಲೆ ಇದೇ ಪ್ರಕಾರದ ಸಂಘಗಳನ್ನು ದೊಡ್ಡ ಪ್ರಮಾಣದಿಂದ ಸ್ಥಾಪನೆಮಾಡಿ ಲಕ್ಷಗಟ್ಟಿ ರೂ. ಗಳ ವ್ಯವಹಾರ ಸಾಗಿಸಲಿಕ್ಕೆ ಸಮರ್ಥರಾಗುವರು. ತನಗೆ ಒಪ್ಪಿಸಿದ ಕೆಲಸದ ಜವಾಬುದಾರಿಯು ಚಿಕ್ಕತನದಲ್ಲಿಯೇ ಬೀಳುವದರಿಂದ ಚಟುವಟಿಕೆ ಹುಟ್ಟಿ ದೊಡ್ಡವನಾದಾಗೂ ತನ್ನ ಕಡೆಗೆ ಬಂದ ಜವಾಬುದಾರಿಯ ಕೆಲಸವನ್ನು ಜಾಗ್ರತೆಯಿಂದ ಮಾಡಲಿಕ್ಕೆ ವಿದ್ಯಾರ್ಥಿಯು ಸಮರ್ಥನಾಗುವನು. ಎರಡನೆಯವರಿಗಿಂತ ಜಾಣನೆನಿಸಿಕೊಳ್ಳಬೇಕೆಂಬ ಲವಲವಿಕೆಯಿಂದ ತನ್ನ ಕೆಲಸವನ್ನು ಒಳ್ಳೇ ದಕ್ಷತೆಯಿಂದ ಮಾಡುವನು. ಅಲ್ಲದೆ ಆ ಬಗ್ಗೆ ಅವನ ಸ್ವಾಭಿಮಾನವೂ ಜಾಗ್ರತವಾಗುವದು.

ಈ ಪ್ರಕಾರದ ಶಾಲಾ ಸೊಸಾಯಿಟಿಗಳು ಇರುವದು ಅವಶ್ಯವು. ಈ ಬಗ್ಗೆ ವಿದ್ಯಾಖಾತೆಯ ಮೇಲಧಿಕಾರಿಗಳು ಸರ್ಕ್ಯೂಲರ ರೂಪದಿಂದ ಸೂಚನೆ ಸಹ ಮಾಡಿರುವರು. ಇದೇ ಮಾದರಿಯ ಒಂದು ಚಿಕ್ಕ ಸೊಸಾಯಿಟಿಯು ಬೆಳಗಾಂವ ಜಿಲ್ಲೆಯ ಮುಗುಟಖಾನ ಹುಬ್ಬಳ್ಳಿಯಲ್ಲಿ ಈಗ ನಾಲ್ಕು ವರ್ಷಗಳ ಹಿಂದೆಯೇ ಸ್ಥಾಪನವಾಗಿದ್ದು, ಪ್ರಾರಂಭದಲ್ಲಿ ೫ ರೂ. ಬಂಡವಲವಿದ್ದದ್ದು ಈಗ ೬೫ ರೂ. ಗಳ ವರೆಗೆ ಬೆಳೆದಿದೆಯೆಂತಲೂ, ಅದನ್ನು ಅ. ಕಮಿಶನರ, ರಜಿಸ್ಟ್ರಾರ ಮುಂತಾದ ದೊಡ್ಡ ದೊಡ್ಡ ಅಧಿಕಾರಿಗಳು ನೋಡಿ ಆನಂದಪ್ರದರ್ಶನವನ್ನು ಮಾಡಿದರೆಂತಲೂ ಆ ಕಾಲಕ್ಕೆ ಇದೇ ಸೊಸಾಯಿಟಿಯ ಸೆಕ್ರೆಟರಿಯಿದ್ದು ಈಗ ಟ್ರೇನಿಂಗ ಕಾಲೇಜದ ೨ನೇ ವರ್ಷದ ಕ್ಲಾಸಿನಲ್ಲಿದ್ದ "ವಾಸುದೇವ ಗೋಪಾಳಾಚಾರ್ಯ ಬೆಳಗಾವ" ಎಂಬ ವಿದ್ಯಾರ್ಥಿಯು ತಿಳಿಸುತ್ತಾನೆ.

ಮೈಸೂರ ಸಂಸ್ಥಾನದಲ್ಲಿ ಶಾಲಾ ಮಾಸ್ತರರ 'ಟೀಚರ್ಸ ಅಸೋಸಿಯೇಶನ್, ಎಂಬ ಸಂಸ್ಥೆಯು ಸ್ಥಾಪಿತವಾಗಿದ್ದು, ಮೊನ್ನೆ ಮೊನ್ನೆ ದೊಡ್ಡ ಬಳ್ಳಾಪುರದಲ್ಲಿ ಮ. ರಾ. ಎಮ್. ಶಾಮರಾವ M. A. ಇನ್ಸ್ಪೆಕ್ಟರ ಜನರಲ್ ಆಫ್ ಎಜ್ಯುಕೇಶನ್‌ರವರ ಅಧ್ಯಕ್ಷತೆಯ ಕೆಳಗೆ ಆ ತಾಲೂಕಿನ ಶಿಕ್ಷಕ ಜನರ ಸಭೆಯು ನೆರೆದಿತ್ತೆಂತಲೂ, ಆ ಕಾಲಕ್ಕೆ

ಶಿಕ್ಷಣ ವಿಷಯಕ ಅನೇಕ ಉಪನ್ಯಾಸಗಳೂ ಮಾದರಿಯ ಪಾಠಗಳೂ, ಎಷ್ಟೋ ವಿಷಯಗಳ ಬಗ್ಗೆ ಚರ್ಚೆಗಳೂ ನಡೆದವೆಂತಲೂ, ಅಲ್ಲಿನ ಡಿ. ಕೊಂಗಾಡಿಯಪ್ಪನವರು, ಹೆಡ್‌ಮಾಸ್ತರ ಹೈಸ್ಕೂಲ ದೊಡ್ಡ ಬಳ್ಳಾಪುರ, ಇವರು ತಿಳಿಸುತ್ತಾರೆ.

ನಮ್ಮಲ್ಲಿಯೂ ಇಂಥ ಸಂಸ್ಥೆಗಳಿರುವದು ಅವಶ್ಯವು. ಇಂಥ ದೊಂದು ಸಂಸ್ಥೆಯನ್ನು ಸ್ಥಾಪಿಸುವ ಬಗ್ಗೆ ಕೆಲವು ಗೃಹಸ್ಥರು ಪ್ರಯತ್ನ ವನ್ನು ನಡಿಸಿರುವರು. ಈ ಬಗ್ಗೆ ತೋಚಬಹುದಾದ ಸೂಚನೆಗಳನ್ನು ವಾಚಕರು ಸೂಚಿಸಬಹುದು.

ಮಿ. ತಿ. ಸಿ. ಕೊಂಡಿ (ಅ. ಮಾಸ್ತರ ನಿಡಗುಂದಿ ತಾ. ರೋಣ) ಇವರು ಡಾ. ಟಿ. ವಾಶಿಂಗ್ಟನ್ನ ಇವರ ಚರಿತ್ರೆಯನ್ನು ಬರೆದು ಕಳಿಸಿರುವರು. 'ಅವನ ಗುಣಗಳು ಅನುಕರಣೀಯವಿದ್ದವು, ಬೋಧಪ್ರದವಾಗಿದ್ದವು, ಎಂದು ಸಾಮಾನ್ಯವಾಗಿಯೇ ಬರೆದಿರುವರು. ಈ ತರದ ಚರಿತ್ರ ಸಾರದಿಂದ ಕನ್ನಡ ವಾಚಕರಿಗೆ ಏನೂ ಬೋಧನೆಯಾಗಲಾರದು. ಕರ್ನಾಟಕದ ಜನರಿಗೇ ಆಗಲಿ ಬೇರೆ ಜನರಿಗೇ ಆಗಲಿ ಇಂಥ ಚರಿತ್ರೆಗಳ ಬಗ್ಗೆ ಆಸಕ್ತಿಯುಂಟಾಗಬೇಕಾದರೆ ಚರಿತ್ರನಾಯಕನ ಆಯುಷ್ಯದಲ್ಲಿ ನಡೆದ ಕೆಲವು ಸಂಗತಿಗಳ ಯಥಾರ್ಥ ವರ್ಣನೆಯಿರಬೇಕಾಗುತ್ತದೆ.

ಮಿ. ಉಪೇಂದ್ರಶರ್ಮಾ ತೈಲಮತಿ, ಇವರು ಕಳಿಸಿದ 'ಮುಸಲ್ಮಾನರ ಆಮಲಿನಲ್ಲಿಯ ಶಿಕ್ಷಣ ವಿಸ್ತಾರವು, ಎಂಬ ಲೇಖವು ಮುಟ್ಟಿತು. ಸಂಪೂರ್ಣವಾಗಿ ಓದಿ ನೋಡಿದೆವು. ಪೂರ್ವಕಾಲದ ಇತಿಹಾಸದ ದೃಷ್ಟಿಯಿಂದ ಇದು ಬೆಲೆಯುಳ್ಳದ್ದಿದೆ. ಭಾಷೆಯು ತಕ್ಕಷ್ಟು ಸುಂದರವಾಗಿದೆ. ಆದರೆ ಇದರಲ್ಲಿ ಶಾಲಾಗುರುಗಳಾದ ವಾಚಕರು ಬೋಧ ತೆಗೆದುಕೊಳ್ಳುವಂಥ ಸಂಗತಿಯು ಇದ್ದಂತೆ ತೋರಲಿಲ್ಲ. ಇದರಲ್ಲಿ ವರ್ಣಿಸಿದ ಅರಸರ ಕಾಲದಲ್ಲಿ ವಿದ್ಯೆಯ ಉತ್ಕರ್ಷವು ಬಹು ಸ್ವಲ್ಪ ಪ್ರಮಾಣದಿಂದ ಇದ್ದದ್ದು ಕಂಡು ಬರುತ್ತದೆ. ದಕ್ಷಿಣದ ಮುಸಲ್ಮಾನ ಅರಸರು ಸುಶಿಕ್ಷಿತರಾದ ವಂಶದವರು. ಅವರು ಉತ್ತರದಿಂದ ಬರುವಾಗ ವಿದ್ಯಾಭಿರುಚಿಯನ್ನು ಪಡೆದುಕೊಂಡು ಬಂದಿದ್ದರು. ಅವರು ದಕ್ಷಿಣ

ದಲ್ಲಿ ಮಾಡಿದ ವಿದ್ಯಾಸುಧಾರಣೆಗಳು ಧರ್ಮಾಭಿಮಾನ ಹಾಗು ಸ್ವಾರ್ಥ ಸುಖ ಪ್ರೇರಿತವಾದವುಗಳಾಗಿದ್ದವು. ಅವರು ಎಂದೂ ದೇಶ ಭಾಷೆಗೆ ಉತ್ತೇಜನ ಕೊಟ್ಟದ್ದು ಕಂಡು ಬರುವದಿಲ್ಲ. ಈಗಿನಂತೆ ಸಾಮಾನ್ಯ ಪ್ರಜೆಗಳ ಹಿತಕ್ಕಾಗಿ ಅವರು ಎಂದೂ ವಿದ್ಯಾಲಯಗಳನ್ನು ಸ್ಥಾಪಿಸಲಿಲ್ಲ. ಇಷ್ಟು ಸಂಗತಿಗಳ ಅನುಮಾನವನ್ನು ಈ ಲೇಖದಿಂದ ತೆಗೆಯ ಬಹುದು.

ವಿದ್ಯಾಖಾತೆಯ ನೋಟೀಸುಗಳು.

ಕೆಳಗೆ ಬರೆದ ಪುಸ್ತಕಗಳ ಯಾದಿಯನ್ನು ಜನರ ತಿಳುವಳಿಕೆಗಾಗಿ ಪ್ರಸಿದ್ಧ ಪಡಿಸಿರುತ್ತದೆ.

ನಂಬರ.	ಪುಸ್ತಕದ ಹೆಸರು.	ಯಾವ ಭಾಷೆಯ ಪುಸ್ತಕ.	ಪುಸ್ತಕ ಮಂಜೂರ ಮಾಡಿದ ಉದ್ದೇಶ	ಬೆಲೆ ರು.	ಆ.	ಪೈ.	ಷರಾ
	M. V. APTE. ರತ್ನಾಗಿರಿ ಕೃತ.						
೧	ಮೀನ ಬಲೆಗಾರನು ಜಾಳಿಗೆಯನ್ನು ಹಾಕುವ ಸಮಯದ ಚಿತ್ರ.		ಪ್ರಾಥಮಿಕ ಮತ್ತು ಮಧ್ಯಮತರಗತಿಯ ಶಾಲೆಗಳ ವಾಚನಾಲಯಗಳ ಸಲುವಾಗಿ	೦	೮	೦	ಡಿಡಿ ಡಿಡಿ ಡಿಡಿ ಹಚ್ಚಿ ಲಿಂಡಿ
	M. ವೆಂಕಟ ಸುಬ್ಬಯ್ಯ ಮೈಸೂರ ಕೃತ.						
೨	ಕೆಂಡರಗಾರ್ಟನ ಕ್ರಮದಲ್ಲಿ ಮಕ್ಕಳ ವಿದ್ಯಾಭ್ಯಾಸ.	ಕನ್ನಡ	ಕನ್ನಡ ಟ್ರೇನಿಂಗ ಕಾಲೇಜುಗಳಲ್ಲಿ ಉಪಯೋಗಿಸುವಬಗ್ಗೆ	೧	೪	೦	

ಡಾಯರೆಕ್ಟರ ಆಫ್ ಪಬ್ಲಿಕ್ ಇನ್‌ಸ್ಟ್ರಕ್ಶನ್ ರವರ ಆಫೀಸು, ಪುಣೆ.
ತಾ. ೨೦-೭-೧೯೧೬ ಇ.

(Sd.) P. LORY.
Ag. Deputy Director of Public Instruction.

ಸಿಂಧ ಹಾಗು ಮುಂಬಯಿ ಇಲಾಖೆಯೊಳಗಿನ ದೇಶಭಾಷೆಯ ಶಾಲೆಗಳ ಶಿಕ್ಷಕ ಹಾಗು ಶಿಕ್ಷಿಕೆಯರ (ಗ್ರಾಮಗಳೇ ಇಸವಿಯ) ಕಾಯ್ದೆಯಲ್ಲಿಯ ಪುರವಣಿಗಳೂ ತಿದ್ದುಪಡಿಗಳೂ:—

ತಿದ್ದುಪಡಿ ನಂಬರು ೧೧

ಆರನೇ ಅಧ್ಯಾಯದ ೧೯ನೇ ನಿಯಮದ ಕಡೆಯಲ್ಲಿ ಕೆಳಗಿನ ಸೂಚನೆಯನ್ನು ಸೇರಿಸಿರಿ:—

ಸೂಚನೆ—ಮೇಲಿನ ರಜಿಸ್ತರುಗಳನ್ನೂ ದಾಖಲೆಗಳನ್ನೂ ಕಾದಿಡುವ ಬಗ್ಗೆ ಮಾಹಿತಿಯನ್ನು (ಅ) ಪರಿಶಿಷ್ಟದಲ್ಲಿ ಕೊಟ್ಟಿದೆ.

ಸಿಂಧ ಹಾಗು ಮುಂಬಯಿ ಇಲಾಖೆಯೊಳಗಿನ ದೇಶಭಾಷೆಯ ಶಾಲೆಗಳ ಶಿಕ್ಷಕ ಹಾಗು ಶಿಕ್ಷಿಕೆಯರ (ಗ್ರಾಮಗಳೇ ಇಸವಿಯ) ಕಾಯ್ದೆಯಲ್ಲಿಯ ಪುರವಣಿಗಳೂ ತಿದ್ದುಪಡಿಗಳೂ:—

ತಿದ್ದುಪಡಿ ನಂಬರು. ೧೨

ಇದನ್ನು ಕಾಯ್ದೆಯ ಕಡೆಯ ಭಾಗದಲ್ಲಿ ಸೇರಿಸಿರಿ.

ಪರಿಶಿಷ್ಟ (ಅ)

ಲೋಕಲ್‌ಬೋರ್ಡ ಮತ್ತು ಮ್ಯುನಸಿಪಲ್ ಶಾಲೆಗಳಲ್ಲಿಯ ಬೇರೆ ಬೇರೆ ರಜಿಸ್ತರುಗಳನ್ನೂ ದಾಖಲೆಗಳನ್ನೂ ಎಷ್ಟು ಅವಧಿಯ ವರೆಗೆ ಕಾದಿಡಬೇಕೆಂಬದನ್ನೂ ತೋರಿಸುವ ಪಟ್ಟಿಯು:—

ನಂಬರು.	ಶಾಲೆಯಲ್ಲಿಯ ರಿಕಾರ್ಡಿನ ತಪಶೀಲು.			ಎಷ್ಟು ವರ್ಷಗಳ ವರೆಗೆ ಕಾದಿಡತಕ್ಕದ್ದು.
	ದೇಶಭಾಷೆಯ ಶಾಲೆಗಳ ಶಿಕ್ಷಕ ಶಿಕ್ಷಿಕೆಯರ ಕಾಯಿದೆಯ ಆರನೇ ಅಧ್ಯಾಯದಲ್ಲಿ ಹೇಳಿದ ರಿಕಾರ್ಡುಗಳು.			
೧	ನಮೂನಾ ನಂಬರು ೧.		ಜನರಲ್ ರಜಿಸ್ತರ.	ಕಡೆತನಕ
೨	ಸದರ.	೨.	ದಿನದ ಹಾಜರಿಯ ರಜಿಸ್ತರ.	೫ ವರ್ಷ
೩	ಸದರ.	೩.	ಅ. ಮಾಸ್ತರರ ದಿನದ ಹಾಜರಿ ರಜಿಸ್ತರ	೫ ವರ್ಷ
೪	ಸದರ.	೪.	ಮಾರ್ಕ ರಜಿಸ್ತರ	೧ ವರ್ಷ
೫	ಸದರ.	೫.	ಡೆಡ್‌ಸ್ಟಾಕ ರಜಿಸ್ತರ	ಕಡೆತನಕ
೬	ಸದರ.	೬.	ಪುಸ್ತಕ ನಕಾಶಗಳ ರಜಿಸ್ತರ	ಕಡೆತನಕ
೭	ಸದರ.	೭.	ದರಮಾಹೆ ಪತ್ರಿಕೆ	೫ ವರ್ಷ
೮	ಸದರ.	೮.	ಲೋಕಲ್‌ಫಂಡ ಕೊಡುವವರ ರಜಿಸ್ತರ	೫ ವರ್ಷ
೯	ಸದರ.	೯.	ಬಠವಡೆ ಪತ್ರಿಕೆ	ಕಡೆತನಕ

ನನ್ನು ಹಿಡಿಯಬಾರದು. ಅಂದರೆ ಅವರ ತಪ್ಪು ತಿಳುವಳಿಕೆಯು ಕಾಲಾಂತರದಿಂದ ನೂರಾಗುವದು. ಈ ಪ್ರಕಾರ ವರ್ತಿಸಿದಲ್ಲಿ ತನ್ನ ವರ್ಚಸ್ಸವು ತನ್ನ ಅಸಿಸ್ಟಂಟರ ಮೇಲೆ ನೆಲೆಗೊಳ್ಳುವದು. ಕೆಲವು ವೇಳೆ ಅವರು ತಮ್ಮತಮ್ಮೊಳಗೆ ಮತಭೇದವನ್ನು ಮಾಡಿಕೊಂಡು ಇವನ ಕಡೆಗೆ ದೂರು ಹೇಳಹತ್ತುತ್ತಾರೆ. ಅಂಥ ಪ್ರಸಂಗದಲ್ಲಿ ತಾನು ಯಾರ ಮೇಲೆಯೂ ಪಕ್ಷಪಾತವನ್ನು ಮಾಡದೆ ಮೂಲಕಾರಣವನ್ನು ಕಂಡು ಹಿಡಿದು ಉಪದೇಶದಿಂದಲೇ ಅದನ್ನು ಇಲ್ಲದಂತೆ ಮಾಡಬೇಕು.

ಮುಖ್ಯಾಧ್ಯಾಪಕನು ತನ್ನ ವರಿಷ್ಠರ ಕೂಡ ಯೋಗ್ಯವರ್ತನವನ್ನಿಡುವದಾ ಗರೂ ಶಾಲೆಯ ಸುಸ್ಥಿತಿಯನ್ನುಂಟು ಮಾಡುವದಕ್ಕೆ ಅನುಕೂಲವಾದ ಸಂಗತಿಯಾ ಗಿರುತ್ತದೆ. ಶಾಲೆಯ ಸುಸ್ಥಿತಿಯನ್ನು ಕಾಯ್ದುಕೊಳ್ಳುವದು ಮುಖ್ಯಾಧ್ಯಾಪಕನ ಕರ್ತವ್ಯವಾಗಿರುವಂತೆ ತಪಾಸಣೆಯು ಅಧಿಕಾರಿ (ಇನ್‌ಸ್ಪೆಕ್ಟಿಂಗ ಆಫೀಸರ) ಗಳ ಕರ್ತವ್ಯವಾದರೂ ಇರುತ್ತದೆ. ಆ ಸುಸ್ಥಿತಿಯನ್ನುಂಟು ಮಾಡುವ ಬಗ್ಗೆ ಅವರೂ ತಮ್ಮ ಮೇಲಿನ ಅಧಿಕಾರಿಗಳಿಗೆ ಜವಾಬುದಾರರಾಗಿರುತ್ತಾರೆ. ಅವರು ಬಹಳ ಶಾಲೆಗಳನ್ನು ನೋಡಿರುವದರಿಂದ ಅವರ ಅನುಭವವು ವ್ಯಾಪಕವಾದದ್ದಿರುತ್ತದೆ. ಶಾಲೆಗೆ ಅನುಕೂಲವಾದ ಅಸಿಸ್ಟಂಟರನ್ನೂ ಯೋಗ್ಯ ಉಪಕರಣ ಮುಂತಾದವ ಗಳನ್ನೂ ಕಾಲಕಾಲಕ್ಕೆ ಒದಗಿಸಿಕೊಡುವ ಕೆಲಸವು ಅವರದೇ ಆಗಿರುತ್ತದೆ. ಅವರು ಯೋಗ್ಯರಾದ ಶಿಕ್ಷಕರನ್ನು ನೋಡಿ ಅವರಿಗೆ ಉತ್ತೇಜನವನ್ನು ಸಹ ಕೊಡುವರು. ಶಾಲೆಯಲ್ಲಿ ಯಾವತರದ ಕೊರತೆಗಳಿರುವವೆಂಬದನ್ನು ಕಂಡು ಹಿಡಿದು ಅವುಗಳನ್ನು ನೀಗುವ ಉಪಾಯಗಳನ್ನು ಸೂಚಿಸುವರು. ಆದದರಿಂದ ವರ್ಷಕ್ಕೊಮ್ಮೆ ಇಲ್ಲವೆ ಆರು ತಿಂಗಳಿಗೊಮ್ಮೆ ಬರುವ ಇಂಥ ತಪಾಸಣೆಯ ಅಧಿಕಾರಿಗಳ ಆಗಮನವನ್ನು ಬಹು ಆತುರದಿಂದ ನಿರೀಕ್ಷಿಸುತ್ತಿರಬೇಕು. ಅವರು ಬರುವ ಸುಮಾರಕ್ಕೆ ತಾನು ಶಾಲೆಯಲ್ಲಿ ಮಾಡಿರುವ ಸುಧಾರಣೆಗಳನ್ನು ಒಪ್ಪಿದು ಕಾಣಿಸುವಂತೆ ಸಿದ್ಧಮಾಡಿಟ್ಟು ಅವರು ಬಂದಕೂಡಲೆ ಅವರ ದೃಷ್ಟಿಗೆ ಹಾಕಬೇಕು. ಪದ್ಧತಿಯ ಸಂಬಂಧದಿಂ ದಲೂ, ಇತರ ಅನೇಕ ಸಂಗತಿಗಳ ಸಂಬಂಧದಿಂದಲೂ ಇಡೀ ವರ್ಷದಲ್ಲಿ ತನಗೆ ಬೇಕಾದ ಅಡಚಣಿಗಳನ್ನು ಅವರೆದುರಿಗೆ ಇಡಲಿಕ್ಕೆ ಆತುರವುಳ್ಳವನಾಗಿರಬೇಕು. ತಾನು ವರ್ಷದಲ್ಲಿ ಮಾಡಿದ ಕೆಲಸಗಳ ಬಗ್ಗೆ ಆ ಅಧಿಕಾರಿಗಳು ಪಟ್ಟಿ ಅಭಿಪ್ರಾಯ ವನ್ನೂ, ನಿರ್ದಾಕ್ಷಿಣ್ಯದಿಂದ ಹೇಳಿದ ಸೂಚನೆಗಳನ್ನೂ ಸ್ವೀಕರಿಸಬೇಕು. ಈ ಪ್ರಕಾ ರದ ಅಭಿಪ್ರಾಯವನ್ನೂ ಸೂಚನೆಗಳನ್ನೂ ಹೇಳಲಿಕ್ಕೆ ಅವರಿಗೆ ವಿನಂತಿ ಸಹ ಮಾಡಿ ಕೊಳ್ಳಬೇಕು. ಅಂದರೆ ಕೆಲಸ ಮಾಡುವ ಮುಂದಿನ ಮಾರ್ಗವು ಇವನಿಗೆ ಸ್ಪಷ್ಟ ವಾಗಿ ಕಾಣುವದು.

ಮೇಲೆ ಹೇಳಿದ ಸೂಚನೆಗಳಂತೆ ನಡೆದರೆ ಮುಖ್ಯಾಧ್ಯಾಪಕನ ಕೆಲಸ ಸುಸೂತ್ರವಾಗಿ ನಡೆದು, ಅವನು ತನ್ನ ಕೆಲಸದಲ್ಲಿ ಯಶಸ್ಸನ್ನು ಪಡೆಯುವನೆಂಬ ರಲ್ಲಿ ಸಂದೇಹವಿಲ್ಲ.

ಸಾರ್ವಜನಿಕ ಗಂಡಾಂತರಗಳೂ ಶಿಕ್ಷಕರ ಕರ್ತವ್ಯವೂ:— ಸದ್ಯ ಯುರೋಪಖಂಡದಲ್ಲಿ ನಡೆದಿರುವ ಘನಘೋರ ಯುದ್ಧದ ಇದುವರೆಗಿನ ಇತಿಹಾ ವನ್ನು ಪರ್ಯಾಲೋಚಿಸಿದರೆ ಎಷ್ಟೋ ವಿಚಾರತರಂಗಗಳು ಮನಸಿನಲ್ಲಿ ಉದ್ಭ ಸುವವು. ಶಾಸ್ತ್ರೀಯ ವಿಷಯದಲ್ಲಿ ಮುಂದಡಿಯನ್ನಿಟ್ಟ ಜರ್ಮನಿಯ ಧೂರ್ತ್ರಾಷ್ಟ್ರ ಅಗ್ನ್ಯಸ್ತ್ರ ಮುಂತಾದವುಗಳ ಎದುರಿಗೆ ನಿಲ್ಲಲಿಕ್ಕಾಗದೆ, ಎಷ್ಟೋ ಪ್ರಬಲ ರಾಷ್ಟ್ರ ದವರು ಸಹ ಕೆಲದಿವಸ ವಾರೆಗಾದರೆಂಬದನ್ನು ಕೇಳಿದೆವು. "ಈಹೊತ್ತು ಗೆದ್ದು ಕೊಂಡ ಸೀಮೆಯು ನಾಳೆಗೆ ಹಳೆಯುದಾಯಿತು" ಎಂಬಂತೆ ಬಂದರಿಂದೊಂದು ಪ್ರಾಂತವನ್ನು ಕೈವಶ ಮಾಡಿಕೊಳ್ಳುವ ಕ್ರಮವನ್ನು ನೋಡಿದಾಗ, ಜರ್ಮನ್ನರಿಗೆಲ್ಲಲಿಕ್ಕೆ ಭೂಮಿಯು ಉಳಿಯುವದೋ ಇಲ್ಲವೋ ಎಂಬ ಭ್ರಾಂತಿಯುಂಟಾಯಿತ. ಸುಧಾರಿಸಿದ ರಾಷ್ಟ್ರದವರಿಗೆ ಸಹ ತಿಳಿಯಲಾರದಂಥ ಎಷ್ಟೋ ಆಸುರೀ ಪ್ರಯೋಗಳು ಕೆಲ ಕಾಲ ಸಾಧ್ಯವಾದವು. ಜರ್ಮನಿಯ ವಿರುದ್ಧ ಪಕ್ಷದವರು, ಅವೆಲ್ಲವುಗಳ ತಕ್ಕ ಪ್ರತೀಕಾರೋಪಾಯವನ್ನು ಕೈಕೊಳ್ಳಲಿಕ್ಕೆ ಬಲ್ಲವರಾಗಿರದಿದ್ದರೆ, ಈಹೊತ್ತಿ ಜಗತ್ತಿನ ಇತಿಹಾಸನೇ ಬೇರೆಯಾಗಿರುತ್ತಿತ್ತು. ಪರಂತು ಇಂದಿನ ನಿಜವಾದ ಸ್ಥಿ ಯನ್ನು ನೋಡಿದರೆ, ಇದೆಲ್ಲ ಹಿಂದೆ ಕನಸಿನಲ್ಲಿ ಆಗಿ ಹೋಯಿತೋ ಏನೊ ಎಂಬಂತೆ ಭಾಸವಾಗುತ್ತದೆ. ಎತ್ತನೋಡಿದರೂ ಜರ್ಮನರೇ ಮಿತ್ರರಾಷ್ಟ್ರದವರಿಂ ಮುತ್ತಲ್ಪಟ್ಟಿದ್ದಾರೆ. ಇದುವರೆಗೆ ಸಂರಕ್ಷಣೋಪಾಯವನ್ನು ಕೈಕೊಂಡ ಇಂಗ್ಲಂಡು ತನ್ನ ಸಿದ್ಧತೆಯನ್ನೂ ಪ್ರತೀಕಾರೋಪಾಯವನ್ನೂ ಸಂಪೂರ್ಣವಾಗಿ ಮಾಡಿಕೊ ಡು, ಜರ್ಮನ್ನರ ಮೇಲೆ ತಾನೇ ಏರೇರಿ ಹೋಗಹತ್ತಿದೆ. ಇತರ ಮಿತ್ರರಾಷ್ಟ್ರ ವರೂ ಜರ್ಮನಿಯು ಸೀಮೆಯನ್ನು ನುಗ್ಗಹತ್ತಿದ್ದಾರೆ. ಈ ಪ್ರಕಾರದ ಸ್ಥಿತಿಯ ಇಷ್ಟು ಅಲ್ಪಾವಧಿಯಲ್ಲಿ ಇಂಗ್ಲಂಡಕ್ಕೆ ಹ್ಯಾಗೆ ಬಂತು? ಎಲ್ಲಿ ನೋಡಿದಲ್ಲಿ ಯಶಸ್ಸೆ ಯಶಸ್ಸು ಉಂಟಾಗಲಿಕ್ಕೆ ಕಾರಣವೇನು ? ಈ ಮುಂತಾದವುಗಳ ಬಗ್ಗೆ ವಿಚಾರಿ ದರೆ ಆ ರಾಷ್ಟ್ರದಲ್ಲಿಯ ಸುಶಿಕ್ಷಿತ ವರ್ಗವು ಈ ಕೆಲಸಕ್ಕಾಗಿ ನಡಕಟ್ಟಿ ನಿಂತದ್ದ ಎಂಬದು ಗೊತ್ತಾಗುವದು. ಆ ವರ್ಗದಲ್ಲಿ ಶಿಕ್ಷಕ ವರ್ಗವೂ ಕೂಡಿದೆ. ಎಷ್ಟೊ ವಿದ್ಯಾಲಯಗಳು ಬಂದಾದವು. ಬಹುಜನ ಶಿಕ್ಷಕರೂ ಪ್ರಬುದ್ಧ ವಿದ್ಯಾರ್ಥಿಗಳು ಯುದ್ಧಕ್ಕೆ ಹೋದರು. ಉಳಿದ ಹಲಕೆಲವು ಶಿಕ್ಷಕರೂ ವಿದ್ಯಾರ್ಥಿಗಳೂ ಈ ಕೆಲ

್ಯಕ್ಕಾಗಿ ಜನರಿಗೆ ಬೋಧನೆ ಮಾಡಹತ್ತಿದರು ಈ ಪೊದಲು ಹೇಳಿದ ಅಸ್ತ್ರ ಮುಂತಾ
ವುಗಳ ಪ್ರತೀಕಾರೋಪಾಯಗಳನ್ನು ಕಂಡು ಹಿಡಿದರು. ಈಗ ಅದಕ್ಕೂ ಹೆಚ್ಚಿನ
ಉಪಾಯಗಳ ಶೋಧವನ್ನು ನಡಿಸಿರುವರು. ಭಾವೀ ರಾಷ್ಟ್ರಕ್ಕೆ ಸ್ವಾಭಿಮಾನವ
ಪುಲ್ಲ ತವಾದ ಶಿಕ್ಷಣವನ್ನು ಕೊಡುತ್ತಿರುವರು. "ನಮ್ಮ ದೈವದಲ್ಲಿದ್ದದ್ದಾಗುವದು,
ಮ್ಮೆಲೆ ಬಂದದ್ದಕ್ಕೆ ನಾವೇನು ಮಾಡಬೇಕು" ಎಂಬ ವಿಚಾರಗಳು ಅಲ್ಲಿಯವರ
ನಸುಮನಸಿನಲ್ಲಿ ಸಹ ಬರಲಿಲ್ಲ. ಇದೆಲ್ಲವು ಅಲ್ಲಿಯ ಶಿಕ್ಷಣದ ಪ್ರಭಾವದ ಪರಿ
ಣಾಮವಲ್ಲದೆ ಮತ್ತೇನು ? ಅಂಥ ಶಿಕ್ಷಣವನ್ನು ಕೊಡುವ ಶಿಕ್ಷಕರು ತಮ್ಮ ದೇಶದ
ಮೇಲೆ ಬಂದ ಗಂಡಾಂತರಗಳ ನಿವಾರಣೋಪಾಯಗಳನ್ನು ಕಂಡು ಹಿಡಿಯಲಿಕ್ಕೂ
ವನ್ನು ಜನರಲ್ಲಿ ಪ್ರಸಾರ ಮಾಡಲಿಕ್ಕೂ ಕಂಕಣಬದ್ಧರಾಗಿ ನಿಂತಿದ್ದಾರೆ. ಯುದ್ಧ
ೀ ಯಾಕೆ ? ಬೇರೆ ಯಾವತರದ್ದೇ ಗಂಡಾಂತರವು ಇಡೀ ರಾಷ್ಟ್ರಕ್ಕೆ ಬಂದಿರಲು
ದನ್ನು ನೀಗುವ ಉಪಾಯವನ್ನು ಕಂಡು ಹಿಡಿದೇ ತೀರಬೇಕೆಂಬ ವಿಚಾರವು
ಲ್ಲಿಯ ಪ್ರತಿಯೊಬ್ಬ ಶಿಕ್ಷಕನಲ್ಲಿ ಸದಾ ಸರ್ವಕಾಲ ವಾಸವಾಗಿರುತ್ತದೆ. ಯಾವ
ಹೊಂದು ತರದ ಗಂಡಾಂತರವು ರಾಷ್ಟ್ರಕ್ಕೆ ಬಂದಕೂಡಲೆ ಅದನ್ನು ನೀಗುವ
ಉಪಾಯವನ್ನೇ ಕೈಕೊಳ್ಳುವಂಥ ಭಾವನೆಯು ಪ್ರತಿಯೊಬ್ಬ ವಿದ್ಯಾರ್ಥಿಯಲ್ಲಿಯೂ
ೂಡ ನೆಲೆಗೊಳ್ಳಬೇಕಾದರೆ ಅಲ್ಲಿಯ ಶಿಕ್ಷಕರ ಪ್ರಭಾವವು ಎಷ್ಟು ಮಹತ್ವದ್ದಿರ
ೀಕು ? ಈ ತರದ ಸ್ವಾಭಿಮಾನವು ಪ್ರತಿಯೊಬ್ಬನಲ್ಲಿ ದೃಢವಾಗಿ ನೆಲೆಗೊಳ್ಳುವಂತೆ
ಉಪದೇಶ ಮಾಡಲಿಕ್ಕೆ ಶಿಕ್ಷಕನ ಹೊರತು ಇನ್ನಾರೂ ಇಲ್ಲ. ಈ ತರದ ಶಿಕ್ಷಣವನ್ನು
ೂಡುವ ಪ್ರಸಂಗಗಳು ಅವನಿಗೆ ಹೇಳಕೂಡದಷ್ಟು ಬರುತ್ತವೆ. ಆಯಾ ಪ್ರಸಂಗ
ಳನ್ನು ವ್ಯರ್ಥ ಹೋಗಗೊಟ್ಟರೆ ಈ ತರದ ಉಜ್ವಲ ಸ್ವಭಾವವು ಎಂದಿಗೂ
ಬೆಟ್ಟಲಾರದು. ಈ ಪ್ರಸಂಗಗಳ ಯೋಗ್ಯ ಉಪಯೋಗವನ್ನು ಮಾಡಿಕೊಂಡು
ಾವೀ ರಾಷ್ಟ್ರಕ್ಕೆ ಈ ಮಾದರಿಯು ಉಪದೇಶವನ್ನು ಮಾಡುತ್ತ ಹೋದರೆ ಶಿಕ್ಷಣ
ಕ್ಕೆ ದೇಶದ ಪ್ರಗತಿಗೂ ಕೂಡಿಯೇ ಸಹಾಯವಾಗುವದು.

ನಮ್ಮ ದೇಶದಲ್ಲಿ ಆಕಾಲಿಕವಾಗಿ ಬರುವ ಪ್ಲೇಗು, ಮಾರಿಕಾ ಮುಂತಾದ
ಭಯಂಕರ ಪಿಡುಗುಗಳ ನಿವಾರಣೋಪಾಯವನ್ನು ಸರಕಾರದವರು ಪಲವು ರೀತಿ
ಯಿಂದ ಮಾಡಿದರೂ, ಅವುಗಳ ಹಾವಳಿಯು ಇನ್ನೂ ಕಡಿಮೆಯಾಗಿಲ್ಲ. ಅವು
ಂದನಂತರ ಹ್ಯಾಗೆ ನಡೆದು ಅವುಗಳೊಳಗಿಂದ ಪಾರಾಗಬೇಕೆಂದು ಹಂಚಿಕೆ
ಾಕುವದಕ್ಕಿಂತ ಅವು ಮೂಲತಃ ಬರದಂತೆ ಮಾಡುವದೇ ಉತ್ತಮ ಉಪಾಯವು.
ಉಪಾಯವು ಕೈಗೂಡಿ ಬರಬೇಕಾದರೆ, ಶಿಕ್ಷಕರು ಟಿಂಕಕಟ್ಟಿ ನಿಲ್ಲಲಿಕ್ಕೆ
ೀಕು. ಸರಕಾರದವರು ಈ ಕೆಲಸಕ್ಕಾಗಿ ನಿಯುಮಿಸಿದ ಡಾಕ್ಟರ, ಅಥವಾ ತವಾಸ

END

CONTD IN
NEXT ROLL